ITY OF MYSORE

BRARY PUBLICATIONS

DA SERIES No. 8.

ಕುಮಾರವ್ಯಾಸ ಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

೫ ನೆಯ ಸಂಪುಟ

ವಿರಾಟಪರ್ವ

THE

KARNATAKA MAHABHARATA

BY

KUMARAVYASA MAHAKAVI

Volume V

VIRATA PARVA

EDITED BY

R. SHAMA SASTRY, B.A. M.R.A.S.

Curator, Government Oriental Library, Mysore,
Periodical Lecturer to Post-graduates' Classes,
Calcutta University.

MYSORE,
PRINTED AT THE GOVERNMENT BRANCH PRESS
19..

Price Rs. 1—8—0.

1. The maximum time allowed for retention of a book shall be one fortnight. It may be borrowed again if not required by others.

2. No reference books shall be lent out.

3. No borrower shall have more than two volumes out of the Library at one time.

4. Borrowers must not pass books from one to another but must return them to the Librarian.

5. Library books must not be used as class-books.

6. Any one who defaces by writing or otherwise damages any book shall pay the full cost of the book or of the entire works, if it consists of more than one volume.

7. The borrower shall be responsible for the value of the books lent out to him if they are lost, damaged or otherwise cannot be returned to the Library when they are due or recalled.

8. The presence of the voucher with the Librarian shall be considered sufficient proof of the non-return of books.

1615-36 The Bangalore Press

UNIVERSITY OF MYSORE

ORIENTAL LIBRARY PUBLICATIONS
KANNADA SERIES No. 8.

ಕುಮಾರವ್ಯಾಸ ಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

೫ ನೆಯ ಸಂಪುಟ

ವಿರಾಟಪರ್ವ

THE

KARNATAKA MAHABHARATA

BY

KUMARAVYASA MAHAKAVI

Volume V

VIRATA PARVA

EDITED BY
R. SHAMA SASTRY, B.A., M.R.A.S.,
Curator, Government Oriental Library, Mysore,
Periodical Lecturer to Post-graduates' Classes,
Calcutta University.

MYSORE:
PRINTED AT THE GOVERNMENT BRANCH PRESS
1920

ಅವತರಣಿಕೆ.

ಇದು ಕರ್ಣಾಟಕ ಮಹಾಭಾರತದ ಐದನೆಯ ಸಂಪುಟವು. ಇದರಲ್ಲಿ ಪ್ರವೇಶಪರ್ವ ಕೀಚಕವಧಪರ್ವ ಸಮಯಪಾಲನಪರ್ವ ಗೋಹರಣಪರ್ವ ವೈವಾಹಿಕಪರ್ವಗಳನ್ನು ಒಳಗೊಂಡಿರುವ ವಿರಾಟ ಪರ್ವವು ಸಮಗ್ರವಾಗಿದೆ. ಇದರಲ್ಲಿ ಪಾಂಡವರು ಅರಣ್ಯವನ್ನು ಬಿಟ್ಟು ವಿರಾಟರಾಯನ ಪಟ್ಟಣಕ್ಕೆ ಬಂದುದು ಮೊದಲುಗೊಂಡು ಅಭಿಮನ್ಯು ವಿವಾಹಾಂತವಾದ ಕಥೆಯು ಹನ್ನೊಂದು ಸಂಧಿಗಳಿಂದ ಸಂಪೂರ್ಣ ವಾಗಿ ಹೇಳಲ್ಪಟ್ಟಿದೆ.

ಇದರ ಶೋಧನೆಯು ಕ. ಖ. ಚ. ಜ. ಝ. ಟ. ಎಂಬ ಓಲೆಯ ಪುಸ್ತಕಗಳ ಸಹಾಯದಿಂದ ಮಾಡಲ್ಪಟ್ಟಿದೆ. ಪಾಠಾಂತರಗಳನ್ನು ಸೂಚಿಸುವ ಅಂಕಗಳು ಪಾಠಾಂತರಗಳನ್ನು ಹೊಂದುವ ಭಾಗದ ಕೊನೆಯಲ್ಲಿಡಲ್ಪಡುತ್ತಿದ್ದುವು. ಅವು 140ನೆಯ ಪುಟದ ಮೊದಲಿಂದ ಪಾಠಾಂತರಗಳನ್ನು ಹೊಂದುವ ಭಾಗಗಳ ಮೊದಲಲ್ಲಿಡಲ್ಪಟ್ಟಿವೆ. ಎಲ್ಲವು ಗಳಲ್ಲಿಯೂ ಇಲ್ಲದೆ ಒಂದೆರಡು ಪುಸ್ತಕಗಳಲ್ಲಿರುವ ಅನಾವಶ್ಯಕ ಗಳೆಂದು ತೋರಿದ ಪದ್ಯಗಳು ಮೇಲೆ ನಕ್ಷತ್ರಚಿಹ್ನವನ್ನು ಹಾಕಿ ಕೆಳಭಾಗದಲ್ಲಿ ಬರೆಯಲ್ಪಟ್ಟಿವೆ.

ಬಹು ಪುಸ್ತಕಾನುಸಾರಿಯಾಗಿ ಅಥವಾ ಶುದ್ಧವಾಗಿ ಅಥವಾ ಸರಸವಾಗಿರುವ ಪಾಠಗಳು ಮೇಲುಗಡೆಯಲ್ಲಿಡಲ್ಪಟ್ಟಿವೆ. ಪಾಠಾಂತರ ಗಳೂ ಲೇಖನಾದಿದೋಷಗಳನ್ನು ಹೋಗಲಾಡಿಸಿ ಸರಿಪಡಿಸಿ ಕೆಳಭಾಗ ದಲ್ಲಿ ಬರೆಯಲ್ಪಟ್ಟಿವೆ. ಅವುಗಳಲ್ಲಿಯೂ ಒಂದೊಂದು ಪಾಠವು ಮೇಲಣ ಪಾಠಕ್ಕಿಂತಲೂ ಸರಸವಾಗಿ ಕಾಣಬಹುದು. ಆದರೂ ಬಹುಪುಸ್ತಕಾನು ಸರಣೆಯಿಂದಲೊ ಶುದ್ಧಿಯನುಸರಣೆಯಿಂದಲೊ ಬೇರೆ ಪಾಠವನ್ನು ಮೇಲಿಟ್ಟು ಅದು ಕೆಳಗಿಡಲ್ಪಟ್ಟಿರುವುದು. ರಸಜ್ಞರಾದ ಪಂಡಿತರು

ತಮಗಿಷ್ಟವಾದ ಪಾಠವನ್ನು ಅಂಗೀಕರಿಸಬಹುದು "ಲೋಕೋಭಿನ್ನ ರುಚಿ" ಎಂಬುದು ಸುಪ್ರಸಿದ್ಧವಾಗಿದೆ.

ಸಂಸ್ಕೃತ ಮಹಾಭಾರತದಲ್ಲಿರುವಂತೆ ಈಗ ಅಚ್ಚಾಗಿರುವ ಕನ್ನಡ ಭಾರತದ ಪುಸ್ತಕಗಳಲ್ಲಿಯೂ ಓಲೆಯಗರಿಯ ಬಹುಪುಸ್ತಕಗಳಲ್ಲಿಯೂ ಕೀಚಕವಧಪರ್ವಕ್ಕೆ ಪೂರ್ವದಲ್ಲಿಯೇ ಸಮಯಪಾಲನಪರ್ವವು ಕಂಡುಬರುತ್ತದೆ. ಯಾವುದೋ ಒಂದು ಸಂಸ್ಕೃತಮಹಾಭಾರತ ಪುಸ್ತಕವನ್ನು ಅನುಸರಿಸಿರುವ, ಈ ಪುಸ್ತಕದ ಕಾಪಿಗೆ ಮೂಲವಾದ ಕ. ಪುಸ್ತಕದಲ್ಲಿರುವುದನ್ನನುಸರಿಸಿ ಈ ಪುಸ್ತಕದಲ್ಲಿ ಕೀಚಕವಧಪರ್ವವು ಸಮಯಪಾಲನಪರ್ವಕ್ಕೆ ಪೂರ್ವದಲ್ಲಿಯೇ ಬರೆಯಲ್ಪಟ್ಟಿದೆ.

ಮಧ್ಯಭಾಗಗಳಲ್ಲಿ ಅಲ್ಲಲ್ಲಿ ತೋರಿಸುತ್ತಿದ್ದ ಸೂಚನೆಗಳು ಪದ್ಯಗಳ ಮಧ್ಯಭಾಗದಲ್ಲಿಯೂ ಬರುತ್ತಿದ್ದುದರಿಂದ ಮನಸ್ಸಿನಲ್ಲಿ ಪೂರ್ವೋತ್ತರ ಸಂಬಂಧಗಳನ್ನು ಕಲ್ಪಿಸಿಕೊಳ್ಳುತ್ತಾ ಅವಿಚ್ಛಿನ್ನಾನುಪೂರ್ವಿಯನ್ನು ಓದಿಕೊಂಡು ರಸಾಸ್ವಾದವನ್ನು ಮಾಡುವವರಿಗೆ ಬೇಸರವುಂಟಾಗುವುದೆಂದು ಆ ಸೂಚನೆಗಳನ್ನು ಬಿಟ್ಟು ಕೊನೆಯ ಕೆಲವು ಭಾಗದಲ್ಲಿ ಪದ್ಯಗಳು ಮಾತ್ರವೇ ಆನುಪೂರ್ವಿಯಾಗಿ ಬರೆಯಲ್ಪಟ್ಟವೆ.

ಮೊದಲಲ್ಲಿ ಓದಿದವರಿಗೆ ಕಥಾಂಶವೂ ಪದ್ಯಗಳ ಮುಖ್ಯತಾತ್ಪರ್ಯಗಳೂ ತಿಳಿಯುವಂತೆ ವಿಷಯಸೂಚಿಕೆಯು ಸ್ವಲ್ಪ ವಿಸ್ತಾರವಾಗಿ ಬರೆಯಲ್ಪಟ್ಟಿದೆ.

ಪ್ರಮಾದದಿಂದ ಉಂಟಾದ ತಪ್ಪುಗಳನ್ನು ತಿಳಿಸುವುದಕ್ಕಾಗಿ ಶುದ್ಧಿಪತ್ರಿಕೆಯೂ ಇಡಲ್ಪಟ್ಟಿರುವುದು.

ಈ ಪುಸ್ತಕದ ಅರ್ಧಭಾಗಕ್ಕೆ ಮುಂದಣ ಭಾಗವು ಶೋಧನಕಾರ್ಯದಲ್ಲಿ ವಿಶೇಷಪರಿಚಿತನಲ್ಲದ ನನ್ನ ಶೋಧನೆಗೆ ಒಳಪಟ್ಟಿದ್ದುದರಿಂದ ಅದರಲ್ಲಿ ಪ್ರಮಾದದಿಂದ ತಪ್ಪುಗಳು ಸ್ವಲ್ಪ ಹೆಚ್ಚಾಗಿ ಬಂದರೂ ಗುಣೈಕಪಕ್ಷಪಾತಿಗಳಾದ ಪಂಡಿತರು ಕ್ಷಮಿಸಿ ತಿದ್ದಿಕೊಳ್ಳುವರೆಂದು ನಂಬಿರುವ,

ಟಿ. ಎನ್. ಸುಬ್ಬರಾಯಶಾಸ್ತ್ರಿ,
ಕರ್ಣಾಟಪಂಡಿತ.

ಕರ್ಣಾಟಕ ಮಹಾಭಾರತ ವಿರಾಟಪರ್ವದ

ವಿಷಯಸೂಚಿಕೆ.

ವಿಷಯ	ಪುಟ

ವಿಷಯ	ಪುಟ
ದುರ್ಯೋಧನನು ಮಲ್ಲರನ್ನು ಕುರಿತು ಮತ್ಸ್ಯಪುರದಲ್ಲಿ ಪಾಂಡವರಿದ್ದರೆ ಒಡನೆಯೆ ಯುದ್ಧಾಪೇಕ್ಷೆಯನ್ನು ಬಿಟ್ಟು ಒಬ್ಬನನ್ನು ಹಸ್ತಿನಾವತಿಗೆ ಕಳುಹುವುದೆಂದು ಹೇಳಿದುದು	62
ದುರ್ಯೋಧನನು ರತ್ನಾಭರಣಾದಿಗಳಿಂದ ಮಲ್ಲರನ್ನು ಸತ್ಕರಿಸಿ ವೀಳೆಯವನ್ನಿತ್ತು ಕಳುಹಿದುದು	,,
ದುರ್ಯೋಧನನು ಕಳುಹಿದ ಮಲ್ಲರೆಲ್ಲರೂ ಬಂದು ಕಡೆಯಲ್ಲಿ ಸೇರಿ ಅಲಂಕರಿಸಿಕೊಂಡು ಪಯಣಗೈದುದು	,,
ಮಲ್ಲರ ಪಯಣಗಾಲದಲ್ಲಿ ಆದ ವಾದ್ಯಗಳ ವಿವರಣೆಯು	63
ಜೀಮೂತಾದಿಮಲ್ಲರು ಗಂಗಾನದಿಯನ್ನು ದಾಟಿ ಗೋದಾವರಿಯ ಮಾರ್ಗದಿಂದ ಹೋಗುತ್ತಾ ಕೃಷ್ಣಾನದಿಯ ದಡದಲ್ಲಿ ವಿನಾಥಪುರದಲ್ಲಿ ಬೀಡುಬಿಟ್ಟುದು	,,
ಒಬ್ಬ ಮಲ್ಲನು ಒಂದು ದಿನ ರಾತ್ರಿಯಲ್ಲಿ ದುಸ್ಸ್ವಪ್ನವನ್ನು ಕಂಡು ಕಳವಳಿಸಿಕೊಂಡೆದ್ದು ಚಲಿಸಲು; ಮಲ್ಲರು ದಿಕ್ಕುದಿಕ್ಕಿಗೆ ಚದರಿಹೋದುದು	,,
ಮಲ್ಲರು ದುಃಸ್ವಪ್ನವನ್ನು ಕಂಡ ಮಲ್ಲನನ್ನು ಕರೆದು ಭೀತಿಗೊಳಿಸುವ ಯಾವಸ್ವಪ್ನವನ್ನು ನೋಡಿದೆ ಯೆಂದು ಕೇಳಲು; ಅವನು ದುಃಖಗೊಂಡು ಹೇಳುವುದಕ್ಕಾರಂಭಿಸಿದುದು	,,
ಸ್ವಪ್ನವಾದ ರೀತಿಯನ್ನು ವಿವರಿಸಿದುದು	64
ಜೀಮೂತಮಲ್ಲನು ಸ್ವಪ್ನವನ್ನು ತಿರಸ್ಕರಿಸಿ ಮುಂದೆ ಹೊರಟುದು....	,,
ಮಲ್ಲರು ಮತ್ಸ್ಯಪುರಿಗೆ ಬಂದು ತಮ್ಮ ಬರುವಿಕೆಯನ್ನು ರಾಜನಿಗೆ ತಿಳಿಸುವಂತೆ ಹೇಳಿ ಕಳುಹುವುದು	,,
ಮಲ್ಲರು ಕಳುಹಿದ ಭಟರು ಅರಮನೆಯ ಹತ್ತಿರಕ್ಕೆ ಬಂದು ಬಾಗಿಲಿನ ಭಟರಿಗೆ ಹೇಳಿದುದು	,,
ಹೊರಬಾಗಿಲವರು ಒಳಬಾಗಿಲವರಿಗೆ ಕ್ರಮವಾಗಿ ತಿಳಿಸುತ್ತ ಬರಲು; ಏಳನೆಯ ಬಾಗಿಲಿನ ನಾಲಿ ಯೆಂಬವನು ಕೇಳಿ ದೊರೆಗೆ ಹೇಳುವುದಕ್ಕೆ ಅವನ ಅನುಜ್ಞೆಯನ್ನು ಕೇಳಿದುದು	,,

ವಿಷಯ ಪುಟ

ವಿಷಯ ಪುಟ

ವಿಷಯ ಪುಟ

ವಿಷಯ | ಪುಟ

ಶ್ರೀ

ಕುಮಾರವ್ಯಾಸ ಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

ವಿರಾಟಪರ್ವ.

ಪಂಚಮ ಸಂಪುಟ.

ಒಂದನೆಯ ಸಂಧಿ.

ಸೂಚನೆ.

ಕಾಯಿದರು ಸತ್ಯವನು ವನವಾ
ಸಾಯತವ ನೆಱೆ ಗೆಲಿದು ಪಾಂಡವ
ರಾಯರೋಲೈಸಿದರು ಬಂದು ವಿರಾಟನಗರಿಯಲಿ ||

ಪಾಂಡವರು ಅಜ್ಞಾತವಾಸಕ್ಕೆ ಉಪಾಯವನ್ನು ಚಿಂತಿಸಿದುದು.

ಕೇಳು ಜನಮೇಜಯ ಧರಿತ್ರೀ
ಪಾಲ ಮುನಿಜನನೃಪ [1] ಜನಂಗಳ
ಬೀಳುಗೊಟ್ಟನು ಭೂಮಿಪತಿ [2] ಬಲವಂದು ಹುತವಹನ |
ಮೇಲುಶಕುನದ ಚಾರುನಿನದವ
ನಾಲಿಸುತ ಸೋದರರು ಸಹಿತ ವ
ನಾಲಯವ ಹೊಱವಂಟು ಸೇರಿದರೊಂದು ವಟಕುಜವ || ೧

[1] ಧರ್ಮಜ ಮುನಿ, ಟ. [2] ನಗರಿಯನು, ಟ,

* ಬಂದು ವಟಕುಜದಡಿಯಲ್ಲೈವರು
ನಿಂದು ದ್ರೌಪದಿಸಹಿತ ನೆಳಲೊಳ
ಗಂದು ವಿಶ್ರಮಿಸಿದರು ಚಿಂತಿಸಿ ಧರ್ಮನಂದನನು ।
ಹಿಂದೆ ಹನ್ನೆರಡಬುದ ಸವೆದುವು
ಮುಂದಣನುವಿನ ಹದನು ತಮಗಿ [1]
ನ್ನೊಂದಬುದವಜ್ಞಾತವುತ್ಕಟವಾಯ್ತಲಾ ಯೆಂದ [2] ॥ ೧

ಬಡಗಲವರದು ಮೂಡಣರಸುಗ
ಳಡೆಗೆಣೆಯುರಾತಂಗೆ ತೆಂಕಣ
ಕಡೆಯವರು ಕಂಡಿಹರು ಕೆಲಬಲದವರು ಕೊಂಡೆಯರು ।
ಪಡುವಣವರತಿಕ್ರೂರರು ನಮಗಿ
ನ್ನಡಗಿರಲು ತೆಱನಾವುದೆಂದೆನೆ
ನುಡಿದನರ್ಜುನದೇವನವನೀಪತಿಗೆ ವಿನಯದಲಿ ॥ ೨

ವಿರಾಟನ ಪಟ್ಟಣವು ವಾಸೋಚಿತವೆಂದು ಅರ್ಜುನನು ಹೇಳಿದುದು.

ವಳಿತವನು ಹೊಕ್ಕಿಱದು ಕೌರವ
ರೊಳಗೆ ಹಗೆಯಾಗಿಹನು ಕೀಚಕ
ಬಲ ವಿರಾಟಂಗವನ ದೆಸೆಯಿಂ [3] ಭಯವಿಹೀನವದು ।
ಮುಳಿದು ಹೇಱಿಕೆಯಾದ ರವಿಸುತ
ಕಲಿತ್ರಿಗರ್ತಾದಿಗಳನಿಪ ಮಂ
ಡಳಿಕರನು ಕೈಕೊಳ್ಳದಾಳುವರವರು ಪಶ್ಚಿಮವ ॥ ೪

ಅದಕ್ಕೆ ಧರ್ಮರಾಯನ ಸಮ್ಮತಿ.

ನೃಪತಿ ನಿಶ್ಚೈಸಿದನು ಮತ್ಸ್ಯಾ
ಧಿಪನ ನಗರಿಯೊಳಲ್ಲಿ ಸ್ಥೈರಿಸಿ

* ಖ. ಟ. ಈ ಪುಸ್ತಕಗಳಲ್ಲಿ ಈ ಪದ್ಯವಿರುವುದಿಲ್ಲ.

1 ಕಿಂಗೇನುಗತಿ ಬಟಿ, ಚ. 2 ಕೊಂದುವರುಷಜ್ಞಾತವಾಸಕ್ಕಾವ ಠಾವೆಂದ, ಚ.

3 ಬಲುಹಿಂ, ಖ.

ಕೃಪಣತನದಲಿ ನೂಕಬೇಹುದು ನುಡಿದವತ್ಸರವ ।
ಗುಪಿತವೆಂತಳವಡುವುದಾಶ್ರಯು
ದಪದೆಶೆಯನೆಂತಾನುವಿರಿ ನಿ
ಷ್ಕೃಪೆಯೊಳೆಂತಾನೆಂಬೆನೆಂದನು ಧರ್ಮನಂದನನು ॥ ೫

ಪಾಂಡವರು ಮತ್ತು ದ್ರೌಪದಿಯು ಬೇರೆಬೇರೆ ವೇಷವನ್ನು ಧರಿಸಿದುದು.

ದೇವ ನಿಮ್ಮಯ ಮತವೆ ಮತವೆಮ
ಗಾವವೇಷದ ವಿವರ ನಿಮಗದ
ನೀವು ಬೆಸಸುವುದೆಂದು ಭೀಮಾರ್ಜುನರು ಬಿನ್ನವಿಸೆ ।
ನಾವು ಭೂಸುರವೇಷದಲಿ ಸಂ
ಭಾವಿತರು ಮತ್ತಲ್ಲಿ ಸನ್ಯಾ
ಸಾವಲಂಬನ ಕಂಕನೆಂಬಭಿಧಾನ ತನಗೆಂದ ॥ ೬

ವಲಲನೆಂಬಭಿಧಾನದಲಿ ನೃಪ
ನಿಳಯುವನು ಸಾಱುವೆನು ತಾನೆಂ[1]
ದುಲಿಯೆ ಮಾರುತಿ ನುಡಿದ ವರನಾಟ್ಯವಿ[2] ದವೇಷವನು ।
ಫಲುಗುಣನು ಹಯುಗೋನಿವಾಸ
ಸ್ಥಳವಿಳಾಸಿತರೆನಲು ಯಮಳರು
ಲಲನೆ ಬಿನ್ನಹಮಾಡಿದಳು ಸೈರಂಧ್ರಿವೇಷವನು ॥ ೭

ತೊಱಲಿದಿರಿ ಹನ್ನೆರಡುವರುಷವು
ಹಱುವೆದಲಿ ಸೊಂಪಡಗಿ ಪರರೊಡ
ನುಱಗೆಲಸದ ಱಗವಿದೆಂತೈ ಸಾರ್ವಭೌಮರಿಗೆ ।
ಬಱಲಿದಿರಿ ಹಿರಿದಾಗಿ ನಿಮ್ಮವ
ನಱಲಿಸಿದ ತನ್ನಂತೆ ಪಾಪಿಗ
ಳೂಳರೆ ಭುವನದೊಳೆಂದು ಕುಂತೀಸೂನು ಬಿಸುಸುಯ್ದ ॥ ೮

---

1 ನೆನುತ್ತಾ, ಖ,　　2 ಚಲನಸುತ ಬಿನ್ನೈಸಿದನು ನಟ್ಟುವಿಗ, ಖ.

ಬಡಲ ಬಟಿ ನೆಳಲಿಂಗೆ ಗತಿ ಬೇ
ರ್ಪಡಿಸಿಹುದೆ ಸುಖದುಃಖವಿವು ನಿ
ಮ್ಮಡಿಗಳಲಿ ತನು ನಾಲ್ಕಬಲಿ ಜೀವಾತ್ಮ ನೀವೆಮಗೆ ।
ಅಡವಿಯೇ ಸಾಮ್ರಾಜ್ಯ ನಿಮ್ಮಡಿ
ಯೊಡನಿರಲು ನೀವಿಲ್ಲದಿರೆ ಪುರ
ವಡವಿ ಯೆಮಗಹುದೆಂದು ಬಿನ್ನೈಸಿದರು ಭೂಪತಿಗೆ ॥ ೯

ತುಷ್ಟನಾದನು ನೃಪತಿ ಕೃತಪರಿ
ಶಿಷ್ಟಪಾಲನು ಜಗದೊಳತ್ಯು
ತ್ಕೃಷ್ಟಚರಿತನು ತೆಂಕದೆಸೆಗೆ ಸಹೋದರರು ಸಹಿತ ।
ದುಷ್ಟಮೃಗಗಳ ಬೇಂಟೆಯಾಡಿ ವ
ಸಿಷ್ಠಮುನಿಯಾಶ್ರಮದ ಸುಜನರ
ರಿಷ್ಟವನು ಪರಿಹರಿಸುತೈತಂದರು ಸರಾಗದಲಿ ॥ ೧೦

ತಮ್ಮ ಖಳಿಯಿದ್ದ ಆಯುಧಗಳನ್ನು ಬಂದು ಮರದಲ್ಲಿರಿಸಿದುದು.

ಬಂದು ಮತ್ಸ್ಯಪುರೋಪಕಂಠದ
ನಂದನದ ಕೆಲಕಡೆಯುಲನಿಬರು
ಬಂದು ನಾಲುಕು ದೆಸೆಯನೀಕ್ಷಿಸಿ ನಿಜವಿಲಾಸದಲಿ ।
ತಂದಚರ್ಮದಲಖಿಳಕೈದುವ
ನೊಂದುಹೆಣನಾಕಾರದಲಿ ಬಿಗಿ
ದೊಂದು ಬನ್ನಿಯು ಮರದ ತುದಿಯಲಿ ಕಟ್ಟಲೇಱಿದರು ॥ ೧೧

ತೆಗೆಯದಿರಿ ನೀವೆಂದು ತುಱುಗಾ
ಹಿಗಳನಂಜಿಸಿ ಧರ್ಮಸುತ ದೃಗು
ಯುಗವ ಮುಚ್ಚಿ ಸುರೇಂದ್ರಯಮವರುಣಾದಿಗಳಿಗೆಱಗಿ ।
ವಿಗಡನೀಕಲಿಭೀಮನೀಕೈ
ದುಗಳನೀತಂಗೀಯದಿರಿ ಕೈ
ಮುಗಿದು ಬೇಡುವೆನೆಂದು ಸುರರಿಗೆ ನುಡಿದನವನೀಶ ॥ ೧೨

ಈವುದಾಬೇಡಿದರೆ ಪಾರ್ಥಂ
ಗೀವುದೀಯಜ್ಞಾತವಾಸದೊ
ಳೀವಿಗಡಭೀಮಂಗೆ ಕೊಡದಿರಿ ಯೆನಲು ಖತಿಗೊಂಡು।
ನೀವು ಕುಂತಿಯ ಮಕ್ಕಳಾದಿರಿ
ನಾವು ದುರ್ಯೋಧನನವರು ತ
ಪ್ಪಾವುದಿದಕೆಂದನಿಲಸುತನೌಡೊತ್ತಿ ಗರ್ಜಿಸಿದ ॥ ೧೩

ಸುರನಿಕರ ಕಾದಿರಲಿ ಮೇಣೀ
ಧರಣಿ ಕೊಡೆನೆಂದೆನಲಿ ಹಸ್ತಿನ
ಪುರಕೆ ಧಾಟಿಯನಿಡುವೆನಮರರ ಮೋಹಿಗಳ ತಿವಿದು।
ಉರುತರಾಸ್ತ್ರವನೊಯ್ವೆನೆಂದ
ಬ್ಬರಿಸಿ ಮಾರುತಿ ನುಡಿಯೆ ತಮ್ಮನ
ಭರದ ಖತಿಯನು ನಿಲಿಸ ತೆಗೆದಪ್ಪಿದನು ಭೂಪಾಲ ॥ ೧೪

ಅವಧಿ ಯೊಂದೇವರುಷವಿದಱೊಳ
ಗೆವಗೆ ಸ್ಯೈರಣೆಯುಂಟು ನೀ ಮುನಿ
ದವಗಡಿಸಿದೊಡೆ ಬಟ್ಟಕ ಸ್ಯೆರಿಸಲಱಿಯೆ ಮನಮುಳಿದು।
ಅವನಿಯಲಿ ಹನ್ನೆರಡುವರುಷವು
ಸವೆದುವಿದು [1] ನಿಷ್ಫಲವಲಾ ಕೌ
ರವರಿಗತಿಲಾಗಹುದು ನೀನೇ ಬಲ್ಲೆ ಹೋಗೆಂದ ॥ ೧೫

ಧರ್ಮರಾಯನು ಯತಿವೇಷದಿಂದ ವಿರಾಟನಗರಂಗೆ ಬಂದುದು.

ಹದುಳವಿಟ್ಟನು ಭೀಮನನು ಸಾ [2]
ಮದಲಿ [3] ಮತ್ಸ್ಯನ ಪುರಿಗೆ ಯತಿವೇ
ಷದಲಿ ಬಂದನು ಹೊನ್ನಸಾರಿಯಚೀಲಕಕ್ಷದಲಿ।
ಇದಿರೊಳಾನತರಾಯುತ್ತು ಕಂಡವೆ

---

1 ಸವೆದುದು, ಚ.	2 ನಿ, ಖ.	3 ರ್ಮದನು, ಕ.

ರುದಿತತೇಜಃಪುಂಜದಲಿ ಸೊಂ
ಪೊದವಿ ಬರಲು ವಿರಾಟ ಕಾಣಿಕೆಗೊಂಡು ನಡೆತಂದ[1] ‖ ೧೬

ಇತ್ತ ಬಿಜಯಂಗೈಯಿ ಹಿರಿಯರಿ
ದೆತ್ತಣಿಂದೈತಂದರೈಯು
ತ್ತ್ಯುತ್ತಮದ ವೇಷದ ಮಹಾತ್ಮರ ಕಂಡು ಬದುಕಿದೆವು ।
ಚಿತ್ತವಿಸು ಭೂಪಾಲ ಪಾಂಡವ
ರತ್ತ ವನವಾಸಕ್ಕೆ ನಡೆಯ
ಲ್ಕಿತ್ತ ಬಂದೆವು ಮುನ್ನಿನೋಲಗವೆಂತರಿಸಿತಾಗೆ ‖ ೧೭

ಕೆಟ್ಟುದಿಂದ್ರಪ್ರಸ್ಥ ಪಾಂಡವ
ರುಟ್ಟು ಹೋದರು ನಾರಸೀರೆಯು
ನಟ್ಟಡವಿ ಮನೆಯಾಯ್ತು ರಾಜಾನ್ವಯದ ರಾಯರಿಗೆ ।
ಬಿಟ್ಟರೆಮ್ಮನು ಜಠರಭರಣಕೆ
ನೆಟ್ಟನಾಶ್ರಯವಿಲ್ಲದಿರೆ ಕಂ
ಗೆಟ್ಟು ಬಂದೆವು ಕಂಕನೆಂಬಭಿಧಾನ ತನಗೆಂದ ‖ ೧೮

ಓಲಗಕೆ ಬಂದಖಿಳರಾಯರ
ಮೌಳಿಮೌಕ್ತಿಕಮಣಿಮಯೂಖನಿ
ವಾಳಿಯಲಿ ನೆಱೆ ಮೆಱೆವುದಾತನ ಪಾದಪದ್ಮಯುಗ ।
ಕಾಲವಾವನನಾವಪರಿಯಲಿ
ಕೀಳುಮಾಡದು ಧರ್ಮಪುತ್ರನ
ನಾಳುಗೊಂಡನು ಮತ್ಸ್ಯನೆಲೆ ಜನಮೇಜಯಕ್ಷಿತಿಪ ‖ ೧೯

ಆದುದೈ ನಿರ್ವಾಹ ಕಂಕಂ
ಗಾದುದಾ ಮತ್ಸ್ಯೇಶನಿಂದ ವಿ
ವಾದವಿಲ್ಲದೆ ಸೇವೆ ನಿಜವಾದಂತೆ ಯಿರುತಿರಲು ।

---

[1] ಕಾಣಿಸಿಕೊಂಡನುಚಿತದಲಿ, ಚ.

ವಿರಾಟನಗರಿಗೆ ಭೀಮನು ಬಂದುದು.

ಹೋದುವಿತ್ತಲು ಕೆಲವುದಿನ ತನ
ಗಾದ ಸಾಹಾಯ್ಯದಲಿ ರಿಪುಬಲ
ಭೇದಿ ಮಾರುತಿ ಬಂದು ಹೊಕ್ಕನು ಮತ್ಸ್ಯಪುರವರವ [1] ॥ ೨೦

ಏನು ಪರಿಣತಿ ನಿನಗೆ ಬಾಣಸಿ
ಯಾನು ಭೀಮನ ಮನೆಯವನು ಮ
ತ್ತೇನು ಭುಜಬಲವಱಿವೆನಗ್ಗದ ಮಲ್ಲವಿದ್ಯೆಯಲಿ ।

ಅರ್ಜುನನ ಬರುವಿಕೆ.

ನೀನಧಿಕನೆಂದಾಸಮೀರನ
ಸೂನುವನು ಮನ್ನಿಸಿದನಿತ್ತಲು
ಮಾನನಿಧಿ ಮಱುದಿವಸ ಹೊಕ್ಕನು ಪಾರ್ಥನಾಹೊಳಲ ॥ ೨೧

ಸುರಪನರಸಿಯ ಶಾಪದಲಿ ಸಿತ
ತುರಗ ನೆಱೆವೆಣ್ಣಾಗಿ ಮತ್ಸ್ಯೇ
ಶ್ವರನ ಮಗಳಿಗೆ ನಾಟ್ಯವಿದ್ಯಾಭ್ಯಾಸ ಸಂಗದಲಿ ।

ನಕುಲ ಸಹದೇವರು ವಿರಾಟನಗರಕ್ಕೆ ಬಂದುದು.

ಇರಲು ಯಮಳರು ತುರಗಗೋವ್ರಜ
ಭರಣರಾದರು ಬೞಿಕ ಪಾಂಡವ
ರರಸಿ ಸಾರಿದಳೊಳವಿನಲಿ ವೈರಾಟಪಟ್ಟಣವ ॥ ೨೨

ದ್ರೌಪದಿಯ ಆಗಮನ.

ತರಣಿಗಂಜಿದೊಡಿಂದು ತಲೆಗಾ
ಯ್ದಿರಿಸಿದನೊ ಮಱೆಯಾಗಿ ತಿಮಿರದ
ಹೊರಳಿಗಳನೆನೆ ಮುಡಿಗೆ ಮೋಹಿದವೇಣಿವಲ್ಲರಿಯ ।

---

1 ಕಂಡನು ಮತ್ಸ್ಯಭೂಪತಿಯ, ಖ. ಚ.

ಹಿರಿದು ಸೈರಿಸಲಾರೆನೆಂದೊಡ
ನಿರಿಸಿದನೊ ಕೈರವವನೆನಲಂ
ದರಳುಗಂಗಳ [1] ಥಾಳವೊಪ್ಪಿರೆ ಬಂದಳಿಂದುಮುಖಿ ॥ ೨೩

ಮೊಲೆಯ ಮೇಲುದ ಜಾಱೆ ಜಾಱಿದ
ರಳಿಮನರು ಕಂಗಳಿನ ಮಿಂಚಿನ
ಹೊಳಹಿನಲಿ ನಡೆಗೆಟ್ಟು ನಿಂದರು ಚಿತ್ತವಿಹ್ವಳರು ।
ತೆಳುವಸುರು ತಲೆದೋಱೆ ತೋಱಿದು
ದಳಗು ಮಱುಮೊನೆಯೆನಲು ವಿಟ
ರಳವಳಿಯೆ ನಡೆತರುತಿರ್ದಳಂಗನೆ ಬೀದಿಬೀದಿಯಲಿ ॥ ೨೪

ಎಲೆಲೆ ಮದನನ ಗಜವು ತೊತ್ತಳ
ದುಳಿದುದೋ ಕಾಮುಕರನೆನೆ ಗಾ
ವಳಿಯೊಳಗೆ ಗಾಱಾಯ್ತು [2] ಗರುವಿಕೆ ವಿಟವಿದೂಷಕರ ।
ಅಳುಕಿದರು ಮನುಮಥನ ಗರುಡಿಯ
ಬಲುಮೆಕಾಱರು ಬಂದಳಗ್ಗದ
ನಳಿನಮುಖಿ ಬಹುಜನದ ಬಗೆಗಚ್ಚರಿಯನೊದವಿಸುತ ॥ ೨೫

ದ್ರೌಪದಿಯ ರೂಪವನ್ನು ನೋಡಿ ರಾಣೀವಾಸದವರು ಬೆರಗಾದುದು.

ಜನದ ಜಾಣಕ್ಕಾಡಲಂ ಮೇ
ಹನಮಹೋದಧಿ ಮತ್ಸ್ಯನೃಪನಂ
ಗನೆಯ ನಿಳಯಕೆ ಬರಲು ಬೆಱಗಾಯ್ತಖಿಳನಾರಿಯರು ।
ವನಿತೆ ಮಾನಿಸಿಯಲ್ಲ ಮನುಜರಿ
ಗಿನಿತು ರೂಪೆಲ್ಲಿಯದು ವಿಸ್ಮಯ
ವೆನುತ ಮನದೊಳಗಳುಕಿದರು ಮತ್ಸ್ಯೇಶನರಸಿಯರು ॥ ೨೬

1 ಚರರೆಕಂಗಳ, ಚ. 2 ಕಾಳಾಯ್ತು, ಕ. ಖ.

ಸುದೇಷ್ಣೆಯು ಇಷ್ಟದಂತೆ ರಾಜಮಂದಿರಕ್ಕೆ ದ್ರೌಪದಿಯು ಬಂದುದು.

ಬರವ ಕಂಡು ಸುದೇಷ್ಣೆ ಮನದಲಿ
ಹರುಷ ಮಿಗೆ ಹಿಗ್ಗಿದಳು ಕರೆ ಕರೆ
ತರುಣಿ ಯಾರೆಂದಟ್ಟಿದಳು ಕೆಳದಿಯರನನಿಬರನು [1] ।
ಸರಸಿಜಾಯತಗಂಧವನು ಮೋ
ಹರಿಸಿ ಮುಂಚುವ ಪರಿಮಳವನಂ
ದರಿಸಿ ಬೀಱುತ ಬಂದು ಹೊಕ್ಕಳು ರಾಜಮಂದಿರವ ॥ ೨೩

ಕೆಳದಿಯರು ಕಾಣಿಸಿದರರಸನ
ಲಲನೆಯನು ಪರ್ಯಂಕಪೀಠದ
ಕೆಲಕೆ ಕರೆದಳು ಕಮಲವದನೆಯನುಚಿತವಚನದಲಿ ॥
ನಳಿನಮುಖಿ ನೀನಾರು ನಿನಗಾ
ರೊಳರು ರಮಣರು ಮಾಸಿಕೊಂಡಿಹ
ಮಲಿನವೃತ್ತಿಯಿದೇಕೆನುತ ಬೆಸಗೊಂಡಳಂಗನೆಯ ॥ ೨೪

ದ್ರೌಪದಿಯ ನುಡಿ.

ಅತುಳಬಲಗಂಧರ್ವರೈವರು
ಪತಿಗಳೆನಗುಂಟೆನ್ನ ಚಿತ್ತಕೆ
ಖತಿಯ ಮಾಡಿದೊಡೊಂದುವರುಷವು ಬಿಡುವೆನವರುಗಳ ।
ಸತತವಾ ಕುಂತೀಕುಮಾರರ
ಸತಿಯರೋಲೈಸಿದ್ದೆ ಬೞಿಕವ
ರತಿಗಹನದಲಿ ನಿಷ್ಠರಾಗಲು ತನಗೆ ಬರವಾಯ್ತು ॥ ೨೫

ಏನ ಮಾಡಲು ಬಲ್ಲೆಯೆಂದರೆ
ಮಾನಿನಿಯ ಸಿರಿಮುಡಿಯ ಕಟ್ಟುವೆ
ಸೂನ ಮುಡಿಸುವೆವರ ಕಟಾಕ್ಷಕೆ ಕಾಡಿಗೆಯನಿಡುವೆ ।

---

[1] ನಿಬ್ಬರನು, ಕ. ಖ.

ಏನ ಹೇಳಿದ ಮೂಡ ಬಲ್ಲೆನು
ಸಾನುರಾಗದೊಳೆಂದೆನಲು ವರ
ಮಾನಿನಿಯು ನಸುನಗುತ ನುಡಿಸಿದಳೆಂದು ವಿನಯದಲಿ ‖ ೭೦

ಎನಲು ಮೆಚ್ಚಿದಳಾವಿರಾಟನ
ವನಿತೆ ವೀರರ ವಧುವೆನಾಸಖಿ
ಜನದೊಳಗೆ ಮನ್ನಿಸಿದಳನಿಬರಿಗಾಯ್ತು ನಿರ್ವಾಹ ।
ಮನದ ದಗೆಯಡಗಿದುದು ಮತ್ಸ್ಯೇ
ಶನ ಪುರಾಂತರದೊಳಗೆ ವೈಮಜಿ
ದನುಪಮಿತಭುಜಸತ್ವರಿದ್ದರು ಭೂಪ ಕೇಳೆಂದ ‖ ೭೧

ಒಂದನೆಯ ಸಂಧಿ ಮುಗಿದುದು.

* ಎರಡನೆಯ ಸಂಧಿ.

ಸೂಚನೆ.

ಕುಸುಮಶರನುರುವಣೆಯ ಗಾಯದ
ಲೆಸುಗೆವಡೆದನು ಕೀಚಕನು ತ
ನ್ನಸುವಿನಳತೆಯ ನೋಡದೇ ತುಡುಕಿದನು ದ್ರೌಪದಿಯ ‖

ಪಾಂಡವರು ವಿರಾಟನ ಬಳಿ ಸುಖದಿಂದ ಕಾಲವನ್ನು ಕಳೆದುದು.

ಕೇಳು ಜನಮೇಜಯ ಧರಿತ್ರೀ
ಪಾಲ ನಿಮ್ಮಯ ಪೂರ್ವಭೂಮಿಪಾ [1]
ಪಾಲರಿದ್ದರು ಗುಪಿತದಿಂದ ವಿರಾಟನಗರಿಯಲಿ ।

---

* ಚ. ಪುಸ್ತಕದಲ್ಲಿ ಈ ಸಂಧಿಯು ಮೂರನೆಯದಾಗಿದೆ.

ಪೃಥ್ವೀ, ಚ. ಚ.

ಕಾಲ ಸವೆದುದು ಹತ್ತುತಿಂಗಳ
ಮೇಲೆ ಮತ್ತೊಂದತಿಶಯೋಕ್ತಿಯ
ನಾಲಿಸೈ ವಿಸ್ತರದಲಱಿಪುವೆನೆಂದನಾಮುನಿಪ ॥ ೧

ಜವನ ಮಗ ಸಂನ್ಯಾಸಿವೇಷದಿ
ಪವನಸುತ ಬಾಣಸಿನ ಮನೆಯಲಿ
ದಿವಿಜರಾಯನ ತನಯನಿದ್ದ ಶಿಖಂಡಿವೇಷದಲಿ ।
ಜವಳಿಮಕ್ಕಳು ಗೋಹಯಂಗಳ
ನಿವಹಕಧಿಪರು ಕಮಲಮುಖಿ ಕಾ
ಲವನು ಕಳೆದಳು ರಾಯನರಸಿಯ ಕೆಳದಿಯರ ಗೂಡಿ ॥ ೨

ಆಸುದೇಷ್ಣಾ ದೇವಿಯರ ನಿಡು
ಕೇಶವನು ಹಿಕ್ಕುವಳು ಮುದದಲಿ
ಪೋಸಮಲ್ಲಿಗೆಯರಳದೆಖ್ಖಳವನು ಮುಡಿಸುವಳು ।
ಆಸತಿಯ ಮನವೊಲಿದು ನಡೆವಳು
ಲೇಸುಲೇಸೆಂದೆನಿಸಿ ಬಾಳುವ
ಭಾಷೆಯನು ಸಲಿಸುತ್ತಲಿರ್ದಳು ಪತಿಗಳಾಜ್ಞೆಯಲಿ ॥ ೩

ಆವಿರಾಟನ ರಾಜಧಾನಿಯೊ
ಳಾವಿಲಾಸವೆ ಮುಸುಕಿದರು ಪರ
ಸೇವೆಯಲಿ ಪಾಂಡವರು ಕಳೆದರು ಹತ್ತುಮಾಸವನು ।
ರಾವಣನು ಮುನ್ನೊಮ್ಮೆ ಸೀತಾ
ದೇವಿಗಳುಪಿದ ಕಥೆಯ ಪೊಲು ಸಂ
ಭಾವಿಸೈ ಕೀಚಕವಿಳಾಸವನೆಂದನಾಮುನಿಪ [1] ॥ ೪

ಬಂದಾನೊಂದು ದಿವಸ ಕೀಚಕನು ತನ್ನ ಅಕ್ಕನನ್ನು
ನೋಡಲು ಬಂದುದು.

ಬಂದುದಿವಸ ವಿರಾಟನರಸಿಯ
ಮಂದಿರವನೋಲೈಸಲೆಂದೈ

1 ಭಾವಿಸಿದ ಕೀಚಕ ವಿಡಂಬವ ಕೇಳು ಭೂಪಾಲ, ಚ.

ತಂದನಾಕೆಯು ತಮ್ಮ ಕೀಚಕನತುಳಭುಜಬಲನು ।
ಹಿಂದೆ ಮುಂದಿಕ್ಕೆಲದ ಸತಿಯರ
ಸಂದಣಿಯ ಮಧ್ಯದಲಿ ಮೆಱೆವರ
ವಿಂದವದನೆಯು ಕಂಡು ಕಾಣಿಕೆ ಯಿತ್ತು ಪೊಡವಟ್ಟ ॥ ೫

ಅನುಜನನು ತೆಗೆದಪ್ಪಿ ಸಿಂಹಾ
ಸನದ ಕೆಲದೊಳಗಿರಿಸಿ ಮುದದಲಿ
ಮನದಣಿಯೆ ಮನ್ನಿಸಿದಳಂಗನೆ ತತ್ಸಹೋದರನ ।
ತನುಪುಳಕ ತಲೆದೋಱಲವನು
ಬ್ಬಿನಲಿ ಸತ್ಕೃತನಾಗಿ ಕಮಲಾ
ನನೆಯುರನು ನೋಡಿದ ಸುದೇಷ್ಣೆಯ ಮೇಳದಬಲೆಯರ ॥ ೬

ಆಗ ಕೀಚಕನಿಗೆ ಪಾಂಚಾಲಿಯ ದರ್ಶನ.

ಅವರ ಮಧ್ಯದೊಳಮಲತಾರಾ
ನಿವಹದಲಿ ರೋಹಿಣಿಯವೊಲು ಸುರ
ಯುವತಿಯರೊಳೂರ್ವಶಿಯವೊಲು ನದಿಗಳಲಿ ಜಾಹ್ನವಿಯ ।
ಅವಯವದ ಪರಿಮಳದ ಪಸರಕೆ
ಕವಿವ ತುಂಬಿಯ ಸಾರಸಂಗೀ
ತವನು ಕೇಳುತ ಕಂಡನವ ಪಾಂಚಾಲನಂದನೆಯ ॥ ೭

ಮೊದಲೊಳವನವಳಂಗವಟ್ಟವ
ನೊದವಿ ನೋಡಿದೊಡಲ್ಲಿಯೇ ಗಾ
ಢದಲಿ ನೆಟ್ಟುವು ಕೀಲಿಲರಿದಾಯ್ತಾಲಿಗಳನಲುಗಿ ।
ಮದನ ಮಸೆದೋಱಿದನು ಹೂಗಣೆ
ಹೃದಯವನು ಹೊಱದುವು ಹರ ಹರ
ಥೆದಱಿದನು ಹಮ್ಮೈಸಿದನು ಖಳನೊಂದು ನಿಮಿಷದಲಿ ॥ ೮

ಸಲೆ ಯಿವಳು ಮೂಜಗವ ಮೋಹಿಪ
ತಿಲಕವೋ ಕಾಮಂಗೆ ಕಟ್ಟಿದ
ಕಳನ ಭಾಷೆಗೆ ನಿಂದ ಮಾಸಾಳೋ ಮಹಾದೇವ ।
ಕೊಲೆಗಡಿಗ ಕಂದರ್ಪಕನ ಕೂ
ರಲಗೊ ಮದನನ ಸೊಕ್ಕಿದಾನೆಯೊ
ನಳಿನಮುಖಿ ಯಿವಳಾವ ಸತಿ ಯೆಂದಳುಪಿ ನೋಡಿದನು ॥ ೯

ಜಗವ ಕೆಡಹಲು ಜಲಜಸಂಭವ
ಬಿಗಿದ ಬಲೆ ಯಿವಳಲ್ಲಲೇ ಮೂ
ಜಗದ ಯತಿಗಳನೆಸಲು ಮನುಮಥನೆಸೆದ ಕೂರಲಗೊ ।
ವಿಗಡನಾದನು ಕಾಮನಂಬುಗ
ಳುಗಿದುವೆದೆಯಲಿ ನಟ್ಟದೃಷ್ಟಿಯು
ತೆಗೆಯಲಱಿಯದೆ ಸೋತು ಕೀಚಕ ಪಾತಕವ ನೆನೆದ ॥ ೧೦

ಆಗ ಕೀಚಕನ ಅವಸ್ಥೆ.

ನಿಂದು ನೋಡಿದ ದ್ರೌಪದಿಯ ಮುಖ
ದಂದವನು ಕಂಡಾಗ ಕೀಚಕ
ನೊಂದನೆನೆ ಮುಖದಿರುಹಲೆಚ್ಚನು ಕಾಮ ಕೈಗೂಡಿ ।
ಅಂದು ಬೆಱಗಾದನು ಮಹಾಸತಿ
ಯಿಂದು ತುಳಿದಳು ಮನವ ಯಿವಳಾ
ರೆಂದು ಭಾವಿಸಿ ಚಾಚಿದನು ಕದಪಿನಲಿ ಕರತಳವ ॥ ೧೧

ಸೂಱೆಯೋದುದು ಚಿತ್ತ ಕಂಗಳು
ಮಾಱುವೋದುವು ಖಳನ ಧೈರ್ಯವ
ತೋಱೆ ಕಾಣೆನು ಕರಣದಲಿ ಕಳಕಳದ ಬೀಡಾಯ್ತು ।
ಮೀಱಿ ಮೊಗವಂಗಜನ ಶರದಲಿ
ದೋಱುವೋದುದು ಹೃದಯ ಕಣ್ಣುರಿ
ಗಾಱಿ ಯಿವಳಾರೆನುತ ಗಜಬಜಿಸಿದನು ನಿಮಿಷದಲಿ ॥ ೧೨

ಅಱಿವು ತಲೆಕೆಳಗಾಯ್ತು ಧೈರ್ಯದ
ನಿಱಿಗೆ ನಗೆಗೇಡಾಯ್ತು ಲಜ್ಜೆಯ
ಹೊಱಿಗೆ ಬಱಿದೊಱೆಯಾಯ್ತು ಕರಿಮೊಳೆಯಾಯ್ತು ಭಯಬೀಜ
ಮಱವೆ ಗರಿಗಟ್ಟಿತು ಮನೋಭವ
ನಿಱಿಗೆಲಸ ಬಲುಹಾಯ್ತು ಹೊಗಱುವೊ
ಡಱಿಯೆನಾತನ ಚಿತ್ತದಂತಸ್ತಾಪದೀಪ್ತಿಯನು [1] ॥ ೧೩

ಬೀಳುಗೊಂಡುದು ಲಜ್ಜೆ ಮಹಿಮೆಯ
ಕೀಲು ಕಳಚಿತು ದ್ರುಪದತನುಜೆಯ
ನಾಲಿಯಲಿ ನುಂಗಿದನು ಮನದಲಿ ಸತಿಯ ಸೆಱೆವಿಡಿದು ।
ಕೇಳು ಬಿನ್ನಹವಕ್ಕ ನಿಮ್ಮಡಿ
ಯೋಲೆಕಾತಿಯರೊಳಗೆ ಮೀಟನ
ಮೇಲುಗೈಯಿವಳಾರೆನುತ ಬೆಸಗೊಂಡನಗ್ರಜೆಯ ॥ ೧೪

ಈಕೆ ಗಂಧರ್ವರ ರಮಣಿ ನ
ಮ್ಮಾಕೆಯಾಗಿಯೆ ಮಾನ್ಯವೃತ್ತಿಯೊ
ಳೀಕೆಯನು ಸಲಹುವೆವು ಬಲ್ಲಿದರಿವಳ ವಲ್ಲಭರು ।
ಸಾಕು ಬೀಡಾರಕ್ಕೆ ನೀ ಹೋ
ಗೀಕೆ ನಿನಗಹಳಲ್ಲ ನಿಂದಿರು
ಕಾಕನಾಡದಿರೆನುತ [2] ಬೀಱುಗೊಟ್ಟಳು ನಿಜಾನುಜನ ॥ ೧೫

ತಾಱಿತಂತಃಕರಣ ಕಾಮನ
ಕೂಱುಗಣೆಗೀಡಾಯ್ತು ಮೈ ಮನ
ಸೇಱು ಮುಚ್ಚದು ದುಗುಡ ಬಲಿದುದು ಮುಸುಕು ಮೋಱೆಯಲಿ ।
ಮೀಱಿ ನಿಜಮಂದಿರಕೆ ಢಗೆ ಮೈ
ದೋಱಿ ಬಂದನು ಮಱುದಿವಸ ತಲೆ
ದೋಱಿ ಕಂಡನು ದ್ರೌಪದಿಯನರಮನೆಯ ಬಾಗಿಲಲಿ ॥ ೧೬

---

1 ದೀಪನವ, ಕ. ಖ. ಝ. 2 ನುಡಿಯದಿರೆಂದು, ಝ.

ಕಳುಹಿದನು ತನ್ನೊಡನೆ ಬಹ ಗಾ
ವಳಿಯ ಪರಿವಾರವನು ತನ್ನಯ
ಬಳಿಯ ಹಡಪದ ಬಾಲಕನ ಹಿಂದಿಕ್ಕಿ ನಡೆತಂದ ।
ಬಲಿದು ಸಿಂಹದ ಸತಿಗೆ ನರಿ ಮನ
ವೊಲಿದು ಬಪ್ಪಂದದಲಿ ಗರುಡನ
ಲಲನೆಗಹಿ ಬಯಸುವವೊಲವನೈದಿದನು ಬಾಲಿಕೆಯ ॥ ೧೭

ರತಿಯ ಸೊಬಗಂತಿರಲಿ ವರಪಾ
ರ್ವತಿಯ ರೂಪಂತಿರಲಿ ಬೊಮ್ಮನ
ಸತಿಯ ಚೆಲುವಂತಿರಲಿ ಈಬಾಲಿಕೆಯ ರೂಪಿಂಗೆ ।
ಪ್ರತಿಯ ಕಾಣೆನು ಪಾಂಡವರ ದ್ರೌ
ಪತಿಗೆ ಸರಿ ಮಿಗಿಲೆನಿಸಿ ತೋಱುವ
ಸತಿಯ ವಿಭ್ರಮ ನೆಟ್ಟುದೆನ್ನಯ ಮನದೊಳನುತಿರ್ದ ॥ ೧೮

ಕೀಚಕನು ದ್ರೌಪದಿಯ ಸಮೀಪಕ್ಕೆ ಬಂದು ಮಾತನಾಡಿಸಿದುದು.

ಖಳನ ಮನದಿಂಗಿತವ ತನ್ನೊಳು
ತಿಳಿದು ಕಾಮಿನಿ ಬೆದಱಿದಳು ಕಳ
ವಳಗ ಸೋತನು ಕೆಟ್ಟೆನೆಂದಳು ತನ್ನ ಮನದೊಳಗೆ ।
ತೊಲಗಿ ಹಿಂದಡಿಯಿಡಲು ಕೀಚಕ
ನಳುಕನೈತಂದಬುಜವದನೆಯ
ಬಳಿಗೆ ಬಂದನು ನುಡಿಸಲಾಗದೆ ತರಳೆ ನೀನೆಂದ [1] ॥ ೧೯

ಎಲೆ ಮರುಳೆ ಬೇಡಳುಪದಿರು ಕೂ
ರಲಗ ಕೊರಳಿಗೆ ಬಯಸದಿರು ಕಳ
ವಳಿಸದಿರು ಕೈಯೊಡನೆ ನಿನ್ನರಮನೆಗೆ ತಿರುಗುವುದು ।
ಸುಲಭೆ ನಾ ನಿನಗಲ್ಲ ನಿನ್ನನು
ಕೆಲರು ನಗುವರು ಪರಮಸದ್ಗತಿ
ತೊಲಗುವುದು ಮಾಣೆನುತ ಮುಖದಿರುಹಿದಳು ಲಲಿತಾಂಗಿ ॥ ೨೦

---

1 ನಿಂದು ನುಡಿದನು ಮಧುರ ವಚನದಲಿ, ಝು.

ನಿಲ್ಲೆಲೆಗೆ ಸೈರಂಧ್ರಿ ಕಾಮನ
ಬಲ್ಲೆಹದ ಬಲುಗಾಯ ತಾಕಿತು
ಬಲ್ಲೆ ನೀನವುಷಧಿಯ ಬದುಕಿಸಿಕೊಳ್ಳು ತನ್ನೊಡಲ ।
ಮೆಲ್ಲನಡಿ ಯಿಡು ಮಾತ ಮನ್ನಿಸು
ಚೆಲ್ಲೆಗಂಗಳನೆನ್ನ ಮುಖದಲಿ
ಚೆಲ್ಲಿ ಸತ್ರಾಣಿಸಲು ಬೇಹುದು ವಿಗಡಜೀವನವ ॥ ೨೧

ಎಳನಗೆಯ ಬೆಳದಿಂಗಳನು ನೀ
ತಳೆದು ತಾಪವ ಕೆಡಿಸು ಮಧುರದ
ಮೆಲುನುಡಿಯ ಸುಧೆಯಿಂದ ತೃಷ್ಣೆಯನಕಟ ಪರಿಹರಿಸು ।
ಅಳಿಮನವ ಬಡತನದ ನಿನ್ನಯ
ಕಳಶಕುಚಲಕ್ಷ್ಮಿಯಲಿ ಕಳೆ ಮನ
ದೊಲವನಿತ್ತಲು ತಿದ್ದಬೇಹುದು ಕಾಂತೆ ಕೇಳೆಂದ ॥ ೨೨

ತೋಳತೆಕ್ಕೆಯ ತೊಡಿಸಿ ಕಾಮನ
ಕೋಲ ತಪ್ಪಿಸು ಖಳನ ಕಗ್ಗೊಲೆ
ಯೂಳಿಗವ ಕೇಳ್ದು ಸುರದಿಹರೆ ಸಮರ್ಥರಾದವರು ।
ಸೋಲಿಸಿದ ಗೆಲವಿಂದ ಬಲು ಮಾತಾ
ತಾಳಿ ಯಿವಸೆನ್ನದಿರು ಹರಣದ
ಮೇಲೆ ಸರಸವೆ ಕಾಯಬೇಹುದು ಕಾಂತೆ ಕೇಳೆಂದ ॥ ೨೩

ಅದನ್ನು ಕೇಳಿ ಪಾಂಚಾಲಿ ನಡುಗಿದುದು.

ಕೇಳಿ ಕಿವಿ ಮುಚ್ಚಿದಳು ಮನದಲಿ
ಮೇಳದೈವರ ನೆನೆದು ಶಿವ ಶಿವ
ಶೂಲಪಾಣಿ ಮುಕುಂದ ಯೆನುತಾರವಿಯನೀಕ್ಷಿಸುತ ।
ಕಾಳಮೂಳನಲಾ ಖಳಾಗ್ರಣಿ
ಮೇಲುಗಾಣನಲಾ ಮದಾಂಧನ [1]
ಸೋಲಿಸುವರಾರುಂಟೆನುತ ನಡುಗಿದಳು ನಳಿನಾಕ್ಷಿ [2] ॥ ೨೪

[1] ದುರಾತ್ಮನ, ಝ. ಡ. [2] ತಲೆಬಾಗಿದಳು ತರಳೆ, ಚ.

ಎಲೆ ದುರಾತ್ಮ ಮಹಾಪರಾಧವ
ಬಳಸುವರೆ ಬಯಲಿಂಗೆ ನಿನ್ನಯ
ಕುಲದ ಬೇಱನು ಕಾಯ್ವರೇ ಫಲವಾವುದಿದಱಿಂದ [1] ।
ಹಱಿವು ಹೊದ್ದದೆ ಹೆತ್ತವರು ಮ
ಕ್ಕಳುಗಳೆಂಬೀ ಬದುಕು ಮಾಣದೆ
ಯೆಳಸಿಕೊಂಬಂತಾದುದೆಂದಳು ಪಾಂಡವರ ರಾಣಿ ॥ ೨೪

ಕೀಚಕ ಪಾಂಚಾಲಿಯರ ವಿವಾದ.

ಎಲೆಗೆ ಪಾತಕಿ ನಿನ್ನ ಕಣ್ಣಿಂ
ಬಲಗಿನಲಿ ಯೆನ್ನೆದೆಯ ನೋಯಿಸಿ
ತೊಲಗಬಹುದೇ ಕರುಣವಿಲ್ಲವೆ ನಿನ್ನ ಮನದೊಳಗೆ ।
ಬಲಿದು ಬಂದೆನು ಕಾಮನೂಱಿಗ
ಬಲುಹು ವೈರಿಯ ಭಯವ ತಪ್ಪಿಸಿ
ತಲೆಯ ಕಾಯಲು ಬೇಹುದೆಂದನು ನಗುತ ಕೀಚಕನು [2] ॥ ೨೫

ಕಾತರಿಸದಿರು ಮಂದಿವಾಳದ
ಮಾತುಗಳು ಬೇಡಕಟ ಕೆಡದಿರು
ಸೋತರೇನದು ಮನುಜಧರ್ಮವು ಚಿತ್ತ ಚಂಚಲವು ।
ಈತತುಕ್ಷಣ ವಾರುಕೇಳದೊ
ಡಾತಗಳು ಸ್ವೈರಿಸರು ದೇವ
ವ್ರಾತದಲಿ ಬಲ್ಲಿದರು ತನ್ನವರೆಂದಳಿಂದುಮುಖಿ ॥ ೨೬

ದ್ರೌಪದಿಗೆ ಖಳ ನುಡಿದನೆನ್ನಾ
ಟೋಪವನು ನೀನಱಿಯೆ ಬಡವರ
ಕೋಪವಾಡಿಗೆ ಮೃತ್ಯು ನಿನ್ನವರೇನ ಮಾಡುವರು ।

---

1 ಕೊಯ್ವರೇಬಹುದಾವದಿದರಿಂದ, ಚ, ಛ. ಖ.

2 ಬೇಕೆನುತ ಕೀಚಕನು ಕೈಮುಗಿದ, ಚ.

ಆಪೆನವರಂತಿರಲಿ ನೀನೆನ
ಗೋಪಳಾದರೆ ಸಾಕು ಮಲೆತೊಡೆ
ಯಾಪಿನಾಕಿಗೆ ತೆರಳುವೆನೆ ಬಟಿಕಲ್ಲಿ ನೋಡೆಂದ ॥ ೧೮

ಹುಳುಕನಲ್ಲಾ ತುಂಬಿ ಕೋಗಿಲೆ
ಗಳಹನಲ್ಲಾ ಶಶಿವಸಂತರ
ಬಲುಹು ಮಾನ್ಯರನಿಱಿಯುವೇ ತಂಗಾಳಿ ಧಾರ್ಮಿಕನೆ ।
ಖಳನಲಾ ಮಾಕಂದ ಲೋಕದ
ಕೊಲೆಗೆಡಿಗನಲ್ಲಾ ಮನೋಭವ
ನಿಱಕೆಗೊಂಬರೆ ಪಾಪಿಯೊಲಿಯದೆ ಕೊಲುವರೇ ಯೆಂದ ॥ ೧೯

ಒಲಿದೆ ನೀನಹುದಾನು ಕೊಲ್ಲೆನು [1]
ಕೊಲುವ ಸುಭಟರು ಬೇಱೆ ಬಯಲಿಗೆ
ಹಲವು ಗಳಹಿದರೇನು ಫಲವಿಲ್ಲ [2] ಕಟ ಸಾಱಿದೆನು ।
ಮುಳಿದರಾದರೆ ಕೇಳು [3] ನಿನ್ನಯ
ತಲೆಯ ಕೊಯ್ಯದೆ ತುಷ್ಟರಾಗರು
ಕಲಕುವರು ನಿನ್ನನ್ವಯಾಬ್ಧಿಯನೆಂದಳಂದುಮುಖಿ ॥ ೨೦

ಎಲವೊ ಬಾಹಿರ ಹಲವು ಮಾತನು
ಗಳಹದಿರು ನೀ ಬದುಕವೊಲಿದೊಡೆ
ಕೊಲುವರೆನ್ನಯ ಪತಿಗಳದಱಿಂ ಬೇಗ ತೊಲಗುವುದು ।
ಚಲುವವಧು ಕೇಳಲೆ ದುರಾತ್ಮಕ
ರಱವರೇ ಯೆನ್ನನು ಧರಿತ್ರಿಯೊ
ಳಱವ ಹಱವನು ಹೊತ್ತು ಬದುಕುವುದೆಂದನಾಖಳನು ॥ ೨೧

ಸಾವು ತಪ್ಪದು ತನಗೆ ಕಾಮನ
ಡಾವರವು ಘನ ನಿನ್ನ ನೆರೆದೇ
ಸಾವೆನಲ್ಲದೆ ಕಾಮನಂಬಿಂಗೊಡಲನೊಪ್ಪಿಸೆನು ।

---

1 ಒಲಿದು ನಿನ್ನನು ನಾವು ಕೊಲ್ಲೆವು, ಚ. ಛ.

2 ಬೇಡ, ಕ. ಖ. 3 ತಿಳಿಸಿದರೆ ಯೆನ್ನವರು, ಚ.

ಭಾವೆ ನೂಕಲು ಬೇಡ ನಿನ್ನ ಕೃ
ಪಾವಲೋಕನದಿಂದಲೆನ್ನಯ
ಜೀವವನು ಸಲಹೆನುತ ಖಳ ನಸುನಗುತ ಕೈಮುಗಿದ[1] ॥ ೨೧

ಪರರ ಸತಿಗಳುಪಿದರೆ ಪಾತಕ
ದೊರಕುವುದು ಜಯಲಕ್ಷ್ಮಿ
ಸರಿವಳು ಧರೆಯೊಳಗ್ಗದ ಕೀರ್ತಿ ಮಾಸುಗು ಗತಿಗೆ ಕೇಡಹುದು ।
ಕೊರಳುಹಲವಾದಸುರನಂತಕ
ಪುರವನೈದಿದ ಕಥೆಯು ನೀ ಕೇ
ಳ್ದಱಿಯಲಾ ಕಡುಮೂರ್ಖನೆಂದಳು ಸರೋಜಮುಖಿ ॥ ೨೨

ಮೇಲೆ ಸದ್ಗತಿ ಬೆಂದುಹೋಗಲಿ
ಕಾಲನವರೈತರಲಿ ಬಂಧುಗ
ಳೇಳಸಲಿ ಯೆನ್ನವರು ತೊಲಗಲಿ ರಾಣಿಯರು ಬಿಡಲಿ ।
ಬಾಲೆ ನಿನಗಾನೊಲಿದೆ ಕಾಮನ
ಕೋಲು ತನ್ನನು ಮರಳಲೀಯವು
ಲೋಲಲೋಚನೆ ಬಿಱುಬ ನುಡಿಯದೆ ತನ್ನನುೞುಹೆಂದ ॥ ೨೪

ಕುಲದಲೊಬ್ಬನು ಜನಿಸಿ ವಂಶವ
ನೞಿದನಕಟಕಟೆಂಬ ದುರ್ಯಶ
ವುೞಿವುದಲ್ಲದೆ ಲೇಸ ಕಾಣೆನು ಬಱಿದೆ ಗಳಹದಿರು ।
ಕೊಲೆಗೆಡಿಕೆಯೋ ಪಾಪಿಹೆಂಗುಸು
ಹಲಬರನು ಕೊಲಿಸಿದಳು ಸುಡಲೆಂ
ದೞಿಲುವರು ನಿನ್ನಖಿಳನಾರಿ[2] ಯರೆಂದೊಡಿಂದುಮುಖಿ ॥ ೨೫

---

1 ಭಾವೆ ನೂಕದಿರೆನ್ನವರ ರಾ
ಜೀವಮುಖಿ ಕೃಪೆಮಾಡು ತನ್ನಯ
ಜೀವನವನುಳುಹೆನುತ ಕಮಲಾನನೆಗೆ ಕೈಮುಗಿದ, ಚ ಛ.

2 ರಾಣಿ, ಚ.

ಹರಿವಿರಿಂಚಿಗಳಾದೊಡೆಯುಂ ಸಂ
ಗರದೊಳನಗಿದಿರಿಲ್ಲ ಮರುಳೇ
ತರುಣಿ ನಿನ್ನವರೇನು [1] ತೋಱೂ ನಿನ್ನವಲ್ಲಭರ ।
ಪರಸತಿಯು ಸೆಱೆಗೆಯ್ಯೆ ನುತ್ತಿತ್ತು
ನೆರೆದು ಕೋಡಗವಿಂಡು ಸುಭಟನು
ಸರಿದನಂತಕನಗರಿಗಱಿಯಾ ಯೆಂದಳಿಂದುಮುಖಿ * ॥ ೨೬

ಸೀಱಿ ನೂಕದಿರೆನ್ನ ಮನ ನೆಱಿ
ಮಾಱುವೋದುದು ನಿನ್ನ ಚಿತ್ತವ
ಸೂಱೆಗೊಂಡಿನ್ನೇಕೆ ಕೊರಲಿಂಗಲಗ ಹೂಣಿಸುವೆ ।
ಜಾಱದಿರು ಯೆನ್ನೆದೆಗೆ ತಾಪವ
ಬೀಱದಿರು ಕಾರುಣ್ಯವನು ಕೈ
ದೋಱೆನಗೆ ಕಮಲಾಕ್ಷಿ ಮರಣವ ಮಾಣಿಸೆನಗೆಂದ ॥ ೨೭

ಮರುಳ ಮನದ ವಿಕಾರಮಾರಿಯು
ಸರಸವಾಡುವರುಂಟೆ ಮೃತ್ಯುವ
ನೆರೆವರೇ ದಳ್ಳುರಿಯ ಪ್ರತಿಮೆಯ ನಪ್ಪುವರೆ ಬಯಸಿ ।
ಗರಳಕಂಗೈಸುವರೆ ಪಾಪಿಯೆ
ಮರಳು ನಿನ್ನರಮನೆಗೆ ಯೆನ್ನಯ
ಗರುವಗಂಡರು ಕಡಿದು ಹರಹುವರೆಂದಳಿಂದುಮುಖಿ ॥ ೨೮

ನ್ಯಾಯವನು ಮಿಗೆ ಗೆಲುವುದೀಯ
ನ್ಯಾಯವಧಿಕವು ಧರ್ಮಪರರೇ
ಸ್ಥಾಯಿಗಳು ತಿಮಿರಕ್ಕೆ ಭಾಸ್ಕರಗಾವುದಂತರವು ।

---

1 ನಿನ್ನೊಡನೇನು, ಚ.

* ನೆರವಿಕೋಡಗ ಕೊಲ್ಲವೇ ದಶಶಿರನ ಮಡುಹಿದನಾವನೋ ಹೇಳೆಂದ
ಳಬುಜಾಕ್ಷಿ, ಕ. ಖ.

ಕಾಯುರೆನ್ನವರವರ ಕೈಗುಣ
ದಾಯತವ ಬಲ್ಲವರೆ ಬಲ್ಲರು
ನಾಯಿ ಸಿಂಹಕ್ಕಿದಿರೆ ಫಡ ಹೋಗೆಂದಳಬುಜಾಕ್ಷಿ ॥ ೩೯

ಕೀಚಕನು ತನ್ನ ಅಕ್ಕನನ್ನು ನೋಡಿದುದು.

ಹೂಣೆ ಹೊಕ್ಕುದು ವಿರಹದಾಸೆಯು
ಕಾಣೆನಾಕೆಯ ಮಾತಿನಲಿ ಮುಂ
ಗಾಣಿಕೆಯೆಲೇ ಸೂಱೆಯೋದುದು ಮನದ ಸರ್ವಸ್ವ ।
ತ್ರಾಣ ಸಡಿಲಿತು ಬುದ್ಧಿ ಕದಡಿ ಕೃ
ಪಾಣಪಾಣಿ ವಿರಾಟರಾಯನ
ರಾಣಿಯುರಮನೆಗೈದಿದನು ಕಂಡನು ನಿಜಾಗ್ರಜೆಯ ॥ ೪೦

ಸುದೇಷ್ಣೆಯು ಕೀಚಕನನ್ನು ಆದರಿಸಿದುದು.

ಹಣೆಯುನಂಘ್ರಿಗೆ ಚಾಚಲೆತ್ತಿದ
ಳಣುಕಿಗನ ತೆಗೆದಪ್ಪಿ ಮದವಾ
ರಣನೆ ಕುಳ್ಳಿರೆನುತ್ತ ನೋಡಿದಳಾಸಹೋದರನ ।
ಹೆಣಮುಸುಡು ಬಿದ್ದಿದೆ ಲತಾಂಗಿಯು
ಕೆಣಕಿದನು ಕಡುಪಾಪಿ ವಂಶವ
ಹಣಿದವಾಡದೆ ಮಾಣನೇಗುವೆನೆನುತ ಮಱುಗಿದಳು ॥ ೪೧

ಅಱಿದುದಗ್ಗದ ಮಹಿಮೆ ಮುಸುಡಿನ
ಬೆಳಕು ಬೀತುದು ಬಹಳಚಿಂತಾ
ಜಲಧಿಯೊಳಗದ್ದಂತೆ ಸೊಂಪಡಗಿತು ನಿಜಾಕಾರ ।
ಕುಲಶಿರೋಮಣಿ ಪೇಱು ಚಿತ್ತದ
ನೆಲೆಯುನೆನೆ ನಸುನಾಚಿ ಮದನನ
ಹಿಳುಕು ಸುಮತಿಯು [1] ಸೀಱೆ ಬಱಿಕಿಂತೆಂದನವ ನಗುತ ॥ ೪೨

---

[1] ಮುಮತಿಯು, ಖ.

ಕೀಚಕನು ತನ್ನ ಇಚ್ಛೆಯನ್ನು ತಿಳಿಸಿದುದು.

ಬೇಱೆ ಬಿನ್ನಹವೇನು ಸತಿಯರ
ನೂಱುಮಡಿ ರೂಪಿನಲಿ [1] ಚಿತ್ತವ
ಸೂಱೆಗೊಂಡವಳಹಳು ನಿಮ್ಮೋಲಗದ ಸತಿಯರಲಿ ।
ಮಾಱಿದಳು ಮದನಂಗೆ ಜೀವಿಸ
ಲಾಱೆನಾಕೆಯನೊಳಗುಮಾಡಿಸಿ
ತೋಱಿದರೆ ತನ್ನೊಡಲೊಳಸುವಿಂಗಹುದು ನಿರ್ವಾಹ ॥ ೪೩

ಆಕೆಯ ಅಸಮಾಧಾನ ಮತ್ತು ಬುದ್ಧಿವಾದ.

ಕೀರ್ತಿಲತೆ ಕುಡಿವೊಣಗಿತ್ತೈ ಮದ
ನಾರ್ತನಾದೈ ಕುಲಕೆ ಕಾಲನ
ಮೂರ್ತಿ ನೀನವತರಿಸಿದೈ ಸಂವರಿಸಿದೈ ಜಸವ [2] ।
ಸ್ಫೂರ್ತಿಗೆಡೆ ಮನುಜರಿಗೆ ರಾವಣ
ನಾರ್ತಿಯುಪ್ಪುದು ಅಱಿಯಲಾಕಡು [3]
ಧೂರ್ತ ನಿನಗಂಜುವೆನೆನುತ ನಡುಗಿದಳು ನಳಿನಾಕ್ಷಿ ॥ ೪೪

ಬೇಟವೇ ಪರವಧುವಿನಲಿ ಕೈ
ಮಾಟವೇ ಪರವಿತ್ತದಲಿ ತೆಗೆ
ದೋಟವೇ ಕದನದಲಿ ಗುಣವೇ ರಾಜಪುತ್ರರಿಗೆ ।
ಆಟವಿಕರೊಡನಾಡಿ ಕಲಿತು ವಿ
ರಾಟನನು ಕೊಲಲೆಳಸಿದೈ ನಿ
ನ್ನಾಟಕಾವಂಜುವೆವೆನುತ ಮುಖದಿರುಹಿದಳು ತರಳ ॥ ೪೫

ಕುಲವನಿತೆಯರ ಕೂಟದಿಂದವೆ
ಕುಲದ ತಲೆ ಕುಡಿ ಹಬ್ಬುವುದು ಪರ
ಲಲನೆಯರ ಸಂಭೋಗಸುಖವದು ರಕ್ತವಿಪರೀತ ।

---

1 ಚೆಲುವಿನಲಿ, ಖ. ಚ,

2 ಸಂಹರಿಸಿದೈ ಕುಲವ, ಚ. 3 ನಾರ್ತನೇಮರುಳಾದೆ ತಮ್ಮನೆ, ಚ. ಖ,

ಎಲೆ ಮರುಳೆ ಮುನ್ನಾಸುರೇಶ್ವರ
ನಳುಪಿ ತಾನೇನಾದನಗ್ಗದ
ಬಲುಹನುಳ್ಳ ದಶಾನನನ ನೆನೆ ಯೆಂದಳೆಂದುಮುಖಿ ‖ ೪೬

ಅವಳ ಗಂಡರು ಸುರರು ಸುರರಿಗೆ
ನವಗದಾವಂತರವು ಮುನಿದರೆ
ದಿವಿಜಬಲಕಿದಿರುಂಟೆ ನಮ್ಮನದಾರು ಕಾವವರು ।
ಅವಳ ತೊಡಕೇ ಬೇಡ ಸತಿಯರ
ನಿವಹದಲಿ ನೀನಾರ ಬಯಸಿದೊ
ಡವಳ ನಾ ಮುಂದಿಟ್ಟು ಮದುವೆಯನೊಲಿದು ಮಾಡುವೆನು ‖೪೭

ಅಕ್ಕನನ್ನು ಕುರಿತು ಕೀಚಕನ ಪ್ರಾರ್ಥನೆ.

ಅಕ್ಕ ಮರುಳೌ ಚಿತ್ತವವಳಲಿ
ಸಿಕ್ಕಿ ಬೇರ್ವರಿಯಿತ್ತು ಬಱಿದೇ
ಮಿಕ್ಕ ಡಿಂಭಕೆ ಮದುವೆಯುಂಟೇ ಮನವ ಬೇಱಿರಿಸಿ ।
ಮಕ್ಕಳಾಟಿಕೆಯಾದರಾಗಲಿ
ತಕ್ಕರಲ್ಲೆಂದೆನಲಿ ಸಲಹುವೊ
ಡಕ್ಕ ಸೈರಂಧ್ರಿಯನು ಸೇರಿಸಬೇಕು ತನಗೆಂದ ‖ ೪೮

ತಪ್ಪ ಮಾಡಿದೆ ತಮ್ಮ ನಿನಗವ
ಳಪ್ಪಳಲ್ಲೆಲೆ ಮರುಳೆ ಜೀವಕೆ
ಮುಪ್ಪ ಬಯಸಿದೆ ಮಱೆದು ಕಳೆಯೌ ಮತ್ತೆ ನೆನೆಯದಿರು [1] ।
ತಪ್ಪದಿರು ಕೈಕೊಂಡೆಸೆವ ಕಂ
ದರ್ಪನಂಬಿಗೆ ನೋಯದಿರು ನುಡಿ
ಯೊಪ್ಪವಲ್ಲಿದು ತಮ್ಮ ಯೆನುತ ಸುದೇಷ್ಣೆ ಕನಲಿದಳು ‖ ೪೯

ಸೊಗಸವಿತರರ ಮಾತು ಕಣ್ಣು ಗ
ಳೊಗಡಿಸವು ಮಿಕ್ಕವರ ರೂಹನು
ಹಗೆಗಳಾಗಿಹುವುಱದವರ ನಾಮಗಳು ನಾಲಿಗೆಗೆ ।

1 ಬೆಳಸದಿರು, ಬ.

ಸೆಗಳಿಕೆಯ ಶಶಿಯಾದೆನೆನ್ನಯ
ಬಗೆಯ ಸಲಿಸೌ ಹರಿದ ಕರುಳಿನ
ಮೃಗದ ಮಱಿಯನು ಕಾಯಬೇಕೆಂದೆಱಗಿದನು ಪದಕೆ ॥ ೫೦

ಕೀಚಕನು ತನ್ನ ಮನೆಗೆ ಹೋದುದು.

ಆಲಿ ನೀರೇಱಿದುವು ತಮ್ಮನ
ಮೇಲೆ ತಳಿತುದು ಮೋಹ ಕಾಲನ
ಪಾಳಯಕೆ ಕೈಗೊಟ್ಟಳಂಗನೆ ನೆಗಹಿದಳು ಖಳನ ।
ಏಳು ಭವನಕೆ ಹೋಗು ತರುಣಿಯ
ನಾಳೆ ನಾ ಕಳುಹುವೆನು ಪರಸತಿ
ಮೇಳ ಲೇಸಲ್ಲೆಂದು ಕಳುಹಿದಳಾಸಹೋದರನ [1] ॥ ೫೧

ಮನದೊಳಗೆ ಗುಡಿಗಟ್ಟಿದನು ಮಾ
ನಿನಿಯ ಕರುಣಾಪಾಂಗರಸಭಾ
ಜನವು ಪುಣ್ಯವಲಾ ಯೆನುತ ಬೀಳ್ಕೊಂಡನಗ್ರಜೆಯ ।
ಮನದೊಳೂದವಿದ ಮರುಳುತನದು
ಬ್ಬಿನಲಿ ಹೊಕ್ಕನು ಮನೆಯನಿತ್ತಲು
ದಿನಕರಂಗಾಯ್ತಸ್ತಮಯವಸ್ತಾಚಲಾದ್ರಿಯಲಿ ॥ ೫೨

ಆಗ ಚಂದ್ರೋದಯವಾಗಲು ಕೀಚಕನಿಗೆ ಆದ ಅವಸ್ಥೆ.

ಸಲೆ ದಿಗಂಗನೆ ಯಿಟ್ಟ ಚಂದನ
ತಿಲಕವೋ ಮನುಮಥನ ರಾಣಿಯ
ಚೆಲುವೆಗೈಗನ್ನಡಿಯೊ ಮದನನ ಬಿರುದಿನೊಡ್ಡಣವೊ ।
ತಳಿತ [2] ವಿರಹಿಯ ಸುಡುವ ಕೆಂಡದ
ಹೊಳಹೊ ಬೆಸಗೊಳಲೇನು ರಜನೀ
ವಳಯದಲಿ ಶಶಿಯುದಯವಾದನು ಜಗವನುಜ್ವಳಿಸಿ ॥ ೫೩

---

1 ಬೀಱಗೊಟ್ಟಳು ನಿಜಾನುಜನ, ಚ. 2 ಸುರತ, ಚ.

ಬೆಚ್ಚಿದುವು ಚಕ್ರಾಂಕಯುಗ ತಾ
ವ್ರಚ್ಚಿದುದು ಮಱಿದುಂಬಿ ಕುಮುದವ
ಮುಚ್ಚಿದುವು ಮುಸುಡುಗಳನಂಬುಜರಾಜಿ ತಮತಮಗೆ ।
ಹೆಚ್ಚಿದುವು ಸಾಗರದ ತೆಱೆಗಳು
ಬೆಚ್ಚಿದರು ಜಾರೆಯರು ಚಂದ್ರಮ
ಕಿಚ್ಚನೊಟ್ಟಿದನಕಟ ಸಕಲವಿಯೋಗಿಜನಮನಕೆ । ೫೪

ಕೀಚಕನಿಗೆ ವಿರಹದ ತಾಪ.

ಖಳನ ವಿರಹದ ತಾಪದುರಿ ವೆ
ಗ್ಗಳಿಸೆ ತನ್ನರಮನೆಗೆ ಬಂದನು
ಕಳವಳಿಗ ಹಾ ಯೆನುತ ಕೆಡೆದನು ತಳಿರ ಹಾಸಿನಲಿ ।
ನಳಿನವೈರಿಯು ಸುಟಿವು ತನ್ನಯ
ಕೊಲೆಗೆ ಬಂದುದು ಪಾಪಿ ಕಮಲಜ
ಚಲವಿಲೋಚನೆಗೇಕೆ ಮಾಡಿದನಿನಿತುಚೆಲುವಿಕೆಯ ॥ ೫೫

ಉರಿದುದೊಡಲೊಳು ವೀಳಯದ ಕ
ರ್ಪುರದ ಹಳಕುಗಳಮಳಗಂಧದ
ಸರಸಕರ್ದಮ ಕಱಿಕುವೆಱಿದುದು ಪೂಸಿದಂಗದಲಿ ।
ಹೊರಳ ನೀರಿನ ಪೊಟ್ಟಣವು ದ
ಳ್ಳುರಿಯೊಲಾದುದು ಬಲಿದ ಚಂದ್ರಿಕೆ
ಬೆರಸಿ ಕರಗಿದ ತವರವಾಯಿತು ಕೀಚಕನ ಮನಕೆ ॥ ೫೬

ಹಾಸಿದೆಳದಳಿರೊಣಗಿದುದು ಹೊಗೆ
ಸೂಸಿದುದು ಸುಯಿಲಿನಲಿ ಮೆಲ್ಲನೆ
ಬೀಸುತಿರೆ ಸುಳಿವಾಳಯೆಲೆ ಬಾಡಿದುದು ಝಳಹೊಯ್ದು ।
ಆಶಶಿಯು ಕೋಗಿಲೆಯು ತುಂಬಿಯು
ನಾಸರೋಜವೆ ಮಲ್ಲಿಗೆಯು ಕೈ
ವೀಸಿದನು ಕುಸುಮಾಸ್ತ್ರನಾಕೀಚಕನ ಕಗ್ಗೊಲೆಗೆ ॥ ೫೭

ಪರಿಮಳದೆ ಸುೞಿವಾಲವಟ್ಟದೊ
ಳೆರದೆ ಪೂಸಿದ ಗಂಧಕರ್ಪೂರ
ವರರೆ ಸೀದುವು ಕೀಚಕನ ಕಾಮಾಗ್ನಿತಾಪದಲಿ ।
ವರಪತಿವ್ರತೆಗಳುಪಿದವನಾ
ಹರಣದಾಶೆಯ ಮಱಿದು ಪಾತಕ
ಹೊರಳುತಿರ್ದನು ಚಂದ್ರಕಾಂತದ ಮಣಿಯ ಮಂಚದಲಿ [1] ॥ ೫೮

ತೂಱಿದುವು ಪರಿಮಳದ ಪುಷ್ಪಗ
ಳೂಱಿದುವು ಮಧುಕರವು ಹರುಷದ
ಲಾಱಿದುವು ಶಶಿಕಾಂತಶಿಲೆಗಳು ಮುಗಿಯೆ ಕೈರವವು ।
ಸೂಱಿದುವು ಮಂದಿರದ ಕಹಳೆಗ
ಳೇಱಿದುವು ಪೂರ್ವಾಚಲಕೆ ರವಿ
ಬೀಱಿದನು ಕರದಿಂದ ಕಾಂತಿಯ ಜಗದ ಜನ ನಲಿಯೆ ॥ ೫೯

ಅರೆಘಳಿಗೆ ಯುಗವಾಗಿ ನೂಕಿದ
ನಿರುಳನುದಯಾಚಲದ ಶಿರದಲಿ
ತರಣಿ ತಲೆದೋಱಿದನು ತೊಡೆದನು ಭುವನದಂಧತೆಯ ।
ಪರಿಮಳದ ಪಾವುಡದಿನಳಿಗಳ
ಕರೆಸಿದುವು ತಾವರೆಗಳನೆ ಕಾ
ತರಲತಾಂಗಿಯ ಸುಯ್ಲು ತಾಗಿತು ಕುಮುದಿನೀಪತಿಗೆ ॥ ೬೦

ಎರಡನೆಯ ಸಂಧಿ ಮುಗಿದುದು.

---

1 ಮೇಲುಮಚ್ಚಿನಲಿ, ಘ. ಚ.

ಮೂರನೆಯ ಸಂಧಿ.

ಸೂಚನೆ.

ರಾಯ ಕುರುಬಲವಿಲಯಕರನಬು
ಜಾಯತಾಕ್ಷಿಯ ಸಲಹಿ ಕೀಚಕ
ರಾಯವಂಶಾರಣ್ಯವನು ಸವರಿದನು ಕಲಿಭೀಮ ॥

ಕೀಚಕನ ಮನೆಗೆ ಹೋಗಿ ಮಧುವನ್ನು ತಾರೆಂದು ಸುದೇಷ್ಣೆಯು ಸೈರಂಧ್ರಿಗೆ ಹೇಳಿದುದು.

ಬಯಸಿದಳು ಮೃತ್ಯುವನು ಕಡುಪಾ
ಪಿಯ ಮನೋಧರ್ಮವನು ಜನಮೇ
ಜಯಮಹೀಪತಿ ಕೇಳು ಪಾಂಚಾಲಿಯನು ಕರೆಸಿದಳು ।
ನಯವಿಹೀನೆ ಸುದೇಷ್ಣೆ ಬಂದಾ
ಕೆಯನು ಬೆಸಸಿದಳೆಲಗೆಯನುಜಾ
ಲಯದೊಳುತ್ತಮಮಧುವ ನೀ ಝಡಿತೆಯಲಿ ತಹುದೆಂದು ॥ ೧

ಅದಕ್ಕೆ ದ್ರೌಪದಿಯ ಉತ್ತರ.

ಅಮ್ಮನಲ್ಲಿಗೆ ದೇವಿ ನಿಮ್ಮಯ
ತಮ್ಮ ದುರುಳನು ಲೇಸು ಹೊಲ್ಲಹ
ವೆಮ್ಮ ತಾಗುವುದಾತನಟಿದರೆ ಬಟಿಕ ಹಟಿವೆಮಗೆ ।
ನಿಮ್ಮ ನಾವೋಲೈಸಿ ನಿಮಗೆ ವಿ
ಕರ್ಮವನು ಮಾಡುವುದು ನಮಗದು
ಧರ್ಮವಲ್ಲುಟಿದವರ ಕಳುಹುವುದೆಂದಳಿಂದುಮುಖಿ ॥ ೨

ಎನಲು ಭುಗಿಲೆಂದಳು ಸುದೇಷ್ಣೆ ತಕೆ
ಮನದ ಗರ್ವವ ನುಡಿವೆ ನಿನ್ನಿಂ
ದೆನಗೆ ಮೇಣೆನ್ನವರಿಗುಂಟೇ ಹಾನಿಹರಿಬಗಳು ।
ಅನುಜನಾರೆಂದಱಿಯೆ ಸಾಕಾ
ತನ ಸಮೀಪಕೆ ಹೋಗಿ ಬಾ ನಡೆ
ಯೆನಲು ಕೈಕೊಂಡಬಲೆ ಹೊಱವಂಟಳು ನೃಪಾಲಯುವ [1] ॥ ೩

ಶ್ರೀಕೃಷ್ಣನನ್ನು ಸ್ತುತಿಸಿ ಕೀಚಕನ ಮನೆಗೆ ಹೋದುದು.

ಹರಿ ಹರಿ ಶ್ರೀಕಾಂತ ದಾನವ
ಹರ ಮುಕುಂದ ಮುರಾರಿ ಗತಿಶೂ
ನ್ಯರಿಗೆ ನೀನೇ ಗತಿಯಲಾ ಗರುವಾಯಿಗೆಟ್ಟೆನಲೈ ।
ಕುರುಕುಲಾಗ್ರಣಿ ಸೆಳೆದ ವಸ್ತ್ರ
ಕರುಷಣದ ಭಯ ಮತ್ತೆ ಬಂದಿದೆ
ಕರುಣಿ ನೀನೇ ಬಲ್ಲೆ ಯೆನುತಡಿಯಿಟ್ಟಳಬುಜಾಕ್ಷಿ ॥ ೪

ದೇವಿ ನೇಮಿಸಲಱಿಯೆನೆಂದೊಡಿ
ದಾವಧರ್ಮವು ಶಿವ ಶಿವೀಹದ [2]
ಸಾವನವರಿಗೆ ತಹುದು ಬದ್ಧವಿಘಾತಿ ಯಿದು ಬಲುಹು [3] ।
ಸೇವೆ ಯಿದಕೇ ಕಷ್ಟವೆಂಬುದು [4]
ಕೋವಿದರ ಮತ ಶಿವ ಶಿವಾ ರಾ
ಜೀವಲೋಚನ ಕೃಷ್ಣ ಬಲ್ಲೆ ಯೆನುತ್ತ ಗಮಿಸಿದಳು ॥ ೫

---

1 ನಿಜಾಲಯುವ, ಖ. ಚ.

2 ನಾವು ಗರ್ವಿಗಳೊಲಿದೊಡಿವನಿಗೆ, ಝ.

3 ಸಾವುತಂದವರೆಂದು ಬಂದ ವಿಘಾತಿಯಿದು ಬಲುಹು, ಝ

4 ಸೇವಿಸುವುದೇ ಕಷ್ಟವೆಂಬುದು, ಚ.

ಸುರಪ ಶಿಖಿ ಯಮ ನಿರುತಿ ವರುಣಾ
ದ್ಯರಿಗೆ ವಂದಿಸಿ ಕಣ್ಣೆವೆಯ ಬಿಗಿ
ದರಘಳಿಗೆ ನಿಂದಬುಜಮಿತ್ರನ ಭಜಿಸಿ ಕಣ್ದೆಱೆಯೆ ।
ದುರುಳ [1] ದೈತ್ಯನ ಕಾಹ ಕೊಟ್ಟನು
ತರಣಿ ತರುಣಿಗೆ ಮಂದಮಂದೋ
ತ್ತರದ ಗಮನದಲಬಲೆ ಬಂದಳು ಕೀಚಕನ ಮನೆಗೆ ॥ ೬

ಹಾರನೂಪುರಝುಣಝುಣಿತಝೋಂ
ಕಾರ ಘನರವವೆಂದು ಭವನವ
ಯೂರ ಕುಣಿದುದು ವರಕಟಾಕ್ಷದ ಮಿಂಚು ಥಳಥಳಿಸೆ ।
ಆರು ಹೊಗಳುವರಂಗವಟ್ಟದ
ಸೌರಭದ ಪರಿಮಳಕೆ ತುಂಬಿಯ
ಸಾರ ಕಟ್ಟಿತು ಬಂದಳಂಗನೆ ಕೀಚಕಾಲಯಕೆ ॥ ೭

ಮನುಮಥನ ಮದದಾನೆ ಕಂದ
ರ್ಪನ ಮಹಾಮಂತ್ರಾಧಿದೇವತೆ
ಜನರು ಮರುಳಹ ಮದ್ದು ಸಂಸೃತಿಸುಖದ ಸಾಕಾರ ।
ಮನಸಿಜನ ನುಸೆದಲಗು ಜನವೋ
ಹನತಿಲಕ ಲಾವಣ್ಯಸಾಗರ
ಜನಿತ ಲಕ್ಷ್ಮಿ ಲತಾಂಗಿ ಬಂದಳು ಕೀಚಕನ ಮನೆಗೆ ॥ ೮

ಕೀಚಕನು ದ್ರೌಪದಿಯನ್ನು ನೋಡಿ ಬೆರಗಾದುದು.

ಕುಡಿತೆಕಂಗಳ ಚಪಳೆ ಯುಂಗರ
ಪಿಡಿಯುನಡುವಿನ ನೀಱೆ ಹಂಸೆಯ
ನಡೆಯ ನವಿಲಿನಮೌಳಿಕಾತಿ ಪಯೋಜಪರಿಮಳದ ।
ಕಡುಚೆಲುವೆ ಬರಲವನು ತನು ನಡು
ನಡುಗಿ ನಿಂದನದಾವ ಹೆಂಗುಸು
ಪಡೆದಳೀ ಚಲುವಿಕೆಯನೆನುತಡಿಗಡಿಗೆ ಬೆಱಗಾದ [2] ॥ ೯

---

[1] ಮುಱುವಿನ, ಚ. [2] ನೆನುತೀಕ್ಷಿಸಿದನಂಗನೆಯ, ಚ.

ಅಱಿದು ನೆತ್ತರುಗಾಣದಲಗಿದು
ನೆಱೆ ಬಿಗಿಯೆ ವೈಬಾಸುಳೀಳದ
ಹುರಿ ಬಲಿದ ನೇಣ್ ಸೋಂಕಿದರೆ ಹೊಗೆ ಮಸಗದೆದೆಗಿಚ್ಚು ।
ಅರರೆ ಕಂಗಳ ಧಾರೆಯಾವನ
ಕೊರಳ ಕೊಯ್ಯದಿದಾವನಱಿತೆಯ
ಹುರುಳುಗೆಡಿಸದಿದಾವ ನಿಲುವನು ಶಿವ ಶಿವಾ ಯೆಂದ ॥ ೧೦

ಆವ ಜನ್ಮದ ಸುಕೃತಫಲ ನೆರೆ
ದೀವಧುವ ಸೇರಿದರು ಧನ್ಯರು
ತಾವಲಾ ಬೞಿಕೇನು ಪೂರ್ವದ ಸುಕೃತಸರ್ವಸ್ವ ।
ಭಾವಿಸಲು ಸುರಚಂದನಾದಿಗ [1]
ಳೀವನಿತೆಗೆಲ್ಲಿಂದ ಮೇಲಿ
ನ್ನಾವುದತಿಶಯವುಂಟೆನುತ ಖಳರಾಯನಿದಿರೆದ್ದ ॥ ೧೧

ಬಳಿಕ ಕೀಚಕನು ಹಿಡಿಯುವಾಗ ದ್ರೌಪದಿಯು ಓಡಿದುದು.

ತರುಣಿ ಬಾ ಕುಳ್ಳಿರು ಮದಂತಃ
ಕರಣದೆಡರಡಗಿದುದು ಕಾಮನ
ದುರುಳುತನಕಾನಂಜುವೆನೆ [2] ನೀನೆನಗೆ ಬಲವಾಗೆ ।
ಬಿರುದ ಕಟ್ಟುವೆನಿಂದುವಿಗೆ ಮಧು
ಕರಗೆ ಕೋಗಿಲೆಗೆಂದು ಖಳನು
ಬ್ಬರಿಸಿ ನುಡಿಯಲು ಖಾತಿಗೊಂಡಿಂತೆಂದಳಿಂದುಮುಖಿ ॥ ೧೨

ಬಾಯಿ ಹುಳುವುದು ಬಯಲ ನುಡಿದೊಡೆ
ನಾಯಿತನ ಬೇಡೆಲವೊ ಕೀಚಕ
ರಾಯನಂಗನೆ ಕಳುಹೆ ಬಂದೆನು ಮಧುವ ತರಲೆಂದು ।
ಸಾಯಬೇಕೇ ಹಸಿದ ಶೂಲವ
ಹಾಯಿ ಹೋಗೆನೆ ನಿನ್ನ ಬೈಗಳು
ನೋಂಯಿಸುವುವೇ ತನ್ನನೆನುತವೆ ತುಡುಕಿದನು ಸತಿಯ [3] ॥ ೧೩

1 ಸುಕೃತಾವಳಿಗಳಿಂ, ಚ. 2 ಕಿನ್ನಂಜುವೆನೆ, ಚ. 3 ಪಿಡಿದನಾಕರವ, ಕ.

ಕರವನೊಡೆ ಮುಱುಚಿದಳು ಬಟ್ಟಲ
ಧರೆಯೊಳೀಡಾಡಿದಳು ಸತಿ ಮೊಗ
ದಿರುಹಿ ಬಾಗಿಲ ದಾಂಟಿದಳು ಭಯದಲಿ ನಡುಗಿ ಡೆಂಡಣಿಸಿ ।
ತರಳೆ ಹಾಯ್ದಳು ಮೊಲೆಯ ಜಘನದ
ಭರದಿ ಬಡನಡು ಮುಱಿಯದಿಹುದೇ
ವರಸಭಾಗ್ಯತೆಗೆನಲು ರಭಸದೊಳೋಡಿದಳು ಸಭೆಗೆ ॥ ೧೪

ಆಗ ದ್ರೌಪದಿಯನ್ನು ಹೊಡೆದು ಕೆಡವಿದುದು.

ಒಡನೆ ಬೆಂಬತ್ತಿದನು ತುಱುಬನು
ಹಿಡಿದು ತೊತ್ತಿನ ಮಗಳೆ ಹಾಯ್ದೊಡೆ
ಬಿಡುವೆನೇ ತಾನೆನುತ ಹೊಯ್ದನು ಕಾಲೊಳೂಡೆಮೆಟ್ಟಿ ।
ಕೆಡೆದು ರಕುತವ ಕಾಱಿ ಹುಡಿಯಲಿ
ಮುಡಿಮುಸುಕೆ ಬಿಱುಗಾಳಿಯಲಿ ಸೈ
ಗೆಡದ ಕದಳಿಯ ಕಂಭದಂತಿರೆ ಕಾಂತೆ ಹೊರಳಿದಳು ॥ ೧೫

ಆಗ ಒಡನೆ ಇದ್ದ ಭೂತವು ಕೀಚಕನನ್ನು ಹೊಡೆದುದು.

ಕರುಳ ತೆಗೆ ತಿನ್ನಡಗನೆನುತು
ಬ್ಬರಿಸಿ ಸೂರ್ಯನು ಕೊಟ್ಟದಾನವ
ನುರುವಣಿಸಿ ಕೀಚಕನ ಹೊಯ್ದನು ಹಿಡಿದು ಕುಸುರಿದನು ।
ದುರುಳ ನಡೆಗೆಡೆದೆದ್ದು ಮಹಿಲದೊ
ಳೂಱಲುತೋಡಿದನಾಲಯಕೆ ಬೞಿ
ಕರಸ ಮೊದಲಾದಖಿಳಜನ ನಡುಗಿತ್ತು ಭಯ ಹೊಯ್ದು ॥ ೧೬

ದ್ರೌಪದಿಯ ವಾಕ್ಯ.

ಹೊಡೆ ಮರಳಿ ಮುಱಿದೆದ್ದು ಕೇಶದ
ಹುಡಿಯ ಕೊಡಹುತ ಮೊಲೆಗೆ ಮೇಲುದ
ತೊಡಿಸಿ ಗಲ್ಲದ ರಕುತವನು ಬೆರಳಿಂದ ಮಿಡಿಮಿಡಿದು ।

ನುಡಿಯಲಾಗದೆ ಖಳನು ಹೆಂಗುಸ
ಬಡಿಯೆ ನೋಡುತ್ತಿಹರೆ ಹಿರಿಯರು
ಹಿಡಿದ ಮೌನದ ಹೊತ್ತು ಲೇಸೆಂದಬಲೆ ಯೊಱಲಿದಳು ॥ ೧೭

ಶಿವ ಶಿವಾ ಪಾಪಿಗಳು ಪತಿಯಾ
ದವರ ತಾಗಲಿ ಸುಯ್ಲುಕಟ ನಾ
ಲುವರ ನಡುವಣ ಹಾವು ಸಾಯದು ನಿರಪರಾಧಿಯನು ।
ಅವಗಡಿಸಿದನು ಖಳನು ಧರ್ಮದ
ವಿವರ ಶುದ್ಧಿಯನಾಡದೀಜನ
ನಿವಹ ಘೋರಾರಣ್ಯವಾಯ್ತೆನುತೊಱಲಿದಳು ತರಳೆ ॥ ೧೮

ಎಲೆ ವಿದೇಶಿಗ ಕಂಕಭಟ್ಟನೆ
ಹಲವು ಧರ್ಮವ ಬಲ್ಲೆ ಗಡ ನೃಪ
ತಿಲಕಗಱುಹುವುದೇನು ಸಂನ್ಯಾಸಿಗಳಿಗುಚಿತವಿದು ।
ತಿಳಿ ವಿದೇಶಿಗರಿಗೆ ವಿದೇಶಿಗ
ರೊಲವು ಸಮನಿಸಬೇಕು ಸಭೆಯಲಿ
ಬಲವಿಹೀನರಿಗಾಪ್ತರಿಲ್ಲೆಂದಬಲೆಯೊಱಲಿದಳು [1] ॥ ೧೯

ಧರ್ಮರಾಯನ ಸಹನ.

ಧೈರ್ಯವನು ನೆಱೆ ಬಲಿದು ಮೇಲಣ
ಕಾರ್ಯಭಾಗವನಱಿದು ನೃಪ ನಿಜ
ಭಾರ್ಯೆಯನು ಸಂತೈಸದಿರ್ದನು ಧರ್ಮನಂದನನು ।
ಶೌರ್ಯಕವಸರವಲ್ಲ ನಮಗಿ
ನ್ನಾರ್ಯನಾಜ್ಞೆ ಯೆನುತ್ತ ಮಾಣ್ದಾ
ತುರ್ಯವಿದ್ದರು ಭೀಮಸೇನಾದಿಗಳು ದುಗುಡದಲಿ ॥ ೨೦

1 ಬಲುಹು ಹಿರಿಯರಿದೇನವಮಾಡುವಿರೆಂದಳಿಂದುಮುಖಿ, ಕ.

ಭೀಮನ ಯೋಚನೆ.

ನೊಂದಳಕಟಾ ಸತಿ ಯೆನುತ ಮನ
ನೊಂದು ಮೋಹಿಯ ಬಲಿದು [1] ಖತಿಯಲಿ
ಕಂದಿದನು ಮೈಮಱೆದು ರೋಷಗಲೌಡನೊಡೆಯೊತ್ತಿ ।
ಮಂದಿಯಱಿಯದ ವೋಲು ಚೇಷ್ಟೆಯೊ
ಳೊಂದಿ ಮೆಲ್ಲನೆ ಬಾಗಿ ನೋಡಿದ
ನಂದು ರಾಜಾಲಯದ ಮುಂದಣ ಮರನನಾಭೀಮ ॥ ೨೧

ಬಳಗೆ ನಿಶ್ಚೈಸಿದನು ಮೊದಲಲಿ
ಹಿಳಿದು ಹಿಂಡುವೆನಿವಳ ಬಡಿದಾ
ಖಳನನವರೊಡಹುಟ್ಟಿದರನವನಾಪ್ತಪರಿಜನವ ।
ಬಳಿಕ ಪರಿಜನ ಸಹ ವಿರಾಟನ [2]
ಕೊಲುವೆನಱಿಯದ ಮುನ್ನ ಕೌರವ
ಕುಲವ ಸವರುವೆನೆಂದು ಕಿಡಿಕಿಡಿಯೋದನಾಭೀಮ ॥ ೨೨

ಭೀಮನ ಇಂಗಿತವನ್ನು ತಿಳಿದ ಧರ್ಮರಾಯನ ವಾಕ್ಯ.

ಆತನಿಂಗಿತದನುವನಱಿದು ಮ
ಹೀತಳಾಧಿಪ ಧರ್ಮಸುತನತಿ
ಕಾತರಿಸದಿರು ವಲಲ ಸೈರಿಸು ಸೈರಿಸಕಟೆನುತ ।
ಈತರುವ ಮುಱಿಯದಿರು ಸುಜನ
ವ್ರಾತಕಾಶ್ರಯ ವೂರ ಹೊಱಗೆ ಮ
ಹಾತಿಶಯತರುವುಂಟು ನಿನ್ನಯ ಬಾಣಸಿನ ಮನೆಗೆ ॥ ೨೩

ಧರ್ಮಮುಮತರುವಿದನು ಮುಱಿಯದಿ
ರೆಮ್ಮ ನುಡಿಗಳ್ಕೇಳೆನಲು ವಿಂಗೆ
ಸುಮ್ಮನೋಲಗದಿಂದ ಸರಿದನು ಭೀಮ ದುಗುಡದಲಿ ।

---

[1] ಸೈಪಿಡಿಗಾಗಿ, ಚ. [2] ವಿಗಡವಿರಾಟರಾಯನ, ಚ.

ಕರ್ಮಫಲವಿದು ನಿನಗೆ ಕಾಮಿನಿ
ನಿಮ್ಮ ಭವನಕೆ ಹೋಗು ಶಿಕ್ಷಿಸ
ಲಮ್ಮದೀಸಭೆ ಬಗೆಯನಾತನು ಮತ್ಸ್ಯಭೂಪತಿಯು ॥ ೨೪

ಕೋಪಕವಸರವಲ್ಲ ಪತಿಗಳು
ಕಾಪುರುಷರೇ ನಿನ್ನವರು ಪರಿ
ತಾಪವನು ಬೀಳ್ಕೊಡು ಪತಿವ್ರತೆಯರಿಗೆ ಗುರು ನೀನು [1] ।
ದೀಪವಲ್ಲಾ ಕ್ಷಮೆಯಖಿಲದೋ
ಷಾಪಹಾರವು ಸರ್ವಧರ್ಮದ
ರೂಪನೆಲೆಯಾಕ್ಷಮೆ ಯೆನಲು ಬಱಿಕೆಂದಳಿಂದುಮುಖಿ ॥ ೨೫

ನೀರು ಹೊಱಗಿಕ್ಕುವುದು ಮೂಜೀ
ಬಾರಿ ಬಱಿಕದು ಪಾಪಿ ಝೂಡಿಸೆ
ಸೈರಿಸದುವನ್ಯಾಯಬಹುಳತೆಗೇನ ಮಾಡುವುದು ।
ಸೈರಣೆಗೆ ತಾನವಧಿ ಯಿಲ್ಲಾ
ಪೌರುಷದ ಬಗೆ ಬಂಜೆಯಾಯಿತು
ಆರಯಿಕೆಯಲಿ ಜುಣುಗಿ ಜಾಱುವಿರೆಂದಳಿಂದುಮುಖಿ ॥ ೨೬

ಅರರೆ ಹೆಂಗುಸು ದಿಟ್ಟೆಮೌನದೊ
ಳಿರಲಿದಾವಂತರವು ರಾಯನ
ಹೊರೆಯಲೀಬಾಯ್ಬಡಿಕತನ ಗರುವಾಯಿಯೇ ಯೆನಲು ।
ಕೆರಳಿದಳು ಲಲಿತಾಂಗಿ ಯಿಲ್ಲಿಯು
ಹಿರಿಯರಲಿ ಫಲವಿಲ್ಲ ಮಾರುತಿ
ಗಱುಹುವೆನು ಬಱಿಕಾದುದಾಗಲಿ ಯೆನುತ ತಿರುಗಿದಳು ॥ ೨೭

ದ್ರೌಪದಿಯು ಸುದೇಷ್ಣೆಯ ಮುಂದೆ ಕೀಚಕನ ವರ್ತಮಾನ
ವನ್ನು ತಿಳಿಸಿದುದು.

ಆ ಸುದೇಷ್ಣೆಯ ಮನೆಗೆ ಬರಲವ
ಳೀಸತಿಯ ನುಡಿಸಿದಳು ತಂಗಿ ವಿ

1 ಪುಣ್ಯವಧು ನೀನು, ಚ.

ಳಾಸಮೆಱಿದಿದೆ ಮುಖದ ದುಗುಡವಿದೇನು ಹದನೆನಲು ।
ಏಸು ಮೆಱೆವೆಯುಲರಸುತನದ ಮ
ಹಾಸಘಾಡಿಕೆ ಯೆಮ್ಮ ನೀವಪ
ಹಾಸಮಾಡುವಿರೆಂದು ದ್ರೌಪದಿ ನುಡಿದಳರಸಿಯನು [1] ॥ ೨೮

ದುರುಳ ನಿಮ್ಮೊಡಹುಟ್ಟಿದನು ನೀ
ವೆರಸುಗಳು ತಿರುಕುಳಿಗಳಾವಿ
ನ್ನಿರಲು ಬಾರದು ನೃಪತಿ ತಪ್ಪಿದೊಡಾರು ಕಾವವರು ।
ಕರೆಸಿ ಬುದ್ಧಿಯ ಹೇಳಿ ಯೆನ್ನನು
ಹೊರೆಯಲಾಪರೆ ಹೊರೆಯಿರಲ್ಲದೊ
ಡರಸಿ ಕಳುಹುವುದೆನಲು ಬಳಿಕಿಂತೆಂದಳಾರಾಣಿ ॥ ೨೯

ಸುದೇಷ್ಣೆಯ ಸಮಾಧಾನ ವಾಕ್ಯಗಳು.

ಲಲನೆ ಕೇಳನ್ಯಾಯದವರನು
ಕೊಲಿಸುವೆನು ಭಯ ಬೇಡ ಪರಸತಿ
ಗಳುಪಿದವನೊಡಹುಟ್ಟಿದನೆ ಕಡುಪಾಪಿ ಹಗೆ ಯೆನಲು ।
ಕೊಲಿಸುವರೆ ನೀವೇಕೆ ತಪ್ಪಿನ
ಬಳಿಯಲೆನ್ನಾತಗಳು ಕೀಚಕ
ಕುಲವ ಸವರುವರೆನಗೆ ಕಾರಣವಿಲ್ಲ ಸಾಱಿವೆನು ॥ ೩೦

ದ್ರೌಪದಿಯ ಯೋಚನೆ.

ಎಂದು ಬೀಳ್ಕೊಂಡಬಲೆ ತನ್ನಯ
ಮಂದಿರಕೆ ಬಂದೊಳಗೊಳಗೆ ಮನ
ನೊಂದು ಸೈವೆಱಗಾಗಿ ಚಿಂತಿಸಿ ನೂಕಿದಳು ಹಗಲ ।
ಕೊಂದುಕೊಂಬೆನೆ ಯಾತ್ಮಘಾತಕ
ನಿಂದೆ ಮುಂದಣ ಭವಕೆ ಪಾತಕ
ಹಿಂದೆ ಹತ್ತದೆ ಮಾಣದೇಗುವೆನೆನುತ ಮಱುಗಿದಳು ॥ ೩೧

1 ನುಡಿದಳೊಡತಿಯನು, ಚ.

ಆವ ಕೊಂಡವ ಹಾಯ್ವೆನೋ ಮೇ
ಣಾವ ಬೆಟ್ಟವನಡರಿ ಬೀಳುವೆ
ನಾವ ಮಡುವನು ಹೊಗುವೆನೋ ಹಾಸರೆಯ ಗುಂಪಿನಲಿ ।
ಆವ ಗರಳವ ಕುಡಿವೆ ಮೇಣಿ
ನ್ನಾವಪಾತಕದೊಳಗೆ ಬೀಳುವೆ
ಸಾವು ಸಮನಿಸದೆಂದು ದ್ರೌಪದಿ ಹಲವು ಹಲುಬಿದಳು ॥ ೩೨

ಆವ ಹೆಂಗುಸನಳಲಿಸಿದೆ ಮು
ನ್ನಾವನೋಂಪಿಯ ನೊಡೆಮುರಿದೆ ಮೇ
ಣಾವ ಪಾಸದ ಫಲಕೆ ಹಿಡಿದೆನೊ ಸಂಚಕಾರವನು ।
ಆವ ಹೆಂಗುಸು ನವೆದಳೆನ್ನವೊ
ಲಾವಳೂಅಲುತೆ ಮರುಗಿದಳು ತಾ
ಯಾವಳೆನ್ನಂದದಲಿ ಹಡೆದವರುಂಟೆ ಮಕ್ಕಳನು ॥ ೩೩

ಆರಿಗುಸುರುವೆನಾರ ಸಾರುವೆ
ನಾರಿಗೊಅಲುವೆನಾರಿಗರುಹುವೆ
ನಾರ ಬೇಡುವೆನಕಟ ಹೆಂಗುಸುಜನ್ಮವನು ಸುಡಲಿ ।
ಘೋರಪಾತಕಿಯೆನ್ನವೊಲು ಮು
ನ್ನಾರು ನವೆದವರುಂಟು ಮರಣವು
ಬಾರದೆಂದೊಅಲಿದಳು ಬಸಿರನು ಹೊಯ್ದು ಶಶಿವದನೆ ॥ ೩೪

ಯಮಸುತಂಗರುಹುವೆನೆ ಧರ್ಮದ
ಕ್ಷಮೆಯು ಗರ ಹೊಡೆದಿಹುದು ಪಾರ್ಥನು
ಮಮತೆಯುಳ್ಳವನೆಂಬೆನೇ ತಮ್ಮಣ್ಣನಾಜ್ಞೆಯಲಿ ।
ಭ್ರಮಿತನಾಗಿಹನುೞಿದರಿಬ್ಬರು
ರಮಣರವರೀನಾಯ ಕೊಲಲ
ಕ್ಷಮರು ನಿಸ್ಸಂದೇಹವೆಂದಳು ತನ್ನ ಮನದೊಳಗೆ ॥ ೩೫

ಎಲ್ಲರೊಳು ಕಲಿಭೀಮನೇ ಮಿಡು
ಕುಳ್ಳ ಗಂಡನು ಹಾನಿ ಹರಿಬಕೆ
ನಿಲ್ಲದಂಗೈಸುವನು ಕಡು ಹೀಹಾಳಿಯುಳ್ಳವನು ।
ಖುಲ್ಲನಿವನುಪಟಳವನಾತಂ
ಗೆಲ್ಲವನು ತಿಳುಹುವೆನು ಬಟಿಕವ
ನಲ್ಲಿ ಹುರುಳಿಲ್ಲದೊಡೆ ಕುಡಿವೆನು ಘೋರತರವಿಷವ ॥ ೨೬

ಭೀಮಸೇನನು ಇದ್ದ ಸ್ಥಳಕ್ಕೆ ದ್ರೌಪದಿ ಬಂದುದು.

ನಿಳಯವನು ಹೊಱವಂಟು ಕಂಗಳ
ಬೆಳಗು ತಿಮಿರವ ಕೆಡಿಸೆ ಕಂಕಣ
ಲಲಿತಝೇಂಕೃತಿಯಿಂದ ತೂಗುವವಾಮಭುಜಲತೆಯ ।
ಒಲಿದು ಮೇಲುದ ನೂಕಿ ನಡುಗುವ
ಮೊಲೆಯ ಭರದಲಿ ಯಡಿಯಿಡುತ ಕಳ
ವಳದ ಕರಣದಲಬಲೆ ಬಂದಳು ಬಾಣಸಿನ ಮನೆಗೆ ॥ ೨೭

ಪಾಕಶಾಲಾಸ್ಥಿತಿ

ಕೆಲದೊಳೊಟ್ಟಿದ ಪತ್ರಶಾಕಾ
ವಳಿಯ ಫಲರಾಶಿಗಳ ಕಳವೆಯ
ಹೊಳೆವುತಿಹ ರಾಜಾನ್ನದಕ್ಕಿಯ ಸಾಲ ಹರಿಯಣದ ।
ಕೆಲಬಲದ ಸಂಭಾರಚೂರ್ಣದ
ಲಲಿತಬೋನದ ವಿವಿಧಭಕ್ಷ್ಯಾ
ವಳಿಯ ಬಾಣಸಿನೊಳಗೆ ಬಂದಳು ಮತ್ತಗಜಗಮನೆ ॥ ೨೮

ತಱಿದಕುಱಿಗಳ ಹಂದಿಯಡಗಿನ
ಜುಱಿತರಕುತದ ಮೊಲನ ಖಂಡದ
ಕಿಱಿವಗುಬ್ಬಿಯ ಕೀಸಿ ಸೀಚಿದ ನವಿಲಲಾವುಗೆಯ ।
ತುಱುಗಿದೆಲುವಿನ ಸಾಲಸುಂಟಿಗೆ

ಮೆಱೆವ ಮಾಂಸದ ರಾಶಿಗಳ ಹರ
ದೆಱಕೆಗಳ ಕಂಡಬಲೆ ಹೊಗಟೆನಳೆಡಬಲದ ಮನೆಯ ॥ ೩೯

ಆರಲಱಿದನೊ ಭೀಮನೀಸೂ
ವಾರವಿದ್ಯೆಯ ಭಾಪು ವಿಧಿ ಮುನಿ
ದಾರನಾವಂಗದಲಿ ಬರಿಸದು ಶಿವ ಶಿವಾ ಯೆನುತ ।
ನಾರಿ ನಸುನಗುತೊಳಗೆ ಹೊಕ್ಕು ಬ
ಕಾರಿ ಮಂಚದಲಿರಲು ನಿದ್ರಾ
ಭಾರವಿಹ್ವಲಕರಣನನು ಹೊದ್ದಿದಳು ದುಗುಡದಲಿ ॥ ೪೦

ಎಬ್ಬಿಸಲು ಭುಗಿಲೆಂಬನೋ ಮೇ
ಣೊಬ್ಬಳೇತಕೆ ಬಂದೆ ಮೋಱಿಯ
ಮಬ್ಬಿದೇನೆಂದೆನ್ನ ಸಂತೈಸುವನೊ ಸಾಮದಲಿ ।
ತುಬ್ಬುವುದೊ ತಾ ಬಂದ ಬರವಿದು
ನಿಬ್ಬರವಲಾ ಜನದ ಮನಕಿ
ನ್ನೆಬ್ಬಿಸಿಯೆ ನೋಡುವೆನೆನುತ ಸಾಱಿದಳು ವಲ್ಲಭನ ॥ ೪೧

ಭೀಮಸೇನನನ್ನು ನಿದ್ರೆಯಿಂದೆಬ್ಬಿಸಿ ವೃತ್ತಾಂತವನ್ನು ಕೇಳಿದುದು.

ಮೆಲ್ಲಮೆಲ್ಲನೆ ಮುಸುಕ ಸಡಿಲಿಸಿ
ಗಲ್ಲವನು ಹಿಡಿದಲುಗಲಪ್ರತಿ
ಮಲ್ಲನೆದ್ದನು ನೋಡಿದನು ಪಾಂಚಾಲನಂದನೆಯ ।
ವಲ್ಲಭೆಯ ಬರವೇನು ಮುಖದಲಿ
ತಲ್ಲಣವು ತಲೆದೋಱಿತಿದೆ ತಳು
ವಿಲ್ಲದಱಿಹಿರುಳೇಕೆ ಬಂದೆ ಲತಾಂಗಿ ಹೇಪೆಂದ ॥ ೪೨

ಸೈರಿಸರು ಬಾಣಸಿನ ಭವನದ
ನಾರಿಯರು ದುರ್ಜನರು ಖುಲ್ಲರು
ಠಾರರಿವರರಮನೆಯ ನಾಯ್ಗಳು ನಾವು ದೇಶಿಗರು ।

ಭಾರವಿದು ಕೆಲರಱಿಯದಂತಿರೆ
ನಾರಿ ನೀ ಹೇಚೆನುತ ದುಗುಡವಿ
ದಾರದೆಸೆಯಿಂದಾದುದೆನೆ ಬಿನ್ನೈಸಿದಳು ರಾಣಿ ॥ ೪೩

ನಿನ್ನೆ ಹಗಲಱಿಯಟ್ಟಿ ಕೀಚಕ
ಕುನ್ನಿಯೊದೆದನು ರಾಜಸಭೆಯಲಿ
ನಿನ್ನ ವಂದಿಗರಿರಲು ಪರಿಭವವುಚಿತವೇ ತನಗೆ ।
ಎನ್ನನವ ಬೆಂಬಳಿಯ ಬಿಡ ನಾ
ನಿನ್ನು ಬದುಕುವೆಳಲ್ಲ ಪಾತಕ
ನಿನ್ನ ತಾಗದೆಮಾಣದನಲಾಭೀಮ ಖತಿಗೊಂಡ ॥ ೪೪

ಉಸರಲಾಗದು ನಿನ್ನ ಹರಿಬಕೆ
ಮಿಸುಕುವವರಾವಲ್ಲ ಹೆಂಡಿರ
ಗಸಣಿ ಗೊಂಬವರಲ್ಲ ಹುದುವಿನ ಗಂಡುತನವಿದನು ।
ಶಶಿವದನೆ ಸುಡು ಕಷ್ಟವೀಯುಪ
ದೆಸೆಯುವರು ನಾವಲ್ಲ ನಿನ್ನವ
ರಸಮಸಾಹಸರುಚಿದ ನಾಲ್ವರಿಗಱುಹು ಹೋಗೆಂದ ॥ ೪೫

ದ್ರೌಪದೀ ಭೀಮಸೇನರ ಸಂವಾದ.

ರಮಣಿ ಕೇಳುಚಿದವರು ತನ್ನನು
ರಮಿಸುವರು ಮಾನಾರ್ಥವೆನೆ [1] ನಿ
ರ್ಗಮಿಸುವರು ನೀನಲ್ಲದುಚಿದವರುಚಿತ ಬಾಹಿರರು ।
ಮಮತೆಯಲಿ ನೀ ನೋಡು ಚಿತ್ತದ
ಮಮತೆಯನು ಬಿಡದಿರು ಕುಠಾರನ
ಯಮನ ಕಾಣಿಸಿ ಕರುಣಿಸೆಂದಳು ಕಾಂತೆ ಕೈಮುಗಿದು ॥ ೪೬

ಕಲಹಕಾದರೆ ನಾವು ರಮಿಸುವ
ರುಚಿದವರು ಬಚಿಕೇನು ಗಾದೆಯ

---

1 ಅಭಿಮಾನವನು, ಕ.

ಬಳಿಕ ಕೆಲಬರು ಫಳಿಸಿದರೆ ಕೆಲರುಂಡು ಜಾಱುವರು ।
ಅಳುಕಿ [1] ನುಡಿವವರಲ್ಲ ನಿನ್ನಯ
ಹೞಿವು ಹರಿಬವ ಹೇೞಿ ಚಿತ್ತವ
ತಿಳುಹಿಕೊಂಬುದು ನಾವು ಭೀತರು ಧರ್ಮಜನ ದೆಸೆಗೆ ॥ ೪೭

ಹೊದ್ದುವುದು ಫಲ್ಗುಣನ ಪದದಲಿ
ಬಿದ್ದು ಯಮನಂದನನ ಮನವನು
ತಿದ್ದುವುದು ಸಹದೇವನಕುಲರ ಕೈಯ್ಯೊಳಿಸುವುದು ।
ಗೆದ್ದು ಕೊಡುವರು ನಿನ್ನ ಪಾಲಿಸ
ದಿದ್ದರಾದರೆ ದೋಷವವರನು
ಹೊದ್ದುವುದು ಸಾಕಿನ್ನು ನಿನ್ನಯ ತೊಡಕು ಬೇಡೆಂದ [2] ॥ ೪೮

ಹೆಂಡತಿಯು ಹರಿಬದಲಿ ಯೊಬ್ಬನೆ
ಗಂಡನಾದರೆ ವೈರಿಯನು ಕಡಿ
ಖಂಡವನು ಮಾಡುವನು ಮೇಣ್ತನ್ನೊಡಲನಿಕ್ಕುವನು ।
ಗಂಡರೈವರು ಮೂಱುಲೋಕದ
ಗಂಡರೊಬ್ಬಳನಾಳಲಾರಿರಿ
ಗಂಡರೋ ನೀವ್ ಷಂಡರೋ ಹೇೞೆಂದಳಿಂದುಮುಖಿ ॥ ೪೯

ಅಂದು ಕೌರವರಾಯ ಸಭೆಯಲಿ
ತಂದು ಸೀರೆಯ ಸುಲಿಸಿದನು ತಾ
ನಿಂದು ಕೀಚಕಕುನ್ನಿಯೊದೆದನು ವಾಮಪಾದದಲಿ ।
ಅಂದು ಮೇಲಿಂದಾದ ಭಂಗಕೆ
ಬಂದುದಾವುದು ನೀವು ಬಲ್ಲಿದ
ರೆಂದು ಹೊಕ್ಕರೆ ಹೆಣ್ಣ ಕೊಂದಿರಿ ಯೆಂದಳಿಂದುಮುಖಿ ॥ ೫೦

---

1 ಹಲವು, ಕ. 2 ನೀನಿನ್ನು ಬಱಿದೇಕಾಡಬೇಡೆಂದ, ಚ.

ಭೀಮನ ವಾಕ್ಯ.

ದಾನವರು ಮಾನವರೊಳನ್ನಭಿ
ಮಾನವನು ಕೊಂಬವನ ಹೆಸರನ
ದೇನನೆಂಬೆನು ನೊಂದು ನುಡಿವರೆ ಖಾತಿಯಿಲ್ಲೆ ನಗೆ।
ಈ ನಪುಂಸಕರೊಡನೆ ಹುಟ್ಟಿದ
ನಾನು ಮೊಗುಳ್ಳವನೆ ಮಾನಿನಿ
ನೀನು ತೋಱಿದ ಪರಿಯುಲೆಂಬುದು ಭೀತಿ ಬೇಡೆಂದ ೫೧

ಅಂದು ದುಶ್ಶಾಸನನ ಕರುಳನು
ತಿಂದೊಡಲ್ಲದೆ ತಣಿವು ದೊರೆಕೊಳ
ದೆಂದು ಹಾಯ್ದುರೆ ಹಲುಗಿರಿದು ಮೊಣೆಸಿದ ಯುವಸೂನು।
ಇಂದು ಕೀಚಕ ನಾಯನೆಱಗುವೆ
ನೆಂದು ಮರನನು ನೋಡಿದರೆ ಬೇ
ಡೆಂದ ಹದನನು ಕಂಡೆ ಯಿನ್ನೆನಗುಂಟೆ ಯುಸವಾದ [1] ॥ ೫೨

ಹೆಣ್ಣ ಹರಿಬಕ್ಕೋಸುಗುವೆ ತ
ಮ್ಮಣ್ಣ ನಾಜ್ಞೆಯ ಮೀಱಿ ಕುಂತಿಯು
ಚೆಣ್ಣ ಬದುಕಿದನೆಂದು ನುಡಿವರು ಕುಜನರಾದವರು।
ಅಣ್ಣನವರಿಗೆ ದೂಱುವುದು ನಾ
ವುಣ್ಣ ದುರಿ ಯಿವು ರಾಯನಾಜ್ಞೆಯ
ಕಣ್ಣಯುಲಿ ಬಿಗಿವಡೆದು ಕೆಡೆದೆವು ಕಾಂತೆ ಕೇಳೆಂದ ॥ ೫೩

ಗಂಡುಗರ್ವವ ನುಡಿಯೆ ನೆಮ್ಮಯ
ದಂಡಿ ತಾನದು ಬೇಱೆ ನಾವೀ
ಭಂಡತನದಲಿ ಬದುಕಲಱಿಯೆವು ಧರ್ಮ ನಿರ್ಮವನು।
ಕೊಂಡು ಕೊನರುವರಲ್ಲ ರಾಯನ
ನಂಡಲೆದು ಕೀಚಕನ ತಲೆಯನು
ಚೆಂಡನಾಡಿಸು ರಮಣಿ ನೀನರ್ಜುನಗ ಹೇಳೆಂದ ॥ ೫೪

---

1 ನೀನೆನಗುಂಟೆಯುಪರಾಧ, ಚ.

ತರುಣಿ ನೀ ಕೇಳಿಂದು ಮೊದಲಾ
ಗರಸಿ ನೀ ನಾಲ್ವರಿಗೆ ನಾವೆಡೆ
ಮುಱಿದವರು ಬಿಟ್ಟವರು ನಿನ್ನಯ ಸೂಳುಪಾಳೆಯವ ।
ಅರಸನಂ ಪ್ರಾರ್ಥಿಸುವುದರ್ಜುನ
ವರನಕುಲಸಹದೇವರಿಗೆ ವಿ
ಸ್ತರಿಸಿ ಹೇೞುವುದೆನ್ನೊಡನೆ ಫಲಸಿದ್ಧಿಯಿಲ್ಲೆಂದ ॥ ೫೫

ಅದಕ್ಕೆ ದ್ರೌಪದಿಯ ಅಸಮಾಧಾನ ವಾಕ್ಯಗಳು.

ಕೇಳುತಿದ್ದಳು ಕೊರಳಸೆಱೆ ಗೋ
ನಾಳಗೌಕಿತು ಬಿಕ್ಕಿ ಬಿಕ್ಕಿ ವಿ
ಶಾಲಲೋಚನೆ ಬೞಿಕ ನನೆದಳು ನಯನವಾರಿಯಲಿ ।
ಶೂಲ ಮುಱುಮೊನೆಗೊಂಡವೊಲು ಸುಳಿ
ವಾಳೆ ಝುಳಿತಾಗಿದವೊಲುದರ
ಜ್ವಾಲೆ ನೆತ್ತಿಯನೇಱೆ ಮಿಡುಕಿದಳಬಲೆ [1] ಬಿಸುಸುಯ್ದು ॥ ೫೬

ಕೆಂದಳದ ಸೆಕೆಯಲಿ ಕಪೋಲವು
ಕಂದಿ ಕಸರಿಕೆಯಾಯ್ತು ನಿಡುಸುಯಿ
ಲಿಂದ ಸೀಕರಿಯೊಡುವೇಕಾವಳಿಯ ಮುತ್ತುಗಳು ।
ಸಂದಣಿಸಿದೆವೆಗಳಲಿ ಬಾಷ್ಪದ
ಬಿಂದು ತಳಿತುದು ನಟ್ಟದೃಷ್ಟಿಯೊ
ಳಿಂದುಮುಖಿ ನೆನೆನೆನೆದು ತೂಗಿದಳಡಿಗಡಿಗೆ ಶಿರವ ॥ ೫೭

ಆವ ಹೆಂಗುಸನೞಲಿಸಿದೆ ಮು
ನ್ನಾವನೋಂಪಿಯ ನೞಿದೆನೋ ಮೇ
ಣಾವ ಪಾಪದ ಫಲಕೆ ಹಿಡಿದೆನೊ ಸಂಚಕಾರವನು ।

1 ನೆತ್ತಿಗೆ ನಿಲುಕೆ ಹಲುಬಿದಳಬಲೆ, ಚ.

ಆವ ಹೆಂಗುಸು ನವೆದಳೆನ್ನವೊ
ಲಾವಳೞಲುತೆ ಮಱುಗಿದಳು ಮ
ತ್ತಾವಳೆನ್ನಂದದವಮಗಳ ಪಡೆದವಳು ಲೋಕದಲಿ ‖ ೫೮

ಆವ ಗರಳವ ಕುಡಿವೆನೋ ಮೇ
ಣಾವ ಬೆಟ್ಟವನಡರ್ದು ಬೀಳ್ವೆನೊ
ಆವ ಮಡುವನು ಹೊಗುವೆನೋ ಹಾಸಱೆಯ ಗುಂಪಿನಲಿ ।
ಆವ ಕುಂಡವ ಹಾಯ್ವೆನೋ ಮೇ
ಣಾವ ಪಾವಕನೊಳಗೆ ಬೀಳ್ವೆನೊ
ಸಾವು ಸಮನಿಸದೆನಗೆನುತ ಮಱುಗಿದಳು ಕಮಲಾಕ್ಷಿ ‖ ೫೯

ಇನ್ನು ಹುಟ್ಟದೆ ಯಿರಲಿ ನಾರಿಯ
ರೆನ್ನವೊಲು ಭಂಗಿತರು ಭುವನದೊ
ಳಿನ್ನು ಜನಿಸಲು ಬೇಡ ಗಂಡರು ಭೀಮಸನ್ನಿಭರು ।
ಎನ್ನ ವೊಲ್ ಪಾಂಡವರ ವೊಲ್ ಸಂ
ಪನ್ನದುಃಖದೊಳಾರು ನವೆದರು
ಮುನ್ನಿನವರೊಳಗೆಂದು ದ್ರೌಪದಿ ಹಿರಿದು ಹಲುಬಿದಳು ‖ ೬೦

ಮಂದೆಗೆಳಸಿದ ಪಾಪಿ ಕೌರವ
ನಂದು ಮುಂದಲೆವಿಡಿದ ಸೈಂಧವ
ಬಂದು ಬಟಿಕಾರಣ್ಯವಾಸದೊಳೆನ್ನನೆಳದೊಯ್ದ ।
ಇಂದು ಕೀಚಕನಾಯ ಕಾಲೊಳು
ನೊಂದೆ ನಾನಿದು ಮೂಱುಬಾರಿಯು
ಬಂದ ಭಂಗವೆ ಸಾಕೆನುತ ಬಸವಳಿದಳಬುಜಾಕ್ಷಿ ‖ ೬೧

ಜನನವೇ ಪಾಂಚಾಲರಾಯನ
ಮನೆ ಮನೋವಲ್ಲಭರದಾರೆನೆ
ಮನುಜಗಿನುಜರು ಗಣ್ಯರೇ ಗೀರ್ವಾಣರಿಂ ಮಿಗಿಲು ।

ಎನಗೆ ಬಂದೆಡಱೀವಿರಾಟನ
ವನಿತೆಯರುಗಳ ಮುಡಿಯ ಕಟ್ಟುವ
ತನುವ ತಿಗುರುವ ಕಾಲನೊತ್ತುವ ಕೆಲಸದುತ್ಸಾಹ ॥ ೬೧

ಹಗೆಗಳಿಗೆ ತಂಪಾಗಿ ಬದುಕುವ
ಮುಗುದರಿನ್ನಾರುಂಟು ಭಂಗಕೆ
ಹೆಗಲಕೊಟ್ಟನುವ ವಿರೋಧಿಗಳುಂಟೆ ಲೋಕದಲಿ ।
ವಿಗಡಬಿರುದನು ಬಿಸುಟು ಬಡಿಹೋ
ರಿಗಳು ಪಾಂಡವರಂತೆ ಮೂಗು
ರ್ಕೆಗಳದಾರುಂಟೆಂದು ದ್ರೌಪದಿ ಹಿರಿದು ಹಲುಬಿದಳು ॥ ೬೨

ಕಾಲಯಮ [1] ಕೆರಳಿದರೆ ಮುಱಿವೆ
ಬ್ಬಾಳುತನದವರೆನ್ನನೊಬ್ಬಳ
ನಾಳರಾರಿರಿ ಪಾಪಿಗಳಿರಪಕೀರ್ತಿಗಳುಕರಲ ।
ತೋಳಹೊಱೆ ನಿಮಗೇಕೆ ಭೂಮಿಾ
ಪಾಲವಂಶದೊಳುದಿಸಲೇತಕೆ
ಕೂಳುಗೇಡಿಂಗೊಡಲ ಹೊಱುವಿರಿ ಯೆಂದಳಂದುಮುಖಿ ॥ ೬೪

ಧರೆಯ ಭಂಡಾರವನು ಪುರವನು
ಕರಿತುರಗರಥಪಾಯಿದಳವನು
ಕುರುಕುಲಾಗ್ರಣಿ ಸೆಳೆದುಕೊಂಡನು ನಿಮ್ಮ ಹೊಱವಡಿಸಿ ।
ದುರುಳ ಕೀಚಕಗೆನ್ನ ಕೊಟ್ಟಿರಿ
ಪರಿಮಿತದಲಿರವಾಯ್ತು ನಿಮ್ಮೆ
ವರಿಗೆ ಲೇಸಲ್ಲಕಟ ಯೆಂದಬುಜಾಕ್ಷಿ ಹಲುಬಿದಳು ॥ ೬೫

ಆವ ಭಾಗ್ಯಾಧಿಕನೊ ಕೌರವ
ದೇವನರಸುಗಳೊಡೆಯುತನವನು
ನೀವು ಕೃಷ್ಣನ ಕೂರ್ಮೆಯುಳಿಧರ್ಮದೊಳುಸಿಲುಕಿಹಿರಿ ।

---

1 ಕಾಲನನು, ಚ.

ನೀವು ತಟತಟವಾಗಿ ಲೋಗರ
ಸೇವೆಯಲಿ ಬೆಂದೊಡಲ ಹೊಱುವಿರಿ
ಸಾವವಳು ನಿಮಗಂಜಲೇಕಿನ್ನೆಂದಳಿಂದುಮುಖಿ ॥ ೬೬

ಭೀಮ ಕೊಟ್ಟೈ ತನಗೆ ಸಾವಿನ
ನೇಮವನು ನಿಮ್ಮಣ್ಣನಾಜ್ಞೆ ವಿ
ರಾಮವಾಗದೆ ಬದುಕೆ [1] ಧರ್ಮದ ವೈಸಿರಿಯನಱಿದು ।
ಕಾಮಿನಿಯ ಕೇಳಿಯಲಿ ನೆನೆವುದು
ತಾಮಸದಿ ತಾ ಮೀಱಿ ನಡೆದು
ದ್ದಾಮತೆಯ ಸೈರಿಸುವುದೆಂದೆಱಗಿದಳು ಚರಣದಲಿ ॥ ೬೭

ದ್ರೌಪದಿಯನ್ನು ಸಮಾಧಾನಪಡಿಸಿ ಭೀಮಸೇನನು
ಮಾಡಿದ ಪ್ರತಿಜ್ಞೆ.

ಎನಲು ಕಂಬನಿದುಂಬಿದುದು ಕಡು
ನೆನೆದುದಂತಃಕರಣ ರೋಷದ
ಘನತೆ ಹೆಚ್ಚಿತು ಹಿಂಡಿದನು ಹಗೆಗಳನು ಮನದೊಳಗೆ ।
ತನುಪುಳಕ ವುಬ್ಬರಿಸೆ ದಿಮ್ಮನೆ
ವನಿತೆಯನು ತೆಗೆದಪ್ಪಿ ವರಲೋ
ಚನಪಯೋಧಾರೆಗಳ ತೊಡೆದನು ಭೀಮ ಸೆಱಗಿನಲಿ ॥ ೬೮

ಕುರುಳ ನೇವರಿಸಿದನು ಗಲ್ಲವ
ನೊರಸಿ ಮುಂಡಾಡಿದನು ಮಂಚದ
ಹೊರೆಯ ಗಿಂಡಿಯ ನೀರಿನಲಿ ತೊಳೆದನು ಮುಖಾಂಬುಜವ ।
ಅರಸಿ ಬಿಡು ಬಿಡು ಖಾತಿಯನು ವಿ
ಸ್ತರಿಸಲೇಕಿನ್ನಣ್ಣ [2] ನಾಜ್ಞೆಯ
ಗೆರೆಯ ದಾಂಟಿದೆ ದಾಂಟಿದೆನು ಹೋಗೆಂದನಾಭೀಮ ॥ ೬೯

[1] ನಡೆಯೆ, ಖ. ಚ. [2] ಕೆಮ್ಮಣ್ಣ, ಚ.

ಬಸುರ ಬಗಿವೆನು ಕೀಚಕನ ನಸು
ಮಿಸುಕಿದರೆ ವೈರಾಟ ವಂಶದ
ಹೆಸರ ತೊಡೆವೆನು ನಮ್ಮನಱಿದೊಡೆ ಕೌರವವ್ರಜವ।
ಕುಸುರಿದಱಿವೆನು ಭೀಮ ಕಷ್ಟವ
ನೆಸಗಿದನು ಹಾ ಯೆಂದರಾದೊಡೆ
ಮುಸುಡನವುರಾದ್ರಿಯುಳಿ ತೆಗೆವೆನು ದೇವಸಂತತಿಯ॥ ೭೦

ಮುನಿದನಾದೊಡೆ ಯಣ್ಣ ತನವಿಂ
ದಿನಲಿ ಹರಿವುದು ಪಾರ್ಥನಕುಲರು
ಕನಲಿದರೆ ಕೈದೋಱುವೆನು ಸಹದೇವನಿವರುಗಳ।
ಅನುಜನೆಂಬೆನೆ ಕೃಷ್ಣ ಹಾಯ್ದೊಡೆ
ಘನಮುರಾರಿಯ ಮೀಱುವೆನು ಬಚಿ
ಕೆನಗೆ ಸಮಬಲರಾರು ತಱಿವೆನು ಕೀಚಕವ್ರಜವ[1]॥ ೭೧

ಈಸುದಿನವೆಮ್ಮಣ್ಣನಾಜ್ಞಾ
ಪಾಶದಲಿ ಸಿಕ್ಕಿರ್ದ್ದ ಸಿಂಹದ
ಕೂಸ ನರಿ ಕೆಣಕುವವೊಲೀ ಕುರುಕೀಚಕಾದಿಗಳು।
ಘಾಸಿಯಾದರು ಕೆಣಕಿ ನಾಯ್ಗಳ
ಮೀಸಬಡ್ಡಿಯುಲಸುವ ಕೊಂಬೆನು
ವಾಸಿಧರ್ಮದ ಮೇರೆ ತಪ್ಪಿತು ಕಾಂತೆ ಕೇಳೆಂದ॥ ೭೨

ಕೀಚಕನನ್ನು ನಾಟ್ಯ ಮಂಟಪಕ್ಕೆ ಬರುವಂತೆ ಮಾಡೆಂದು
ಹೇಳಿದುದು.

ತರುಣಿ ಕೀಚಕ ಕೌರವೇಂದ್ರರ
ಹರಣಕಿದ ಕೋ ಸಂಚಕಾರವ
ಹಿರಿದು ಮುನಿದರೆ ಭೀಮ ಬಗೆವನೆ ನೀತಿಗೀತಿಗಳ।

---

1 ಕೀಚಕಾನ್ವಯವ್ರಜ.

ಕೆರಳಿಚಿದೆ ಯಿನ್ನೇನು ನಿನ್ನಯ
ಹರಿಬವೆನ್ನದು ನಾಯಿ ಜಾರನ
ಕರೆದು ಸಂಕೇತದಲಿ ಸೂಚಿಸು ನಾಟ್ಯಮಂಟಪವ ॥ ೩೩

ಅಲ್ಲಿಗಿರುಳೈತಂದು ಮರೆಯಲಿ
ಖುಲ್ಲನುದರವ ಬಗೆದು ರಕುತವ
ಚೆಲ್ಲುವೆನು ಶಾಕಿನಿಯರಿಗೆ ಸಂದೇಹವೇನಿದಕೆ ।
ಅಲ್ಲಿ ಕೆಲಬಲನಱಿದುದಾದಗೆ
ಬಲ್ಲೆನದಕೌಷಧಿಯ ಕರೆಮರೆ
ಯಿಲ್ಲ ಮಾನಿನಿ ಹೋಗೆನುತ ಬೀಳ್ಕೊಟ್ಟನಂಗನೆಯ ॥ ೩೪

ಹರುಷದಲಿ ಹೆಚ್ಚಿದಳು ಪುರುಷರ
ಪುರುಷನಲ್ಲಾ ಭೀಮ ತನ್ನಯ
ಪರಮಸುಕೃತೋದಯವಲಾ ನೀನೊಬ್ಬನೆಂದೆನುತ ।
ಅರಸಿ ಕಾಂತನ ಬೀಳುಕೊಂಡಳು
ಮರಳಿದಳು ನಿಜಭವನಕಿತ್ತಲು
ತರಣಿ ತೆಗೆದನು ತಾವರೆಯ ಬಾಗಿಲಿನ ಬೀಯಗವ ॥ ೩೫

ಮಾರ್ಗದಲ್ಲಿ ಬರುತ್ತಾ ಕೀಚಕನನ್ನು ನೋಡಿದುದು.

ಆದಿವಸವರಮನೆಗೆ ಬರುತ ವೃ
ಕೋದರನ ವಲ್ಲಭೆಯ ಕಂಡನು
ಕೈದುಡುಕಲಂಜಿದನು ಮಾತಾಡಿಸಿದನಂಗನೆಯ ।
ಹೋದಿರುಳ ಯುಗವಾಗಿ ನೂಕಿದೆ
ನೀ ದಯಾಂಬುಧಿ ಕುಸುಮಶರ ಯಮ
ನಾದ ನೀನೇ ಬಲ್ಲೆ ಯೆಂದನು ಕೀಚಕನು ನಗುತ ॥ ೩೬

ಕುಸುಮಶರ ಯಮನಹನಮೃತವೇ
ವಿಷವಹುದು ಕೇಳಾಲಿಕಲುಗಳು
ಬಿಸಿಯಹುವು ಬಾಂಧವರು ವೈರಿಗಳಹರು ನಿಮಿಷದಲಿ ।

ಬಸೆದರೊಲ್ಲದರರಹರು ಲೋಗದ
ಶಶಿವದನೆಗಳುಪಿದ ದುರಾತ್ಮನ
ವಸುಧೆ ಹೊರೆವುದೇ ಪಾಪಕೀಚಕ ಯೆಂದಳಿಂದುಮುಖಿ ‖ ೩೩

ಬಟಿಕ ನಿನ್ನ ಪುರಾಣಧರ್ಮವ
ತಿಳಿದುಕೊಂಬೆವಿದೊಮ್ಮೆ ನಿನ್ನಯ
ಲಲಿತಕರುಣಾಕಟಾಕ್ಷಕವಚವ ತೊಡಿಸಿ ತನ್ನೊಡಲ ।
ಅಳುಕದೆಸುವ ಮನೋಜನಂಬಿನ
ಹಿಳುಕಮುಱಿಡಿಂಗರಿಗನಹೆನೆಂ
ದಳುಪಿ ಮನದಲಿ ಖೂಳ ಕಮಲಾನನೆಗೆ ಕೈಮುಗಿದ ‖ ೩೮

ದ್ರೌಪದಿಯು ಕೀಚಕನಿಗೆ ನಾಟ್ಯಮಂಟಪದಲ್ಲಿರೆಂದು
ಹೇಳಿದುದು.

ಅಱಿದರಾದರೆ ನಿನ್ನ ವಂಶವ
ತಱಿವರೆನ್ನವರೆಲವೊ ಕೆಲಬಲ
ನಱಿಯದಂತಿರೆ ಬಂದು ನಾಟ್ಯದ ಗರುಡಿಯೊಳಗಿಹುದು ।
ನೆಱಿದುದಾಯುಷ ನಿನಗೆ ಕತ್ತಲೆ
ಮಱಿಯೊಳನೃತಹೆನು ಯೆನ್ನನು
ಮಱಿದು ನೀ ಬಿಡೆ ಯಾದುದಾಗಲಿ ಯೆಂದಳಿಂದುಮುಖಿ ‖ ೩೯

ಅಂದಖಿಳಸಾಮ್ರಾಜ್ಯವಿದಿರೈ
ತಂದವೊಲು ಖಳ ಹಿಗ್ಗಿದನು ಪೂ
ರ್ಣೇಂದುವದನೆಯ ಮೇಲುವಾಯಲು ಮನದೊಳನುಗಯ್ಯೆ ।
ಮುಂದುಗೆಡದಿರು ಕೊಟ್ಟಸನ್ನೆಗೆ
ಬಂದು ನೀನಿರು ಕೆಲದವರು ಕೇ
ಳಿಂದು ನಗುವೆಂದವನು ಮಾಡದಿರೆಂದಳಿಂದುಮುಖಿ ‖ ೪೦

ಖಳ ಹಸಾದವ ಹಾಯ್ಕಿ ತನ್ನಯ
ನಿಳಯಕೈದಿದನಬುಜಬಾಂಧವ
ನಿೞಿದನಸ್ತಾಚಲದ ತಪ್ಪಲ ತಾವರೆಯ ಬನಕೆ !

ಈ ವರ್ತಮಾನವನ್ನು ಭೀಮಸೇನನಲ್ಲಿ ಹೇಳಿ ಸಿದ್ಧಪಡಿಸಿದುದು.

ನಳಿನಮುಖಿ ನಲವಿನಲಿ ಬಲುಗ
ತ್ತಲೆಯ ಹಬ್ಬುಗೆಯೊಳಗೆ ಕಂಗಳ
ಬೆಳಗು ಬಟ್ಟೆಯ ತೋಱೆ ಬಂದಳು ಬಾಣಸಿನ ಮನೆಗೆ ॥ ೮೧

ಭೀಮ ನಿಂದಿರು ನಾಟ್ಯನಿಳಯವ
ನಾಮದಾಂಧಗೆ ನುಡಿದು ಬಂದೆನು
ತಾಮಸವ ಮಾಡದಿರು ಹೂಡದಿರಲ್ಪಬುದ್ಧಿಗಳ ।
ಕಾಮುಕನ ನಡೆಗೆಡಹಿ ನಿಜಸು
ಪ್ರೇಮವನು ತೋಱೆನಲು ನಗುತು
ದ್ದಾಮನೆದ್ದನು ಘಳಿಯನುಟ್ಟನು ಮಲ್ಲಗಂಟಿನಲಿ ॥ ೮೨

ಖಳನ ಮುಱಿಯೆಂದಬಲೆ ಹಣೆಯಲಿ
ತಿಲಕವನು ರಚಿಸಿದಳು ಸೇಸೆಯ
ತಳದಳೇರಿಸಿ ತಿಗುರ ಗೆಲಿದಳು ಹಿಣಿಲ ಹೊಸಪರಿಯ ।
ಬಲುಭುಜನ ಹರಸಿದಳು ಕಗ್ಗ
ತ್ತಲೆಯೊಳಗೆ ನಡೆತಂದು [1] ನಾಟ್ಯದ
ನಿಳಯಮಧ್ಯದ ಮಣಿಯ ಮಂಚದ ಮೇಲೆ ಪವಡಿಸಿದ ॥ ೮೩

ಕೀಚಕನು ಸಂಕೇತಸ್ಥಾನಕ್ಕೆ ಬಂದುದು.

ಉಱುವ ಮಾರಿಯ ಬೇಟದಾತನು
ತುಱುಬಿನಲಿ [2] ಮಲ್ಲಿಗೆಯ ಮೊಗ್ಗೆಯ
ನಿಱುಕಿದನು ಪೂಸಿದನು ಸಾದುಜವಾದಿಕತ್ತುರಿಯ ।

1 ಯಹಬ್ಬುಗೆಯೊಳಗೆ, ಚ. 2 ತುಱಿಗಿದನು, ಚ.

ಮೆಱೆವ ಗಂಡುಡುಗೆಯನು ರಚಿಸಿದ
ಸೆಱಗನೊಯ್ಯಾರದಲಿ ಸುರಗೆಯ
ತಿರುಹುತಿರುಳೊಬ್ಬನೆ ನಿಜಾಲಯದಿಂದ ಹೊಱವಂಟ ॥ ೮೪

ಕಾಲಪಾಶದಲೆಳಸಿಕೊಂಬ ಕ
ರಾಳಮತಿ ಸುಡುಗಾಡಲೈತಂ
ದಾಲಯವ ಹೊಕ್ಕನು ಕೃತಾಂತನ ಬಾಯ ಹೊಗುವಂತೆ ।
ಮೇಲೆಮೇಲಪಶಕುನಶತಕವ
ನಾಲಿಸದೆ ಸುಮ್ಮಾನದಲಿ ಕೇ
ಡಾಳಿ ಬಂದನು ಮಂಚವಿದ್ದೆಡೆಗಾಗಿ ತವಕದಲಿ [1] ॥ ೮೫

ವನಜಮುಖಿ ವೀಳಯವನನುಲೇ
ಪನವ ಮಲ್ಲಿಗೆಯ ದಳಭೂಷಣ
ವನುಪಮಾಂಬರವಿವೆ ಮನೋಹರವಹರೆ ಚಿತ್ತೈಸು ।
ನಿನಗೆ ಪಾಸಟಿಯಾನು ಯೆನ್ನವೊ
ಲನಿಮಿಷರೊಳಾರುಂಟು ಚೆಲುವರು
ಮನುಜರೆನಗೆಣೆ ಯಿಲ್ಲಲೆಗೆ ಸೈರಂಧ್ರಿ ಕೇಳೆಂದ ॥ ೮೬

ಕೀಚಕ ಭೀಮಸೇನರ ನುಡಿಗಳು.

ಎನ್ನವೋಲ್ ಪುರುಷರಲಿ ಚೆಲುವರ
ಮುನ್ನ ನೀ ಕಂಡಱಿದೆಯಾದೊಡೆ
ಯೆನ್ನಮೇಲಾಣೆಲೆಗೆ ಹುಸಿಯದೆ ಹೇಳು ಹೇಳೆಂದು ॥
ಮುನ್ನನಿನ್ನಿಂದಧಿಕದಬಲೆಯ [2]
ರೆನ್ನನೇ [3] ಬಯಸುವರು ನಾರಿಯ
ರೆನ್ನ ಕಂಡರೆ ಸೋಲದವರಿಲ್ಲಲೆಗೆ ಕೇಳೆಂದ [4] ॥ ೮೭

---

1 ತಡವರಿಸಿ, ಚ.
2 ನಿನ್ನಂತಪ್ಪಸತಿಯರು, ಚ.
3 ಎನ್ನನೇ, ಚ.
4 ನಿನ್ನಾಣೆ, ಚ.

ಎಲವೊ ಕೀಚಕ ನಿನ್ನ ಹೋಲುವ
ಚೆಲುವರಿಲ್ಲಂತಿರಲಿ ಲೋಕದ
ಲಲನೆಯರ ಪರಿಯಲ್ಲ ತನ್ನಯ ರೂಪು ಬೇಱೊಂದು ।
ಇಳೆಯೊಳನಗೆಣೆ ಯಿಲ್ಲ ನಿನಗಾ
ನೊಲಿದು ಬಂದೆನು ತನ್ನ ಪರಿಯನು
ಬಱಿಕ ನೋಡಾ ಬೇಗ ತೋಱುವೆನೆಂದನಾಭೀಮ ॥ ೭೭

ಎನಗೆ ಪುರುಷರು ಸೋಲದವರಿ
ಲ್ಲೆನಗೆ ಪಾಸಟಿ ನೀನು ನಿನಗಾ
ನೊಲಿದು ಬಂದೆನು ನೋಡು ಯೆನ್ನಯ ಹೆಣ್ಣು ತನದನುವ ।
ಎನಲು ಹರುಷದಲುಬ್ಬಿ ಕೀಚಕ
ನನಿಲಜನ ಮೈದಡವಿ ವೃತ್ತ
ಸ್ತನವ ಕಾಣದೆ ಹೆದಱಿ ಬಱಿಕಿಂತೆಂದನವ ನಗುತ ॥ ೭೯

ಭೀಮ ಕೀಚಕರ ಹೊಡೆದಾಟ.

ಎಲೆಗೆ ಕಲುಮೈಯ್ಯಾದೆ ಕಡು ಕೋ
ಮಲತೆ ಯೆತ್ತಲು ಕರ್ಕ್ಕಶಾಂಗದ
ಬಲುಹಿದೆತ್ತಲು ಮಾಯವೇಷವ ಧರಿಸಿದೆಯೊ ಮೇಣು ।
ತಿಳುಹೆನಲು ಕೇಳೆಲವೊ ಪರಸತಿ
ಗಳುಪಿದಾತಂಗಮೃತ ವಿಷ ಕೋ
ಮಲತೆ ಕರ್ಕ್ಕಶವಹುದೆನುತ ತುಡುಕಿದನು ಮುಂದಲೆಯ ॥ ೮೦

ಚಪಳ ಘಡ ಹೋಗೆನುತ ಹಾಯ್ದನು
ಕೃಪಣಮತಿ ಮುಂಗಯ್ಯನನಿಲಜ
ನಪರಭಾಗಕೆ ಹಾಯ್ದು ಹಿಡಿದನು ಕೀಚಕನ ತುಱುಬ ।
ವಿಪುಳಬಲ ಕಳವಳಿಸಿದನು ಕಡು
ಕುಪಿತನಾದನು ಹೆಂಗುಸಲ್ಲಿವ
ನಸಸದನು ತೆಗೆ ಕರುಳನೆನುತೊಳಹೊಕ್ಕು ಹೆಣಗಿದನು ॥ ೮೧

ತಿವಿದನವನುರವಣಿಸಿ ಮಾರುತಿ
ಕವಿದು ಹಣುಗಿದನಡಸಿ ಹೊಯ್ದೊಡೆ
ಬವರಿಯಲಿ ಕಳದೌಕಿದರೆ ಮಡಮುಱಿಯದೊಳಹೊಕ್ಕು ।
ಸವಡಿಮಂದರದಂತೆ ಕೀಚಕ
ಪವನಸುತರೊಪ್ಪಿದರು ಭೀಮನ
ಯುವತಿ ನಗುತಾಲಿಸುತಲಿದ್ದಳು ಹೊಯ್ಲ ಹೋರಟೆಯ ॥ ೯೨
ಎಱಗಿದರೆ ಕೀಚಕನ ಗಾಯಕೆ
ತಱಹರಿಸಿ ಕಲಿಭೀಮ ಮಂಡಿಸಿ
ಮುಷವೊಡೆದು ಮುಱಿದೆದ್ದು ರೋಷದಲೌಡನೊಡೆಗಚ್ಚಿ ।
ಬಱಸಿಡಿಲು ಪರ್ವತದ ಶಿಖರವ
ನೆಱಗುವಂತಿರೆ ಖಳನ ನೆತ್ತಿಯ
ನೆಱಗಿದನು ಕಲಿಭೀಮ [1] ನುನ್ನತಬಾಹುಸತ್ವದಲಿ ॥ ೯೩
ಅರಿಯ ಮುಷ್ಟಿಯ ಗಾಯದಲಿ ತಲೆ
ಬಿರಿಯೆ ತನು ಘೆಂಡಣಿಸಿ ಕಂಗಳು
ತಿರುಗಿ ಜೋಲುತೆ ಮೆಲ್ಲಮೆಲ್ಲನೆ ಯುಸುವ ಪಸರಿಸುತ ।
ಕೆರಳಿ ಕರಿ ಕೇಸರಿಯ ಹೊಯ್ದರೆ
ತಿರುಗುವಂತಿರೆ ಭೀಮಸೇನನ
ಬರಿಯ ತಿವಿದನು ಬೀಟೆನುತ ಖಳರಾಯ ರೋಷದಲಿ ॥ ೯೪

ಕೀಚಕನ ಮರಣ.

ತಿರುಗಿ ಪೈಸರಹೋಗಿ ಪವನಜ
ಮರಳಿ ತಿವಿದನು ಕೀಚಕನ ಹೇ
ರುರವನೆದೆ ಜರ್ಝರಿತವಾಯಿತು ಕಾಱಿದನು ಕರುಳ ।
ಬಿರಿದುವಾಲಿಗಳೊಲೆದೊಲೆದು ಕಂ
ಣ್ತಿರುಗಿ ಧೊಪ್ಪನೆ ಕೆಡೆದು ನಿಮಿಷಕೆ
ಹೊರಳಿ ಹರಣವ ಕಳುಹಿ ಕಳದುದು ಕಾಯ ಕೀಚಕನ ॥ ೯೫

---

1 ರಣಧೀರ, ಚ.

ತಲೆಯುನೆದೆಯೊಳಗಿಕ್ಕಿ ಕೈ ಕಾ
ಲ್ಗಳನು ಬಸುರೊಳಗಿಕ್ಕಿ ದೂರಕೆ
ತೊಲಗಿದನು ತೋಱಿದನು ತರುಣಿಗೆ ಕೀಚಕನ ಹದನ ।
ಖಳನು ಕಾಲನ ಕೋಣ ತುಟಿದಂ
ತಿಳೆಯೊಳೂಱಿಗಿರೆ ಕಂಡು ಕಾಮಿನಿ
ಕಳವಳಿಸಿ ನಗುತಾಗ ತಕ್ಕೈಸಿದಳು ವಲ್ಲಭನ [1] ॥ ೯೬

ಈವರ್ತಮಾನವು ಅವನ ತಮ್ಮಂದಿರಿಗೆ ತಿಳಿಯಲು ಅವರು ಬಂದುದು.

ತರುಣಿ ಬಿಡು ಸಾರೆನುತ ಪವನಜ
ಸರಿದನತ್ತಲು ದ್ರುಪದನಂದನೆ
ಕರೆದು ನುಡಿದಳು ಕಾಹಿನವರಿಗೆ ಕಿಚಕನ ಹದನ ।
ದುರುಳ ಬಲುಹಿಂದೆನ್ನನೆಳದರೆ
ಕೆರಳಿದರು ಗಂಧರ್ವರೀತಗೆ
ಹರುವೆ ಕಂಡರು ನೋಡಿ ಯೆನೆ ಹರಿತಂದರವಳೂಡನೆ ॥ ೯೭

ಅರಸಿ ಕೈದೀವಿಗೆಯಲವನಿಹ
ಪರಿಯ ಕಂಡರು ಕಾಹಿನವದಿರು
ಹರಿದು ಹೇಳಿದರಾತನನುಜರಿಗಗ್ರಜನ ಹದನ [2] ।
ಕರದಿ ಬಾಯ್ಗಳ ಹೊಯ್ದು ಹೊಟ್ಟೆಯೊ
ಳುರಿ ಛಡಾಳಿಸೆ ಬಿಟ್ಟಮಂಡೆಯೊ
ಳರದೆ ಬಂದರು ಕೀಚಕನ ಸೋದರರು ಬಾಯ್ಬಿಡುತ ॥ ೯೮

ಆರು ಗತಿ ಯೆಮಗಕಟ ಕೀಚಕ
ವೀರ ದೇಶಿಗರಾದೆವಾ ವಿ
ನ್ನಾರ ಸೇರುವೆವೆನುತ ಹಲುಬಿದರವನ ತಕ್ಕೈಸಿ ।

---

1 ಕಳಕಳಿಸಿದಳು ಭೀಮಸೇನನನಪ್ಪಿ ದುಂಡಾಡಿ, ಚ.

2 ನನುಜಾತತರಿಗೆ ಬೇಗದಲಿ, ಚ.

ಕ್ರೂರಕರ್ಮರು ನಿನ್ನ ಕೊಂದವ
ರಾರು ಹಾ ಹಾ ಯೆನುತ ಹಲುಬಲು
ವಾರಿಜಾನನೆ ಮುಗುಳು ನಗೆಯಲಿ ನೋಡಿದಳು ಖಳರ ॥ ೯೯

ಆಗ ಅವರು ದ್ರೌಪದಿಯನ್ನು ಹಿಡಿದು ಕಟ್ಟಿದುದು.

ಇವಳಿಗೋಸುಗವಳಿದನೇ ಸಹ
ಭವನು ತಪ್ಪೇನೆನುತ ನಡುವಿರು
ಳವದಿರೈತಂದರು ವಿರಾಟಂಗಱುಹಿದರು ಹದನ ।
ಅವಳನಾತನ ಕೂಡೆ ಕಳುಹುವೊ
ಡೆವಗೆ ನೇಮವೆ ಯೆನುತ ಬೀಳ್ಕೊಂ
ಡವರು ಮರಳುತೆ ಬಂದು ಹಿಡಿದರು ಕಮಲಲೋಚನೆಯ ॥ ೧೦೦

ತೆಗೆದು ಮಂಚದಲವನ ಹೆಣನನು
ಬಿಗಿದು ಯಾತನ ಕಾಲದೆಸೆಯಲಿ
ನಗುವುದಿನ್ನೊಮ್ಮೆನುತ ಕಟ್ಟಿದರವರು ಕೋಮಲೆಯ[1] ।
ಬೆಗಡುಗೊಂಡಂಭೋಜಮುಖಿಯು
ಬ್ಬೆಗದಲೊಱಲಿದಳಕಟಕಟ ಪಾ
ಪಿಗಳಿರಾ ಗಂಧರ್ವರಿರ ಹಾ ಯೆನುತ ಹಲುಬಿದಳು ॥ ೧೦೧

ಬಳಿಕ ದ್ರೌಪದಿ ಸ್ಮರಿಸಿದಾಗ ಭೀಮಸೇನನು ಬಂದು
ಬಿಡಿಸಿದುದು.

ಕೇಳಕಟ ಜಯವಿಜಯಸೇನನೆ
ಕೇಳು ವಿಜಯಜಯಾಬಿ ಸೇನನೆ
ಕೇಳು ಜಯಸೇನನೆ ದುರಾತ್ಮಕರೆನ್ನನೆಳೆದೊಯ್ದು ।
ಬೀಟಿಕುವರಗ್ನಿಯಲಿ ನೀವಿದ
ಕೇಳಿ ತಡಮಾಡದಿರಿ ಯೆನಲದ
ಕೇಳಿದನು ಕಲಿಭೀಮ ಸತಿಯಾಕ್ರಂದನಧ್ವನಿಯ ॥ ೧೦೨

1 ಕಾಮಿನಿಯ, ಚ.

ಈದುರಾತ್ಮರಿಗಗ್ರಜನ ಸಾ
ವೈದದೇ ತಮ್ಮಣ್ಣನಲ್ಲಿಗೆ
ಹೊಯ್ದು ಕಳುಹಲು ಬೇಕಲಾ ಕುನ್ನಿಗಳನೀಕ್ಷಣಕೆ ।
ಬೈದೊಡೇನಹುದೆನುತ ಝೋಂಪಿಸಿ
ಹೊಯ್ದು ಮಾರುತಿ ರುದ್ರಭೂಮಿಯು
ನೈದಿದನು ಘಡ ಯೆನುತ ಕೊಂಡನು ಮುಱಿದು ಹೆಮ್ಮರನ ॥೧೦೩

ಎಲೆಲೆ ಗಂಧರ್ವಕನ ಹೆಂಗುಸ
ಕಳಚಿ ಬಿಡಿರೋ ಪಾಪಿ ಹೋಗಲಿ
ಕೊಲೆಗಡಿಗನಿವನೆನುತ ಹೆಣನನು ಬಿಸುಟು ದೆಸೆದೆಸೆಗೆ ।
ತಲೆಗೆದಱಿ ಕೆಟ್ಟೋಡೆ ನಕ್ಕನು
ಕಳಕಳಿಸಿ ಕಲಿ ಭೀಮನೆಲೆ ನಾ
ಯ್ಗಳಿರ ಜಾಱಿದರಿನ್ನು ಬಿಡುವೆನೆ ಯೆನುತ ಬೆಂಕೊಂಡ ॥೧೦೪

ಉಪಕೀಚಕರ ಸಂಹಾರ,

ತಿರುಹಿದನು ಹೆಮ್ಮರನನನಿಬರ
ಧರೆಯೊಳಟ್ಟೊರಸಿದನು ದೆಸೆದೆಸೆ
ಗೋಱಲಿ ಚಿಮ್ಮುವ ಚಪಳರನು ಬೆಂಬತ್ತಿ ಬರಿಕೈದು ।
ಕುಱಿದಱಿಯು ಮಾಡಿದನು ನೂಱೈ
ವರನು ಕೊಂದನು ಸತಿಯು ಬಿಡಿಸಿಯೆ
ಮರಳಿ ಮಿಣ್ಣನೆ ಬಂದು ಹೊಕ್ಕನು ಬಾಣಸಿನ ಮನೆಯ ॥ ೧೦೫

ಸುಳಿಯಲಮ್ಮದು ಪೌರಜನವಿವ
ರಳಿವ ವಚನಿಸಲಮ್ಮದೀಕೆಯ
ನಲುಕಲಮ್ಮದು ನೋಡಲಮ್ಮದು ಮಂದಿ ತಮತಮಗೆ ।
ನಳಿನಮುಖಿ ನಸುನಗುತ ತಿಳಿಗೊಳ
ದೊಳಗೆ ಹೊಕ್ಕಳು ಮಿಂದು ಬೀದಿ
ಗಳೊಳಗೆ ಬರುತಿರೆ ಕಂಡು ಕೈಗಳ ಮುಗಿದರಲ್ಲಲ್ಲಿ [1] ॥ ೧೦೬

1 ಮುಗಿದುದಬಳಜನ, ಚ.

ಈಕೆಗೋಸುಗವಟಿದನಕಟವಿ
ವೇಕಿ ಕೀಚಕನೆಂದು ಕೆಲಬರಿ
ದೇಕೆ ನಮಗೀಚಿಂತೆ ಶಿವ ಶಿವ ಯೆನುತ ಕೆಲಕೆಲರು ।
ನೂಕಿ ನೋಡುವ [1] ಮಂದಿಮಧ್ಯದ
ಲೀಕೆ ಮೆಲ್ಲನೆ ಬರುತಲಾ ಲೋ
ಕೈಕವೀರನ ಕಂಡಳಾ ಬಾಣಸಿನ ಬಾಗಿಲಲಿ ॥ ೧೦೭

ಮುಗುಳು ನಗೆಯಲಿ ಕಣ್ಣ ಕಡೆಯಲಿ
ವಿಗಡಭೀಮನ ನೋಡಿದಳು ಕೈ
ಮುಗಿದೆವಾವ್ ಗಂಧರ್ವಪತಿಗೆ ನಮೋ ನಮೋ ಯೆನುತ ।
ಹೊಗರಿಡುವ ಹರುಷದಲಿ ರೋಮಾ
ಳಿಗಳ ಗುಡಿಯಲಿ ತನ್ನ ನಿಳಯಕೆ
ಮುಗುದೆ ಬಂದಳು ಸೂರ್ಯನಡಚಿದನುದಯಪರ್ವತಕೆ ॥೧೦೮

ಊರೊಳಗೆ ಗುಜುಗುಜಿಸಿ ವಾರ್ತಾ
ಭಾರ ಮಸಗಿತು ನೆರವಿನೆರವಿಯೊ
ಳಾರ ಬಾಯ್ಗಳೊಳಾದರೆಯು ಜಪವಾಯ್ತು ಜನಜನಿತ ।
ಭೂರಿಚಿಂತಾತುರ ವಿರಾಟನು
ಮಾರಿಯೋ ಸೈರಂಧ್ರಿಯೋ ಯಿಾ
ನಾರಿ ಯಿರಬೇಡೆಂದು ತನ್ನಯ ಸತಿಗೆ ನೇಮಿಸಿದ ॥ ೧೦೯

ವಿರಾಟನ ಅಪ್ಪಣೆಯಿಂದ ದ್ರೌಪದಿಯನ್ನು ಹೋಗೆಂದು ಹೇಳಿದುದು.

ಅಳಲು ಕೈಮಿಗಲಾವಿರಾಟನ
ಲಲನೆ ಸೈರಂಧ್ರಿಯನು ಕರೆಸಿದ
ಳೆಲೆ ಮಹಾತುಮೆ ತಾಯೆ ನೀನಿಲ್ಲಿರಲು ಬೇಡಿನ್ನು ।
ಹೊಳಲೊಳಿದ್ದರೆ ಭೀತಿ ಘನ ನೀ
ವೊಲಿದ ತಾವಿಗೆ ಬಿಜಯಮಾಡುವು
ದುಳುಹಬೇಹುದು ತಮ್ಮನೆನಲಿಂತೆಂದಳಿಂದುಮುಖಿ ॥ ೧೧೦

---

[1] ಕವಿದುದು, ಚ.

ಅದಕ್ಕೆ ದ್ರೌಪದಿಯು ತನ್ನ ಅಪರಾಧ ವಿಲ್ಲೆಂದು ಹೇಳಿದುದು.

ಎಮ್ಮದೇನಪರಾಧ ದೇವಿಯೆ
ನಿಮ್ಮ ತಮ್ಮನು ತಪ್ಪಿ ನಡೆದರೆ
ಯೆಮ್ಮ ರಮಣರು ಸೈರಿಸದೆ ಸೀಳಿದರು ದುರ್ಜನರ ।
ನಿಮ್ಮ ನಾವೋಲೈಸಿ ಮರಳಿಯೆ
ನಿಮ್ಮ ಕೆಡಿಸುವರಲ್ಲ ಧೂರ್ತರು
ತಮ್ಮ ಕತದಲಿ ತಾವು ಕೆಟ್ಟರು ನೀತಿಬಾಹಿರರು ॥ ೧೧೧

ತಾವೆ ತಮ್ಮಿಂದಳಿದರದು ಸಾ
ಕಾವು ನಿಮಗಂಜುವೆವು ನಿಮ್ಮಲಿ
ಯಾವುದೂ ತಪ್ಪಿಲ್ಲ ನೀವಿಲ್ಲಿರಲು ಬೇಡೆನಲು ।
ನಾವು ಮುನ್ನಿಹರಲ್ಲ ನಿಮ್ಮಯ
ಸೇವೆಯಲಿ ಹದಿಮೂಱುದಿವಸವು
ನೀವು ನೂಕಿದೊಡಿರದೆ ಮಾಣೆವು ದೇವಿ ಚಿತ್ತೈಸು ॥ ೧೧೨

ಅಳುಕದಿರಿ ಹದಿಮೂಱುದಿವಸವು
ಕಳೆದ ಬಳಿಕೆಮಗೆಲ್ಲ ಲೇಸಹು
ದಳಿದು ಹೋದರು ದುಷ್ಟರಿಂದವರಿನ್ನು ಭಯಬೇಡ ।
ಕಲಹದವರಾವಲ್ಲೆನುತ ನಿಜ
ನಿಳಯವನು ಸಾರಿದಳು ದ್ರೌಪದಿ
ಘಳಿಗೆಘಳಿಗೆಗೆ ಕೀಚಕನ ವೃತ್ತಾಂತ ಪಸರಿಸಿತು ॥ ೧೧೩

ಮೂರನೆಯ ಸಂಧಿ ಮುಗಿದುದು.

ನಾಲ್ಕನೆಯ ಸಂಧಿ.

ಸೂಚನೆ.

ಅರಸು ಕುರುಪತಿ ಪಾಂಡುನಂದನ
ರಱಿಕೆಯಾಗಲು ಮಲ್ಲಬಳಗವ
ಕರೆಸಿ ಕಳುಹಲು ಮಲಲ ಕೊಂದನು ಮತ್ಸ್ಯನಗರಿಯಲಿ ॥

ದುರ್ಯೋಧನನ ಯೋಚನೆ.

ಕೇಳು ಜನಮೇಜಯ ಧರಿತ್ರೀ
ಪಾಲ ಪಾಂಡುಕುಮಾರರಡವಿಯು
ಬೀಱುಕೊಂಡಜ್ಞಾತವಾಸದೊಳಿರಲು ಕೌರವನು ।
ಕಾಲ ಸವೆದುದು ಪಾಂಡುಸುತರಿಗೆ
ಮೇಲೆ ನೆಗೞುವುದಾವ ರಾಯರ
ಪೂಜಿಗವು ತಾನೆನುತ ತಿಳುಹಿದನವನು ಭೀಷ್ಮಂಗೆ ॥ ೧

ಮತ್ಸ್ಯದೇಶದಿಂದ ಬಂದ ದೂತನು ಕೀಚಕನ ಮರಣ
ವನ್ನು ತಿಳಿಸಿದುದು.

ದ್ರೋಣ ಗೌತಮವರ್ಯ ಗಂಗಾ
ಸೂನುವಶ್ವತ್ಥಾಮನೆನಿಪ ಮ
ಹಾನುಭಾವರು ದುಷ್ಟಮಂತ್ರಿಚತುಷ್ಕಪೋಷಕನು ।
ಸಾನುರಾಗದಲಿರೆ ನೃಪತಿ ಸು
ಮ್ಮಾನದಿಂದೋಲಗದೊಳಿರುತಿರೆ
ಮಿನದೇಶಾಧಿಪನ ನಗರದಿ ಬಂದನೊರ್ವ ಚರ ॥ ೨

ತಂದು ಹರಹಿದ ಕೀಚಕನ ಮೃತಿ
ಯಂದವನು ನೃಪ ಕೇಳೆ ದೂತಂ
ಗೆಂದ ಮಡುಹಿದ ವೀರನಾವನು ಮರ್ತ್ಯಜಾತಿಯಲಿ ।

ಇಂದುಮುಖಿಯನು ಕರೆಯಲೋಸುಗ
ಬಂದು ಗಂಧರ್ವಕರು ಕೀಚಕ
ವೃಂದವನು ಸವರಿದರು ಕೌರವರಾಯ ಚಿತ್ತೈಸು ॥ ೨

ದುರ್ಯೋಧನನ ಊಹೆ.

ದೇವಲೋಕದ ಸತಿಗೆ ಮರ್ತ್ಯರೊ
ಳಾವ ಹೋಲಿಕೆ ಯುಂಟು ಮಡುಹಲ
ದಾವವೀರನ ಕಾಣೆ ಕೀಚಕನತುಳಭುಜಬಲನು ।
ಭಾವಿಸಲು ಪಾಂಡವರ ಸತಿಯನು
ಭಾವಜನ ಕೇಳಿಂಗೆ ಬಯಸಲು
ಪಾವಮಾನಿಯೆ ಕೊಂದ ನಿಶ್ಚಯವೆಂದನಾಭೂಪ ॥ ೪

ಸತ್ಯವಿದು ಪಾಂಡವರು ವಿಪಿನವ
ನುತ್ತರಿಸಿ ಯಜ್ಞಾತವಾಸಕೆ
ಗುಪ್ತದಲಿ ತಾವಿಪ್ಪರಲ್ಲಿ ವಿರಾಟನಗರಿಯಲಿ ।

ಮಲ್ಲರ ಕಳುಹುವ ಯೋಚನೆಯನ್ನು ಮಾಡಿದುದು.

ಯುಕ್ತಿಯಲಱಿಯಬಾರದೈ ರಿಪು
ಕೃತ್ರಿಮವು ಇದನಱಿವೆನೆನುತಲಿ
ಚಿತ್ತದಲಿ ತಾ ತಿಳದು ಮಲ್ಲರ ಕಳುಹಬೇಕೆಂದ ॥ ೫

ಕಳುಹೆ ಮಲ್ಲರ ಭೀಮನಿದ್ದರೆ
ವುಳಿಯಲೀಯನು ಮತ್ತೆ ಪಾಂಡವ,
ರುಳಿವು ದೊರೆತರೆ ಜಯಿಸಬಹುದೈ ಯೆಂದು ಚಿಂತಿಸುತ ।
ತಿಳುಹಿದನು ಭೀಷ್ಮಂಗೆ ದ್ರೋಣಗೆ
ನಲವು ಮಿಗೆ ಹರುಷದಲಿ ದೂತರ
ಕಳುಹಿ ಕರೆಸಿದ ಮನೆಯ ಮಲ್ಲರ ಕೌರವರ ರಾಯ ॥ ೬

ಮಲ್ಲರ ಬರುವಿಕೆ.

ಕರೆಸಿದನು ಜೀಮೂತಮಲ್ಲನ
ಕರೆಸಿದನು ಸಿಂಧೂರಮಲ್ಲನ
ಕರೆಸಿದನು ಜಗಜಟ್ಟಿಮಲ್ಲನ ವೀರದೇವುಲನ ।
ಕರೆಸಿದನು ಗಜವೈರಿಮಲ್ಲನ
ಕರೆಸಿದನು ಶಾರ್ದೂಲಮಲ್ಲನ
ಕರೆಸಿದನು ಶಾಕಂಬರೀಕನನತುಳಭುಜಬಲನ ॥ ೭

ಪುಂಡರೀಕನ ಪಿಂಗಳಾಕ್ಷನ
ಚಂಡಬಲ ರಣಜಟ್ಟಿ ರಣದು
ದ್ದಂಡಕೇಸರಿ ವೀರಬಾಹುಮಹಾಮದೋನ್ನತದ ।
ಹಿಂಡುಗಲಕನು ವುಗ್ರಕೇಶಿಪ್ರ
ಚಂಡ ಭೈರವವರಾಹು ಕಲಿಭೇ
ರುಂಡರೆಂಬತಿಬಲರು ಬಂದರು ರಾಯನೋಲಗಕೆ ॥ ೮

ಕದನಕರ್ಕಶ ಕಾಲಭೈರವ
ಮಧುವನಾನರಸಿಂಹಘಾಟನ
ಸದೆದುಱಿವ ನಾಗರಿಕಜಟ್ಟಿಗ ವೀರಬೇತಾಳ ।
ಗದೆವಿಭಾಡನು ವೀರನರಸುರ
ಚದುರಚಪಳನು ಬಾಹುವಿಕ್ರಮ
ಮೊದಲಂದೈನೂಱು ಬಂದರು ನೃಪತಿಯೋಲಗಕೆ ॥ ೯

ಒಬ್ಬನೈಸಾವಿರವ ಕೊಂದವ
ನೊಬ್ಬನೀಱಗ ವೆರಡ ಕೊಂದವ
ನೊಬ್ಬ ನಾಕಿಬ್ಬದಿಯ ನೆಱಗಿದನಾಮೃಗಾಧಿಪನ ।
ಹೆಬ್ಬುಲಿಯ ನಾರೇಱಿ ಸೀಱಿದ
ನಿಬ್ಬರುಗಳೊಂದಾಗಿ ಕೂಡಿಯೆ
ಬೊಬ್ಬುಳಿಯನೊಡೆವಂತೆ ಕೊಂದರು ಹಲವುಮಲ್ಲರನು ॥ ೧೦

ಉಡಿದನೊಬ್ಬನು ಗಜದ ದಾಡೆಯ
ಮಡಿಯಲನುಗೈಸಿದನು ಕರಿಯನು
ಪಡೆದವನು ತಾನಿವನ ಘಾಡದ ಸಿಡಿಲನಡಹಾಯ್ದು ।
ಒಡನೆ ಬೊಬ್ಬಿಡುವನು ಮಹಾಹವೆ
ತೊಡರಿಕುವರಿಲ್ಲಾ ಯೆನುತ ನೆಱೆ
ಮಿಡುಕುವನು ತಾನೀತನೆಂದನು ಭೂಪ ಕೇಳೆಂದ ॥ ೧೯

ಅವರು ತಮ್ಮನ್ನು ತಾವೇ ಹೊಗಳಿ ಕೊಂಡುದು.

ಹೊಡೆದು ಭುಜವನು ಹುಂಕರಿಸಿ ಕಿಡಿ
ಯಿಡುವ ಮೀಸೆಯ ತಿದ್ದು ತೊಲವಿನ
ಲಡಿಗಡಿಗೆ ಯಾರ್ಭಟಿಸಿ ನಿಂದನು ಮಲ್ಲಜೀಮೂತ ।
ನುಡಿ ನೃಪತಿ ಹದನೇನು ರಿಪುಗಳ
ಮಡುಹಿ ಬರಲೋ ಮೇಣು ಕೈಸೆಱೆ
ಹಿಡಿದು ತರಲೋ ಯೇನು ಹದನೆಲೆ ನೃಪತಿ ಹೇಳೆಂದ ॥ ೨೦

ಮಲ್ಲನಾಜೀಮೂತನಾಡಿದು
ದೆಲ್ಲವನು ಕೇಳ್ದಾಗ ಸಿಂಧುರ
ಮಲ್ಲನೆಂದನು ರಾಯ ಕುರುಪತಿ ವೀರ ಚಿತ್ತೈಸು ।
ನಿಲ್ಲದರಿಯನು ವಶವ ಪಿಡಿದೊರ
ಸಿಲ್ಲಿಗೈತಹೆ ಬೆಸಸು ಮನ್ನನೋ
ವೆಲ್ಲಭನೆ ಕೇಳೆಂದು ನುಡಿದನು ರಾಯ ಕೇಳೆಂದ ॥ ೨೧

ಅವರನ್ನು ಕುರಿತು ದುರ್ಯೋಧನನ ಅಪ್ಪಣೆ.

* ಈಪರಿಯ ತಂತಮ್ಮ ಶೌರ್ಯ ಪ್ರ
ತಾಪವನು ವಿಸ್ತರಿಸೆ ಕೌರವ
ಭೂಪನೆಂದನು ನೀವು ಪಶ್ಚಿಮಮತ್ಸ್ಯಪುರವರಕೆ ।

---

* ಈಪರಿಯುಜಟ್ಟಗಳು ತಮ್ಮ ಪ್ರ
ತಾಪವನು ವಿಸ್ತರಿಸೆ ಕುರುಕುಲ
ದೀಪನಪ್ಪಣೆಗೊಟ್ಟು ಮಗುಟೆಂತೆಂದನವರೊಡನೆ ।

ವ್ಯಾಪಿಸಿಯೆ ನೀವ್ ಮಲ್ಲವಿದ್ಯೆಯ
ತೋಪ ಮೆಱಿವುದು ಭೀಮನಿದ್ದರೆ
ಆಪುರದಲೊತ್ತೊತ್ತಿ ಹೊಗಳಿಸಿ ನಿಮ್ಮ ಬಿರುದುಗಳ ॥ ೧೪

ಸುದ್ದಿಯಿಲ್ಲದೆ ಹೋದ ಪಾಂಡವ
ರಿದ್ದರಾದೊಡೆ ಬೀದಿಗಲಹದ
ಯುದ್ಧಕೆಳಸದೆ ತಿರುಗಿಸುವುದೊಬ್ಬನನು ಕರಿಪುರಿಗೆ ।
ಉದ್ದುರುಟುತನ ಬೇಡ ಮಲ್ಲರ
ಗೆದ್ದು ನೀವಾರಾಜಕಾರ್ಯಕೆ
ಬುದ್ಧಿಮಾರ್ಗವಿದೀಗ ಪಯಣವ ಮಾಡಿ ನೀವೆಂದ ॥ ೧೫

ತರಿಸಿದನು ಹೊಂದೊಡವೆ ರತ್ನಾ
ಭರಣ ಮೊಪ್ಪುವ ತೋಳ ಭಾಪುರಿ
ವರಮಣಿಗಳಿಂದೆಸೆವ ಬಿರುದಿನ ಕಡೆಯ ಸರಪಳಿಯ ।
ಕೊರಳ ಹಾರದ ವಜ್ರಮಾಣಿಕ
ತುಱುಗಿತೊಳುವ ಕಾಲಪೆಂಡೆಯ
ವೆರಸುವಸ್ತ್ರಾದಿಗಳ ವೀಳ್ಯಯವಿತ್ತು ಬೀಪ್ಕೊಂಡ ॥ ೧೬

ಚಂದನದ ಕುಂಕುಮದ ಕಸ್ತುರಿ
ಗಂಧವನುಲೇಪನ ಜವಾದಿಯ
ಗಂಧಕೇಸರಿವೀಳಯವ ಕರ್ಪೂರದ ಹಳಕುಗಳ ।
ಛಂದಛಂದದ ರತುನತೊಡಿಗೆಗ
ಳಿರದಲಂಕೃತಿಗೈದು ಹೊಱವಂ
ಟೊಂದುತಾವಿನಲಿದ್ದು ನಡೆದುದು ಮಲ್ಲಸಂದೋಹ ॥ ೧೭

ವ್ಯಾಪಿಸುವುದವನಿಯಲಿ ಮಲ್ಲರ
ತೋಪು ಜಾಳಿಯ ಮೆಱೆದು ಹೊಗಳಿಸಿ
ಯಾಪುರದಲೇ ತನ್ನಬಿರುದಾವಳಿ ಪರಾಕ್ರಮವ, ಚ. ॥

ಹೊಡೆದುದೈ ಭೇರಿಗಳು ತಂಬಟ
ವೆಡಬಲದ ಡೌಡೆಗಳು ಮಿಗೆ ಬೊ
ಬ್ಬಿಡುವ ನಿಸ್ಸಾಳದ ಮಹಾರವರಾಯಗಡಿಬಡಿಯ |

ಮಲ್ಲರ ಪ್ರಯಾಣ.

ಘುಡಿಘುಡಿಪ ಹೆಗ್ಗಾಳೆ ಮೊಳಗುವ
ಬಿಡಗುಜಾಗಟೆ ಬೊಬ್ಬೆಯಲಿ ಜಗ
ನಡುಗೆ ಗಜಪುರದಿಂದ ಬಂದರು ಪಯಣಗತಿಗಳಲಿ || ೧೮

ಸುರನದಿಯನುತ್ತರಿಸಿ ಗೋದಾ
ವರಿಯ ಹೊಱಗೈದಿದರು ತರಣಿಯ
ಕಿರಣಲಹರಿಯ ಹೊಯ್ಲಿನಲಿ ಶ್ರಮವಾಗೆ ಪರಿಹರಿಸಿ |
ಮಱುದಿವಸ ತೆರಳಿದರು ಮಲ್ಲರು
ನೆರೆದು ನಡೆದುದು ಬಂದು ಕೃಷ್ಣೆಯ
ವರನದಿಯೊಳಾಯಿತ್ತು ಬೀಡು ವಿನಾಥಪುರದಲ್ಲಿ || ೧೯

ಮಾರ್ಗದಲ್ಲೊಂದೆಡೆಯಲ್ಲಿ ಜಟ್ಟನೊಬ್ಬಗೆ ದುಸ್ಸ್ವಪ್ನ.

ತಳೆದುದಾದಿವಸದಲಿ ಜಟ್ಟಿಯ
ಬಳಗ ರಾತ್ರಿಯೊಳೊಂದುದಿನ ನೆಱೆ
ಯುಟಿದು ಸಾವುದ ಕಂಡು ಮೈಮುಱಿದೆದ್ದು ಕಳವಳಿಸಿ |
ಚಲಿಸಿ ಬೆದಱಿದರೇನೊ ಬೊಬ್ಬಿಱಿ
ದೊಳಗೆ ಹೊಕ್ಕಿತೊ ಸಿಂಹವೆನೆ ಕಳ
ವಳಿಸಿ ಮಲ್ಲರು ಮಬ್ಬಿನಲಿ ತೂಳಿದರು ದೆಸೆದೆಸೆಗೆ || ೨೦

ಏನಿದೇನಾಶ್ಚರ್ಯ ಕರೆಯುವ
ನೇನ ಕಂಡನೊ ಕನಸಿನಲಿ ತಾ
ನೇನನೆಂಬೆನು ರಹವನೆನುತಡಿಗಡಿಗೆ ಬೆಱಗಾಗಿ |
ಮೌನದಲಿ ಮುಱುಗಿದುದು ತಂದರು
ಹೀನಹೃದಯನನೆಂದನವನು ಮ
ನೋನುರಾಗವೆನುತಿದು ಕನಸಿನ ಭಯವು ದಿಟವೆಂದು || ೨೧

ಕಾಲವಲ್ಲದಕಾಲಬಱಶಿಡಿ
ಲೇೞಿಗೆಯಲುಬ್ಬೆದ್ದು ಮಲ್ಲರ
ಪಾಳಯವನೆಱಗುವುದನಾನದ ಕಂಡೆ ಸ್ವಪ್ನದಲಿ ।
ಕಾಳುಗಿಚ್ಚಿನ ಬಲುಮೆಯಂತಿರೆ
ಧಾಳಿ ಬಂದುದು ಮೇಲೆ ಮತ್ತದ
ಹೇೞುವರೆ ಭಯಗೊಂಬೆನೆಂದನು ಮರಳಿ ಮಲ್ಲರಿಗೆ ॥ ೨೦

ಕಾಲಗತಿ ಯೆಂತಹುದೊ ರಿಪುಗಳು
ಶೀಲವುಳ್ಳವರೆಂದು ನುಡಿವರು
ಮೇಲೆ ಯಪಜಯವಹುದು ರಣದಲಿ ಸಾಕದಂತಿರಲಿ ।
ಕೇಳು ತಾ ಜೀಮೂತಮಲ್ಲನು
ಹೇೞು ಹೇೞೆನ್ನೊಮ್ಮೆ ಸಿಡಿಲು ಭ
ಡಾಳದಲಿ ನೆಱೆಯೆಱಗಿತೇ ಸಟೆ ಯೆನುತ ನಡೆಗೊಂಡ ॥ ೨೩

ಮತ್ಸ್ಯದೇಶಕ್ಕೆ ಮಲ್ಲರು ಬಂದು ರಾಜನಿಗೆ ತಿಳಿಸೆಂದು ಹೇಳಿದುದು.

ಹಲವುಪಯಣದ ಮೇಲೆ ಮತ್ಸ್ಯನ
ಹೊೞಲಿಗಿವರೈತಂದು ಭಟರನು
ಕಳುಹಿದರು ಪುರದರಸಗೆಮ್ಮಯ ಬರವನಱುಹೆನುತ ।
ನಲವು ಮಿಗಲೈತಂದು ಕೋಟೆಯ
ವಳಯ ಹೊಕ್ಕರು ಬೞಿಕ ರಾಜಾಂ
ಗಳವ ಸಾರುತೆ ತಿಳುಹಿದರು ಬಾಗಿಲಿನ ಸುಭಟರಿಗೆ ॥ ೨೪

ಕೇಳುತವರವರಂತರಂಗಕೆ
ಕೇಳೆ ಬೞಿಕಾನಾಲಿ ಯೆಂಬವ
ನೇೞಿನೆಮದಂತಸ್ಥದವ ತಾ ಕಂಡು ಭೂಪತಿಯ ।
ಕೇಳಿದೆನು ಯೆಲೆ ಜೀಯ ನಮ್ಮ ನೃ
ಪಾಲಭವನದಲೊರ್ವ ಚರನಿಂ
ಮೇಲೆ ನುಡಿಯನದೆಂತು ಬೆಸಸುವೆಯೆಂದನಾನೃಪಗೆ ॥ ೨೫

ಬಂದು ಕಂಡು ವಿರಾಟರಾಯಗೆ
ನಿಂದು ಕರಗಳ ಮುಗಿದು ಮಲ್ಲರು
ಬಂದು ಪುರಬಾಹೆಯಲಿ ಬಿಟ್ಟುದ ಹೇಳಿದನು ನೃಪಗೆ ।
ಮುಂದೆ ಕಳುಹಿದರೆನಲು ನೃಪ ತಾ
ನೆಂದಾನಾದಾರುಕನ ಕರೆಯೆನ
ಲಂದು ಪುರವಣಿಸಿದನು ಭೂಮಿಪಾಲನೋಲಗಕೆ ॥ ೧೬

ಕರವ ಮುಗಿದಾ ದಾರುಕನ ಕೂ
ಡರಸ ನೇಮವನಿತ್ತು ಮಲ್ಲರ
ಕರೆ ಯೆನಲು ತಿರುಗಿದನು ಭಟ್ಟನು ಸಹಿತ ವಹಿಲದಲಿ ।
ಪುರದ ಹೊಱಬನದಲ್ಲಿ ಯಿರುತಿ
ರ್ದರನು ಕಂಡು ನೃಪಾಲನೆಂಮನು
ಕರೆಯ ಕಳುಹಿದನೆಂದೊಡೆದ್ದರು ಮಲ್ಲರತಿಮುದದಿ ॥ ೧೭

ಪರಿಪರಿಯ ಶೃಂಗಾರದಲಿ ಮ
ಲ್ಲರುಗಳೇಳಲು ಮುಂದೆ ನಾದಿಪ
ಬಿರಿದು ಜಾಗಟೆಡೌಡೆಪಾತಕನಿಕರರೊಗ್ಗಿನಲಿ ।
ಪುರವ ಹೊಕ್ಕರು ರಾಜಸಭೆಗೊಡ
ನಿರದೆ ನಡೆಯಲು ಮತ್ಸ್ಯ ಭೂಪತಿ
ಸಿರಿಯೊಳೋಲಗವಿತ್ತು ಕುಳ್ಳಿರ್ದನು ಸರಾಗದಲಿ ॥ ೧೮

ಉಱವಣಿಸಿ ಮುಂದುಘ್ಘಡಿಪ ಭ
ಟ್ಟರುಗಳಲ್ಲರ ನಿಲಿಸಿ ತಾಳಿಯ
ವರಮಣಿಗಳಿಂದೆಸೆವ ಭೂಮಿಪತಿಗೆ ಜೀಮೂತ ।
ಶಿರವ ಬಾಗುತ ನಿಂದಿರಲು ಸಭೆ
ನೆರದು ನೋಡಲು ಮತ್ಸ್ಯಭೂಪತಿ
ಯಿರವದೆಲ್ಲಿಹುದೆಂದು ನುಡಿಯಲು ನುಡಿದ ಜೀಮೂತ ॥ ೧೯

ಇಂದುವಂಶದಲಧಿಕರಾಯರ
ವೃಂದದೊಳಗಾನಹುಷಪುತ್ರರು

ಸಂಗರಾಮೊಳೆಯಲಿ ಬಟಿಕಾಶಾಂತಭೂಪತಿಗೆ ।
ನಂದನನು ಜನಿಸಲ್ಕೆ ಯವನಿಗೆ
ಯಂಥನೃಪ ಜನಿಸಿದನು ಆತನ
ನಂದನನು ಕುರುರಾಯನಾತನ ಮಲ್ಲರಾವೆಂದ ॥ ೨೦

ಏನು ನಿಮ್ಮಯ ಬರವು ನಗರದ
ಲೇನು ಕೆಲಸವು ನೃಪತಿದೇಶದ
ಜಾಣಿಕೆ ಯೇನು ತನುದರ್ಪದುಬ್ಬಿನ ಬರವೊ ಹೇಟೆನಲು ।
ಧ್ಯಾನಿಸಿಯೆ ನಾವ್ ಬಂದ ಕೆಲಸವ
ಕಾಣಿಸುವ ಭಾರವಣೆ ನಿಮ್ಮದು
ಮಾನನಿಧಿ ಕೌರವನು ಕಳುಹಿದ ಮಲ್ಲಗಾಳಗಕೆ ॥ ೨೧

ಅದು ನಿಮಿತ್ತದಿ ನಾವು ಬಂದಿಹ
ಹದನಿದೀಗಿದು ರಾಯ ಕೇಳನೆ
ಮುದದಿ ಮನದುಬ್ಬಿನಲಿ ನುಡಿದನು ಮತ್ಸ್ಯನೃಪ ನಗುತ ।
ಹದನಹುದು ಮಲ್ಲರಿಗೆ ಬಹುದೇ
ಶದಲಿ ಕೃಪಣತೆಯುಂಟು ನಿಮ್ಮಯ
ಮೃದುವಚನ ಬಲುಮೋಡಿಗಾಡಿಕೆಗಾರು ಸರಿಯೆಂದ ॥ ೨೨

* ಕೇಳಿದನು ಕಾರಿಯವ ಸಂತಸ
ದೇಳಿಗೆಯಲಿಂತೆಂದ ನಮ್ಮಲಿ
ಕಾಳಗವೆ ಮರಜಟ್ಟಿಗಳು ಯಿಹರತಿವಿನೋದವೆಲ ।

---

* ಏಳಿ ನೀವ್ ಪಾಳಯಕೆ ಮಲ್ಲರು
ಮೇಳವಿಸಿ ಹೋಗೆನುತ ಭೂಮೀ
ಪಾಲಕನು ಬೀಡೆಕ್ಕೊಟ್ಟನತಿಮನ್ನಣೆಯಲವದಿರಿಗೆ ।
ಕೋಳಿಮೇಷವು ತಂಡುಲಗ್ಗದ
ಮೇಳವಿಪ ಸೊಜ್ಜಿಗೆಯಮೃತಮಧು
ಮೇಲಲಂಪೆಯಲಿ ಕಳುಹಿ ಬೇಗದಲೆನುತಲೊಳಹೊಕ್ಕ ॥ ಕ.

ಏಳ ನೀವ್ ಬೀಡಿಕೆಗೆ ಕದನಕೆ
ನಾಳೆ ಕರೆಸುವೆನೆಂದು ಭೂಪತಿ
ಹೇಳಿದನು ಚರರಿಂಗೆ ಪಡಿಪಾನಗಳ ಕೊಡಿಸೆಂದು ॥ ೨೩

ಬಳಿಕ ವಿರಾಟನ ಚಿಂತೆಗೆ ಕಂಕಮುನಿಯು ಹೇಳಿದ ಉಪಾಯ.

ಏನು ಹದವಿದಕಿನ್ನು ಕೌರವ
ಮಾನಭಂಗವೆ ಕಂಡು ಕಳುಹಿದೊ
ಡಾನುವವರಿವರೊಡನೆ ಕಾಣೆನು ನಮ್ಮ ಮಲ್ಲರಲಿ ।
ಮಾನನಿಧಿ ಹೊಱವಂಟು ಸಭೆಯೊಳ
ನೂನರಾಗದಿ ಯಿರಲು ಕಾಲನ
ಸೂನು ನುಡಿದನು ಕೇಳು ಜನಮೇಜಯ ಮಹೀಪಾಲ ॥ ೨೪

ಕರೆಸು ನಿಮ್ಮಯ ಮಲ್ಲರನು ಸಂ
ಗರವ ಜಯಿಸಲಿ ಜಯಿಸದಿರಲಾ
ಪರಿಯ ಬಿಡುವರೆ ರಾಯಲಕ್ಷಣಗಳನು ವಹಿಸಿರ್ದು ।
ಕರೆಸಿದರೆ ತಮತಮಗೆ ತವಕದಿ
ಹಿರಿದು ಶೃಂಗಾರವನು ಮಾಡಿಯೆ
ನೆರೆದು ಬಂದರು ಮೊಱೆವಡೌಡೆಯ ವಾದ್ಯರಭಸದಲಿ [1] ॥ ೨೫

ತುಳುವ ತುಂಬರನಾಗನಾದಳ
ವಳಗಮುಖ್ಯರು ಬಂದು ಸಭೆಯಲಿ
ನಲಿದು ಮಿಗೆ ಗರ್ಜಿಸಿತು ರಾಯನ ಮುಂದೆ ಕೆಲಕೆಲರು ।
ಛಲದೊಳಗೆ ಬಲದೊಳಗೆ ಮಲ್ಲರ
ಬಳಗಗಂಡನು ತಾನು ಹೇಪೆಂ
ಬುಲುಹುಗಳ ಸಂತೈಸಿ ನಗುತ ವಿರಾಟನಿಂತೆಂದ ॥ ೨೬

---

1 ಕರೆಸೆನಲು ಕಳುಹಿದನು ದೂತರ
ನಿರದೆ ಬಂದುದು ಡೌಡೆಜಾಗಟೆ
ನೇಱಿಯ ಬಿರುದಿನ ಭಟ್ಟರುಲಿಯಲು ಮತ್ಸ್ಯನೋಲಗಕೆ ॥ ಚ.

ಕಳುಹಿದನು ಗಜಪುರದ ನೃಪಕುಲ
ತಿಲಕನಿವರನು ಮಲ್ಲಯುದ್ಧಕೆ
ಹೊಬಲಿಗೈದಲು ನಿಮ್ಮ ಕರೆಸಿದೆವೆನಲು ತಮತಮಗೆ ।
ನಲಿದು ಹರುಷದಲಂದು ಬಾಹ
ಪ್ಪಳಿಸಿ ಮುಷ್ಟಿಯು ಜಡಿದು ಕದನ
ಕ್ಕೆಳಸಿದರು ಕಳುಹಿದರು ದೂತರು ಮಲ್ಲರಿದ್ದೆಡೆಗೆ ॥ ೩೭

ಚರರ ಕಳುಹಲು ಬಂದರವದಿರ
ಕರೆದು ತಿರುಗಿದರಾಕ್ಷಣದಲುಜಿ
ಹಿರಿದು ಶೃಂಗಾರವನು ಮಾಡಿದರೇನ ಪೇಳುವೆನು ।
ಕರಿಯು ಮೋಹರ ಹರಿವವೊಲು ಬಂ
ದಃರವಣಿಸಿ ನಡೆತಂದು ನೃಪಮಂ
ದಿರವ ಹೊಗಲದ ಕಂಡು ನೃಪತಿ ವಿರಾಟ ಮನ್ನಿಸಿದ ॥ ೩೮

ಬರಲು ಯಿವರಿದಿರಾಗಿ ಬಂದರು
ಕರವ ಧರಣಿಯಲುದ್ದಿ ಮಿಗೆಯು
ಬ್ಬರಿಸಿ ಭುಜವನು ಹೊಡೆದು ನಿಂದಿರೆ ಕಂಡು ಖಾತಿಯುಲಿ ।
ಧುರವ ಜಯಿಸಿದರಾದರಿವದಿರ
ಶಿರವ ಚಂಡಾಡುವೆನೆನುತ ಮೋ
ಹರಿಸಿ ಕಿಡಿಕಿಡಿಯೋಗಿ ಸಿಂಧುರಮಲ್ಲ ಮಾರಾಂತ ॥ ೩೯

ಅಳವಿಯುಲಿ ಬಂದೊಬ್ಬರೊಬ್ಬರು
ಹಳಚಿದರು ಹೆರೆಸಾರಿಮುಷ್ಟಿಯು
ಉರುವೆ ಪುಟನೆಗೆದೆದ್ದು ತಿವಿದನು ತುಡುಕೆ ಸಿಂಧುರನ[1] ।
ಅಳುಕದವನಾಭುಜದ ಸತ್ವದಿ
ಬಟಲಿ ಸಿಂಧುರ ತುಡುಕಿ ನೆಲಕ
ಪ್ಪಳಿಸೆ ಶಿರ ಶತಚೂರ್ಣವಾದುದು ಬೆದಖಿತಾಸ್ಥಾನ । ೪೦

1 ಹಿಡಿದನು ತಿವಿದು ಸಿಂಧುವನ, ಚ,

ಮಡಿದನವ ಶವ ದೆಗೆದು ರಣಕವ
ಗಡಿಸಲಾಚೌದಂತಮಲ್ಲನು
ಜಡಿದು ಹಳಚಿದ ನೊಂದು ಸಿಂಧುರಮಲ್ಲ ರಿಪುಶಿರವ ।
ಮಡೆಮುಱಿದು ಕಿತ್ತಿಟ್ಟು ಡೌಡೆಯು
ಹೊಡೆ ಯೆನಲು ಝುಮ್ಮೆಂದು ಕುಟ್ಟಲು
ನಡುಗಿ ಸಾಯಾಸ್ಥಾನ ಮೇಲ್ ಜನಮೇಜಯಕ್ಷಿತಿಪ ॥ ೪೧

ಮೊಡಹ ಚಪ್ಪರಿಸುತ್ತ ದಬಿದುಬಿ
ಜಡಿವನುಕ್ಕಿನ ಕೊಡಲಿಯನು ಯವ
ಗಡೆಯನಾರೆನುತೆಱಗಿದನು ಸಿಂಧುರನ ಮಸ್ತಕವ ।
ಕೆಡೆದನವ ತತ್ತರಿಸಿ ಬೀೞುತ
ಹೊಡಕರಿಸಿಕೊಂಡಿವನ ಶಿರವನು
ಮಡದಲೆಱಗಲು ಸಿಡಿದುವಾಲಿಗಳವನಿಗೊಱಗಿದನು ॥ ೪೨

ಎದ್ದನವ ಬೊಬ್ಬಿಱಿದು ಸಿಂಧುರ
ಗೆದ್ದಗರ್ವವನುಗುಡೆನುತಲು
ಬ್ಬಿದ್ದು ಹೊಕ್ಕನು ತೋಳ ತೆಕ್ಕೆಯ ಮಲ್ಲ ಹೋಲಿಕೆಗೆ ।
ಭದ್ರಗಜ ಕಯ್ಯಿಕ್ಕಿದವೊಲುರಿ
ದೆದ್ದು ಸಿಂಧುರ ತರಹರಿಸಿ ಮೇ
ಲೆದ್ದು ಬರಸೆಳದೊದೆದು ಕುಸಿದೆತ್ತಿದನು ಮುಷ್ಟಿಯಲಿ ॥ ೪೩

ಎಱಗಿದನು ತಲೆಬಿರಿಯಲಾಮು
ಕ್ಕುಱುಕಿ ಶೋಣಿತಧಾರೆ ಬಾಯಿಂ
ದೊಱತೆ ಯಿಡೆ ಮೈಮುಱಿದು ತುಂಬುರ ಕಳನ ಮಧ್ಯದಲಿ ।
ಬಱಗಿದನು ಕಂಡುಱಿದ ಮಲ್ಲರ
ಧುರಕೆ ಮಿಸುಕದೆ ಮುಸುಕದಲೆಯಲಿ
ಸರಿವವರ ನೃಪ ಕಂಡು ದುಗುಡವ ಹೊತ್ತು ಬೆಱಗಾದ ॥ ೪೪

ಅವನಿಪತಿ ಕೇಳುೞಿದ ಮಲ್ಲರ
ಹವಣಱಿದು ಸಿಂಧುರನು ತನ್ನೊಳು
ಬವರವನು ಜಯಿಸುವರು ತಾವ್ ಬೇಗದಲಿ ಬರಲೆಂದು ।
ಕವಿದು ಹಳಚಲು ಜೋಡಿಸಲು ಯವ
ನಿವಿಷದಲಿ ಯನಿಬರನು ಬೞಿಕಾ
ಜವಳಿಯಿಂದಪ್ಪಳಿಸಿದನು ಕಂಡರಸ ಮೋಹಿಸಿದ ॥ ೪೫

ವಿರಾಟನು ತನ್ನ ದೇಶದ ಮಲ್ಲರು ಸಾಯಲು ಯುದ್ಧವನ್ನು ನಿಲ್ಲಿಸಿದುದು.

ಧುರವ ಜಯಿಸಿದಿರಿಂದು ಯುದ್ಧಕೆ
ಕರೆಸುವೆನು ಸಾಕೆನುತ ಮೆರಕ
ಪುರದ ವೀಳೆಯವಿತ್ತು ನೃಪ ಬೀಳ್ಕೊಟ್ಟನನಿಬರನು ।
ಅರಸ ಮರುಳೈ ಮನ್ನಿಸಿದೆ ಸಂ
ಗರಕೆ ನೇಮವನಿತ್ತೆ ಯಕಟಾ
ಮುರಿಯ ನೂಕಿದೆ ಮುೞಿದಮಲ್ಲರನೆಂದನಾ ಕಂಕ [1] ॥ ೪೬

ಆಗ ಕಂಕಮುನಿ ವಲಲನನ್ನು ಮಲ್ಲಯುದ್ಧಕ್ಕೆ ಕರೆಸೆಂದು ಹೇಳಿದುದು.

ಬವರವನು ಮನ್ನಿಸಲು ಬೇಕೆಂ
ದವನಿಪತಿ ನೆಱೆ ನುಡಿಯೆ ಮಲ್ಲರ
ನಿವಹ ಮೃತಹುದೆಂದು ನೇಮವನಿತ್ತುದೊಳಿತಾಯ್ತು !
ಅವನಿಸುರವೇಷದಲಿ ರಂಜಿಪ
ದಿವಿಜನರಪತಿಯಂತೆ ಧರ್ಮಜ
ವಿವರಿಸಲು ಕೇಳಿದನು ಜನಮೇಜಯ ಮಹೀಪಾಲ [2] ॥ ೪೭

---

1 ಮರಣ ಮುೞಿದರಿಗಾಯಿತೆಂದನು ನಗುತ ಕಂಕಮುನಿ, ಚ.

2 ಅವರು ಬಂದರು ನಾಳೆಮಾಡುವ
ಹವಣದಾವುದು ಬಿಟ್ಟುಕಳೆ ಹೇ
ಯವನು ನಿನಗಿನ್ನೊಮ್ಮೆ ಗೆಲುಗೈಯಹ ಮನೋರಥವ ॥ ಚ.

ಅವನಿಪತಿ ಕೇಳೆನ್ನ ಬಾಣಸಿ
ನವನು ಮಲ್ಲನು ಭೀಮಸೇನನ
ಭವನದಲಿ ಬಲುಮಲ್ಲವಿದ್ಯೆಯ ಸಾಧಿಸಿದನವನು ।
ಪವನಸುತನಿಂ ಬಲುಮೆ ಯೀತನು
ಜವಕೆ ಜವವೊದಗುವನು ನೀನಿಂ
ದಿವಸ ಕರೆಸುವುದೆನಲು ಮತ್ಸ್ಯನೃಪಾಲನಿಂತೆಂದ ॥ ೪೮

ಅದಕ್ಕೆ ರಾಜನ ಅಸಮ್ಮತಿ

ಎಲೆ ಮಹೀಸುರ ಯೀವಿವೇಕವ
ಬಳಸುವೆನೆ ನೀನ[illegible]ಯುದಿದ್ದೊಡೆ
ತಿಳಿದೆನಾನೆಲ್ಲವನು ಸಂಹರಿಸುವನು ಸಿಂಧುರನು ।
ಉಳಿದವರ ಗಣಿಸುವನೆ ತಾ ಹಿಂ
ದುಳಿದವರು ದುರ್ಬಲರೆಂದು ಬಡವನ
ಕೊಲಿಸ ಬಗೆವರೆ ಕಂಕ ನೀ ಹೇಳೆಂದನಾಮತ್ಸ್ಯ ॥ ೪೯

ತಿರುಗಿ ಹೇಳಿ ಮಲ್ಲನನ್ನು ಕರೆಕಳುಹಿಸುವಿಕೆ.

ಬಲ್ಲೆನಾತನ ಕೈಗುಣಕೆ ಸರಿ
ಯಿಲ್ಲ ಸುಭಟರೊಳುಳಿದಸಾಹಸ
ಮಲ್ಲನಿವನೊಳಗಱಿವ ಪವನಜಮಲ್ಲಕೌಶಲವ ।
* ಅಲ್ಲವೆಂದೆನೆ ನೃಪತಿ ತಾ ತ
ಪ್ಪಲ್ಲ ಜಯಿಸಲಿ ಮೇಣು ಸೋಲಲಿ
ಬಲ್ಲೆನಾನಂಜದಿರು ಬೇಗದಿ ಕರೆಸು ನೀನೆಂದ ॥ ೫೦
ನನಗೆ ಕಾರಣವಿಲ್ಲ ಮಡಿದೊಡೆ
ಸಿನಗೆ ಬಹುದಪಕೀರ್ತಿ ಬೇಡೆನೆ

* ಕೊಳ್ಳುಗಳೆಯಲುಬೇಡ ನೃಪವರ
ಕೊಳ್ಳುಗಳೆಯಲು ಮೇಣು ಸೋಲಲಿ
ಬಲ್ಲೆ ನಾನದಕಂಜದಿರು ಕರೆಸೆಂದನಾಕಂಕ ॥ ಕ.

ಯನಿಲಸುತನಿಂ ಬಲ್ಲಿದನು ನೀನವನ ಕರೆಸೆನಲು ।
ತನಗದೇಕೀಪಾದ ನಮ್ಮಯ
ಮನೆಯ ಮಲ್ಲರ ಗೆಲವು ಬಗಲೆಂ
ದನಿಮಿಷದ ದೇಶಾಧಿಪತಿ ಕರೆಸಿದನು ವಲಲನನು ॥ ೫೧

ವಲಲನು ರಾಜನ ಮುಂದೆ ಬಂದು ಮಾತನಾಡಿದುದು.

ಮುಱಿವ ಮೀಸೆಯ ಹೊದಱಿದಲೆ ಕೆಂ
ಪೊಱೆದ ಕಂಗಳ ಹೊಗರುಮೋಱೆಯ
ತುಱುಗಿದುಬ್ಬಿನ ರೋಮಪುಳಕದ ಬಿಗಿದಪುಬ್ಬುಗಳ ।
ಹೊರೆದ ದೇಹದ ನಿರುತ ರೌದ್ರದ
ಮರುತಜನು ಕದನಕ್ಕೆ ಕಾಲನು
ಕೆರೆವವೊಲು ನಡೆತಂದು ನಿಂದನು ಮತ್ಸ್ಯನಿದಿರಿನಲಿ ॥ ೫೨

ಬರವ ಕಾಣುತ ಮತ್ಸ್ಯನೃಪನುಪ
ಚರಿಸಿ ವಲಲಂಗೆಂದನೀ ಸಂ
ಗರವ ಜಯಿಸಿದರೆಮ್ಮ ಮಲ್ಲರು ಉತ್ತರಾಹಿಗಳು ।
ಧುರವ ಬಲ್ಲೈ ಮಲ್ಲವಿದ್ಯೆಯ
ನಱಿತಿಹೈ ನೀನೆಂದು ಮುನಿವರ
ನಱುಹೆ ಭೂಪನು ಕೇಳ್ದ ನಿನ್ನಂತಸ್ಥವೇನೆಂದು ॥ ೫೩

ಎನಲು ಕಿಱುನಗೆ ಮಿನುಗೆ ಮುಖದಲಿ
ಯನಿಲಜನು ಮಗುಪೆಂದನೇತಕೆ
ಜನಪ ಚಿಂತಿಪೆ ಸತ್ತೊಡೆನಗದು ರಾಜಕಾರ್ಯವಲೆ ।
ಅನುವರವ ಜಯಿಸಿದೊಡೆ ನೀವೆಂ
ದನಿತು ಮಲ್ಲರು ವುತ್ತರಾಯಿಗ
ಳನಗೆ ನಿಮ್ಮಯ ಕರುಣ ಸಾಕೆಂದನಿಲಜನು ನುಡಿದ ॥ ೫೪

ಪ್ರಾಣದತಿಶಯವೇನು ಮಿಗೆ ಸಂ
ಗ್ರಾಣಿಸುವುದಿನ್ನೊಮ್ಮೆ ನಾನೇ

ಕಾಣೆ ಕಾಣುವೆನವರ ಜೀವದ ನೆಲಕಡೆಯನೆಲ್ಲ ।
ಕ್ಷೋಣಿಪತಿ ಕರೆಸಿದರೆ ಮಲ್ಲ
ಶ್ರೇಣಿ ಬಂದುದು ಧುರವ ಜಯಿಸುವ
ತ್ರಾಣಿಗನ ಕರೆಸೆನುತಲಿದ್ದರು ರಾಜಸಭೆಯೊಳಗೆ [1] ॥ ೫೫

ಮಲ್ಲವಲಲರ ವಿವಾದ.

* ದಿಟ್ಟನಹೆ ಬಾಣಸಿನ ಮನೆಯಲಿ
ಕಟ್ಟಳಿಲ್ಲದ ಕೂಳ ತಿಂದುಱೆ
ಹೊಟ್ಟೆಯನು ನೆಱೆ ಬೆಳಸಿ ದೇಹದಲುಬ್ಬಿ ಗೊಬ್ಬಿನಲಿ ।
ಹೊಟ್ಟುಗುಟ್ಟದೊಡಾಗಲೆದೆ ಜಗ
ಜಟ್ಟಿಗಳ ಕೂಡಕಟ ಮಝು ರೇ
ಬಿಟ್ಟು ಸುಮ್ಮನೆ ಹೋಗು ನಿನಗಳವಿಲ್ಲ ಹೋಗೆಂದ ॥ ೫೬

ಆಗಲದಕೇನೆಮ್ಮ ಸಮರೋ
ದ್ಯೋಗವನು ನಾವ್ ಮಾಪ್ಪೆವದನಿಂ
ನೀಗ ನೋಡಿದ ಮೇಲೆ ಗಹಗಹಿಸುವುದು ನೀತಿಯೆಲ ।
ಮೇಗರೆಯದುಬ್ಬಿನಲಿ ನಕ್ಕರೆ
ಹೋಗಿ ಬಿಡುವೆನೆ ಸೋಲಿಸದೆ ಹೋಱ
ಸಾಗುವೆನೆ ಯೆನ್ನೊಡನೆ ಸೆಣಸೆಂದನಿಲಜನು ನುಡಿದ ॥ ೫೭

---

1 ಶ್ರೇಣಿಯನು ಕರೆಸಿದನು ಮಲ್ಲರ । ಕಾಣದಾಸಿಂಧೂರನಿಂತೆಂದನು ನರಾಧಿಪಗೆ ॥ ಚ.

* 55-56 ಪದ್ಯಗಳ ಮಧ್ಯದಲ್ಲಿ ಚ. ಪುಸ್ತಕದಲ್ಲಿ ಮುಂದೆ ಬರೆದಿರುವಪದ್ಯ ವಿದೆ.

ನರಪತಿಯೆ ಚಿತ್ತೈಸು ನಿನ್ನೆಯ
ಪರಿಯ ಮಾಡದೆ ಸತ್ವವಂತರ
ಕರೆಸೆನಲು ಪವನಜನ ತೋಱಿದರೊಡನೆ ಗಹಗಹಿಸಿ ।
ತಿರುಕುಳಿಗನಿವನೆಂದರದಟು
ಪ್ಪರಿಸಿ ಪುಟ ನೆಗೆದೆದ್ದು ತಿವಿಯಲು
ಮೆಱೆದು ಕೊನರುವ ಕೋಪದಿಂ ತಾ ಮುಸಗಿ ಬೊಬ್ಬಿಟ್ಟ ॥ ಕ.

ಎಲವೊ ಬಾಣಸಿ ಯೆನ್ನೊಡನೆ ಹೆ
ಕ್ಕಳಿಸಿ ಸಮರವ ತೊಡಕಿದರೆ ನಿ
ಟ್ಟೆಲುವ ಮುಱಿವೆನು ಯೆನುತ ಸಿಂಧುರ ಗಾಢಗರ್ವದಲಿ ।
ಹಳಚಿದನು ಖತಿ ಯೇಱಿ ಬಾಹ
ಪ್ಪಳಿಸಿ ತಿವಿಯಲು ಭೀಮ ನಗುತದ
ಕಳುಕದಿರೆ ಭೀತಿಯಲಿ ಸಿಂಧುರ ಹೊಕ್ಕನುರವಣಿಸಿ ॥ ೫೮

ಸಿಂಧುರ ಮತ್ತು ಪಿಂಗಳನ ಪರಾಜಯ.

ಎಱಗಿದಗೆ ಕರಘಾತದುರುಬೆಯ
ಪರಿಹರಿಸಿ ನಿಮಿಷದಲಿ ಮಲ್ಲನ
ಬರಸೆಳೆದು ಬಿಗಿಯಪ್ಪಿ ಹೊಕ್ಕಿಱಿದವನಿಯಲಿ ಕೆಡಹಿ [1] ।
ನಿಱಿನಿಟಲುನಿಟಲೆಂದು ನಿಟ್ಟೆಲು
ಮುಱಿಯೆ ಶೋಣಿತವಾರಿ ಬಾಯಿಂ
ದೊಱತೆ ಯಿಡೆ ಸಿಂಧುರನು ಮಲಗಿದ ಸಭೆಯ ಮಧ್ಯದಲಿ ॥ ೫೯

ಎದ್ದನಾಗಜಸಿಂಗ ಬಾಣಸಿ
ದೊದ್ದೆಗೂಳನ ವೈಸಿರಿಯ ಬಲು
ಬಿದ್ದ ನಿಕ್ಕುವ ಭೂತಪವಮಾನಜನ ಕಿಬ್ಬರಿಯ ।
ಗುದ್ದಿದರೆ ಕಲಿಭೀಮನದಕು
ಬ್ಬೆದ್ದು ಗೋಣನು ತಿರುಹಿ ಬಸುರೊಳ
ಗದ್ದಯಿಸಿಯುರೆದರೆದು ಕಾಲಲಿ ತಿಕ್ಕಿದನು ಭೀಮ ॥ ೬೦

ಖತಿಯೊಳುರಿ ದೆಗೆದೆದ್ದು ಪಿಂಗಳ
ನತಿಶಯದ ಕುಶಲದಲಿ ಕಲಿಭೂ
ಪತಿಯ ಚಿತ್ತೈಸೆನುತ ಹೊಕ್ಕನು ತೋಳ ತೆಕ್ಕೆಯಲಿ ।

---

[1] ಧರಿಸಿ ನಿಮಿಷದಿ ಸಿಂಧುರನ ಸರ
ಸರನೆ ಬಿಗಿಯಪ್ಪಿದನು ಕುಕ್ಕರಿಸಿದನು ಭೂಮಿಯಲಿ ॥ ಚ.

ಧೃತಿಗೆಡದೆ ಹೋರಿದರು ಸಾಧಕ
ದತಿಶಯದ ಬಲುಹಿನಲಿ ಜಾಣರು
ಮತಿಗೆ ಗೋಚರವಲ್ಲ ಭೀಮನ ಬಲವ ಬಣ್ಣಿಪೊಡೆ [1] ॥ ೬೧

ಕಂಡು ಪವನಜ ತುಡುಕಿ ಮಿಗೆ ಮುಂ
ಕೊಂಡು ನೆಲಕಪ್ಪಳಿಸೆ ಮೆಲ್ಲನೆ
ದೊಂಡೆಗರುಳುಱೆ ಸೂಸೆ ಚೆಲ್ಲಿತು ರಾಜಸಭೆಯೊಳಗೆ ।
ಖಂಡಮಿದುಳಿನ ಹೊನಲಿನಲಿ ಕಡಿ
ಖಂಡಶೋಣಿತವಾರಿಯೊಳು ಮಿಗೆ
ದಿಂಡುಗೆಡದೊಱಗಿದನು ಪಿಂಗಳ ಸಭೆಯ ಮಧ್ಯದಲಿ ॥ ೬೨

ಎಲೆಲೆ ಬಾಣಸಿ ತತ್ತಹೊತ್ತಿನ
ಚಲವೆ ಮರಳಿಚಬೇಕು ಮಲ್ಲನ
ಗೆಲಿದು ಕೊಡು ಹರುಷಾಮೃತವನೆನ್ನಾತನೀನಿಂದು ।
ಗೆಲವು ಬಲ್ಲರೆ ಹೋರು ನೀನೆನ
ಲಲಘುಬಲ ನಸುನಗುತ ಭೂಪತಿ
ತಿಲಕ ನೋಡೆಂದೆನುತ ಹಿಡಿದನು ಯುದ್ಧರಂಗದಲಿ ॥ ೬೩

ಭೀಮ ಜೀಮೂತರ ಹೋರುವಿಕೆ.

ಧಿಟ್ಟನಹೆ ಬಾಣಸಿಗ ಸಮಿಯೊಳ
ಗಟ್ಟಕೂಳನ ತಿಂದು ದೇಹದೊ
ಳಟ್ಟಿಯಲಿ ಸಿರಮಿರಲಹಂಕಾರದಲಿ ನೀನೆಂದು ।
ಧಟ್ಟಿಸುತ ಜೀಮೂತಮಲ್ಲನು
ಕಟ್ಟಳವಿ ಕೈದುವುದೆನುತ ಕೂ
ಗಿಟ್ಟು ಹೊಕ್ಕನು ತೋಳ ತೆಕ್ಕೆಯ ಮಲ್ಲಗಾಳಗಕೆ ॥ ೬೪

ಪೈಸರದ ಬಲು ಬಂಧಧಕ್ಕಡ
ವಾಸುಗಿಯ ಮೇಳವದ ಮರಪ

[1] .... ಯುಕ್ತಿಯುಲಿ ಜಾಣಿನ
ಮತಿಮಱೆದು ಮಂಡಿಸಿಯೆ ಮಲ್ಲನು ಯುದ್ಧರಂಗದಲಿ ॥ ಚ.

ಕ್ಷೀಶ ಮಾರುತಿ ಕದನಕ್ಕೈವಡಿಯಿಂದ ಮಿಗಿಲೆನಲು ।
ಈಸು ಹತ್ತಾ ಹತ್ತಿಯುಲಿ ಸಲೆ
ರೋಷದಲಿ ಜೀಮೂತ ಭೀಮನ
ಘಾಸಿಗಳುಕದೆ ತೋಱಿದನು ಬಲು ಮಲ್ಲಬಿನ್ನಣವ [1] ॥ ೬೫

ಅದುರಿತಂಘ್ರಿಗೆ ಭೂಮಿ ದಿಕ್ಕರಿ
ಯೊದಱಿತಹಿಪತಿ ಯುಳುಕೆ ಕೂರ್ಮನು
ಬೆದಱಿ ಬಿದ್ದನು ಭೀಮ ಜೀಮೂತಕರ ಪದಹತಿಗೆ ।
ಹೆದಱಿ ಚಲಿಸಿತು ರಾಜಸಭೆ ನೆಱೆ
ಹದುಳವುದೆ ಪುರಜನವು ಹೇಪೆನೆ
ಪದಹತಿಯೊಳದುಭುತವ ತೋಱಿದುದಾಮಹಾಸಭೆಗೆ [2] ॥ ೬೬

ಒದಱಿಸಿದೊಡಿತ್ತಂಡಬಾಹುವ
ಬೆದಱಿತಮರವ್ರಾತ ಶಬ್ದಕೆ
ಕದಡಿತಗ್ಗದ ಕಡಲು ಭೂಮಿಯು ಹೊತ್ತ ದಂತಿಗಳು ।
ಮದವಡಗಿ ಶಿರ ನೊಂದು ಧರಣಿಯ
ನಡುಗಿಸಿದರೇನೆಂಬೆನಿಬ್ಬರ
ಸದಹತಿಗೆ ನೆಲನಿಳಿದುದತಳಕೆ ಭೂಪ ಕೇಳೆಂದ ॥ ೬೭

ಅದುಭುತದ ಬವರಿಯುಲಿ ಭೀಮನು
ಮದದ ಮಲ್ಲರ ಮುಂದೆ ನಿಂತುಱೆ
ಯೆದೆಯ ಬಾರಿಸಿಕೊಳುತಲೊದಱಿದನಾಗ ಜೀಮೂತ ।
ವದನಗಳನೌಡೊತ್ತಿ ಕರಗಳ
ನಧಿಕಸುಭಟರು ತೀಡಿ ದಿಕ್ಕುಗ
ಳೊದಱೆ ಭುಜ ಹೊಯ್ದುತ್ತ ನಿಂತರಗಾಧಬಲಭಟರು ॥ ೬೮

---

1 ಮಾಸೆಯುಲಿ ಸಭೆ ಬೆದಱಿ ನಿಂದುದು ನೃಪತಿ ನೃಪರಿರಲು, ಚ.

2 ಕದನಗಲಿಗಳು ತಿವಿವಸೂನುಗಳಿಂದ ಭಯುವಾಯ್ತು, ಚ.

ತೋಳುಗಳ ಹಿಡಿದೆಳೆಯೆ ಭೀಮನು
ಕಾಲುಕಾಲುಗಳಿಂದ ಘಟ್ಟಿಸೆ
ಬೀಳುತೇಳುತ ಹೋರುತಿದ್ದರು ಅಸಮಪಟುಭಟರು ।
ಕೇಳುತಿರ್ದರು ಮಲ್ಲರಿಬ್ಬರ
ಏಟಿಗೆಯು ಕದನವನು ಕಾಣುತ
ಕಾಲನಂದನನಾಗ ಬೆದಱಿದನಧಿಕಚಿಂತೆಯಲಿ ॥ ೧೯

ಒತ್ತಿದರೆ ನೆಲನೊಡನೆ ಧಡಧಡಿ
ಸಿತ್ತು ಸುಭಟರ ಪದದ ಘಾತಿಗೆ
ಯೊತ್ತಿದನು ಕಲಿಭೀಮ ಭೀಮನನೊತ್ತಿ ಜೀಮೂತ ।
ಪೃಥ್ವಿಪತಿ ನೋಡೆಂದು ಚೀಱಲು
ಮತ್ತೆ ಭೀಮನ ಖತಿಗೊಳುತ ಬಲು
ಮತ್ತೆ ಮಲ್ಲನ ತಿವಿದು ಮಿಗೆ ಬೊಬ್ಬಿಱಿದನಿದಿರಿನಲಿ ॥ ೨೦

ಎದ್ದು ವಾಘೆಯೊಳೊತ್ತಿ ಭೀಮನ
ಗುದ್ದಿದನು ಲೇಸಾಗಿ ಮಲ್ಲನ
ನದ್ದಿದನು ನೆಲಕಿಕ್ಕಿ ಭೀಮನ ಬಾಹುಸತ್ವದಲಿ ।
ತಿದ್ದಿತಾತನ ದೆಸೆ ಯೆನಲು ಬಿಡಿ
ದೆದ್ದು ಮಲ್ಲನು ಭೀಮನನು ನೆಲ
ಕುದ್ದಿ ಮಂಡಿಯ ಕೊಂಡು ಹೋರಿದನಳುಕೆ ಭೂಪಾಲ ॥ ೨೧

ಎಱಗಿದನು ಪರ್ವತವೆ ಬಱಸಿಡಿ
ಲೆಱಗುವಂತಿರೆ ಭೀಮನೇಳುತ
ಜಱಿದು ಮುಱಿದೊಳಹೊಕ್ಕು ತೆಕ್ಕೆಯೊಳಾಗ ಪಟುಭಟರು ।
ತಱುಬಿ ನಿಂದರದೊರ್ವರೊರ್ವರು
ಮಱೆದು ಮೂರ್ಛಿತರಾದರೆಂಬಂ
ತೆಱಕದಂತಿರೆ ನಿಂದು ಹೋರಿದರಿಬ್ಬರೊಂದಾಗಿ ॥ ೨೨

ಮಡವು ಮೊಳಕ್ಕೆ ಮಂಡೆ ಬಾಹುಗ
ಳೊಡೆದು ಜರ್ಝರರಾಗಿ ರೋಷದಿ
ಬಿಡದೆ ಔಕುಗಳೊತ್ತಿ ಮುಷ್ಟಿಯ ಘಾತಪಾತದಲಿ ।
ತಡವರಿಸುತೇಳುತ್ತ ಬೀಳುತ
ಕೊಡವುತೊಬ್ಬರನೊಬ್ಬರಾಗಲು
ಪೊಡವಿಯಲಿ ಹೋರುತ್ತ ಹೊರಳಿದರರಸ ಪಟುಭಟರು [1] ॥ ೭೩

ಕಡಲು ಕಡಲೊಳು ಹಳಚುವಂತಿರೆ
ಸಿಡಿಲು ಸಿಡಿಲೊಳು ಯೆಱಗುವಂತಿರೆ
ಕಡುಹು ಮಿಗೆ ಜೀಮೂತಭೀಮರ ಹೊಯ್ಲ ಹೋರಟೆಯ ।
ಬಿಡದೆ ನೋಡುತ ನಡುಗಿದುದು ಮಿಯ
ದೆಡೆಯ ನೋಡುವ ನೆರವಿ ಮ್ಯೆಮಱೆ
ದೊಡಲ ಸಂಚದೊಳಿದ್ದುದಲ್ಲಿಯ ಮಡದಿಯರ ನಿವಹ ॥ ೭೪

ಮಲ್ಲ ಗೆದ್ದನು ಯಿಾಕ್ಷಣದಿ ಗೆಲ
ವಿಲ್ಲ ವಲಲನಿಗಾಯ್ತು ಹೋ ಹೋ
ನಿಲ್ಲು ಪಡಿಸಣಿ ಗೆದ್ದನಾಗಲೆ ಗೆದ್ದನಾವಲಲ ।
ಗೆಲ್ಲ ಸೋಲವನಱಿಯದಾಜನ
ವೆಲ್ಲ ಬೆಱಗಾಗಿರಲು ಚೌಪಟ
ಮಲ್ಲರಿದ್ದರು ಮೇರು ಮೇರುವ ಹಳಚುವೆಂದದಲಿ ॥ ೭೫

ಲಾಗಿನಲಿ ಬವರಿಯಲಿ ಬಡಮುಱಿ
ದಾಗಿನಲಿ ತಗರೇಱಿನಲಿ ಮ್ಯೆ
ಲಾಗಿನಲಿ ತೆಕ್ಕೆಯಲಿ ಸವಡಿಯ ಡೆಕ್ಕರಿಕ್ಕೆಯಲಿ ।
ಆಗರುವರಿತ್ತಂಡ ಸಮಬಲ
ರಾಗಿ ಗೆಲುಸೋಲುಗಳ ಬಗೆ ಸಂ
ದೇಹವಾಗಿರೆ ಭೀಮಜೀಮೂತಗಳು ಹಳಚಿದರು ॥ ೭೬

---

1 ಹೊರಳುತ್ತ ಹೋರಿದರರಸ, ಖ,

ಅರರೆ ಸಿಕ್ಕಿದ ವಲಲ ಹೋ ಹೋ
ಅರರೆ ಸೋತನು ಮಲ್ಲನೆಂಬ
ಬ್ಬರವು ಮಸಗಿದರೆ ಭೀಮ ಕೇಳಿದನಧಿಕರೋಷದಲಿ ।
ತಿರುಗಿ ಪೈಸರದಿಂದ ಮಲ್ಲನ
ನೊರಸಿದನು ಮುಷ್ಟಿಯಲಿ ನೆತ್ತಿಯ
ತರತರಿಸೆ ಸಂತವಿಸಿ ತಿವಿದನು ಮಲ್ಲಮಾರುತಿಯ ॥ ೭೭

ಅದ್ದಿದುವು ಬದಿಯೊಳಗೆ ಭೀಮನ
ಗುದ್ದುಗಳು ಜೀಮೂತಮಲ್ಲನ
ನುದ್ದುರುಟು ಬಯಲಾಯ್ತು ಸಂದುದು ಭಾರಿಯಗ್ಗಳಿಕೆ [1] ।
ಹೊದ್ದಿದನು ಭೂಮಿಯಲಿ ಮೈಮುಱಿ
ದೊದ್ದು ಕೊಳುತಲೆ ಚಲಿಸಿ ಕಳನೊಳು
ಬಿದ್ದು ಹೊರಳಲು ಬಂದು ಕುಣಿದನು ಖಳನ ವಕ್ಷದಲಿ । ೭೮

ಜೀಮೂತನ ಸಂಹಾರ.

ಮೆಟ್ಟಿ ಸಜ್ಜಿನೆ ಸೀಳಿ ನೆಲಕಱಿ
ಯಟ್ಟಿ ಹೊಯ್ದನು ಹೊಯ್ದುಭರದಲಿ
ನಿಟ್ಟೆಲುವು ಹುಡಿಯಾಯ್ತು ಕಂಡನು ಮನೆಯೊಳಾಯಮನ ।
ದಿಟ್ಟರಾದರೆ ಕವಿಯೆನಲು ಮತಿ
ಗೆಟ್ಟು ತಮತಮಗೆಲ್ಲ ಭೀಮನ
ಧಟ್ಟಿಸುತ ಮುತ್ತಿದರು ಮಲ್ಲರು ಮುಷ್ಟಿಗಳ ಜಡಿದು ॥ ೭೯

ಅನೇಕ ಮಲ್ಲರನ್ನು ಸಂಹರಿಸಿದುದು.

ಕಂಡು ಪವನಜ ಗಹಗಹಿಸಿ ಮುಂ
ಕೊಂಡು ತುಱಿದನು ಯೆಡಬಲದೊಳಂಱಿ
ಹಿಂಡು ಜಟ್ಟಿಗರಸುವನಜೆಗಿಜೆಯಾಗೆ ಸಭೆಯೊಳಗೆ ।

[1] ಹಾರಿತು ಕುರುಪತಿಯ ಮಂತ್ರ, ಚ.

ದೊಂಡೆಗರುಳೊಡಸೂಸೆ ಸಭೆಯಲಿ
ದಿಂಡುಗೆಡೆದರು ಬಂದ ಮಲ್ಲರು
ಕಂಡರೈ ಭಾನುಜನ ಪಟ್ಟಣಕಂದು ಯೈನೂಱು ॥ ೮೦

ರಾಜನ ಸಂತೋಷ.

ಏನಿದೇನೈ ವಲಲ ನಿನ್ನನ
ದೇನಱಿಯದೆಂದಿದ್ದೆವೈ ಸು
ಮ್ಮಾನದಿಂದಲಿ ನಿಖಿಳಮಲ್ಲರ ಜಯಿಸಿ ಜಯಸಿರಿಯ ।
ಮಾನಿನಿಯ ಕೈವಿಡಿದು ಮಲ್ಲರ
ಸಾನುರಾಗವ ಬಳಸಿಕೊಂಡೆ ಸ
ಮಾನನನು ನಾವ್ ಕಾಣೆವೆಂದೆನುತಾಗ ಮನ್ನಿಸಿದ ॥ ೮೧

ಮೆಚ್ಚಿದನು ಭೂಪಾಲ ವಲಲನ
ಹೆಚ್ಚಿ ಕೊಂಡಾಡಿದನು ಮುನಿಯೊಳ
ಗೆಚ್ಚರಿಸಿದನು ಲೇಸ ಮಾಡಿದೆ ನಿನ್ನ ದೆಸೆಯಿಂದ ।
ಕಿಚ್ಚು ನಂದಿದ ತೆರನವೊಲು ಮಾ
ಯುಚ್ಚವಕೆ ಮಿಗಿಲಾಯ್ತು ಪೂತುಱೆ
ನಿಚ್ಚಟದ ಸಾಹಸಿಕ ನೀನೆಂದುಲಿದನಾಮತ್ಸ್ಯ ॥ ೮೨

ಹರದುದೋಲಗ ಮತ್ಸ್ಯಭೂಪತಿ
ಕರೆಸಿ ಚರರನು ಸಭೆಯನೆಂದಿನ
ಪರಿಯ ಮಾಡೆಂದಿತ್ತು ನೇಮವ ಕಂಕನನು ಕಳುಹಿ ।
ಮರುತಜನ ಬೀಳ್ಕೊಟ್ಟು ಚಿಂತೆಯ
ಪರಿಹರಿಸಿ ಸುಸ್ಥಿತಿಯನೈದಿದ
ನರಸ ಕೇಳೈ ಪಾಂಡವರ ಸಾಹಸವಿದೀಗೆಂದ ॥ ೮೩

ಸಂದುದವರಜ್ಞಾತವಾಸದ
ಬಂಧನಕೆ ದಿನಮೂಱುಮಱಿಯಲು
ಪೊಂದುವರುಷವ ಕೇಳು ಜನಮೇಜಯ ಮಹೀಪಾಲ ।

ಅಂದು ಧರ್ಮಜ ಗುಪ್ತವಾಸದ
ಬಂಧನದ ಬೇಗೆಯನು ಹರಿಸಿಯೆ
ಇಂದು ನಮ್ಮನು ಕಾದನೆಂದನು ವೀರನಾರಯಣ ॥ ೮೪

ಕೌರವೇಂದ್ರನ ಮನೆಯ ಮಲ್ಲರ
ತೋರಹತ್ತರ ಮುಱಿದನದಟ ಸ
ಮೀರಸುತನೆಂದಱಿಕೆ ಯಾಗದೆ ಗೆಲಿದು ಬದುಕಿದರು ।
ವೀರನಾರಾಯಣನ ಕರುಣಾ
ವಾರಿಧಿಯ ಕಾಲುವೆಯ ಭಾಗ್ಯದ
ಚಾರುಶಾಲೀವನದ ವೀರರು ತೊಳಗಿ ಬೆಳಗಿದರು ॥ ೮೫

ನಾಲ್ಕನೆಯ ಸಂಧಿ ಮುಗಿದುದು.

ಐದನೆಯ ಸಂಧಿ.

ಸೂಚನೆ.

ವಿಗ್ರಹಕೆ ಸಮೆತಳಿಸಿ ಕುರುಕುಲ
ದಗ್ರಣಿಯು ಮುಂಕೊಂಡು ದಕ್ಷಿಣ
ಗೋಗ್ರಹಣದಲಿ ಭೀಮ ಹಿಡಿದನು ಕಲಿಸುಶರ್ಮಕನ ॥

ದುರ್ಯೋಧನನ ಚರರು ಪಾಂಡವರು ಎಲ್ಲಿಯೂ ಇಲ್ಲೆಂದು ಹೇಳಿದುದು.

ಕೇಳು ಜನಮೇಜಯ ಧರಿತ್ರೀ
ಪಾಲ ಕೌರವದೂತರವನಿಯ
ಮೇಲೆ ಹೊಕ್ಕಱಸಿದರು ರಿಪುಕುಂತೀಕುಮಾರಕರ [1] ।
ಹೋಲುವೆಯನೊಳಗಾಗಿ ಹಿಡಿಯದೆ [2]

1 ತೊಳಲುತಲಱಸಿ ಕಾಣದೆ ಪಾಂಡುನಂದನರ, ಚ.

2 ಹೋಲುವಿಕೆಯಿಂ ಹಿಡಿಯಲಾರದೆ, ಚ.

ಕಾಲ ಸವೆಯಲು ನಾಲ್ಕು ದಿಕ್ಕಿನ
ಮೂಲೆಯುವರೈತಂದು ಬಿನ್ನೈಸಿದರು ಕುರುಪತಿಗೆ ‖ ೧

ವಿತಳದೊಳು ಹೊಕ್ಕಿರಲಿ ಯಮರಾ
ವತಿಯೊಳಗೆ ಮೇಣಿರಲಿ ನಮ್ಮಾ
ಕ್ಷಿತಿಯೊಳಗೆ ಸುಳುಹಿಲ್ಲ ರಿಪುಕುಂತೀಕುಮಾರಕರ ।
ಮತಿಯು ಹಬ್ಬುಗೆಯಿಂದ ನಾನಾ
ಗತಿಯೊಳಗೆ ಹೊಕ್ಕಅಸಿದೆವು ಭೂ
ಪತಿಯೆ ಕೇಳ್ ನಿರ್ನಾಮವಾದರು ನಿನ್ನ ವೈರಿಗಳು ‖ ೨

ಎನಲು ನಸುನಗೆಯಿಂದ ಮನವಲಿ
ನನಗೆ ಹಗೆಯಿಲ್ಲೆಂದು ದೂತರ
ಮನವೊಲಿದು ಮನ್ನಿಸಿದ ನಾಲುಕುಕಡೆಯ ವಾರ್ತೆಗಳ ।
ತನತನಗೆ ಮಂತ್ರಿಗಳು ಬೆಸಗೊಳ
ಲನಿತು ದೂತರೊಳೊಬ್ಬ ನುಡಿದನು
ವಿನಯದಲಿ ಕೀಚಕನ ಹದನನು ರಾಯನಿದಿರಿನಲಿ ‖ ೩

ಒಬ್ಬ ದೂತನು ಕೀಚಕಾದಿಗಳ ಸಂಹಾರವಾರ್ತೆಯನ್ನು ಹೇಳಿದುದು.

ಬಂದುವಾರ್ತೆಯಲೈ ತ್ರಿಗರ್ತಾ
ನಂದಕರವಿದು ಜೀಯ ಕೀಚಕ
ವೃಂದವನು ಗಂಧರ್ವರಿರುಳೈತಂದು ಖಾತಿಯಲಿ ।
ಕೊಂದು ಹೋದರು ರಾವಣನ ವಿಧಿ
ಯಿಂದು ಕೀಚಕಗಾಯಿತೆನೆ ಕೇ
ಳ್ದೊಂದು ನಿಮಿಷ ಮಹೀಶ ಮೌನವ ಹಿಡಿದು ಬೆಱಗಾದ ‖ ೪

ಹೇಱು ಹೇಱಿನ್ನೊಮ್ಮೆ ಮತ್ಸ್ಯನ
ತೋಳು ಮುಱಿದುದೆ ಸುಭಟರೊಳು ಕ
ಟ್ಟಾಳು ಕೀಚಕ ಮಡಿದನೇ ಗಂಧರ್ವರಿಱಿದವರೆ ।

ಮೇಲಣವರಿಗೆ ಮರ್ತ್ಯರಿಗೆ ಕೈ
ಕಾಲುಮುಟ್ಟನ ತೋಟಿ ಯೇತಕೆ
ಹೋಲದಿದು ಹುಸಿ ಹೋಗೆನುತ ಮುಖದಿರುಹಿದನು ಭೂಪ ॥ ೫

ಅಹುದು ಜೀಯವಧರಿಸು ದಿವಿಜರ
ಮಹಿಳೆ ಯೋಲೈಸಿದಳು ಮತ್ಸ್ಯನ
ಮಹಿಳೆಯನು ಬಳಿಕಾಕೆಯೋಲಗದೊಳಗೆ ಸತಿಯಿರಲು ।
ಕುಹಕಿ ಕಂಡಳುಪಿದರೆ ನಾಟ್ಯದ
ಗೃಹಕೆ ಸೂಚನೆಗೊಟ್ಟು ನಿಮಿಷಕೆ
ರಹವ ಮಾಡಿದರವರು ಸವರಿದರಖಿಳಕೀಚಕರ ॥ ೬

ಅವನಿಪತಿ ಮೂಗಿನಲಿ ಕರಪ
ಲ್ಲವವನಿಟ್ಟನು ತಲೆಯ ತೂಗಿದ
ನವಳು ದ್ರೌಪದಿ ಖಳನ ಕೊಂದವ ಭೀಮ ಗಂಧರ್ವ ।
ದಿವಿಜಸತಿ ಯೆತ್ತಲು ವಿರಾಟನ
ಭವನದೋಲಗವೆತ್ತಲದು ಪಾಂ
ಡವರ ಕೃತ್ರಿಮತಂತ್ರ ಮಱೆಯಿಱಿಗಾಱರವರೆಂದ ॥ ೭

ಪರಿಮಳವ ಕದ್ದೋಡುವನಿಲನ
ಹರಿವ ಹೆಜ್ಜೆಯ ಹತ್ತುವರೆ ಮಧು
ಕರನೆ ಬಲ್ಲದು ಜೀಯ ಬಲ್ಲಿರಿ ನಿಮ್ಮವರ ಪರಿಯ ।
ಹರದ ಮಾತಿನ ಹದನು ತಾನಿದು
ಚರರಿಗದು ಗೋಚರಿಸುವುದೆ ಯೆಂ
ದರಸನನು ಕೊಂಡಾಡಿದರು ಮಂತ್ರಿಗಳು ತಮತಮಗೆ ॥ ೮

ಆಗ ಮತ್ತು ಕೆಲವು ದೂತರು ಬಂದು ಜೀಮೂತನನ್ನು ಸಂಹರಿಸಿ
ದುದನ್ನುತಿಳಿಸಿದುದು.

ದೂತರುಗಳೈತಂದರಾಜೀ
ಮೂತಕೀಚಕರೊಂದೆ ಪಥವೆಂ
ದಾತಗಳು ಬಳಿಕುಸುರೆ ಕೇಳಿದ ಕೌರವರ ರಾಯ ।

ಅದಕ್ಕೆ ಆಪ್ತರನ್ನು ಕರೆಸಿ ಯೋಚಿಸಿದುದು.

ಭೀತನಾದನು ಕರೆಸಿ ಗಂಗಾ
ಜಾತಮೊದಲಾದಖಿಳಸಚಿವರ
ನಾತನೆಂದನು ಕೇಳಿ ದೂತರ ಬಿನ್ನಹದ ಹರುಬ ॥ ೯

ಕೇಳಿದಿರೆ ಜೀಮೂತಮಲ್ಲನ
ಸೀಳಿದಾಕಾರವನು ಕುರುಕುಲ
ಜಾಲ ಕೇಳ್ದರೆ ಯೆನುತ ಹೇಳಿದ ಮಲ್ಲ ಬಿದ್ದುದನು ।
ಲೋಲಪಾಂಡವರಾ ವಿರಾಟನ
ಆಲಯುವನಾಶ್ರಯಿಸಿ ಗುಪ್ತದ
ಬಾಳಿಕೆಯೊಳಿಹರಿದಕೆ ಸೂಚನೆ ಮಲ್ಲಕೀಚಕರು ॥ ೧೦

ಕೊಲೆಯು ಮಾಡಲು ಭೀಮನಲ್ಲದೆ
ಯಿಳೆಯೊಳಾನುವರಿಲ್ಲ ಸುಭಟರ
ಬಲುಹು ನೆಱೆಯದು ಕೀಚಕನ ಜಿಮೂತನಿದಿರಿನಲಿ ।
ನಿಲುವರನು ತಾ ಕಾಣೆ ಕೌರವ
ತಿಲಕ ಭೀಮಾರ್ಜುನರ ಮಿದಿರೊಳು
ನಿಲುವನಾರೈ ಕರೆಸಿ ಬದುಕುವುದೆಂದನಾಭೀಷ್ಮ ॥ ೧೧

ಬಳಿಕ ಧರಣಿಯು ಮೇಲೆ ನಿನ್ನೊಳು
ಮಲೆವ ರಾಯರ ಕಾಣೆ ಕರ್ಣನ
ಹುಳುಕುಬುದ್ಧಿಯು ಕೇಳಿ ನಿನ್ನಯು ಕುಲವನದ್ದಿರು ।
ಬಲುಹ ನೆಚ್ಚದಿರೆಮ್ಮ ದ್ರೋಣನ
ತಲೆಯು ತಱಿವನು ಪಾರ್ಥ ಮುಳಿದರೆ
ಕಳವಳಿಗರೀಕರ್ಣಶಕುನಿಜಯದ್ರಥಾದಿಗಳು ॥ ೧೨

ಕರ್ಣನ ಮಾತಿನಂತೆ ದುರ್ಯೋಧನನ ಪ್ರತಿಜ್ಞೆ.

ಎನಲು ಕರ್ಣನು ಬಳಿಕ ನುಡಿದನು
ಜನಪತಿಯೆ ಕೇಳೇನು ಪಾರ್ಥನ
ನನುವರದಿ ಕೈಕೊಂಬೆನೇ ಗೆಲುವೆನು ತ್ರಿಯಂಬಕನ ।

ಎನಲು ಹರುಷಿತನಾಗಿ ಕೌರವ
ಜನಪ ನುಡಿದನು ಕರ್ಣನಿರೆ ಯಿಾ
ಬಿನುಗುಪಾಂಡವರೆನಗೆ ಗಹನವೆ ಕರೆಸೆನವರುಗಳ ॥ ೧೩

ವಿದುರನು ಹಿತವನ್ನು ಹೇಳಿದುದು.

ಕೇಳು ಕೌರವರಾಯ ಪಾಂಡವ
ರೊಟಗವ ನೀನಱಿಯೆ ಭೀಮನ
ತೋಳ ಬಲುಹಿಂಗೆ ನಿಲುವನಾರ್ಯೆ ದೇವದೈತ್ಯರಲಿ ।
ಬಾಟಕೆಯ ನೀನೊಲ್ಲೆ ಭೀಷ್ಮರು
ಹೇಟಿದನು ಕೈಕೊಳ್ಳ ನೀತಿಯ
ನೇಳದವ ಮಾಡುವನೆ ಜನಪತಿ ಯೆಂದನಾವಿದುರ ॥ [1] ೧೪

ತಾಮಸರ ನುಡಿಗೇಳಿ ಜೂಜಿನ
ಸೀಮೆಯೆಂಬುದ ನೆಗಟಿ ಸತ್ಯದ
ಭೂಮಿಯನು ನೆಱೆ ಕೊಂಡೆ ಮತ್ಸ್ಯನ ಗೋವಿಗೆಳಸದಿರು ।
ಸೋಮಧರನಿದಿರಲ್ಲ ಭೂಪತಿ
ಭೀಮನೆದ್ದರೆ ನಿಮ್ಮ ಕಂಡವ
ಕಾಮಿನಿಯ ಮುಡಿಗಿಕ್ಕಿ ಮುಡಿಸುವ ಹೋಗಬೇಡೆಂದ ॥ ೧೫

ಗೋಗ್ರಹಣದ ಯೋಚನೆ.

ಪೌ್ರಢಿಯಲ್ಲಿದ ಕೇಳ ಬಲ್ಲೆನು
ರೂಢಿಯಲಿ ಸಮಬಳರು ಭೀಮ ಸ
ಗಾಢದಲಿ ಬಲಭದ್ರಕೀಚಕಶಲ್ಯರೆಂಬವರು ।
ಗೂಢರನು ಗರುವಾಯಿಗೆಡಿಸಿ ಸ
ಗಾಢಿಕೆಯ ನೆಱೆ ಮೆಱೆಯ ಬೇಹುದು
ರೂಢಿ ಸಮತಳಿಸಿತ್ತು ಸೇನೆಯ ನೆರಹಬೇಕೆಂದ ॥ ೧೬

---

1 ಯೆಂದನು ಸಂಜಯನು ಬಟಿಕ, ಖ.

ಅರಿವಿರಾಟನ ಪುರಕೆ ಹಾಯಿದು
ತುಱುಸೆಱೆಯ ವಿಡಿಸಿದರೆ ಪಾಂಡವ
ರಿರರು ಧರ್ಮದ ಮೇರೆ ಮರ್ಯಾದೆಗಳ ಬಲ್ಲವರು |
ಅರಿಬಲವನಂಘೈಸುವರು ನಾ
ವೞಿದುಕೊಂಬೆವು ಬೞಿಕ ವನದಲಿ
ವರುಷಹದಿಮೂಱಿಕ್ಕೆ ಕೊಡುವೆವು ಮತ್ತೆ ವೀಳಯವ || ೧೭

ಅದಕ್ಕೆ ಕರ್ಣಾದಿಗಳ ಅನುಮತಿ.

ಒಳ್ಳಿತಿದು ನಿರ್ದಿಷ್ಟನಯ ನ[1]
ಮ್ಮೆಲ್ಲರ[2] ಭಿಮತವಹುದು ರಿಪುಗಳ
ಖುಲ್ಲವಿದ್ಯೆಯನಱಿವುಪಾಯಕೆ ಬೇಱೆ ಮತವಿಲ್ಲ !
ಅಲ್ಲಿ ಪಾಂಡವರಿಹರು ಸಂಶಯ
ವಿಲ್ಲ ದೇಶದ ಸೊಂಪು ಸಿರಿ ಮ
ತ್ತೆಲ್ಲಿಯೂ ಹಿರಿದಿಲ್ಲ ನಿಶ್ಚಯವೆಂದನಾಕರ್ಣ || ೧೮

ಗುರುವಿಗಭಿಮತವಹೊಡೆ ಕೃಪ ಮುಖ
ದಿರುಹದಿದ್ದೊಡೆ ಭೀಷ್ಮ ಮನದಲಿ
ಮುಱಿಯದಿರ್ದೊಡೆ ಗುರುಕುಮಾರನ ಮತಿಗೆ ಸೇರುವೊಡೆ |
ವರಶಕುನಿಯಹುದೆಂದೊಡೀಸೋ
ದರರು ತಪ್ಪಲ್ಲೆಂದರಾದೊಡೆ
ಅರಸ ನೆಗಬ್ದುದೆ ಮಂತ್ರವೆಂದು ಸುಶರ್ಮ ಹೊಗೞಿದನು || ೧೯

ಮತವಹುದು ತಪ್ಪಲ್ಲ ಪಾಂಡವ
ಗತಿಯನಱಿವೊಡೆ ಮಾರ್ಗವಿದು ಸ
ಮ್ಮತವು ನಿರ್ಮಲನೀತಿಕಾಱಱ ಮತಿಗೆ ಮನೆಯಹುದು |
ಅತಿಗಳೆತವಾಯ್ತವಧಿ ದಿವಸ
ಸ್ಥಿತಿಗಳೈದಾಱಾಗಿ ಬರಲಾ
ಕ್ಷಿತಿಗೆ ಪಾಂಡವರುತ್ತರಾಯಿಗಳೆಂದನಾಭೀಷ್ಮ || ೨೦

1 ನಿರ್ದೋಷನಿರ್ಣಯ, ಚ. 2 ವೆಲ್ಲರ, ಚ.

ಪರಿಗಣಿಸಿ ನೋಡಿದರೆ ಮಾಡಿದ
ಪೌರುಷ ವಿಧಿಯಲಿ ಹೆಚ್ಚುಕುಂದುಂ
ಟುರವಣಿಸಿ ಮಾಡುವುದು ನೆಗಳಿದ ರಾಜಕಾರಿಯವ।
ಅಱಿಯಲೇ ಬೇಕಾವ ಪರಿಯಲಿ
ಅಱಿದೆವಾದರೆ ಯುತ್ತರೋತ್ತರ
ಧರಣಿ ಕುರಪತಿಗೆಂದರಾದ್ರೋಣಾದಿನಾಯಕರು ॥ ೨೧

ಸೇನೆ ಹೊರಡುವುದಕ್ಕೆ ದುರ್ಯೋಧನನ ಅಪ್ಪಣೆ.

ಬೀಡು ನಡೆಯಲಿ ಮುಂದೆ ಮತ್ಸ್ಯನ
ನಾಡೊಳಗೆ ಕಟಕದಲಿ ದೂತರು
ಕೂಡೆ ಸಾರಲಿ ಕರೆಯಲಕ್ಷೋಹಿಣಿಯ ನಾಯಕರ।
ಜೋಡಿಸಲಿ ಗುಡಿಗಟ್ಟಿ [1] ಪೆಂಡೆಯ
ಗೂಡಿ ಕೊಟ್ಟಿಗೆ ಭಂಡಿ ನೆಱೆಯಲಿ
ನಾಡ ಬಿಟ್ಟಿಗಳೆಂದು ಕೌರವರಾಯ ನೇಮಿಸಿದ ॥ ೨೨

ಆಗ ಬಂದ ಬ್ರಾಹ್ಮಣರು ಮತ್ತು ಪರಮಣ್ಡಲಿಕರ ಸನ್ಮಾನ.

ಮೇಲೆ ರವಿ ತೋಱಿದನು ಮೂಡಣ
ದೇಟಿಗೆಯಿ ಹೊಱವಂಟು ಕೌರವ
ನಾಲಯವ ತುಂಬಿದುದು ಭೂಸುರವಿತತಿ ಸಂದಣಿಸಿ।
ಏಱಿಲಕ್ಷತುರಂಗ ಮೌಕ್ತಿಕ
ಥಾಳ ಮಕುಟದ ಕಯ್ಯ ದರ್ಭೆಯ
ಮೇಲುಗುಲದವರೈದಿದರು ಭೂಪಾಲ ಕೇಳೆಂದ ॥ ೨೩

ಕುರುಕುಲೇಶ್ವರ ಬಂದು ವಿಪ್ರರ
ಚರಣಕೆಱಗಿದ ನಿಂದು ಕರಗಳ
ಸೆಱಗನೊಡ್ಡಿದ ವೇದಮಂತ್ರದ ಪುಣ್ಯದಕ್ಷತೆಯ।

---

[1] ಗುಡ್ಡಿಡಿದ, ಚ.

ಶಿರವ ಬಾಗಿಸಿ ತುಂಬಿಕೊಂಡನು
ವರಸುಹಸ್ತನು ಧರಣಿದೇವರ
ಕರವ ತುಂಬಿದ ಹೇಮವಿತ್ತವನಿತ್ತು ಬೀಳಯುವ ॥ ೨೪

ಎಸೆವ ವಿಪ್ರರ ಕಳುಹಿ ಪೀಠದೊ
ಳೊಸೆದು ತಾ ಕುಳಿತಾಗ ಕರೆಸಿದ
ವಸುಮತೀಶರ ಮಕುಟವರ್ಧನಮಂಡಲೀಕರನು ।
ಉಸುರಿ ಕಾರ್ಯವ ಪಾಂಡುನಂದನ
ರೆಸಗಿ ಯಿಳೆಯನು ಸೇಱಿದಂದದ
ಹಸನ ನೆನೆದೆನು ಯೆಂದು ಹೊಱವಂಟರಸ ನಡೆತಂದ ॥ ೨೫

ಹರಿದುದೋಲಗ ಮಱುದಿವಸ ಗುಡಿ
ಹೊಱಗೆ ಹೊಯ್ದುವು ಸನ್ಮುಹೂರ್ತದೊ
ಳರಸ ಹೊಱವಂಟನು ಸುಶರ್ಮಾದಿಗಳ ಗಡಣದಲಿ ।
ಸುರನದೀಸುತಕರ್ಣಕೃಪಗುರು
ಗುರುಸುತಾದಿಮಹಾಪ್ರಧಾನರು
ಕರಿತುರಗರಥಪತ್ತಿಯಲಿ ಹೊಱವಂಟರೊಗ್ಗಿನಲಿ ॥ ೨೬

ಮೋಹರವ ಮೇಳೈಸಿದನು ನಿ
ರ್ವಾಹವನು ನಿಶ್ಚೈಸಿದನು ಮ
ತ್ತೂಹೆಕಾಱಱ ಮನವ ಸೋದಿಸಿಕೊಂಡು ತುಱುಗೊಂಬ ।
ಸಾಹಸರನಟ್ಟಿದನು ವೈರಿಗ
ಳಾಹವಕೆ ನೆಲನಗಲದಲಿ ಬಲ
ಮೋಹಿಸಿತು ನೆರಸಿದನು ಬಹಳಕ್ಷೋಹಿಣೀಬಲವ ॥ ೨೭

ಕರಿಗಳಿಗೆ ಗುಳ ಬೀಸಿದುವು ವರ
ತುರಗ ಹಲ್ಲಣಿಸಿದುವು ತೇಜಿಯ
ತರಿಸಿ ರಥವನು ಹೂಡಿ ಕೈದುವ ಸೆಳೆದು ಕಾಲಾಳು ।

ಅರಸನಿದಿರಲಿ ಮೋಹಿದುದು ಸೀ
ಗುರಿಯ ಸಬಳದ ಸಾಲಿನೊಳಗಂ
ಬರವ ಮುಸುಕಿತು ಧರಣಿ ನೆಗ್ಗಿತು ನೆಱೆದುದಕ್ಷೋಹಿಣಿ ॥ ೧೮
ಸೆಳವ ಸಿಂಧದ ಕವಿವ ಹೀಲಿಯ
ತಳಿತ ತೋಮರ ಚಮರಡೊಂಕಣಿ
ಗಳ ವಿಡಾಯದಲಮಮ ಕೆತ್ತುದು ಗಗನಮಾರ್ಗದಲಿ [1] ।
ಸುೞಿಯಲನಿಲಂಗಿಲ್ಲ ಪಥ ಕೈ
ದೊಳಸಬಾರದು ರವಿಗೆ ನೆಲನೀ
ದೞವನಾನುವೊಡರಿದೆನಲು ಜೋಡಿಸಿತು ಕುರುಸೇನೆ ॥ ೧೯

ಬಳಿಕ ದುರ್ಯೋಧನನು ಹೊರಟುದು.

ಆರತಿಯನೆತ್ತಿದರು ಬೞಿಕ
ಪ್ಪಾರತಿಯ ಸೂಸಿದರು ಘನಮದ [2]
ವಾರಣದ ಗದ್ದುಗೆಯೊಳಗೆ ಕುರುರಾಯ [3] ಕುಳ್ಳಿರಲು ।
ಸಾರಿದರು ಭಟ್ಟರು ಕುರುಕ್ಷಿತಿ
ಧಾರುಣೀಶನ ಬಿರುದು ಮಿಗೆ ಕೈ
ವಾರಿಸುವ ಜಯರವದೊಡನೆ ನಿಸ್ಸಾಳ ಸೂಳವಿಸೆ ॥ ೨೦

ಹೊಗುದುದಂಬರವವನಿ ನಡುಗಿತು
ಗಗನಮಂಡಲ ಪರಿವಿಡಿಯ ತಾ
ರೆಗಳು ಸೂಸಿತು ಸುರಿದುವರುಣಾಂಬುವಿನ ಧಾರೆಗಳು ।
ದಿಗುವಳಯದಲಿ ಧೂಮಕೇತುಗ
ಳೊಗೆದುವದುಭುತಭೂತಕೋಟಿಗ
ಳಗಲದಲಿ ಕಾಣಿಸಲು ಹಸ್ತಿನಾಪುರವ ಹೊಱವಂಟ ॥ ೨೧

ರಾಯದಱ ನಡೆತಂದುದೊಗ್ಗಿನ
ನಾಯಕರು ಮನ್ನೆಯರು ರಾಜಪ

---

1 ವಳ್ಳಿಱಿಯ, ಚ,   2 ರಥ, ಚ,
3 ದೋರಣದ ಮಧ್ಯದಲಿ ಕೌರವರಾಯ, ಚ.

ಸಾಯಿತರು ಸಂರಂಭಸಂವರಣೆಯಲಿ ನಡೆಗೊಳಲು ।
ತಾಯಿ ಮೞಲುಪ್ಪರಿಸೆ ಜಲನಿಧಿ
ಬಾಯ ಬಿಡೆ ಗರ್ಜಿಸುವ ನಿಸ್ಸಾ
ಳಾಯುತದ ಸೂಷೊದಗಿದುವು ಪಯಣದ ಪವಾಡಿಯಲಿ [1] ॥ ೨೧

ಪಳಹರದ ಪಲ್ಲವದ ಪಸರದ
ಘಳಿಯ ಪಟ್ಟಿಯ ತೋಮರದ ಹೊಳೆ
ಹೊಳೆವ ಚಮರದ ಸೀಗುರಿಯ ಡೊಂಕಣಿಯ ತಿಂಥಿಣಿಯ ।
ಬೆಳುಗೊಡೆಯ ಝಲ್ಲರಿಯ ಝಾಡಿ
ಗಳೊಳಗೆ ಗಗನವು ತೀವಿತೆನೆ ಹೆ
ಕ್ಕಳಿಸಿ ನಡೆದುದು ಸೇನೆ ಪಯಣದ ಮೇಲೆ ಪಯಣದಲಿ ॥ ೨೨

ಪೊಡವಿ ಜಡಿದುದು ಫಣಿಯ ಹೆಡೆಗಳು
ಮಡಿದುವಾಶಾದಂತಿಗಳು ತಲೆ
ಗೊಡಹಿದುವು ಬಲದೊಳಗೆ ಮೊಱಗುವ ಲಗ್ಗೆವರೆಗಳಗೆ ।
ಕಡಲು ಮೊಗೆದುದು ರತುನವನು ನೆಲ
ನೊಡೆಯಲಗ್ಗದ ಸೇನೆ ವಹಿಲದಿ
ನಡೆದು ಬರಲಾಧೂಳು ತುಂಬಿತು ರವಿಯ ಮಂಡಲವ ॥ ೨೪

ಪ್ರಳಯಪಟುಜಲರಾಶಿ ಜಱಿದುದೊ
ತಳಿತಸಂದಣಿಗಿಲ್ಲ ಕಡೆಗೀ
ದಱಕೆ ಮಾರ್ಮಲೆತಾರು ಬದುಕುವರಿಂದ್ರಯಮರೊಳಗೆ ।
ಹುಲುನೃಪರಿಗೀಯೊಡ್ಡಮುಱಿವ
ಗ್ಗಳಿಕೆ ಯೆಲ್ಲಿಯದೆನುತ ಹೊದರಿನ
ಕಳಕಳಿಕೆಯಲಿ ನೂಕಿ ನಡೆದುದು ಥಟ್ಟು ಮೇಳೈಸಿ [2] ॥ ೨೫

---

1 ಸೂಷೊದಗೆಪಯಣದ ಮೇಲೆ ಪಯಣದಲಿ, ಚ.

2 ಹುಲುನೃಪರಿಗೀಯೊಡ್ಡು ಗಡ ಯಿಾ
ಬಲುಹು ಹೊದರಿನ ಹೊರಳಿ ಯಿಾಕಳ
ಕಳಿಕೆ ಯೇಕೆನೆ ನೂಕಿದುದು ಕುರಸೇನೆ ಥಟ್ಟೈಸಿ, ಚ.

ಬಳಿಕ ವಿರಾಟನ ದೇಶವನ್ನು ಪ್ರವೇಶಿಸಿ ಗೋಪಾಲಕರನ್ನು
ತೊಂದರೆ ಪಡಿಸಿದುದು.

ಕೆಲವು ಪಯಣದೊಳಾವಿರಾಟನ
ನೆಲನ ಹೊಕ್ಕರು ಮೋಹರವ ನೆಡೆ
ಗಳದು ತೆಗೆದರು ಚಕೋಣಿಯಲಿ ವಾಜಿಗಳ ಪರುಠವಿಸಿ ।
ಕೆಲವು ತುಱುಗಳಿಗಾಸುಶರ್ಮನ
ಕಳುಹಿದರು ಚತುರಂಗಬಲದಲಿ
ದಟಿದುಱವೆ ಹಾಕಿದರು ಗೊಲ್ಲರ ಕೆಡಹುತುರುವಣಿಸಿ ॥ ೨೬

ಎರಡುಮೋಹರವಾಗಿ ತೆಂಕಲು
ಹರಿದು ತುಱುಗಳ ಕಡೆಯಿ ನಾವು
ತ್ವರದಲಾನುವೆವೆನುತ ನೃಪತಿ ತ್ರಿಗರ್ತರನು ಕಳುಹೆ ।
ಹುರಿಯೊಡೆದು ಹದಿನಾಱುಸಾವಿರ
ವರಮಹಾರಥರೊಗ್ಗಿನಲಿ ದು
ರ್ಧರಸುಶರ್ಮನು ಧಾಳಿ ಯಿಟ್ಟನು ತೆಂಕದಿಕ್ಕಿನಲಿ ॥ ೨೭

ಅಸಿತಪಕ್ಷಾಷ್ಟಮಿಯು ದಿನ ಸಂ
ಧಿಸಿದೊಡಾಳದ್ದುದು ವಿರಾಟನ
ಪಶುಸಮೂಹವ ಮುತ್ತಿದರು ಗೋಪಾಲಕರ ಕೆಡೆಹಿ ।
ಹೊಸಮುಖಕೆ ಸೀವರಿಸಿ ಹೊದ್ದರೆ
ದೆಸೆದೆಸೆಗೆ ಹಿಂಡೊಡೆದು ಹಾಯ್ವುವು
ಮಸಗಿತಂಭಾರವದ ರವುಕುಳ [1] ವಾಯ್ತು ನಿಮಿಷದಲಿ ॥ ೨೮

ಎಲೆಲೆ ತುಱುಗಳ ಕೊಂಡರೋ ಹು
ಯ್ಯಲಿಗೆ ಹರಿಸೋ ಸಾಯೆನಗ್ಗದ
ನಿಲವು ಮುಂದಿದೆ ಯೆನುತ ಗೋವರು ಕೈದುಗಳ ಸೆಳೆದು ।

1 ಕಳಕಳ, ಚ.

ಬಿಲುದುಡುಕಿ ಮಸೆಯಂಬುಗಳ ಬ
ತ್ತಳಿಕೆಗಳ ಹೊಡೆಗೆದಱ ಚಾತು
ರ್ಬಲವ ಕೆಡೆವುತ ಬಂದರಾತುಱುಗಾಯಿನಾಯಕರು ॥ ೩೯

ಸಿಡಿಲು ಕುಧರವನೆಱಗುವಂತಿರೆ
ಜಡಿವ ಭೇರಿಗಳಳ್ಳಿಱಿಯೆ ಕೈ
ದುಡುಕಿ ತೇಜಿಯ ಕಟ್ಟಿ ನೂಕಿದರಂದು ರಾವುತರು ।
ಅಡಗುದುಱಿದರು ಬಾಳೆಯಡವಿಯ
ನಡಸಿ ಗಜ ತುಱಿವಂತೆ ಗೋವರ
ಕೆಡಹಿ ತತ್ತಳದುಱಿದು ಹೊಕ್ಕುದು ವಿಗಡಕುರುಸೇನೆ ॥ ೪೦

ಆಳು ಸುತ್ತಲು ಕಟ್ಟಿ ತುಱುಗಳ
ಕೋಳ ಹಿಡಿದರು ಬೊಬ್ಬಿಱಿದು ಗೋ
ಪಾಲರಾಂತರೆ ಕೆಡೆಹಿದರು ಕಡಿಖಂಡಮಯವಾಗೆ ।
ಮೇಲೆ ಮೇಲೈತಪ್ಪ ಹೆಬ್ಬಲ
ದಾಳುಕುದುರೆಯ ಕಂಡು ನೂಕದು
ಕಾಳಗವು ತಮಗೆನುತ ತಿರುಗಿತು ಗೋವರುಱಿದವರು ॥ ೪೧

ಮುಸುಕು ಕಂಬಳಿಗೋಲ [1] ಕಲ್ಲಿಯ
ಬಿಸುಟು ಗಾಯದ ಗೋವರನು ಹೊ
ತ್ತಸುವ ಕೊರಳಲಿ ಹಿಡಿದು ನಾಲಗೆ ಯೊಣಗಿ ಧಗೆಹೊಯ್ದು ।
ವಿಷಮರಣಭೀತಿಯಲಿ ಕಂದಿದ
ಮುಸುಡ ತೊದಲಿನ ನುಡಿಯ ಮರಣದ
ದೆಸೆಯ ಕೈಸನ್ನೆಗಳ ಕಾತರರೈದಿದರು ಪುರವ ॥ ೪೨

ಗೋಪಾಲಕರು ವಿರಾಟನಿಗೆ ಈ ವಾರ್ತೆಯನ್ನು ಹೇಳಿದುದು.

ಬಸಿವ ನೆತ್ತರ ಗೋಪರರಸಂ
ಗುಸುರಲಾರದೆ ಧೊಪ್ಪನಡೆಗೆಡೆ
ದಸುವ ಕಳೆದರು ಕೆಲರು ಕೆಲಬರು ಸುತ್ತಲಿಸಿ ಕೊಂಡು [2] ।

---

1 ವಿಸುಪಕಂಬಳಿ ಕೊಂಬು, ಚ. 2 ತನುವ ಸಂತವಿಸಿ, ಖ.

ಅಸಮಬಲವೆದು ಜೀಯ ಗೋವರ
ಕುಸುರಿದಱಿದರು ಹತ್ತುಸಾವಿರ
ಪಶುಸಮೂಹವ ಹಿಡಿದರೆಂದರು ಮತ್ಸ್ಯಭೂಪತಿಗೆ[1] ॥ ೪೩

ಕೇಳಿ ಬಿಸುಸುಯ್ದನು ವಿರಾಟನೃ
ಪಾಲನಿಂದಿನಲಱಿದನೇ ಕ
ಟ್ಟಾಳು ಕೀಚಕನೆಂದು ನೋಡಿದನಂದು ಕೆಲಬಲನ ।
ಆಳು ಗಜಬಜಿಸಿತ್ತು ಹಾಯಿಕು
ವೀಳಯವನಿಂದೆನಗೆ ತನಗೆಂ
ದೋಲಗದೊಳಬ್ಬರಣೆ ಮಸಗಿತು ಕದಡಿತಾಸ್ಥಾನ ॥ ೪೪

ವಿರಾಟನ ಸೇನೆಯು ಯುದ್ಧಕ್ಕೋಸ್ಕರ ಬಂದುದು.

ಕೇಳಿ ಸಿಡಿಲೇಱಗೆಯಲೆದ್ದು ನೃ
ಪಾಲಕರು ಗಜಬಜಿಸೆ ರಭಸದೊ
ಳೋಲಗವ ಹೊಱವಂಟು ನಡೆದರು ಭಾಷೆಗಳ ಕೊಡುತ ।
ಆಳು ಕೈದುವ ಕೊಂಡು ಕರಿಘಟೆ
ಮೇಳವಿಸಿ ಹಲ್ಲಣಿಸೆ ತೇಜಿಗ
ಳೋಳಿಯಲಿ ರಥ ಹೂಡಿ ಕವಿದುದು ಮತ್ಸ್ಯಪರಿವಾರ ॥ ೪೫

ಹೊಳಲ ಕಾಹಿಂಗುತ್ತರನ ಬೆಂ
ಬಳಿಗೆ ಕೆಲಬರನಿರಿಸಿ ಚಾತು
ರ್ಬಲಸಹಿತ ಹೊಱವಂಟು ನಡೆದನು ರಾಯನೊಗ್ಗಿನಲಿ ।
ನೆಲೆಯನರಿದ ವಿಕರ್ಮದಲಿ ತ
ವ್ಮೊಳಗೆ ನೋಡಲು ಕೌರವರು ತುಱು
ಗಳನು ಹಿಡಿದರೆನುತ್ತ ಧರ್ಮಜನನುಜರಿಗೆ ನುಡಿದ ॥ ೪೬

---

1 ಗೋವರುಱಿದವರು, ಖ.

ಆಗ ಭೀಮಾದಿಗಳು ನಮ್ಮನ್ನು ಪರೀಕ್ಷಿಸುವುದಕ್ಕೋಸ್ಕರ
ಕೌರವಾಗಮನವೆಂದು ಹೇಳಿದುದು.

ಇವರು ತಮ್ಮೊಳಗೆಂದರಿದು ನ
ಮ್ಮವರ ಬಲ ತುಱುಗೊಂಡವರು ಕೌ
ರವರು ನಮ್ಮ ಪರೀಕ್ಷೆಗೋಸುಗ ಬಂದ ಹದನಹುದು ।
ಅವಧಿ ತೀರದ ಮುನ್ನ ಕಾಣಿಸಿ
ನಮಗೆ ಮಗುಷಾರಣ್ಯವಾಸವ
ನವರು ಕರುಣಿಸ ಬಂದರೆಂದರು ಧರ್ಮಜಾನುಜರು [1] ॥ ೪೭

ಆಗ ಧರ್ಮರಾಯನ ಯೋಚನೆ.

ಅವಧಿ ತೀರಲಿ ಮೇಣು ಮಾಣಲಿ
ನಮಗೆ ತುಱುಹುಯ್ಯಲನು ಕೇಳಿಯೆ
ಕಿವಿಯೊಳುದಕವ ಕೊಂಡೊಡಾಪಾತಕವನೆಣಿಸುವೊಡೆ ।
ಎಮಗೆ ನೂಕದು ಸಾಕದಂತಿರ
ಲವರ ಬೆಂಬಳಿ ವಿಡಿದು ಮರಗೋ
ನಿವಹವನು ಮರಳಿಚುವೆನೆಂದನು ಧರ್ಮನಂದನನು ॥ ೪೮

ಎಂದು ತಮ್ಮಂದಿರು ಸಹಿತ ಯಮ
ನಂದನನು ಕಲಹಾವಲೋಕಾ
ನಂದಜಲಪರಿಲುಳಿತಕೋಮಲಕಾಯನನುವಾಗಿ ।
ಅಂದು ಮತ್ಸ್ಯನ ನೇಮದಲಿ ನಡೆ
ತಂದು ರಥವೇಱಿದನು ಪಾರ್ಥನ
ಹಿಂದಕಿರಿಸಿ ವಿರಾಟನೊಡನವನೀಶ ಹೊಱವಂಟ ॥ ೪೯

ಬೀಱುಕೊಂಡುದು ನುಡಿದವಧಿ ಯಿ
ನ್ನಾಳುತನವನು ತೋಱಬೇಹುದು
ಕಾಲವನು ನೂಕಿದೆವು ಮಱೆದಿಹುದುಚಿತವಲ್ಲೆನುತ ।

1 ಬಂದರೆಂದನು ಧರ್ಮನಂದನನು, ಚ.

ಕಾಳಗಕ್ಕನುವಾಗಿ ಪಾರ್ಥನ
ಮೇಲಣಾಹವಕಿರಿಸಿ ತಮ್ಮಯ
ನಾಲುವರು ನಡೆದರು ವಿರಾಟನ ಕೂಡೆ ಬಲವಾಗಿ ॥ ೫೦

ವರವಿರಾಟನ ಸೋದರರರು ಸಾ
ವಿರದ ಸಂಖ್ಯೆಯ ರಾಜಪುತ್ರರು
ಕೊರಳುಪದಕದ ಕಾಲತೊಡರಿನ ಮಣಿಯಮೌಳಿಗಳ ।
ಪರಿಮಳದಕತ್ತುರಿಯ ತಿಲಕದ
ಹೊರೆದಗಂಧದ ತೋರಮುಡುಹಿನ
ಕರದಖಂಡೆಯರಥಟರೈದಿದರಾನೆಕುದುರೆಯಲಿ ॥ ೫೧

ವಿರಾಟನ ಸೇನೆ ಕೌರವರ ಮೇಲೆ ಬಿದ್ದುದು.

ತೂಳುವರೆಗಳ ಲಗ್ಗೆಯಲಿ ಕೆಂ
ಧೂಳಿ ಮಸಗಿ ವಿರಾಟಭೂಪತಿ
ಯಾಳು ಕವಿದರೆ ಕೊಂಡು ಸೈರಿಸಿ ತುಱುವ ಹಿಂದಿಕ್ಕಿ ।
ಕಾಳಗವ ಕೊಟ್ಟರು ಭಡಾಳಿಸಿ
ಸೂಳವಿಸೆ ನಿಸ್ಸಾಳ ದಿಕ್ಕಿನ
ಮೂಳೆ ಬಿರಿಯೆ ವಿರಾಟಬಲ ಹಳಚಿದುದು ಪರಬಲವ ॥ ೫೨

ತುರಗ ತುರಗವು ರಥ ರಥಂಗಳು
ಕರಿ ಕರಿಯ ಗೊಂದಣದ ಮೋಹರ
ಹರಿಗೆ ಹರಿಗೆಯ ಸಬಳದಿಟ್ಟೆಯ ಬಿಗಿದಬಿಲ್ಲುಗಳ ।
ಉರುವಣಿಸಿ ರಥ ರಥಗಳನೆ ತ
ತ್ತರಿಸಿ ನಾಯಕನಿಕರ ಬೊಬ್ಬಿ
ಟ್ಟರರೆ ಕವಿ ಕವಿ ಯೆನುತ ಕವಿದುದು ಉಭಯಬಲವೆಂದು ॥ ೫೩

ಬಿಡು ಸುಶರ್ಮಕ ಹೋಗದಿರು ತಲೆ
ಗೊಡುವೊಡಿದಿರಾಗೆನುತ ರಿಪುವಂ
ಗಡಿಗರನು ಮೂದಲಿಸಿ ಹೊಕ್ಕರು ರಾಯರಾಹುತರು ।

ತೊಡಚಿದರು ಬಿಲುಗೋಲ ಬಲ್ಲವ
ರೊಡನೆ ತಲೆವರಿಗೆಗಳ ಮೋಹರ
ಜಡಿದು ಖಂಡೆಯಕಾಱಭಟರೊಗ್ಗಾಗಿ ನೂಕಿದರು ॥ ೫೪

ವಿರಾಟನ ಸೇನೆಯನ್ನು ನೋಡಿ ಕೌರವರ ಅಪಹಾಸ.

ಘಡ ವಿರಾಟನ ಚುಕ್ಕಿಗಳಿರವ
ಗಡಿಸದಿರಿ ಸಾಯದಿರಿ ಬಿಚ್ಚಿದ
ಹೆಡತಲೆಯ ಹಾವಾದ ಕೀಚಕನಱಿದನಿನ್ನೇನು ।
ಮಿಡುಕಿ ಕಟಕವ ಹೊಕ್ಕ ನರಿ ಹಲು
ಬಿಡುವ ವೊಲು ವಿರಾಟ ಕೆಟ್ಟನು
ಕಡೆಗೆನುತ ಕೈಹೊಯ್ದು ನಕ್ಕದು ಕೂಡೆ ಕುರುಸೇನೆ ॥ ೫೫

ವಿರಾಟಸುಶರ್ಮರ ಯುದ್ಧ.

ಕೋಡಕೈಯ್ಯಲಿ ನೂಕಿದರು ಕೈ
ಮಾಡಿ ತೇಜಿಯ ಥಟ್ಟುಚೂಣಿಯ
ಬೀಡಿನಲಿ ತಿವಿದಾಡಿದರು ಕೊಂಕಣಿಗಭಟರೈದಿ [1] ।
ಕೂಡೆ ಕೈಕೊಂಡಾನೆಧೊರೆಗಳು
ಝೂಡಿಯಲಿ ಹೊಯ್ದಾಡಿದರು ಕೆ
ಟ್ಟೋಡಿದರು ಬಿರುದರು ಸುಶರ್ಮನ ಸೇನೆ ಮುಱಿವೊಡೆದು ॥
ಕುದುರೆ ಹೊಕ್ಕವು ದಂತಿಘಟೆ ತೂ
ಱಿದುವು ರಥವಾಜಿಗಳು ಸೇನೆಯ
ಹೊದರ ಹೊಯ್ವುವು ಕೂಡೆ ಕಾಲಾಳಿಱಿದು ಕಾದಿದರು ।
ಎದೆಯ ನೆಟ್ಟುವು ಬಾಣ ಕೆಲಬರ [2]
ಬದಿಯೊಡೆದು ಕರುಳೊಕ್ಕು ನೆತ್ತಿಯ [3]
ಮಿದುಳ ಸುರಿಯಲು ನೆತ್ತರುಬ್ಬರಿಸಿದುವು ನೊಱೆ ಮಸಗಿ ॥ ೫೬

---

1 ಕೊಂಕಣಿಯ ಪಟುಭಟರು, ಖ.

2 ಕದಡಿ ತಾ ದಱಿ ಮೈಯೊಳೊಕ್ಕವು, ಚ.

3 ಬದಿರಿದೆಲುಗಳ ಮುಱಿದನೆತ್ತಿಯ, ಚ.

ದಿಂಡುಗೆಡೆದುದು ದಂತಿಘಟೆ ಕಡಿ
ಖಂಡವಾದುದು ತುರಗದಳ ಮುಂ
ಕೊಂಡಿಱಿದು ಕಾಲಾಳು ಕೆಡೆದುದು ತಾರುಥಟ್ಟನಲಿ |
ತುಂಡಿಸಿತು ರಥವಾಜಿ ಮಿದುಳಿನ
ದಂಡೆಯಲಿ ರಣಭೂಮಿ ರಕುತದ
ಗುಂಡಿಗೆಗಳೂಗ್ಗಾಯ್ತು ಶಾಕಿನಿಡಾಕಿನೀಜನಕೆ || ೫೮

ಚೂಣಿಯಲಿ ಬಲ ಮುಱಿದು ಧೊರೆಗಳ
ಮೇಲೆ ಬಿದ್ದುದು ಬವರ ಬಳಿಕೆ
ಚ್ಚಾಳುತನದಲಿ ಹೊಕ್ಕು ದುವ್ವಾಳಿಸುತ ನಿಜರಥವ |
ಮೇಲು ದಳ ಕವಿದುದು ಮಹಾರಥ
ರೇಱುಸಾಸಿರ ಮತ್ಸ್ಯರಾಜನ
ಕಾಳಗಕೆ ತೆಗೆದುದು ತ್ರಿಗರ್ತರ ಸೇನೆ ಮುಱಿವಡೆದು || ೫೯

ಚೂಣಿ ಮುಱಿದುದು ಕಲಿವಿರಾಟನು
ಕೇಣವಿಲ್ಲದೆ ಕಾದಿದನು ಕೈ
ಗೋಣು ಕುಣಿದಾಡಿದುವು ರಕುತದ ತೆಱೆಯ ಕಡಲೊಳಗೆ |
ಹೂಣಿಗರು ಕಡಿವಡೆಯೆ ಕದನದ
ಜಾಣರನು ಮೂದಲಿಸಿ ಬಿರುದಿನ
ಕೇಣದಲಿ ನಗುತಾಸುಶರ್ಮಕ ಮತ್ತೆ ಕೋಪದಲಿ || ೬೦

ಬಲ ಮುಱಿದು ಬರುತಿರಲು ಖಾತಿಯ
ತಳೆದು ವೀರಸುಶರ್ಮನಂಬಿನ
ಮಳೆಯ ಕಱೆಯುತ ರಿಪುವಿರಾಟನ ರಥವ ತಱುಬಿದನು |
ಎಲವೊ ಫಡ ಫಡ ಮತ್ಸ್ಯ ಹುಲುಮಂ
ಡಳಿಕ ನಿನಗೇಕಾಳುತನ ಮೆಂ
ದುಲಿದು ಕೈಕೊಂಡೆಚ್ಚು ಕಾದಿದನಾವಿರಾಟನಲಿ || ೬೧

ಕವಿದು ಹುಯ್ಯಲು ಹರಿಬಕಾಱಱ
ತಿವಿದು ಮತ್ಸ್ಯನ ಬಲವ ಸೀೞುತ
ಬವರದಲಿ ಬೆನ್ನಟ್ಟಿದನು ರಿಪುನಾಯಕರ ಕೆಡಹಿ ।
ಅವನಿ ನೆಗ್ಗಲು ಪಾಯ್ದುದಱವದ [1]
ಹವಣಿಸುವರಾರೆನೆ [2] ಸುಶರ್ಮಕ
ನವಱ ಹೊಯ್ದು ವಿರಾಟನೊಡನವಗಡಿಸಿ ಕಾದಿದನು ॥ ೬೦

ವಿರಾಟನನ್ನು ಸುಶರ್ಮನು ಹಿಡಿದುದು.

ಸರಳು ತೀರಲು ಕಿತ್ತು ಸುರಗಿಯು
ತಿರುಹಿ ತಿವಿದಾಡಿದರು ಮುಱಿದರೆ
ಪರಿಘದಲಿ ಕಾದಿದರು ಹೊಕ್ಕರು ಹಲಗೆಖಡ್ಗದಲಿ ।
ಬೆರಸಿ ಹೊಯ್ದಾಡಿದರು ಮತ್ಸ್ಯನ
ಭರವ ಹೊಗೞುತ ಕಲಿಸುಶರ್ಮಕ
ನುರುವಣಿಸಿದನು ಘಾಯವಡೆದು ವಿರಾಟನನು ಹಿಡಿದ ॥ ೬೧

ಸಿಕ್ಕಿದನು ಧೊರೆಯೊಪ್ಪುಗೊಟ್ಟರು
ಚುಕ್ಕಿಗಳು ಕೀಚಕನ ನೆಳಲಿರೆ
ಸಿಕ್ಕಲೀಸುವನೇ ವಿರಾಟನನೆನುತ ಬಲ ಬೆದಱೆ ।
ಉಕ್ಕಿದಾತನ ಹೆಗಲು ಬೇವುದು
ಮಕ್ಕಳಾಟಿಕೆಯಾಯ್ತು ತಾವ್ ಕೈ
ಯಿಕ್ಕಬೇಕೆಂದೊದಱಿದರು ಮತ್ಸ್ಯನ ಸಹೋದರರು ॥ ೬೨

ಹೂಣಿ ಹೊಕ್ಕು ವಿರಾಟಕಾಳಗ
ದಾಣಿ ಕೇಣವ ನಱಿಯದೊಬ್ಬನೆ
ಚೂಣಿಯಲಿ ಸಿಕ್ಕಿದನು ಧೊರೆ ಹಿಡಿವಡೆದನೆನೆ ಸೇನೆ ।
ಪ್ರಾಣ ಕೊರಳಲಿ ನಿಲಲು ರಣಬಿ
ನ್ನಾಣಿಗರು ಜವಗುಂದೆ ಭಂಗವ
ಕಾಣಲಾರದೆ ಧರ್ಮಸುತ ಭೀಮಂಗೆ ತೋಱಿಸಿದ ॥ ೬೩

---

1 ತವತವಗೆ ಮುಱಿಯೊಡೆದು ಬರುತಿರ, ಖ. 2 ಲವನಿಪತಿ ತಱುಬಲು, ಖ.

ಧರ್ಮರಾಯನು ವಿರಾಟನನ್ನು ಬಿಡಿಸೆಂದು ಭೀಮನಿಗೆ ಹೇಳಿದುದು.

ಬಲವನಾಯಕವಾಯ್ತು ಮತ್ಸ್ಯನ
ಕುಲಕೆ ಬಂದುದು ಕೇಡು ಸುಮ್ಮನೆ
ನಿಲುವುದನುಚಿತ ಭೀಮ ಬಿಡಿಸು ವಿರಾಟಭೂಪತಿಯ ।
ಗೆಲವು ಪರಬಲಕಾದುದೆನೆ ರಿಪು
ಬಲದವಾನಲನಣ್ಣನಾಜ್ಞೆಯ
ತಲೆಯೊಳಾಂತನು ಮುಂದಣಾಲದ ಮರನ ನೋಡಿದನು ॥ ೬೬

ಹೆಮ್ಮರವನಿದ ಕಿತ್ತು ವೈರಿಸು
ಶರ್ಮಕನ ನೊರಸುವೆನು ಬವರವ
ನೆಮ್ಮಿದರೆ ಮೋಹರವನೞಿವೆನು ಜೀಯ ನೋಡೆನಲು ।
ತಮ್ಮ ಸೈರಿಸು ಮರನ ಮುಱಿಯದಿ
ರೆಮ್ಮ ಮಾತನು ಕೇಳು ಹೊಲ್ಲಹ
ವೆಮ್ಮ ತಾಗದೆ ಮಾಣದೆಂದನು ಧರ್ಮಸುತ ನಗುತ ॥ ೬೭

ಮರನ ಮುಱಿದರೆ ನಮ್ಮನಱಿವನು
ಕುರುಕುಲಾಗ್ರಣಿ ಯಿದಾಯಮಾನುಷ
ಪರಮಸಾಹಸ ಭೀಮಸೇನಂಗಲ್ಲದಿಲ್ಲೆಂದು ।
ಅಱಿಕೆಯಹುದೆನೆ ಭೀಮನೆಂದನು
ಕುರುಕುಲಾಗ್ರಣಿ ಸಹಿತಿದೆಲ್ಲವ
ನೊರಸಿ ಕಳೆದೊಡೆ ಬೞಿಕ ನಮಗಾರುಂಟು ಮುನಿವವರು ॥ ೬೮

ಉಗ್ರಕರ್ಮವ ನೆನೆಯ ಬೇಡ ಮ
ಹೋಗ್ರದಲಿ ಸಾಧಿಸಿದೆವವಧಿಸ
ಮಗ್ರವನು ಸಾಕಿನ್ನು ಬಿಡಿಸು ವಿರಾಟಭೂಪತಿಯ ।
ವಿಗ್ರಹವ ಜಯಿಸೆನಲು ರಿಪುಕುಲ
ದಗ್ರಿಯನು ಬೀಳ್ಕೊಂಡು ವಿಲಯಮ
ಹೋಗ್ರಸನ್ನಿಭನರೆದನಿಭಹಯರಥಪದಾತಿಗಳ ॥ ೬೯

ಸರಳ ಸಾವಿರದೆಂಟುಸಾವಿರ
ತುರಗವನು ಸೀಳಿದನು ಕರಿಗಳ
ನೆರವಿಯೈನೂಱಂತು ಮುಱಿದನು ತೇರುಸಾವಿರವ ।
ಅರಿಪದಾತಿಯ ಲಕ್ಷಸಂಖ್ಯೆಯ
ನೊರಸಿದನು ಬೆಂಬತ್ತಿ ಬಿಡು ಬಿಡು
ಧೊರೆವಿರಾಟನನೆನುತ ಹಿಡಿದನು ಕಲಿಸುಶರ್ಮಕನ ॥ ೭೦

ಎಲವೆಲವೊ ಕಲಿ ವಲಲ ನಮ್ಮನು
ಸಲಹಿದವನಲ್ಲಾ ವಿರಾಟನು
ಸಿಲುಕಿದನು ದಾತಾರನವಸರಕೊದಗಬೇಹುದೆನೆ ।
ಉಲಿದು ಕೈಕೊಂಡಟ್ಟಿದನು ರಿಪು
ಬಲವ ತತ್ತಳುದುಱಿಯೆ ಕವಡಿಕೆ
ಯೊಳಗೆ ಕಲುಬಿದ್ದಂತೆ ಕೆದಱಿತು ವೈರಿಪಾಯಿದಳ ॥ ೭೧

ಪಶುವ ಬಿಡು ಬಿಡು ಮಾರಿ ಕೆಂಳಿದ
ಮುಸಕವಾಯಿತು ವಿರಾಟಭೂಪನ
ಗಸಣಿ ಬೇಡೆನುತ ಸುಶರ್ಮಕ ತಿರುಹಿದನು ರಥವ ।
ಅಸಮರಣದಲಿ ಭಟರು ಕೈದುವ
ಬಿಸುಟು ಬದುಕುವ ಶಿರವ ತಡೆವುತ
ದೆಸೆದೆಸೆಗೆ ಜಾಳಿಸಿತು ಗೆಲಿದನು ಭೀಮನಾಹವವ ॥ ೭೨

ಆಗ ವಿರಾಟನ ಸಂತೋಷವಚನಗಳು.

ವಲಲ ಮೆಚ್ಚಿದೆನೈ ಮಹಾದೇ
ವಲಘುಭುಜಬಲ ನನ್ನ ಬಿಡಿಸಿದೆ
ಸಿಲಕಿದೆನು ಹಗೆಗೆಂದು ಬೋಳೈಸಿದನು ಮತ್ಸ್ಯನೃಪ ।
ಬಳಿಕ ಯಮನಂದನನು ಬಿಡಿಸಿದ
ಕಲಿಸುಶರ್ಮನನಿರುಳು ಕಾಳಗ
ದೊಳಗೆ ತುಱು ಮರಳಿದುವು ಗೆಲಿದರು ಪಾಂಡುನಂದನರು ॥ ೭೩

ನೀವೆ ಯರಸುಗಳೆಂದು ನಿಮ್ಮಯ
ಸೇವೆಯಲಿ ತಾನಿಹೆನು ನಾಲ್ವರಿ
ದಾವದೇಶದ ವೀರರೋ ಕಂಕಾದಿಭಟರೆನುತ ।
ಆವಿರಾಟನು ನುಡಿಯೆ ಸನ್ಮಾ
ನಾವಲಂಬಕೆ ತುಷ್ಟನಾದೆನು
ಭಾವಿಪೊಡೆ ಧರೆಯೆಮ್ಮದೆಂದನು ಧರ್ಮನಂದನನು ॥ ೭೪

ಮಾನಭಂಗದ ಮೇಲೆ ಕೌರವ
ಸೇನೆ ಸರಿಯೆ ಸುಶರ್ಮ ಕಡು ದು
ಮ್ಮಾನದಲಿ ತಲೆಮುಸುಕಿನಲಿ ತಿರುಗಿದನು ಪಾಳಯಕೆ ।
ಭಾನು ಭುವನದ ನಯನಮುದ್ರಾ
ಮೋನಮುದ್ರೆಯ ಮುಱಿಯಲುತ್ತರ
ಕ್ಷೋಣಿಯಲಿ ಗೋಗ್ರಹಣವೆನು ಮಾಡಿದನು ಕುರುರಾಯ ॥ ೭೫

ಏನಿದೇನು ಸುಶರ್ಮ ನಿನ್ನಯ
ನೀನಿದೆತ್ತಲು ಹೋದೆ ನಿನ್ನಯ
ಸೇನೆ ಗಜಹಯವೆತ್ತ ಹೋದುವು ರಥವದೇನಾಯ್ತು ।
ಹೀನಕಳಯಾಯ್ತೆನುತಲಾವರ
ಭಾನುಮತಿ ನೆಱೆ ನುಡಿಯೆ ಜೀಯವ
ಧಾನ ಬಿನ್ನಹ ನುಡಿಯನಿಂನವಧರಿಸಿ ಕೇಳೆಂದ ॥ ೭೬

ಶತ್ರುವನು ನೆಱೆ ಗೆಲಿದು ಕಾಲನ
ಪುತ್ರನಾಜ್ಞೆಯೊಳೊಂದು ಪರಬ
ಲ ಮೃತ್ಯು ಪವನಜ ತುಱುವ ಮರಳಿಸಿ ಮತ್ಸ್ಯನೃಪಸಹಿತ ।
ಪೊತ್ತಹರುಷದ ಸಂಭ್ರಮದಿ ಪುರ
ಕುತ್ತರೋತ್ತರದಿಂದಲೈದೆ ನೃ
ಪೋತ್ತಮನು ನೆನೆಯುತ್ತಲಿರ್ದನು ವೀರನಾರಣನ ॥ ೭೭

ಐದನೆಯ ಸಂಧಿ ಮುಗಿದುದು.

ಆರನೆಯ ಸಂಧಿ.

ಸೂಚನೆ.

ವೈರಿಭಟಸಂವರ್ತನೂತನ
ಭೈರವನು ಕಲಿಪಾರ್ಥ ಸಮರೋ
ದಾರಸಾರಥಿಯಾದನಂದು ವಿರಾಟನಂದನಗೆ ॥

ಕೌರವರ ಸೇನೆ ಯುದ್ಧ ಮಾಡಿದ ಕ್ರಮ.

ಕೇಳು ಜನಮೇಜಯ ಸುಯೋಧನ
ನಾಳು ಮುತ್ತಿತು ತುಱುಗಳನು ಮೇ
ಲಾಳು ಕವಿದುದು ಭೀಷ್ಮಕರ್ಣದ್ರೋಣಮೊದಲಾಗಿ ।
ಕೋಲಸೂಟಿಯ ಸರಿವಳೆಗೆ ಗೋ
ಪಾಲಪಡೆ ಮುಗ್ಗಿದುದು ಗೋವರ
ಸಾಲ ಹೊಯ್ದರು ಕರ್ಣದುಶ್ಶಾಸನಜಯದ್ರಥರು ॥ ೧

ಹೆಣಗಿ ತುಱುಗಳ ಕಾಹಿನವರುರು
ವಣಿಸಿ ಕೆಡಹಿತು ಬಡಬವಹ್ನಿಯ
ಕೆಣಕಿದುದಕದ ಬೀಡು ಕವಿವಂದದಲಿ ಬಿಲುದೆಗೆದು ।
ಮಣಿಮಕುಟವರ್ಧನರ ಸಮರಾಂ
ಗಣದೊಳಗೆ ಗೋಪಾಲಕರು ರಿಂ
ಗಣಗುಣಿದು ತೆಗೆದೆಸುತ ಬಂದರು ಮರಣಲಂಪಟರು ॥ ೨

ರಾಯಚೂಣಿಯ ಚಾತುರಂಗದ
ನಾಯಕರು ಮೇಳೈಸಿ ಸಮರೋ
ಪಾಯದಲಿ ಹಿಂದಿಕ್ಕಿ ಕವಿದರು ಕೋಡಕೈಗಳಲಿ ।

ಸಾಯಲಲಸದ ಗೋವರನು ಕ [1]
ಯ್ಯಾಯತಿಕೆ ಪೂರೈಸೆ ಕೊಂದರೆ [2]
ಮಾಯವಾದುದು ಹರಿಬಕಾಱಿ ಸೇನೆ ರಣದೊಳಗೆ ॥ ೩

ಮೇಲುದಱಿಕಿದಿರಾಗಿ ತುಱುವರಿ
ಗಾಳಗದೊಳೊಡೆ ಮುಗ್ಗಿ ಗೋಪರು
ಧೂಳಿಗೋಟೆಯ ಕೊಂಡರಮರರ ರಾಜಧಾನಿಯನು ।
ಸಾಲೊಡೆದು ಕೆಟ್ಟೋಡಿದರು ಗೋ
ಪಾಲನೊಬ್ಬನ ಹಿಡಿದು ಮೂಗಿನ
ಮೇಲೆ ಸುಣ್ಣವ ಬರೆದು ಬಿಟ್ಟರು ಹಗೆಯ ಪಟ್ಟಣಕೆ ॥ ೪

ವಿರಾಟನ ಸೇನೆ ಹಿಂತಿರುಗಿದುದು.

ಗರುವೆ ಗೋವರು ಹರಿದು ಸಂ
ಗರದಿ ಕೆಡೆದರು ರಾಯಮೋಹರ
ತೆರಳಿಕೆಯ ತುಱುಗಳನು ಹಿಂದಿಕ್ಕಿದರು ಕಾಳಗಕೆ ।
ಬಿರುದರಾರುಂಟವರ ಕಳುಹೆನೆ
ಕರದ ಬಿಲ್ಲನ ಬಿಸುಟು ಬದುಕಿದ
ಶಿರವ ತಡವುತ ಗೋವನೊಬ್ಬನು ಪುರಕೆ ನಡೆತಂದ ॥ ೫

ಗಣನೆಯಿಲ್ಲದೆ ನಿನ್ನೆ ಸಮರಾಂ
ಗಣದ ಭಾರಣೆ ನೂಕಿತೆಲವೋ
ರಣದ ವಾರ್ತೆಯದೇನೆನುತ ಜನವೆಲ್ಲ ಗುಜುಗುಜಿಸೆ ।
ರಣವು ಕಿಱಿದಲ್ಲೆನುತ ಢಗೆ ಸಂ
ದಣಿಸಲವನೈತಂದು ಮೇಳದ
ಗಣಿಕೆಯರ ಮಧ್ಯದಲಿ ಮೆಱೆದಿರೆ ಕಂಡನುತ್ತರನ ॥ ೬

ದೂತನು ಬಂದು ಪರಾಜಯವಾರ್ತೆಯನ್ನು ಹೇಳಿದುದು.

ಬೆಗಡುಮುಸುಕಿದ ಭೀತಿಹೆಚ್ಚಿದ
ಢಗೆಯಹೊಯ್ಲುಳ್ಳಗಳ ತುದಿನಾ

[1] ಕೈ, ಚ. [2] ಗಾಯದ ಸುತನೆ ಸೆಱೆಯಕೊಂಡರು, ಚ.

ಲಗೆಯ ತೊದಲಿನನುಡಿಯ ಬೆರಗಿನ [1] ಬರತತಾಳಿಗೆಯ ।
ಅಗಿವೆಹುಯ್ಯಲುಗಾಱನೊಡ್ಡೋ
ಲಗಕೆ ಬಂದನು ನೃಪವಿರಾಟನ
ಮಗನ ಕಾಲಿಂಗೆಱಗಿದನು ದೂಱಿದನು ಕಳಕಳವ ॥ ೭

ಏಳು ಮನ್ನೆಯಗಂಡನಾಗು ನೃ
ಪಾಲ ಕೌರವರಾಯ ತುಱುಗಳ
ಕೋಳವಿಡಿದನು ಸೇನೆ ಬಂದುದು ಧರಣಿಯಗಲದಲಿ ।
ಧಾಳಿ ಬರುತಿದೆ ಕರೆಸಿಕೋ ನಿ
ನ್ನಾಳು ಕುದುರೆಯ ರಾಣಿವಾಸದ
ಗೂಳೆಯವ ತೆಗಿಸೆಂದು ನುಡಿದನು ಬಿನ್ನಹದ ಹರುವ [2] ॥ ೮

ಏನೆಲವೊ ತುದಿಮೂಗಿನಲಿ ಬೆಳು
ಪೇನು ಥಗೆ ಹೊಯ್ದೇಕೆ ಬಂದೆ ಯಿ
ದೇನು ನಿನ್ನಿನ ರಣವನೈಯ್ಯನು ಗೆಲಿದುದೇನಾಯ್ತು ।
ಏನು ಭಯ ಬೇಡೆನ್ನ ಕಲಹನಿ
ಧಾನವಾರ್ತೆಯದೇನೆನಲು ಕುರು
ಸೇನೆ ಬಂದುದು ತುಱುವ ಹಿಡಿದರು ಬಡಗದಿಕ್ಕಿನಲಿ ॥ ೯

ರಾಯ ತಾ ನೈತಂದನಾತನ
ನಾಯಕರು ಗುರುತನುಜಗುರುಗಾಂ
ಗೇಯಶಕುನಿಕಳಿಂಗಕರ್ಣಜಯದ್ರಥಾದಿಗಳು ।
ಜೀಯ ಬಿನ್ನಹ ದಳದ ಘನತೆಗೆ
ತಾಯಿ ಗಡ ವೊಕ್ಕುಡಿತವೋಹರ
ದಾಯತವ ತಾನೆತ್ತ ಬಲ್ಲೆನು ಹೊಕ್ಕು ಹೊಗಱುವೊಡೆ ॥ ೧೦

ಎತ್ತ ದೂವಾಳಿಸುವೊಡಾಲಿಗ
ಳತ್ತಲಾನೆಯ ತಟ್ಟು ಕಾಲಾ
ಳೊತ್ತರದ ರಥವಾಜಿರೂಢಿಯ ರಾಯರಾವುತರು ।

---

1 ಬಿರುಬಿನ, ಖ. 2 ಬಿರುವ, ಚ.

ಸುತ್ತ ಬಳಸಿಹುದೆತ್ತ ಸೇನೆ ಮನಹರಿ
ವತ್ತ ಮೋಹರವಲ್ಲದನ್ಯವ
ಮತ್ತೆ ಕಾಣೆನು ಜೀಯ ಹದನಿದು ವೈರಿವಾಹಿನಿಯ ‖ ೧೧

ಬಿಡ್ಡಿದರೊ ಪಡಿನೆಲನನವನಿಯ
ದಡ್ಡಿಯೋ ಹೇಪೆನಲು ಝಲ್ಲರಿ
ಯೊಡ್ಡು ತಳತುದು ಚಮರಸೀಗುರಿಗಳ ಪತಾಕೆಯಲಿ ।
ಅಡ್ಡಹಾಯ್ದಿನಕಿರಣ ಪವನನ
ಖಡ್ಡತನಕಾಳಾಯ್ತು [1] ಕೌರವ
ನೊಡ್ಡನಭಿವರ್ಣಿಸುವೊಡಳಿಯೆನು ಜೀಯ ಕೇಳೆಂದ ‖ ೧೨

ತಳತಮಿಂಚಿನ ಬಳಗ ಮೊಳಗಿನ
ವಳೆಯು ದಿನಮಣಿಯುದಯವಹ್ನಿಯ
ಬೆಳೆ ಸಮುದ್ರದ ಘುಳುಘುಳುಧ್ವನಿಯಲ್ಲದೊಡ್ಡಿಲ್ಲ ।
ತಿಳಿವು ಸಮನಿಪುದೆನಗೆ ಪ್ರಳಯದ
ಜಲಧಿಯಲಿ ಗೋಪಾಲಬಾಲ ಹರಿ
ದಳಿದು ಹಿಡಿದರು ಸೆಜೆಯನಮರಾವತಿಯ ಸೂಳೆಯರ ‖ ೧೩

ಬಳಗೆ ನೀ ಕಾದುವೊಡೆ ದುರ್ಗವೆ
ಬಲಿಸು ಬವರವ ಹಿಂದುಗಳೆಯದೆ
ಕಲಿತನದ ಮನವುಳ್ಳೊಡೀಗಳ ನಡೆಯಬೇಹುದೆನೆ ।
ಕೆಲಬಲನ ನೋಡಿದನು ಮಿಾಸೆಯ
ನಲುಗಿದನು ತನ್ನಿದಿರಮೋಳದ
ಲಲನೆಯರ ಮೊಗ ನೋಡುತುತ್ತರ ನಗುತನಿಂತೆಂದ ‖ ೧೪

ಉತ್ತರನ ಪೌರುಷವಚನಗಳು.

ನೂಕು ಕುನ್ನಿಯನಾಹವದ ಭೀ
ತಾಕುಲನ ತಾನೀಗ ಹೆಂಡಿರ
ಸಾಕಿ ಬದುಕುವ ಲವಲವಿಕೆಯಲಿ ಜಾಱಿ ಬಂದೀಗ ।

[1] ನಗೆಯಾಯ್ತು

ಕಾಕ ಬಳಸುವನಿವನು ನಾನು
ದ್ರೇಕಿಸಲು ಸಮರದಲಿ ನಿಲುವರೆ
ನಾಕದವರಿಗೆ ನೂಕದೆಂದನು ಸತಿಯರಿದಿರಿನಲಿ ॥ ೧೫

ಆಗ ಕೆಲವರು ಉತ್ತರನನ್ನು ಸ್ತುತಿಸಿದುದು.

ಎನಿತು ಬಲ ಘನವಾದೊಡೇನದು
ನಿನಗೆ ಗಹನವೆ ಜೀಯ ಜಗದಲಿ
ದಿನಪನಿದಿರಲಿ ದಿಟ್ಟತನವೇ ತಮದ ಗಾವಳಿಗೆ ।
ಬಿನುಗುರಾಯರ ಬಿಂಕ ಗೋವರ
ಮೊನೆಗೆ ಮೆಱೆದೊಡೆ ಸಾಕು ನಿಂದಿರು
ಜನಪ ತೋಱಿಸು ಕೈಗುಣವ ಕೌರವನ ಥಟ್ಟನಲಿ ॥ ೧೬

ಎಂದೊಡುಬ್ಬರಿಸಿದನು ತಾ ಕಲಿ
ಯೆಂದು ಬಗೆದನು ಮೀಸೆಯನು ಬೆರ
ಳಿಂದ ತಿರುಹುತ ಮುಗುಳುನಗೆಹರುಷದಲಿ ವೈಮೆಱೆದ ।
ಸಂದಣಿಸೆ ರೋಮಾಂಚ ಕೆಲಬಲ
ದಿಂದುಮುಖಿಯರ ನೋಡಿದನು ನಲ
ವಿಂದ ನುಡಿದನು ತನ್ನ ಪೂರುಷ [1] ತನದ ಪರಿಣತಿಯ ॥ ೧೭

ಉತ್ತರನು ತನ್ನನ್ನು ಹೊಗಳಿಕೊಂಡುದು.

ಅಹುದಹುದು ತಪ್ಪೇನು ಜೂಜಿನ
ಕುಹಕದಲಿ ಪಾಂಡವರ ಸೋಲಿಸಿ
ಮಹಿಯ ಕೊಂಡಂತೆನ್ನ ಕೆಣಕಿದನೇ ಸುಯೋಧನನು ।
ಸಹಸದಿಂದವೆ ತುಱುವ ಮರಳಿಚಿ
ತಹೆನು ಬೞಿಕಾ ಕೌರವನ ನಿ
ರ್ವಹಿಸಲೀವೆನೆ ಸೂಱೆಗೊಂಬೆನು ಹಸ್ತಿನಾಪುರವ ॥ ೧೮

---

1 ಪಾರುಷ, ಕ. ಖ. ಚ.

ಹಿಡಿದು ರಾಜ್ಯವ ಕೊಂಡು ಹೆಂಗುಸ
ಬಡಿದು ಪಾಂಡವರಾಯರನು ಹೊಱ
ವಡಿಸಿ ಕೊಬ್ಬಿದ ಭುಜಬಲವನೆನ್ನೊಡನೆ ತೋಱಿದನೆ ।
ಬಡಯುಧಿಷ್ಠಿರನೆಂದು ಬಗೆದನೆ
ಕಡುಗಿದರೆ ಕೌರವನ ಕೀರ್ತಿಯ
ತೊಡೆವೆನಱಿಯೆನಲಾಯೆನುತ ಸುಕುಮಾರ ಖತಿಗೊಂಡ । ೧೯

ತನಗೆ ಬಡಪಾಂಡವರ ತಱುಬಿದ
ಮನದ ಗರ್ವದ ಕೊಬ್ಬು ಕಾಲನ
ಮನೆಯನಾಳ್ವಪುದಲ್ಲದಿದ್ದರೆ ತನ್ನ ವೈರವನು ।
ನೆನೆವನೇ ದುರ್ಯೋಧನಗೆ ಮೋ
ದಿನಿಯ ರುಣ ತೀರಿದುದು ಮಝು ಭಾ
ಪೆನುತ ಸತಿಯರ ಮುಂದೆ ಭಾಷೆಯ ನುಡಿದ ಸುಕುಮಾರ [1] ॥ ೨೦

ವನಿತೆಯರ ಸಭೆಯಲಿ ಸಗಾಡದ
ದಿನಪ ತೇಜದ ಶೌರ್ಯದರ್ಪವ
ಜಿನುಗಿದನು ತನ್ನಳವನರಿಯದೆ ರಾಜಭವನದಲಿ ।
ತನತನಗೆ ಕಾಮಿನಿಯರಹುದೆನೆ
ಜನಪನುತ್ತರರಾಯ ಗರ್ಜಿಸಿ
ಕನಲಿದನು ಕೌರವನ ಬೈದೆಡಗಾಲ ತೊಡರುಲಿಯೆ ॥ ೨೧

ಏನ ನೆನೆದನೊ ಬಂದು ಕೆಟ್ಟನು
ಭೂನರೇಂದ್ರರೊಳನ್ನ ತೋಳಿನ
ನೂನಬಲವನು ಕೇಳದಱಿಯನೆ ಪರಬಲಾಂತಕನ ।

---

1 ನೆನೆದು ದುರ್ಯೋಧನನು ತಾ ಮೋ
ದಿನಿಯನಾಳ್ವರೆ ಹಾ ಮಹಾದೇ
ವೆನುತಲುತ್ತರಬಿರಿದನುಡಿದನು ಹೆಂಗಳದಿರಿನಲಿ, ಚ.

ತಾನು ಬಂದು ವಿಹಾರದಲಿ ಭುವ
ನಾನುರಂಜಕನಾಗಿ ತಿರುಗಿದೊ
ಡೇನು ತನಗಿಲ್ಲೆಂದು ಕಮಲಾನನೆಯರೊಳು ನುಡಿದ ॥ ೧೧

ಜವನ ಮೀಸೆಯ ಮುಱಿದನೋ ಭೈ
ರವನ ದಾಡೆಯನಲುಗಿದನೊ ಮೃ
ತ್ಯುವಿನ ಮೇಲುದ ಸೆಳೆದನೊ ಕೇಸರಿಯ ಕೆಣಕಿದನೊ ।
ಬವರವನು ತೊಡಗಿದನಲಾ ಕೌ
ರವನಕಟ ಮರುಳಾದನೆಂದಾ
ಯುವತಿಯರ ಮೊಗ ನೋಡುತುತ್ತರ ಬಱಿದೆ ಕೆದಱಿದನು ॥

ಆರೊಡನೆ ಕಾದುವೆನು ಕೆಲಬರು
ಹಾರುವರು ಕೆಲರಂತಕನ ನೆರೆ
ಯೂರವರು ಕೆಲರಧಮಕುಲದಲಿ ಜನಿಸಿ ಬಂದವರು ।
ವೀರರೆಂಬವರಿವರು ಮೇಲಿ
ನ್ನಾರ ಹೆಸರುಂಟವರೊಳೆಂದು ಕು
ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳದಿರಿನಲಿ ॥ ೧೪

ಅಱಿಯೆನೇ ಗಾಂಗೇಯನನು ತಾ
ನಱಿಯದವನೇ ದ್ರೋಣ ಕುಲವಲಿ
ಕೊಱತೆಯಾಗಿಹ ಕರ್ಣನೆಂಬುವನೆನಗೆ ಸರಿಯಹನೆ
ಬಱಿಯ ಬಯಲಾಡಂಬರದಿ ತುಱು
ಸೆಱೆಯ ಹಿಡಿದರೆ ತಮ್ಮ ಹೆಂಡಿರ
ಸೆಱೆಯ ತಾರದೆ ಮಾಣೆನೆಂದುತ್ತರನು ಗರ್ಜಿಸಿದ [1] ॥ ೧೫

ಪೊಡವಿಪತಿಗಳು ಬಂದು ತುಱುಗಳ
ಹಿಡಿವರೇ ಲೋಕದಲಿ ಯುಧಮರ
ಬಡಮನದ ಮನ್ನೆಯರ ಮೈಸಿರಿ ಕೌರವನೊಳಾಯ್ತು ।

1 ಮಾಣ್ಬೆನೆಂದನು ನಾರಿಯರ ಮುಂದೆ, ಚ.

ಕಡೆಗೆ ದುರ್ಯಶ ವುಳಿವುದಲ್ಲದೆ
ಬಿಡುವೆನೇ ಗೋಧನವನೆನ್ನೊಳು
ತುಡುಕಿ ಬದುಕುವನಾವನೆಂದನು ಖಂಡೆಯವ ಜಡಿದು ॥ ೨೬

ಬಲವ ಮುಱಿವೆನು ಹಸ್ತಿನಾಪುರ
ದೊಳಗೆ ಠಾಣಾಂತರವನಿಕ್ಕುವೆ
ತೊಲಗಿಸುವೆ ಕೌರವನ ಸೇನೆಯ ಧೂಳಿಪಟಮಾಡಿ ।
ಗೆಲವ ತಹೆನೆಂದುತ್ತರನು ಕೋ
ಮಲೆಯರಿದಿರಲಿ ಬಾಯ್ಗೆ ಬಂದುದ
ಗಳಹುತಿರ್ದನು ಬೇಕು ಬೇಡೆಂಬವರ ನಾಕಾಣೆ ॥ ೨೭

ಪರರು ನಿಜಸಾಹಸವ ಹೊಗಳಿದೊ
ಡಿರದೆ ಲಜ್ಜಿಸಬೇಕು ತನ್ನಯ
ಹಿರಿದು ಪೂರುಷ [1] ತನವ ತಾನಾಡಿದರೆ ಫಲವೇನು ।
ಇರವಿದನೆ ಗಹಗಹಿಸಿ ಮನದಲಿ
ತರಳಯರು ನಗಲಾವಿರಾಟನ
ವರಕುಮಾರಕನಿರದೆ ನುಡಿದನು ಹೆಂಗಳಿದಿರಿನಲಿ ॥ ೨೮

ಆಗ ಉತ್ತರನು ಸಾರಥಿಯಿಲ್ಲದುದಕೆ ಚಿಂತೆಮಾಡಿದುದು.

ನುಡಿದು ಫಲವೇನಿನ್ನು ಸಾರಥಿ
ಮಡಿದ ನಿನ್ನಿನ ಬವರದಲಿ ನಾ
ನುಡುಹನಾದೆನು ಶಿವ ಶಿವಾ ಯಿಂದೆನ್ನ ಕೈಮನಕೆ ।
ಗಡಣಿಸುವ ಸಾರಥಿಯನೊಬ್ಬನ
ಪಡೆದೆನಾದರೆ ಕೌರವೇಂದ್ರನ
ಪಡೆಗೆ ಹಬ್ಬವ ಮಾಡುವೆನು ತೋಱುವೆನು ಕೈಗುಣವ ॥ ೨೯

1 ಪೌರುಷ, ಕ. ಖ. ಚ.

ಸಾರಥಿಯು ಶಿವ ಕೊಟ್ಟನಾದರೆ
ಮಾರಿಗುಬ್ಬಸವಾಗದಂತಕ
ನೂರು ತುಂಬದೆ ಹಬ್ಬವಾಗದೆ ರಣಪಿಶಾಚರಿಗೆ ।
ದೋರೆಗರುಳಲಿ ಶಾಕಿನಿಯರೊಡ
ಲೇರು ತುಂಬದೆ ಡೊಳ್ಳು ನೂಕದೆ
ಭೂತಭೇತಾಳರಿಗೆ ಹೋಹುದೆ ಬಱಿದೆ ರಣವೆಂದ ॥ ೨೯

ಪಳಹರನ ಮೇಳವಿಸಿ ಬಿರುದಿನ
ಬಳಿಯ ಚವರಿಯು ಬೀಸಿ ಮಲೆತರ
ತಲೆಯ ಶೂಲದೊಳೊತ್ತಿ ತೇಜಿಗಳ ತಿರುಹಿ [1] ।
ಕಲಿತನದ ಭಟನೀಗ ನಿಲುವ
ಗ್ಗಳದ ಸೂತನ ತಂದು ಕೊಟ್ಟರೆ
ಗೆಲುವೆನೆಂದನು ರಣವ ಸರಸಿಜವದನೆಯರ ಮುಂದೆ ॥ ೩೦

ಆಗ ಅರ್ಜುನನು ತಾನು ಸಾರಥಿಯಾಗಿರುವಂತೆ ಅಪೇಕ್ಷಿಸಿದುದು.

ಕೇಳುತಿರ್ದನು ಪಾರ್ಥನೀತನ
ಬಾಲಭಾಷೆಗಳಲ್ಲವನು ಪಾಂ
ಚಾಲೆಗೆಕ್ಕಟಿ ನುಡಿದನಾವಿನ್ನಿಹುದು ಮತವಲ್ಲ ।
ಕಾಲ ತುಂಬಿತು ನಮ್ಮ ರಾಜ್ಯದ
ಮೇಲೆ ನಿಲುಕಲು ಬೇಕು ಕೌರವ
ರಾಳು ನಮಗೋಸುಗವೆ ಬಂದುದು ಕಾಂತೆ ಕೇಳೆಂದ ॥ ೩೧

ನರನ ಸಾರಥಿಯೆಂದು ನೀನು
ತ್ತರೆಗೆ ಸೂಚಿಸು ನನ್ನ ನೀಗಲೆ
ಕರೆಸೆನಲು ಕೈಕೊಂಡು ದ್ರೌಪದಿ ಬಂದಳೊಲವಿನಲಿ ।

1 ಶೂಲದ ಸಿಂದವೆತ್ತಿಸಿ ಸೀಗುರಿಯ ಬಿಗಿಸಿ, ಖ.

ಈ ವರ್ತಮಾನವನ್ನು ದ್ರೌಪದಿಯು ಉತ್ತರೆಗೆ ಹೇಳಿದುದು.

ತರುಣಿ ಕೇಳರ್ಜುನನ ಸಾರಥಿ
ವರಬೃಹನ್ನಳೆ ಖಾಂಡವಾಗ್ನಿಯ
ಹೊರೆದ ಗಡ ತಾನೆಂದು ಸತಿಯುತ್ತರೆಗೆ ಹೇಳಿದಳು ॥ ೨೩

ಕೇಳಿ ಹರುಷಿತೆಯಾದಳುತ್ತರೆ
ಯೋಲಗಕೆ ಬಂದಣ್ಣನಂಘ್ರಿಗೆ
ಲೋಲಲೋಚನೆ ಯೆಱಗಿ ಕೈಮುಗಿದೆಂದಳೀಹದನ ।
ಕೇಳಿದೆನು ಸಾರಥಿಯ ನೆಲೆಯನು
ಕಾಳಗಕೆ ನಡೆ ಯಣ್ಣ ದೇವ ನೃ
ಪಾಲಕರ ಜಯಿಸೆಂದೊಡುತ್ತರ ನಗುತ ಬೆಸಗೊಂಡ ॥ ೨೪

ತಂಗಿ ಹೇಳೌ ತಾಯೆ ನಿನಗೀ
ಸಂಗತಿಯನಾರಱುಹಿದರು ಬಳಿ
ಕಂಘವಣೆಯುಳ್ಳವನೆ ಸಾರಥಿತನದ ಕೈಮೆಯಲಿ ।
ಮಂಗಳವಲಾ ಬಳಿಕ ರಣದೊಳ
ಭಂಗನಹೆ ನಿನ್ನಾಣೆ ತನ್ನಯ
ತುಂಗವಿಕ್ರಮತನವನುಱುಹಿದೆ ಲೇಸು ಲೇಸೆಂದ ॥ ೨೫

ಎಂದಳೀ ಸೈರಂಧ್ರಿ ಸುರಪನ
ನಂದನವ ಸುಡುವೆಂದು ಪಾರ್ಥನ
ಮುಂದೆ ಸಾರಥಿಯಾದ ಗಡ ನಾವಱಿಯೆವೀ ಹದನ ।
ಹಿಂದುಗಳಯದೆ ಕರೆಸು ನಮ್ಮ ಬೃ
ಹನ್ನಳೆಯನೆನೆ ನಗುತ ಲೇಸಾ
ಯ್ತೆಂದು ಪರಮೋತ್ಸಾಹದಲಿ ಸೈರಂಧ್ರಿಗಿಂತೆಂದ ॥ ೨೬

ಸಾರಥಿಯ ಕೊಟ್ಟೆನ್ನನುಱುಹಿದೆ
ವಾರಿಜಾನನೆ ಲೇಸ ಮಾಡಿದೆ
ಕೌರವನ ತನಿಗರುಳ ತೆಗೆವೆನು ತಡವ ಮಾಡಿಸದೆ ।

ನಾರಿ ನೀನೇ ಹೋಗಿ ಪಾರ್ಥನ
ಸಾರಥಿಯು ತಾ ಯೆನಲು ನಮ್ಮನು
ವೀರ ಬಗೆಯನು ನಿಮ್ಮ ತಂಗಿಯು ಕಳುಹಿ ಕರೆಸೆಂದು ‖ ೩೭

ಉತ್ತರೆಯು ಬೃಹನ್ನಳೆಯನ್ನು ಕರೆಯುವುದಕ್ಕೆ ಹೋದುದು.

ತಾಯೆ ನೀನೇ ಹೋಗಿ ಸೂತನ
ತಾ ಯೆನಲು ಕೈಕೊಂಡು ಕಮಲದ
ಳಾಯತಾಕ್ಷಿ ಮನೋಭವನ ಮಣಿಯಾನೆಯಂದದಲಿ ।
ರಾಯಕುವರಿ ನವಾಯಗತಿಗರು
ವಾಯಿಯಲಿ ಬರೆ ವಿಟರ ಕರಣದ
ಲಾಯು ತೊಡಕಿತು ತಗೆದಳಂಗನೆ ಜನರ ಕಣ್ಮನವ ‖ ೩೮

ಐದುಶರವೇಕೊಂದು ಬಾಣವಿ
ದೈದದೇ ಯಿನ್ನಮಮ ಕಾಮನ
ಕೈದುಕಾಱತನಕ್ಕೆ ಕೋಡದೆ ಕೊಂಕರಾದವರು [1] ।
ಕಾಯ್ದು ಕೊಳ್ಳನೆ ಮುನಿಮನವನಡ
ಹಾಯ್ದು ಹಿಡಿಯೆನೆ ಹಿರಿಯರನು ವಿಧಿ
ಕೊಯ್ದನಕಟಾ ಕೊರಳನೆಂದುದು ನಗುತ ವಿಟನಿಕರ ‖ ೩೯

ಅರಳುಗಂಗಳ ಬೆಳಗು ಹೊಯ್ದು
ಬ್ಬರಿಸೆ ಚಿತ್ತದ ತಿಮಿರ ಹೆಚ್ಚಲು
ಕುರುಳ ಕಾಳಿಕೆ ತಾಗಿ ಮುಖ ಬಿಳುಪೇಱು ವಿಟಜನದ ।
ಸರಸತರಲಾವಣ್ಯರಸದಿಂ
ದುರಿಮಸಗೆ ಜನಹೃದಯದಲಿ ವೈ
ಪರಿಮಳದ ಪಸರಿನಲಿ ಪದ್ಮಿನಿ [2] ಬಂದಳೊಲವಿನಲಿ ‖ ೪೦

ನಡೆ ನಡೆಯು ಬಂಧಿಸಿತು ನೋಟವ
ನುಡುಗಿಸಿತು ಕಡುನೋಟ ಸತಿಯುಳ
ನುಡಿಯು ಮೇಳದ ಮಾತು ಮನುಜರ ಮಾತ ಮಾಣಿಸಿತು ।

---

1 ಕಂದದಿಹರಾರು, ಚ. 2 ಉತ್ತರೆ, ಕ. ಖ.

ಬಿಡಿಸಿತಧರದ ರಾಗ ರಾಗವ
ಬಡತನವ ಹೆಚ್ಚಿಸಿತು ನಡುವಿನ
ಬಡತನವು ವಿಟಜನಕೆನಲು ನಡೆತಂದಳಿಂದುಮುಖಿ ॥ ೪೧

ಕುರುಳ ತಿದ್ದುತೆ ಮೊಲೆಗೆ ಮೇಲುದ
ಸರಿಯುತೇಕಾವಳಿಯ ಮೆಲ್ಲನೆ
ತಿರುಗಿ ಹಾಯ್ಕುತ ಬಿಡುಮುಡಿಯ ನೆಡಗೈಯೊಳೊಂದಿಸುತೆ ।
ವರನಿರಾಜಿಯ ನಿಱಿಯ ರಭಸದ
ಚರಣದಂದುಗೆ ದನಿಯ ಗಮನದ
ಭರದಿ ಕಿಱುಬೆಮರಿಡುತೆ ನಡೆತಂದಳಿಂದುಮುಖಿ ॥ ೪೨

ಪಾರ್ಥನ ಪ್ರಶ್ನೆ

ಬರವೆ ಕಂಡನು ಪಾರ್ಥನೇನು
ತ್ತರೆ ಕುಮಾರಿ ಕಠೋರಗತಿಯುಲಿ
ಬರವು ಭಾರಿಯಕಾರ್ಯವನು ಸೂಚಿಸುತಲಿದೆ ಯೆನಲು ।

ಉತ್ತರೆಯ ಉತ್ತರ.

ಬರವು ಬೇಱಿಲ್ಲೆನ್ನ ಮಾತನು
ಹುರುಳುಗೆಡಿಸದೆ ಸಲಿಸುವೊಡೆ ನಿಮ
ಗಱುಹಿದಪೆನೆನೆ ಮಿಾಱಬಲ್ಲೆನೆ ಮಗಳ ಹೇಳೆಂದ ॥ ೪೩

ನೆರೆದು ಬಂದರು [1] ಹಸ್ತಿನಾಪುರ
ದರಸುಗಳು ಹೊಲನೊಳಗೆ ಶತಸಾ
ವಿರದ ತುಱುಗಳ ಹಿಡಿವರಟಿದುದು ಗೋಪಪಡೆ ಕಾದಿ ।
ಮರಳಿಚುವರೆನ್ನಣ್ಣ ದೇವನ
ಧುರಕೆ ಸಾರಥಿಯಿಲ್ಲ ನೀವಾ
ನರನ ಸಾರಥಿಯೆಂದು ಕೇಳಿದೆವೆಂದಳಿಂದುಮುಖಿ ॥ ೪೪

[1] ಪುರಕೆ ಹಾಯ್ದರು, ಚ.

ಬೃಹನ್ನಳೆಯು ಸಾರಥಿಯಾಗಲೊಪ್ಪಿ ಉತ್ತರನ ಬಳಿಗೆ ಬಂದುದು.

ಇನ್ನು ನೀವೇ ಬಲ್ಲಿರೆನೆ ನಡೆ
ನಿನ್ನ ಮಾತನು ಮೀಱಬಲ್ಲೆನೆ
ಮುನ್ನ ಸಾರಥಿಯಹೆನು ನೋಡುವೆನೆನುತೆ ವಹಿಲದಲಿ ।
ಬೆನ್ನೊಳಬಲೆಯನೈದಿ ಬರೆ ಸಂ
ಪನ್ನನೋಲಗಕೈದೆ ನಿಜಹರು
ಷೋನ್ನತಿಯಲುತ್ತರಕುಮಾರಕ ಕರೆದು ಮನ್ನಿಸಿದ ॥ ೪೫

ಉತ್ತರ ಬೃಹನ್ನಳೆಯರ ಸಂವಾದ.

ಎಲೆ ಬೃಹನ್ನಳೆ ತೆತ್ತುದೆನಗ
ಗ್ಗಳೆಯರೊಳು ವಿಗ್ರಹವು ಸಾರಥಿ
ಯೞಿದನೆನ್ನವನೀನು ಸಾರಥಿಯಾಗಿ ಸಮರದಲಿ ।
ಉಱುಹಬೇಹುದು ನೀ ಸಮರ್ಥನು
ಫಲುಗುಣನ ಸಾರಥಿಯಲೈ ನೀ
ನೊಲಿದು ಮೆಚ್ಚಲು ಕಾದಿ ತೋಱುವೆನಹಿತಸೇನೆಯಲಿ ॥ ೪೬

ಎಲೆ ಕುಮಾರಕ ನಿನ್ನ ತಂಗಿಗೆ
ಕಲಿಸುವಗ್ಗದ ನಾಟ್ಯವಿದ್ಯೆಗ
ಳೊಳಗೆ ಪರಿಣತಿ ತನಗಿದಲ್ಲದೆ ರಾಯರಿದಿರಿನಲಿ ।
ನಿಲಲು ತಾನಂಜುವೆನು ಕೊಳುಗುಳ
ದೊಳಗೆ ಸಾರಥಿತನವ ಬಲ್ಲೆನೆ
ಎಲೆ ಕುಮಾರನೆ ಯೆನಲು ತಾನಿರೆ ಭೀತಿಬೇಡೆಂದ ॥ ೪೭

ಭರತವಿದ್ಯಾವಿಷಯದಲಿ ಸಲೆ
ಪರಿಚಯವು ನಮಗಲ್ಲದೀ ಸಂ
ಗರದ ಸಾರಥಿತನವ ಮಱೆದೆವು ಹಲವುಕಾಲದಲಿ ।

ಅರಿಭಟರು ಭೀಷ್ಮಾದಿಗಳು ನಿಲ
ಲರಿದು ಸಾರಥಿತನದ ಕೈಮನ
ಬರದರಿಗೆ ದೊರೆಕೊಂಬುದೇ ರಣಸೂಜಿ ಯಲ್ಲೆಂದ ॥ ೪೮

ಆನಿರಲು ಭೀಷ್ಮಾದಿಗಳು ನಿನ
ಗೇನ ಮಾಡಲು ಬಲ್ಲರಳುಕದೆ
ನೀನು ಸಾರಥಿಯಾಗು ನಿಮಿಷಕೆ ಗೆಲುವೆನವರುಗಳ ।
ನಾನದಾರೆಂದಱಿಯಲಾ ಗುರು
ಸೂನುಕರ್ಣದ್ರೋಣರೆಂಬವ
ರಾನಱಿಯದವರಲ್ಲ ಸಾರಥಿಯಾಗು ಸಾಕೆಂದ ॥ ೪೯

ಎಲೆ ಮರುಳೆ ತಾನೆತ್ತ ಚಾತು
ರ್ಬಲದ ಮೋಹರವೆತ್ತ ಗರುಡಿಯ
ನಿಳಯದೊಳಗುತ್ತರೆಗೆ ತಾನೀಭರತವಿದ್ಯೆಯನು ।
ಕಲಿಸಿ ಜೀವಿಸುವರ್ಗೆ ಕೌರವ
ಬಲವ ಕಂಡರೆ ಭೀತಿ ಘನವೆನೆ
ಕಳಕಳಿಸಿ ನಗುತಾಬೃಹನ್ನಳೆಗುತ್ತರನು ನುಡಿದ ॥ ೫೦

ಅಂಜದಿರು ಸಾರಥಿಯೆ ತನ್ನದು
ರಂಜಕದ ನುಡಿಯಲ್ಲ ಕಾವಳ
ವಂಜಿಸುವುದೇ ಇನನ ತನ್ನ ಪರಾಕ್ರಮವನಱಿಯೆ ।
ಭಂಜಿಸುವೆನಹಿತರನು ನಾಕದ
ಕಂಜವದನೆಯರಪ್ಪುವೊಲು ನಿನ
ಗಂಜಿಕೆಯದೇಕೆನಲು ನಗುತಿಂತೆಂದನಾಪಾರ್ಥ ॥ ೫೧

ಆಗ ಬೃಹನ್ನಳೆಯು ಸಾರಥಿತ್ವವನ್ನೊಪ್ಪಿ
ರಥವನ್ನೇರಿದುದು.

ವೀರನಹೆ ಬಱಿಕೇನು ರಾಜಕು
ಮಾರನಿಱಿವೊಡೆ ಹರೆಯುವಲ್ಲಾ
ಸಾರಥಿತ್ವವ ಮಾಡಿ ನೋಡುವೆ ರಥವ ತರಿಸೆಂದು ।

ವಾರುವದ ಮಂದಿರದೊಳಾಯಿದು
ಚಾರುತುರಗಾವಳಿಯ ಬಿಗಿದನು
ತೇರ ಸಂವರಿಸಿದನು ರಥವೇಱಿದನು ಕಲಿಪಾರ್ಥ ॥ ೫೨

ವೀರಕುವರವಿಭಾಡ ರಾಯಕು
ಮಾರಮಸ್ತಕಶೂಲ ವೈರಿಕು
ಮಾರಕೇಸರಿ ರಾಯರೆದೆದಲ್ಲಣದ ನಿಶ್ಶಂಕ ।
ಧೀರಕುವರಕುಠಾರ ಮಲ್ಲಕು
ಮಾರಗಿರಿವಜ್ರ ಯೆನಲು ತಾ
ನಾರಿಯರ ಬಿರುದಿನನುಡಿಯಕೇಳಿಯಲಿ ಪ್ರೊಱಪಂಟ ॥ ೫೩

ಮಿಾಸೆಗಳ ತಿರುಹುವನು ಭುಜದ ವಿ
ಲಾಸವನು ನೋಡುವನು ಬಿರುದಿನ
ಭಾಷೆಗಳನಡಿಗಡಿಗೆ ಕೇಳುತೆ ತುಱುವ ಸೆಱೆಹೊಯ್ದು ।
ಆಸುಯೋಧನಬಲವ ಕಾಲನ
ಮಿಾಸಲಿಗೆ ಮಾಡುವೆನೆನುತೆ ಪರಿ
ತೋಷಸಂರಂಭದಲಿ ಮಾತಿನ ವೀರ ಬರುತಿರ್ದ ॥ ೫೪

ಮಂಗಳಾರತಿ ಯೆತ್ತಿದರು ನಿಖಿ
ಳಾಂಗನೆಯರುತ್ತರಗೆ ನಿಜಸ
ರ್ವಾಂಗಶೃಂಗಾರದಲಿ ಹೊಳೆಯುತೆ ಬಂದು ರಥವೇಱಿ ।

ಕವಚವನ್ನು ತರಿಸಿ ತಾನೇ ತೊಡಿಸಿದುದು.

ಹೊಂಗೆಲಸದಾ ಕವಚವನು ಪಾ
ರ್ಥಂಗೆ ಕೊಟ್ಟನು ಜೋಡುಸೀಸಕ
ವಂಗದೊಳಗಳವಡಲು ರಾಜಕುಮಾರನನುವಾದ ॥ ೫೫

ನರನು ತಲೆಕೆಳಗಾಗೆ ಕವಚವ
ಸರಿಯುತಿರೆ ಘೊಳ್ಳೆಂದು ಕೈ ಹೊ
ಯ್ದರಸಿಯರು ನಗೆ ನಾಚಿದಂತಿರೆ ಪಾರ್ಥ ತಲೆವಾಗಿ ।

ತಿರುಗಿ ಮೇಲ್ಮೊಗವಾಗೆ ತೊಡಲು
ತ್ತರೆ ಬಚ್ಚಿಕ ನಸುನಗಲು ಸಾರಥಿ
ಯಱಿಯ ತಪ್ಪೇನೆನುತಲುತ್ತರ ತಾನೆ ತೊಡಿಸಿದನು ‖ ೫೬

ಕವಚವನು ತೊಡಲಱಿಯದವನಾ
ಹವಕೆ ಸಾರಥಿತನವ ಮಾಡುವ
ಹವಣು ತಾನೆಂತೆನುತ ನಕ್ಕರು ನಿಖಿಳನಾರಿಯರು ।
ಬವರವನು ನಮ್ಮಣ್ಣ ಗೆಲಿದಪ
ನವರವರ ಪರಿಧಾನವಾಭರ
ಣವನು ಸಾರಥಿ ಕೊಂಡು ಬಾ ಯೆಂದಳು ಸರೋಜಮುಖಿ ‖

ಆಗ ಬೃಹನ್ನಳೆಯು ರಥವನ್ನು ನಡೆಸಲು ಸರ್ವರೂ
ಹಿಂದುಳಿದುದು.

ನಸುನಗುತೆ ಕೈಕೊಂಡನರ್ಜುನ
ನೆಸಗಿದನು ರಥವನು ಸವಿಾರನ
ವಿಸುಕಲೀಯದೆ ಮಿಕ್ಕು ನಡೆದುವು ರಥದ ವಾಜಿಗಳು ।
ಹೊಸಪರಿಯ ಸಾರಥಿಯಲಾ ನಮ
ಗಸದಳವು ಸಂಗಾತ ಬರಲೆಂ
ದುಸಿರದುಳಿದುದು ಹಿಂದೆ ಪುರದಲಿ ಚಾತುರಂಗಬಲ ‖ ೫೮

ಪುರದ ರಣಮಂಡಲದ ಬಾಗಿಲ
ನುರವಣಿಸಿ ಹೊಱಕೋಟೆಗಳ ಪರಿ
ಪರಿಯ ಬಾಗಿಲ ಕಳದು ಹರಿದುದು ತೇರು ಬಹಿಲದಲಿ ।
ತೆರೆಯ ಮೇಲಣ ತೆಪ್ಪದಂತಿರೆ
ಧರಣಿಯೊಲೆದುದು ಗಾಲಿಗಳ ಡಾ
ವರದ ಭಾರಿಗೆ ಕೊಱಿಸುದಿಳ ವರರಥದ ಬಿಱುವರಿಗೆ ‖ ೫೯

ಎಲೆ ಬೃಹನ್ನಳೆ ಬವರದೊಳಗೆ
ನ್ನಳವಱಿದು ರಥವೆಸಗಬೇಕೆಂ
ದುಲಿಯೆ ಕೇಳುತೆ ಪಾರ್ಥನತಿವೇಗದಲಿ ನಡೆತರಲು ।

ಬಳಸಿ ತೋಱುವೆ ನಿನ್ನ ಮೆಚ್ಚನು
ಕಲಿಸುವೆನು ನೋಡೆನುತೆ ವಾಘೆಯ
ನಿಳುಹಿ ತೇಜಿಯನಡಹಿ ಮಹಿಲದೊಳೌಕಿದನು ರಥವ ॥ ೬೦

ಗತಿಗೆ ಕುಣಿದುವು ನಾಸಿಕದ ಹುಂ
ಕೃತಿಯ ಪವನನ ಹಳಿವಲುಳಿಯುಲಿ
ಗತಿಯ ಸಂಚಿತಪಂಚಧಾರಾಪ್ರೌಢವಾಜಿಗಳು ।
ವಿತತರಥಪದದಳಿತವಸುಧೋ
ತ್ಪತಿತಧೂಳೀಪಟಳಪರಿಚುಂ
ಬಿತದಿಶಾಮುಖನೈದಿದನು ಕುರುರಾಯ ಮೋಹರವ ॥ ೬೧

ಮುಂದೆ ರಥವೆಸಗಿದನು ಪಾರ್ಥನು
ಬಂದನುತ್ತರಸಹಿತ ಮಹಿಲದೊ
ಳಂದು ಬಡಗಣದೆಸೆಗೆ ಮೇಲಣ ಸುರರು ನೋಡುತಿರೆ ॥
ಇಂದಿನಾಹವದೊಳಗೆ ನರ ರಿಪು
ವೃಂದವನು ಜಯಿಸುವನೆನುತಲಾ
ನಂದದಿಂದವೆ ಹರುಷಿಯಾದನು ವೀರನಾರಯಣ ॥ ೬೨

ಆರನೆಯ ಸಂಧಿ ಮುಗಿದುದು.

ಏಳನೆಯ ಸಂಧಿ.

ಸೂಚನೆ.

ಚಂಡರಿಪುಬಲವಿಲಯಹರನು
ದ್ದಂಡಶಸ್ತ್ರಾಸ್ತ್ರವನು ಕೈ
ಕೊಂಡು ಸುರಪನ ಸೂನು ತಡೆದನು ವೈರಿಮೋಹರವ ॥

ಉತ್ತರನು ಕುರಸೇನೆಯನ್ನು ನೋಡಿದುದು.

ಎಲೆ ಪರೀಕ್ಷಿತತನಯ ಕೇಳ್ ನೃಪ
ತಿಲಕನತಿವೇಗದಲಿ ರಥವನು
ಕೊಳುಗುಳಕೆ ತರೆ ಕಂಡನುತ್ತರ ಮುಂದೆ ದೂರದಲಿ।
ತಳಿತಕುಂತದ ಬಾಯಿಧಾರೆಯ
ಹೊಳವುಗಳ ಹೊದರೆದ್ದ ಸಿಂಧದ
ಸೆಳೆಯ ಸೀಗುರಿಗಳ ಸುರಂಭದ ಸಕಲವೋಹರವೆ ॥ ೧

ಕರಿಘಟಾವಳಿ ಯೊಡ್ಡುಗಲ್ಲಿನ
ತುರಗನಿಕರದ ತೆರೆಯ ತೇರಿನ
ಹೊರಳಿಗಳ ಸುಳಿಯಾತಪತ್ರದ ಬಹಳಬುದ್ಬುದದ।
ನರನಿಕಾಯದ ಜಲಚರೌಘದ
ತರದ ವಾದ್ಯಧ್ವನಿಯ ರವದು
ಬ್ಬರದಲಿದ್ದುದು ಬಹಳಜಲನಿಧಿಯಂತೆ ಕುರುಸೇನೆ [1] ॥ ೨

ಜಡಿವಖಡ್ಗದ ಕಿಡಿಯ ಸೇನೆಯ
ತೊಡರುಗಳ ಕೇಸುರಿಯ ಬಲದು
ಗ್ಗಡದರಭಸದ ರೌದ್ರರವಘಟಘಟಿತನಿಸ್ವನದ।
ಇಡಿದಧೂಳಿಯ ಧೂಮರಾಶಿಯ
ಪಡೆ ವಿರಾಟನ ಸುತನ ಕಂಗಳ
ಗೊಡನೊಡನೆ ದಾವಾಗ್ನಿಯಂತಿರೆ ತೋಱಿತಿದಿರಿನಲಿ ॥ ೩

ಪ್ರಳಯಮೇಘದ ಮಾಲೆಯೋ ಕರಿ
ಕುಲವೊ ಸಿಡಿಲಿನ ಗರುಡಿಯೋ ಕಳ
ಕಳವೊ ಕಲ್ಪಾನಳನ ಧೂಮಾವಳಿಯೊ ಕೈದುಗಳೊ।
ನೆಲನ ದಡ್ಡಿಯ ಬೆಟ್ಟದಡವಿಯೊ
ತಳತಳಿಕ್ಕೆಯವೋ ಜಗಂಗಳ
ನಳಿವಜಲಧಿಯೊ ಸೇನೆಯೋ ನಾನಱಿಯೆನಿದನೆಂದ ॥ ೪

1 ಬಲಜಲಧಿ, ಕ. ಖ.

ಆಗ ಉತ್ತರನು ಹೆದರಿ ರಥವನ್ನು ಹಿಂದಕ್ಕೆ ತಿರುಗಿ
ಸಿಂದು ಹೇಳಿದುದು.

ಕಡೆಗೆ ಹಾಯ್ದುವು ಕಂಗಳೀಬಲ
ಗಡಲ ಮನವೀಸಾಡಲಾರದು
ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ ।
ಪೊಡವಿ ಯಿಾದುದೊ ಮೋಹರವನಿದ
ರೊಡನೆ ಕಾದುವನಾವನಾತನೆ
ಮೃಡನು ಶಿವ ಶಿವ ಕಾದಿ ಗೆಲಿದೆವು ಬಲಕೆ ನಮೊ ಯೆಂದ ॥ ೫

ಕಾಳಕೂಟದ ತೊಱೆಯೊ ಮಾರಿಯ
ಗೂಳಯವೊ ಮೃತ್ಯುವಿನ ಗಂಟಲ [1]
ತಾಳಿಗೆಯೋ [2] ಭೈರವನ ಥಟ್ಟೊ ಜವನ ಜಂಗುಳಿಯೊ ।
ಕಾಲರುದ್ರನ ನೊಸಲ ವಹ್ನಿ
ಜ್ವಾಲೆಯೋ ಕೌರವನ ಸೇನಾ
ಜಾಲವೊ ಶಿವ ಶಿವಾ ಯೆನುತೆ ಹೆದಱಿದನು ಸುಕುಮಾರ ॥ ೬

ಸಾರೆ ಬರಬರಲಿವನ ಮನವು
ಬ್ಬಾರಿಸಿತು ಮೈಮುಱಿದು ರೋಮವಿ
ಕಾರ ಮಿಗೆ ಕಾಹೇರಿತವಯವವಡಿಗಡಿಗೆ ನಡುಗಿ ।
ಭೂರಿಭಯತಾಪದಲಿ ತಾಳಿಗೆ
ನೀರು ತೆಗೆದುದು ತುಟಿಯೊಣಗಿ ಸುಕು
ಮಾರ ಕಣ್ಣೆವೆ ಸೀಯೆ ಕೈಯಲಿ ಮುಚ್ಚಿದನು ಮುಖವ ॥ ೭

ಹಸಿದ ಮಾರಿಯ ಕಟಕದಲಿ ಕುಱಿ
ನುಸುಳಿ ಬದುಕುವುದೆ ಬೃಹನ್ನಳೆ
ಯೆಸಗದಿರು ತೇಜಿಗಳ ತಡೆ ಚಮ್ಮಟಿಗೆಯನು ಬಿಸುಡು ।

1 ಚೂಣಿಯ, ಕ. ಖ. 2 ಪಾಳೆಯವೊ, ಕ. ಖ.

ಮಿಸುಕಬಹುದೇ ಪ್ರಳಯಕಾಲನ
ಮುಸುಕನುಗಿವವರಾರು ಕೌರವ
ನಸಮಬಲನೈ ರಥವ ಮರಳಿಚು ಪುರಕೆ ಬೇಗೆಂದ ॥ ೮

ಬೃಹನ್ನಳೆಯು ಉತ್ತರನಿಗೆ ಧೈರ್ಯವನ್ನು ಹೇಳಿದುದು.

ಎಲೆ ಕುಮಾರಕ ಮೊದಲಚುಂಬನ
ದೊಳಗೆ ಹಲು ಹೋದಂತೆ ಕಾಳಗ
ದೊಳಗೆ ಬೆರಸದ ಮುನ್ನ ಹಿಡಿದೈ ಸಮರಭೀತಿಯನು !
ಅಳುಕಲಾಗದು ನಿಮ್ಮ ತಂದೆಯ
ಕುಲಕೆ ಕುಂದನು ತಾರದಿರು ಮನ
ಗೆಲವಿನಲಿ ಕಾದೆನುತ ರಥವನು ಹರಿಸಿದನು ಪಾರ್ಥ ॥ ೯

ಸಾರೆಬರಬರಲವನ ತನು ಮಿಗೆ
ಬಾರಿಸಿತು ಮೈಮುರಿದು ರೋಮವಿ
ಕಾರದಲಿ ಕಾಹೇರಿತವಯವ ನಡುಗಿತಡಿಗಡಿಗೆ ।
ಭೂರಿಭಯತಾಪದಲಿ ತಾಳಿಗೆ
ನೀರುದೆಗೆದುದು ತುಟಿಯೊಣಗೆ ಸುಕು
ಮಾರ ಕಣ್ಣೆವೆ ಸೀಯೆ ಕರದಲಿ ಮುಚ್ಚಿದನು ಮುಖವ ॥ ೧೦

ಏಕೆ ಸಾರಥಿ ರಥವ ಮುಂದಕೆ
ನೂಕಿ ಗಂಟಲ ಕೊಯ್ವೆ ಸುಡುಸುಡು
ಕಾಕಲಾ ಕಣ್ಣೊಡೆಯುತಿದೆ ಕಾಣಾ ಮಹಾಬಲವ ।
ನಾಕನಿಳಯರಿಗರಿದು ನಿನಗೆ ವಿ
ವೇಕವೆಳ್ಳನಿತಿಲ್ಲಲಾ ತೆಗೆ
ಸಾಕು ವಾಘೆಯ ಮರಳಿ ಸೆಳೆ ತೇಜಿಗಳ ತಿರುಹೆಂದ ॥ ೧೧

ನುಡಿಯ ಕೇಳದೆ ಮುಂದೆ ನಾಲ್ಕೆಂ
ಟಡಿಯ ನರ್ಜುನ ರಥವ ನಡಿಸಲು
ಹಿಡಿದಬಿಲ್ಲಂಬುಗಳು ಬಿದ್ದುವು ಕೈಯ ನರತೆಗೆದು ।

ಹಿಡಿ ಹಯುವನಿಱಿಗಾಱಿ ಸಾರಥಿ
ನುಡಿವವರು ನಾವು ಹಗೆಗಳ ನಿ
ನ್ನೊಡೆಯರಲ್ಲಾ ಸ್ವಾಮಿದ್ರೋಹಿತೆ ಲೇಸು ಲೇಸೆಂದ ॥ ೧೦

ಎಂದೊಡರ್ಜುನ ನಗುತೆ ರಥವನು
ಮುಂದೆ ನಾಲ್ಕಂಟಡಿಯು ನೂಕಲು
ಕೊಂದನೈ ಸಾರಥಿ ಯೆನುತೆ ಸಂವರಿಸಿ ಮುಂಜೆಱಗ ।
ನಿಂದು ಮೆಲ್ಲನೆ ರಥದ ಮೊದಲಿಗೆ
ಬಂದು ಘುಂಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ ॥ ೧೩

ನೋಡಿದನು ಕಲಿಪಾರ್ಥನೀ ಕೇ
ಡಾಡಿ ಕೆದಱಿದ ಕೇಶದಲಿ ಕೆ
ಟ್ಟೋಡುತಿರಲೆಲೆ ಪಾಪಿ ಹಾಯ್ದನು ಹಿಡಿಯ ಬೇಕೆನುತೆ ।
ಕೂಡೆ ಸೂಟಿಯೊಳಟ್ಟ ಲಿಳಿಯ
ಲ್ಲಾಡಿತಹಿಪತಿ ಕುಸಿದ ನತ್ತಲು
ನೋಡಿ ಕೌರವಸೇನೆ ಕೆಡೆದುದು ನಗೆಯ ಕಡಲೊಳಗೆ ॥ ೧೪

ಎಲೆಲೆ ಕಾದಲು ಬಂದ ವೀರನ
ಬಲುಹ ನೋಡಾ ಶಿವ ಶಿವಾ ಬೆಂ
ಬಳಿಯಲಟ್ಟುವ ವೀರನಾರೋ ದಿಟ್ಟನವನಹನು ।
ತಿಳಿಯಲರಿದಿವನಾವನೋ ವೆ
ಗ್ಗಳೆಯನಹ ನಾಕಾರದಲಿ ನೆಱೆ
ಫಲುಗುಣನ ಹೋಲುವನೆನುತೆ ಗಜಬಜಿಸಿತರಿಸೇನೆ ॥ ೧೫

ಈತ ಸಾರಥಿಯುಳವಿಯಲಿ ಮಿಗು
ವಾತನುತ್ತರನರ್ಜುನಂಗೀ
ಸೂತತನವೆತ್ತಲು ನಪುಂಸಕ ವೇಷ ತಾನೆತ್ತ ।

ಈತನರ್ಜುನನಾಗಲಾ ಪುರು
ಹೂತನಾಗಲಿ ರಾಮನಾಗಲಿ
ಯಾತೊಡಿಱುವೆನು ಬರಲಿಯೆಂದನು ಖಾತಿಯಲಿ ಕರ್ಣ ॥ ೧೬

ಇತ್ತಲರ್ಜುನನುತ್ತರನ ಬೆಂ
ಬತ್ತಿದನು ನಿಲು ಹೋದೆಯಾದರೆ
ಕಿತ್ತು ಬಿಸುಡುವೆ ನಿನ್ನ ಶಿರವನು ನಿಲ್ಲು ನಿಲ್ಲೆನಲು ।
ಮಿತ್ತುವೋ ಸಾರಥಿಯೊ ಪಾಪಿಯು
ನೆತ್ತಣಿಂದವೆ ಮಾಡಿಕೊಂಡೆನೆ
ನುತ್ತ ಮರಳಿಯೆ ನೋಡಿ ನಿಲ್ಲದೆ ಮತ್ತೆ ಸೈವರಿದ ॥ ೧೭

ಇಟ್ಟಣಿಸಿ ನರ ನೂಱುಹೆಜ್ಜೆಯೊ
ಳಟ್ಟಿ ಹಿಡಿದನಿದೇನ ಮಾಡಿದೆ
ಹುಟ್ಟಿದೆಯೊ ಹಾದರಕೆ ಬಾಹುಜಬೀಜವೋ ಮೇಣು ।
ದಿಟ್ಟತನ ಮಿಗೆ ಹೆಂಗಳದಿರಲಿ
ಹೊಟ್ಟುಗುಟ್ಟದೆ ಹಗೆಗಳದಿರಲಿ
ಬಿಟ್ಟುಕೊಂಡೆ ದುರಾತ್ಮ ಮುಱಿದೆ ವಿರಾಟನನ್ವಯವ ॥ ೧೮

ಹಲುಗಿರಿದು ಬಾಯೊಳಗೆ ಬೆರಲ್ಗಳ
ನಿಳುಹಿ ತಲೆವಾಗಿದನು ಸಾರಥಿ
ಕಳುಹಿ ಕಳಯ್ಯ ನಿನ್ನ ಬಸಿರಲಿ ಮರಳಿ ಬಂದವನು ।
ಕೊಳುಗುಳದೊಳೀಯೊಡ್ಡ ಮುಱಿವ
ಗ್ಗಳಿಕೆಯುಂಟೇ ಲೋಗರಿಂದವೆ
ಕೊಲಿಸದಿರು ನೀಂ ಕುತ್ತಿ ಕೆಡಹು ಕಠಾರಿಯಿದೆ ಯೆಂದ ॥ ೧೯

ಮನದೊಳೊಡಲೊಡೆವಂತೆ ನಗುತ
ರ್ಜುನನು ಗಜಱಿದನೆಲವೊ ಸಭೆಯಲಿ
ವನಜಮುಖಿಯರ ಮುಂದೆ ಸೊರಹಿದೆ ಬಾಯ್ಗೆ ಬಂದಂತು ।

ಅನುವರದೊಳೇನಾಯ್ತು ರಿಪುವಾ
ಹಿನಿಯನಿಱಿಯದೆ ನಾದನರಿಯವೊ
ಲೆನಗೆ ನೀ ಹಲುಗಿರಿಯೆ ಬಿಡುವೆನೆ ಕಾದು ನಡೆ ಯೆಂದ ॥ ೨೦

ಹೇವ ಬೇಡಾ ವೀರರೀಪರಿ
ಜೀವಗಳ್ಳರ ಪಥವ ಹಿಡಿವರೆ
ಸಾವಿಗಂಜುವೆವೇ ನಪುಂಸಕರೆಮ್ಮ ನೋಡೆನಲು ।
ನೀವು ವೀರರು ನೆಱೆ ನಪುಂಸಕ
ರಾವು ಸಾವವರಲ್ಲ ಲೋಕದ
ಜೀವಗಳ್ಳರಿಗಾವು ಗುರುಗಳು ಬಿಟ್ಟು ಕಳುಹೆಂದ ॥ ೨೧

ಹಱುಕನೇ ನೀನೆಲವೊ ರಾಯರೊ
ಳುಱುವದೊರೆ ನಿಮ್ಮಯ್ಯ ನಿನಗಿಂ
ದಿಱಿವ ಮೆಱೆವವಸರವಲಾ ಜವ್ವನದ ಧುರಭರವ ।
ಸರಿಗಳೆಯದಪಕೀರ್ತಿ ರವಿಶಶಿ
ಮುಱಿದು ಬೀೞ್ವನ್ನಬರ ವೆಲೆನರ
ಗುಱಿಯೆ ನಡೆ ಕಾಳಗಕೆನುತೆ ಹಿಡಿದೆಳದನುತ್ತರನ ॥ ೨೨

ಕೊಳುಗುಳದೊಳೋಡಿದೊಡೆ ಹಜ್ಜೆಗೆ
ಫಲ ಮಹಾಪಾತಕವು ಮುಂದ
ಣ್ಗೊಲಿದು ಹಜ್ಜೆಯನಿಡಲು ಹಜ್ಜೆಗೆಯಶ್ವಮೇಧಫಲ ।
ಅಳದನಾದೊಡೆ ದೇವಲೋಕದ
ಲಲನೆಯರು ತೊತ್ತಿರು ಸುರೇಂದ್ರನು
ನೆಲನನುಪ್ಪಡಿಸುವನು ವೀರಸ್ವರ್ಗವಹುದೆಂದ ॥ ೨೩

ಧುರದೊಳೋಡಿದಪಾತಕವ ಭೂ
ಸುರರು ಕಳದಪರಶ್ವಮೇಧವ
ಧರಣಿಯುಲಿ ಪ್ರತ್ಯಕ್ಷವಾಗಿಯೆ ಮಾಡಲಹುದೆನಲು ।

ಸುರರ ಸತಿಯರನೊಲ್ಲೆವೆಮಗೆ
ಮ್ಮರಮನೆಯ ನಾರಿಯರೆ ಸಾಕೆ
ಮ್ಮರಸುತನವೆಮಗಿಂದ್ರಪದ ನೀ ಬಿಟ್ಟು ಕಳುಹೆಂದ ॥ ೧೪

ಆಳೊಳೊಡ್ಡುಳ್ಳವನು ತೋರಿಯ
ತೋಳುಗಳ ಹೊತ್ತಪನು ಮನೆಯಲಿ
ಸೂಳೆಯರ ಮುಂದುಲಿದು ಬಾಷ್ಕಳಗೆಡೆದು ಬಂದೀಗ ।
ಕೋಲನಿಕ್ಕದೆ ಗಾಯವಡೆಯದೆ
ಕಾಲುವೇಗವ ತೋಱಿದೊಡೆ ನಿಂ
ನೋಲಗದೊಳಂತಕಟ ನಾಚದೆ ಕುಳಿತಿಹೆಯೊ ಎಂದ ॥ ೧೫

ಕಿತ್ತು ಕೊಂಡಾನಾಚಿಕೆಗೆ ನೆಱೆ
ಕುತ್ತಿಕೊಳಬೇಕೆಂಬ ಗಾದೆಯ
ನಿತ್ತ ಹೊದ್ದಿಸಬೇಡ ನಾವಂಜುವೆವು ಕಾಳಗಕೆ ।
ತೆತ್ತಿಗನು ನೀ ನಹಿತನಂತಿರೆ
ಮಿತ್ತುವಹರೇ ನಿನಗೆ ಬೇಡಿದು
ದಿತ್ತು ಸಲಹುವೆನೆನ್ನ ಕೊಲಿಸದೆ ಬಿಟ್ಟು ಕಳುಹೆಂದ ॥ ೧೬

ವಳಿತವನು ವಾರುವವ ಮುಕ್ತಾ
ವಳಿಯಲಂಕಾರವನು ಗಜವನು
ಲಲನೆಯರ ನಾನೀಸಿ ಕೊಡುವೆನು ರಾಜಭವನದಲಿ ।
ಎಲೆ ಬೃಹನ್ನಳ ಯೆಮ್ಮ ಬೊಪ್ಪನು
ಸಲಹಿದೊಡೆ ಕೈಯೊಡನೆ ತೋಱಿದೆ
ಕಲುಮನವಲಾ ನಿನ್ನದೆಂದರೆ ಪಾರ್ಥನಿಂತೆಂದ ॥ ೧೭

ಒಡಲು ಕಿಡುವುದು ನಾಳೆ ನಾಡಿದು
ಪೊಡವಿಯುಳ್ಳನ್ನಬರ ಲೋಕದೊ
ಳಡಗದಿಹುವಪಕೀರ್ತಿಕೀರ್ತಿಗಳೆಂಬುವಿದು ನಿರುತ ।

ಸುಡಲಿ ಜೀವನದಾಸೆಯನು ಕಿಡು
ವೊಡಲ ಭುಕ್ತಿಯ ಭೋಗಕೋಸುಗ
ಕಿಡಿಸಬೇಡಿಹಪರದ ಗತಿಗಳನೆಂದನಾಪಾರ್ಥ ॥ ೨೮

ಪೊಡವಿಪತಿಗಳ ಬಸಿಱು ಬಂದೀ
ಯೊಡಲ ಕಕ್ಕುಲಿತೆಯಲಿ ಕಾಳಗ
ದೆಡೆಗೆ ಬಾರದರಿಲ್ಲ ಭೂತಭವದ್ಭವಿಷ್ಯದಲಿ ।
ನುಡಿಯಲಹುದೇ ಬಂಜೆ ನುಡಿಯನು
ಸುಡುಸುಡೆಲವೋ ರಾಜಬಾಹಿರ
ನಡೆ ವರೂಥದ ಹೊರೆಗೆ ಕಾದಲು ಬೇಡ ಬಾಯೆಂದ ॥ ೨೯

ಕಾದುವೆನು ಮಾಱೊಡ್ಡಿನಲಿ ನೀ
ಚೋದಿಸೆನ್ನಯ ರಥವನಕಟಾ
ವಾದವನು ನೆರೆ ಮಾಣು ಸಾರಥಿಯಾಗು ಸಾಕೆನಲು ।
ಆದಿಯಲಿ ನೀನಾವರಾಯರ
ಕಾದಿ ಗೆಲಿದೈ ಹುಲುಬೃಹನ್ನಳೆ
ಯಾದ ನಿನಗೀಕದನ ನಾಟ್ಯದ ವಿದ್ಯೆಯಲ್ಲೆಂದ ॥ ೩೦

ಎನ್ನಯೊಂದಿಗರಾಜಪುತ್ರರಿ
ಗಿನ್ನು ಮೊಗಸಲು ಬಾರದಿದೆ ನೀ
ನೆನ್ನ ಸಾರಥಿ ಮಾಡಿಕೊಂಡೀ ಬಲವ ಗೆಲುವೆಯಲಾ [1] ।
ಅನ್ನಿಯರ ಮನಗಾಂಬರಲ್ಲದೆ
ತನ್ನ ತಾ ಮನಗಾಂಬರೇ ಈ
ಗನ್ನಗತಕವ ನಾನು ಬಲ್ಲೆನು ಬಿಟ್ಟು ಕಳುಹೆಂದ ॥ ೩೧

ಎಲವೊ ಸಾರಥಿಯಾಗು ಬಾ ಬಿಡೆ
ಗಳಹಿದರೆ ಕಟವಾಯ ಕೊಯ್ವೆನು
ಗೆಲುವೆನೀಪ್ರತಿಭಟನಿಕಾಯವ ನಿನ್ನ ಸಾಕ್ಷಿಯಲಿ ।

---

1 ಧಳವಮಾಱಿನವನೇ, ಚ.

ಬಟಿಕ ನೀ ನಗು ನಡೆ ಯೆನುತೆ ಪರ
ಬಲಭಯಂಕರನುತ್ತರನ ಹೆಡ
ತಲೆಯ ಹಗರನೊಳೌಕಿ ತಂದನು ರಥವನೇರಿಸಿದ ॥ ೩೨

ನಡೆಗೊಳಿಸಿದನು ರಥವ ಮುಂದಕೆ
ನಡಿಸಲುತ್ತರ ನುಡಿದ ಸಾರಥಿ
ಕಿಡಿಸದಿರು ವಂಶವನು ರಾಯನ ಹಿಂದೆ ಹೆಸರಿಲ್ಲ ।
ಬಿಡು ಮಹಾಹವವೆನಗೆ ನೂಕದು
ತೊಡೆಯದಿರು ನೊಸಲಕ್ಕರವ ನೀ
ನೊಡೆಯ ಕಿಂಕರರಾಗಿಹೆವು ನಾವಿಂದು ಮೊದಲಾಗಿ ॥ ೩೩

ಖೇಡತನ ಬೇಡೆಲವೊ [1] ರಣದೊಳ
ಗೋಡಿಸುವೆ ನಹಿತರನು ಹರಣವ
ಹೂಡಿಸುವೆ ನಂತಕನ ನಗರಿಗೆ ಥಟ್ಟನೊಡೆಹಾಯ್ದು ।
ಕೋಡದಿರು ಕೊಂಕದಿರು ಧೈರ್ಯವ
ಮಾಡಿ ಸಾರಥಿಯಾಗೆನುತೆ ಕಲಿ
ಮಾಡಿಕೊಂಡುಯ್ದನು ಸಮೀಪದ ಶಮಿಯ ಹೊರೆಗಾಗಿ ॥ ೩೪

[2] ಇಳಿದರಿಬ್ಬರು ರಥವ ಬನ್ನಿಯ
ಬಳಸಿ ಕೈಮುಗಿದರ್ಜುನನು ಕರ
ತಳವ ನೆಗಹಿ ಸುರೇಂದ್ರಯಮವರುಣಾದಿಗಳಿಗೆಱಗಿ ।
ಕಳೆದೆವಜ್ಞಾತವನು ಕೃಪೆಯಲಿ
ಸಲಿಸಬೇಹುದು ಕೈದುಗಳನೆಂ
ದುಲಿದು ನೇಮವ ಪಡೆದು ಬಟಿಕುತ್ತರನೊಳಿಂತೆಂದ ॥ ೩೫

ಮರನನೇರಿದರೊಳಗೆ ಪಾಂಡವ
ರಿರಿಸಿ ಹೋದರು ಕೈದುಗಳ ನೀ
ಹರಣಭರಣಕ್ಷಮೆಗಳಲಿ ತೆಗೆದೆನಗೆ ನೀಡೆನಲು ।

1 ಖೇಡನಾಗದಿರೆಲವೊ, ಝ.
2 ಈ ಪದ್ಯವು ಕೆಲವು ಪುಸ್ತಕಗಳಲ್ಲಿಲ್ಲ.

ಅರಸುಮಕ್ಕಳು ಮುಟ್ಟಲನುಚಿತ
ಮರದ ಮೇಲಣ ಹೆಣನಿದೇನೈ
ವರಬೃಹನ್ನಳೆ ಮತ್ತೆ ಕೆಲಸವ ನೆನಗೆ ಹೇೞೆಂದ ॥ ೩೬

ಹೊಱಗೆ ತೊಗಲೊಳು ಬಿಗಿದು ಕೆಲಬಲ
ನಱಿಯದಂತಿರೆ ಪಾಂಡುನಂದನ
ಋಜುವಕೈದುವ ನಿರಿಸಿದರು ಹೆಣನಲ್ಲ ತೆಗೆಯೆನಲು ।
ಸೆಱಗನಳವಡೆ ಸಿಕ್ಕಿ ಭೀತಿಯ
ತೊಱೆದು ತುದಿಮರನೇಱಿ ನೇಣ್ಗಳ
ಹಱಿದು ಕೈದುವ ಕಂಡು ಮಿಗೆಯಂಜಿದನು ಭಯಹೊಯ್ದು ॥ ೩೭

ಕಾಳಭುಜಗನೊ ಖಡ್ಗವೋ ಶರ
ಜಾಲವೋ ಕಲ್ಪಾಂತವಹ್ನಿ
ಜ್ವಾಲೆಯೋ ಕೈದುಗಳೊ ಕಾಲಾಂತಕನ ದಾಡೆಗಳೊ ।
ತೋಳು ಧರಿಸುವೊಡರಿದು ನೋಡಿದೊ
ಡಾಲಿಯುರೆ ಬೆಂದುವು ಬೃಹನ್ನಳೆ
ಕಾಳು ಮಾಡಿದೆ ಕೊಂದೆಯೆನುತೋರಂತೆ ನಡುಗಿದನು ॥ ೩೮

ಹೊಗರ ಹೊರಳಿಯ ಹೊಳೆಹು ಬಾಯ್ದಾ
ರೆಗಳ ತಳಪದ ಕಾಂತಿ ಹೊನ್ನಾ
ಯುಗದ ಬಹುಳಪ್ರಭೆ ಶರೌಘದ ನಯದ ಗಹಗಹಿಕೆ ।
ಝುಗಝುಗಿಸೆ ಕಣ್ಮುಚ್ಚಿ ಕೈಗಳ
ಮುಗಿದು ಸಾರಥಿಗೆಂದ ನೆನ್ನನು
ತೆಗೆದುಕೊಳ್ಳೈ ತಂದೆ ಸಿಲುಕಿದೆ ಶಸ್ತ್ರಸೀಮೆಯಲಿ ॥ ೩೯

ತುಡುಕಲಹುದೇ ದೋಷಿ ಹಾವಿನ
ಕೊಡನ ನೆನಗಿದು ಕೈದುವೇ ಬರ
ಸಿಡಿಲು ಡಾವಣಿಯಾಗಿ ಯಿದೆ ಕೈಯಿಕ್ಕಲಂಜುವೆನು ।

ಬಿಡಿಸು ಸಾರಥಿ ಯೆನ್ನನೆನೆ ಘಡ
ನಡುಗದಿರು ಫಲುಗುಣನ ನೆನೆ ಕೈ
ದುಡುಕು ಕೈವಶವಹುದು ತೆಗೆ ಸಾಕೆಂದನಾಪಾರ್ಥ ॥ ೪೦

ಎನಲು ನಲವೇಱಿದನು ತನ್ನಯ
ಮನಕೆ ಧೈರ್ಯವ ಮಾಡಿಕೊಂಡನು
ನೆನೆದು ನೋಡುವೆನೆಂದು ಪಾರ್ಥನ ನೆನೆದು ವೈರಾಟ ।
ತನುಪುಳಕ ತಲೆದೋಱಲಿಂದ್ರನ
ತನಯನನು ಮನದಲ್ಲಿ ವಂದಿಸಿ
ಘನತರದ ಗಾಂಡೀವವನು ಕೈದುಡುಕಲನುವಾದ ॥ ೪೧

ಉಲಿದು ಸತ್ತ್ವದೊಳೌಕಿ ಕಾಯುವ
ಬಲಿದು ತೆಕ್ಕೆಯೊಳೊತ್ತಿ ಬೆವರುತೆ
ಬಳಲಿ ನೀಡಿದ ನರ್ಜುನನ ಕರತಳಕೆ ಗಾಂಡಿವವ ।
ಬಲುಹಿನಿಂದೌಡೊತ್ತಿ ತೆಗೆತೆಗೆ
ದುಳದ ಬಿಲ್ಗಳ ನೀಡಿ ಮರನನು
ಮಲಗಿ ಧಗೆಯಿಂದಳ್ಳೆಹೊಯ್ದು ಕುಮಾರ ನಿಂತೆಂದ ॥ ೪೨

ಗಿರಿಯನೆತ್ತಲು ಬಹುದು ಬಿಲುಗಳ
ತೆರಳಿಚುವೊಡಾಱೆನು ಬೃಹನ್ನಳೆ
ಧರಿಸಲಾಪೈ ನೀ ಸಮರ್ಥನು ನಿನಗೆ ನಮೊಯೆನುತೆ [1] ।
ಸರಳ ಹೊದೆಗಳ ದೇವದತ್ತವ
ಪರಶುತೋಮರಕುಂತವಸಿಮು
ದ್ಗರಗದಾದಂಡಾದಿಶಸ್ತ್ರವ ತೆಗೆದು ನೀಡಿದನು ॥ ೪೩

ಹೇೞು ಸಾರಥಿ ಬಿಲ್ಲಿದಾವನ
ತೋಳಿಗಳವಡುವುದು ಮಹಾಶರ

1 ಶರಣೆನುತೆ, ಖ. ಝ.

ಜಾಲ ಬೆಸಕೈದಪುವಿದಾರಿಗೆ ಮಿಕ್ಕ ಬಿಲ್ಲುಗಳು [1] ।
ಕಾಳಗದೊಳಿವೆ ನಾರು ಹಿಡಿವರು
ಮೇಲುಗೈದುಗಳಾರಿಗಿವು ಕೈ
ಮೇಳವಿಸುವುವು ಮನದ ಸಂಶಯು ಹಿಂಗೆ ಹೇಳೆಂದ ॥ ೪೪

ಇದು ಕಣಾ ಗಾಂಡೀವ ತಾನೆಂ
ಬುದು ಮಹಾಧನು ಪಾರ್ಥನದು ಬಳಿ
ಕಿದು ಯುಧಿಷ್ಠಿರಚಾಪವೀಧನು ಭೀಮಸೇನನದು ।
ಇದು ನಕುಲಕೋದಂಡ ಬಿಲು ತಾ
ನಿದುವೆ ಸಹದೇವನದು ಭಾರಿಯ
ಗದೆ ಯಿದನಿಲಜನದು ಕಿರೀಟಿಯ ಬಾಣವಿವೆ ಎಂದ ॥ ೪೫

* ಅವರವರ ಬತ್ತಳಿಕೆಯನು ಚಾ
ಪವನು ಶರವನು ಕಂಬುಖಡ್ಗವ
ಕವಚವನು ಸೀಸಕವ ರಥವನು ಬಿರುದ ಠೆಕ್ಕೆಯುವ ।
ವಿವಿಧಶಸ್ತ್ರಾಸ್ತ್ರವನು ಫಲುಗುಣ
ವಿವರಿಸಲು ಬೆಱಗಾಗಿ ಸಾರಥಿ
ಯಿವನು ತಾನಾರೆಂದು ಮತ್ಸ್ಯನ ಸೂನು ಬೆಸಗೊಂಡ ॥ ೪೬

---

1 ಕೈದುಗಳು, ಕ. ಜ.

* ಈ ಪದ್ಯವು 45-46ನೆಯ ಪದ್ಯಗಳ ಮಧ್ಯದಲ್ಲಿ ಟ. ಎಂಬ ಪುಸ್ತಕದಲ್ಲಿದೆ.

ವ್ರಣದ ಬಂಧದ ಜಿಗಿಯ ರುಧಿರಾ
ರುಣದ ರೌದ್ರದ ಮಾಣಿಕದ ಕೇ
ವಣದ ಮುತ್ತಿನ ನೀಲ ವೈಡೂರ್ಯಗಳಿನೆಸೆಯುತಿಹ ।
ರಣವಿಜಯ ಫಲುಗುಣನ ಬಿಲ್ಲಿದು
ಮಣಿಯುದು ಸುರಾಸುರರಿಗಿದು ತಾ
ಘನ ನಿರೀಕ್ಷಿಸು ಮತ್ಸ್ಯಸುತ ಎಂದನು ಧನಂಜಯನು ॥

ಆರು ನೀ ನರ್ಜುನನೊ ನಕುಲನೊ
ಮಾರುತನ ಮಗನೋ ಯುಧಿಷ್ಠಿರ
ವೀರನೋ ಸಹದೇವನೋ ಮೇಣವರ ಬಾಂಧವನೋ ।
ಧೀರ ಹೇಳೈ ಬೇಡಿಕೊಂಬೆನು
ಕಾರುಣಿಕ ವಿಸ್ತರಿಸು ಪಾಂಡುಕು
ಮಾರರಾಯುಧತತಿಯು ನೀನೆಂತಱಿಯಬಹುದೆಂದ ॥ ೪೭

ಆದೊಡಾನರ್ಜುನನು ಬಾಣಸಿ
ಯಾದ ವಲಲನು ಭೀಮ ಮರಯತಿ
ಯಾದ ಕಂಕನು ಧರ್ಮಪುತ್ತ್ರನು ನಿಮ್ಮ ಗೋಕುಲವ ।
ಕಾದವನು ಸಹದೇವ ರಾವುತ
ನಾದವನು ನಕುಲನು ವಿಳಾಸಿನಿ
ಯಾದವಳು ಸೈರಂಧ್ರಿ ಯೈವರ ರಾಣಿ ಕೇಳೆಂದ [1] ॥ ೪೮

ಅಹುದು ಬಟಿಕೇನುಟಿದವರಿಗೀ
ಮಹಿಮೆ ತಾನೆಲ್ಲಿಯದು ಕಾಣಲು
ಬಹುದಲಾ ಜೀವಿಸಿದೊಡತಿಶಯವನು ಮಹಾದೇವ ।
ಗಹನ ಮಾಡದೆ ನುಡಿದ ತಪ್ಪಿನ
ಬಹುಳತೆಯ ಭಾವಿಸದೆ ತನ್ನನು
ಕುಹಕಿ ಯೆನ್ನದೆ ಕಾಯಬೇಕೆಂದಂಘ್ರಿಗೆಱಗಿದನು ॥ ೪೯

ಮೌಳಿಯನು ಹಿಡಿದೆತ್ತಿ ನಿನ್ನಯ
ಮೇಲೆ ತಪ್ಪಿಲ್ಲೆನುತೆ ಫಲುಗುಣ
ಬೋಳವಿಸೆ ಬಟಿಕೆದ್ದು ಕೈಮುಗಿದೆಂದನುತ್ತರನು ।
ಬಾಲಕನ ಬಿನ್ನಹವ ನೊಂದನು
ಕೇಳಬೇಹುದು ನಿನ್ನ ದಶನಾ
ಮಾಳಿಯನು ಪೇಳ್ದಲ್ಪಮತಿಯನು ತಿಳುಹಬೇಕೆಂದ ॥ ೫೦

---

1 ರಾಣೀವಾಸವೆಮಗೆಂದ, ಕ.

[1] ಎನಲು ನಸುನಗುತರ್ಜುನನು ಫಲು
ಗುಣ ಧನಂಜಯ ಜಿಷ್ಣು ಸಿತವಾ
ಹನ ವಿಜಯ ಬೀಭತ್ಸು ಪಾರ್ಥ ಕಿರೀಟ ಮೊದಲಾದ ।
ವಿನುತಕೃಷ್ಣನು ಸವ್ಯಸಾಚಿಗ
ಳೆನಿಪಪೆಸರುಂಟೆನುತೆ ಪುನರಪಿ
ತನಗೆ ಬಂದಂದವನು ವಿಸ್ತರವಾಗಿ ವಿವರಿಸಿದ ॥ ೫೧

ನಂಬಿದೆನು ಲೇಸಾಗಿ ನಿಚ್ಜ ಯ
ವಿಂಬುಗೊಂಡುದು ಪಾರ್ಥ ನಿನಗೀ
ಡೊಂಬಿದೇಕೈ ಹುಲುಬೃಹನ್ನಳೆತನದ ಬಲುರೂಪು ।
ಅಂಬುಜಾಕ್ಷನ ಸಾಹಸಪ್ರತಿ
ಬಿಂಬವಲ್ಲಾ ನೀನು ನಿನ್ನ ವಿ
ಡಂಬಿಸಿದ ರೂಹಿಂಗೆ ಕಾರಣವೇನು ಹೇಟೆಂದ ॥ ೫೨

ಇದು ಕಣಾ ಧರ್ಮಜನ ಸತ್ಯಾ
ಭ್ಯುದಯಕೋಸುಗ ವೂರ್ವಶಿಯು ಶಾ
ಪದಲಿ ಬಂದುದು ಹೊತ್ತು ನೂಕಿದೆನೊಂದುವತ್ಸರವ ।
ಇದಕೆ ನಲ್ಜೋಡಾಯ್ತು [2] ನಿರ್ವಿ
ಘ್ನದಲಿ ದಾಂಟಿದೆ ವವಧಿಯನು ನ
ಮ್ಮದಟತನವನು ಭೀತಿ ಯಿಲ್ಲದೆ ನೋಡು ನೀನೆಂದ ॥ ೫೩

---

1 ಎನೆ ನಗುತೆ ಜಿಷ್ಣು ಫಲುಗುಣನ
ರ್ಜುನ ಧನಂಜಯು ಸವ್ಯಸಾಚಿಯು
ಘನವಿಜಯ ಬೀಭತ್ಸು ಪಾರ್ಥ ಕಿರೀಟ ಸಿತವಾಹ ।
ಎನಿಪ ನಾಮಾವಳಿಯು ಮುನ್ನಿನ
ವಿನುತಕೃಷ್ಣಾಭಿಧೆಯು ನುಸಿರ್ದವು
ತನಗೆ ಬಂದಂದವನು ವಿಸ್ತರವಾಗೆ ವಿವರಿಸಿದ ॥

ಎಂದಿದ್ದರೆ ಪದ್ಯವು ಸರಿಯಾಗಿ ತೋರುವುದು.

2 ನಿಚ್ಜೋಡಾಯ್ತು, ಟ. ನೀಜೋಡಾಯ್ತು, ಚ. ನಿಜ್ಜೋಡಾಯ್ತು. ಜ.

ಬಳೆಯ ನುಗ್ಗೊತ್ತಿದನು ಕೌರವ
ಬಲದ ಗಂಟಲ ಬಳೆಯ ಮುಱಿವವೊ
ಲಲಘುಸಾಹಸಿ ಪಱಿಯನುಟ್ಟನು ಮಲ್ಲಗಂಟಿನಲಿ ।
ತಲೆನವಿರ ಹಿಣಿಲಿಱಿದು ತಿಲಕವ
ಗೆಲಿದು ಕಿಗ್ಗಟ್ಟಿನ ಕಠಾರಿಯ
ಹೊಳವಗೊಂಡೆಯ ಮೆಱೆಯೆ ಗಂಡಂದವನು ಕೈಕೊಂಡ ॥೫೪

ತೀರ ತೆಗೆದನು ತನ್ನ ಮುನ್ನಿನ
ವಾರುವಂಗಳ ಹೂಡಿದನು ಕಪಿ
ವೀರ ನೆನೆಯಲು ಬಂದು ಮಂಡಿಸಿದನು ರಥಾಗ್ರದೊಳು ।
ಬಾರು ಸೀಸಕ ಜೋಡು ಕುಲಿಸದ
ಸಾರಕವಚವ ಬಿಗಿದು ಬೊಬ್ಬೆಯ
ಭಾರಣೆಯು ಮಿಗೆ ಧನುವ ಕೊಂಡನು ತಿರುವನೇರಿಸಿದ ॥ ೫೫

ರಾಯ ಧರ್ಮಜ ಬಾಳುಗೆನುತೆ ನಿ
ಜಾಯುಧಂಗಳಿಗೆಱಗಿದನು [1] ಸುರ
ರಾಯನಂದನ ನಲವಿನೊಳು ಗಾಂಡಿವವ ಜೇವಡೆದು ।
ರಾಯಗುವರನ ಸೂತತನದ ವಿ
ಡಾಯಿ ಯಱಿಯಲು ಬಹುದೆನುತೆ ಸಮ
ರಾಯತಾಸ್ತ್ರನು ಪಾರ್ಥ ಸೈದೋಱಿದನು ಪರಬಲಕೆ । ೫೬

ಸಡಿಲ ಬಿಡೆ ವಾಘೆಯನು ಚಿಮ್ಮಿದು
ವಡಿಗಡಿಗೆ ಗರುವಾಯ್ಲ [2] ತೇಜಿಗ
ಳೊಡೆದುದಿಳೆ ಯೆನೆ ಗಜಱು ಮಿಗೆ ಗರ್ಜಿಸಿದುವೆಳ್ಳಱಿದು ।
ಕುಡಿ ನೊಱೆಯ ಕಟವಾಯ ಲೋಳೆಯೊ
ಳೊಡಲ ಸಂಚದ ನುಡಿಯ ಘುಳು ಘುಳು
ಗುಡುವ ನಾಸಾಪುಟದ ಘೋಂಕೃತಿ ಮಸಗೆ ಚಿಮ್ಮಿದುವು ॥ ೫೭

1 ಧರ ಗುರುವಿಂಗೆಱಗಿ, ಜ.   2 ಗತಿವಾಯ್ಲ, ಟ,

ಖುರಪುಟದೊಳಾಕಾಶಭಿತ್ತಿಯು
ಬರೆವವೊಲು ಸೂರಿಯನ ತುರಗವ
ಕರೆವವೊಲು ಕೈಗಟ್ಟಿ ದುವ್ವಾಳಿಸುವೊಡಾಹವಕೆ ।
ಅರರೆ ಪೂತುರೆ ಹಯವೆನುತೆ ಚ
ಪ್ಪರಿಸಲೊಡನೂಕಿದುವು ಕೆಂಧೂ
ಳಿರದೆ ನಭಕುಪ್ಪರಿಸಿ ರವಿಮಂಡಲವ ನಂಡಲೆಯೆ ॥ ೫೮

ತೋಱುವೀಸೇನೆಯೊಳು ಕೌರವ
ನಾರು ಭೀಷ್ಮನದಾರು ಕೃಪ ತಾ
ನಾರು ದ್ರೋಣನದಾವ ನಶ್ವತ್ಥಾಮ ನಾವವನು ।
ವೀರ ಹೇಪೆನಗಿಲ್ಲಿ ಕರ್ಣನ
ದಾರು ತಾ ಕಂಡಱಿಯೆ ನೆನಲಾ
ವೈರಿದಲ್ಲಣ ಪಾರ್ಥ ನಗುತುತ್ತರನೊಳಿಂತೆಂದ ॥ ೫೯

ಉದಯದರುಣನ ಕರುವ ಹಿಡಿದಂ
ದದೊಳು ವರ್ಣಚ್ಛವಿಯೊಳೊಪ್ಪುವ
ಕುದುರೆಗಳ ತೊಳತೊಳಗಿ ಬೆಳಗುವ ಕೊಡನ ಹಱವಿಗೆಯು ।
ಗದಗದಿಪ ಮಣಿಮಯದ ತೇರಿನ
ಕದನಕೋಳಾಹಳನು ಗರುಡಿಯ
ಸದನಸರ್ವಜ್ಞನನು ನೋಡೈ ದ್ರೋಣನವನೆಂದ ॥ ೬೦

ನವರತುನಕೇವಣದ ರಥದತಿ
ಜವದ ತೇಜಿಯ ತೆಕ್ಕೆಗಳ ರೌ
ರವದ ರೌದ್ರಾಯುಧದ ಗಡಣದ ಹರಿಯ ಹಱವಿಗೆಯು ।
ಬವರಭೈರವ ನಾದ ನೀತನು
ಶಿವಗೆ ಸದೃಶನು ನೊಸಲ ನಯನದೊ
ಳವನು ಜಿತಸಂಗ್ರಾಮ ನಶ್ವತ್ಥಾಮ ನಿಸ್ಸೀಮ ॥ ೬೧

ಲಲಿತರತ್ನಪ್ರಭೆಯ ತೇರಿನೊ
ಳುಲಿವ ಬಹುವಿಧವಾದ್ಯರಭಸದ
ಕಳಕಳದ ಕಡುದರ್ಪದಿಂದಳ್ಳಿಱಿವ ತೇಜಿಗಳ ।
ಲಳಿಯ ಲಹರಿಯ ಲಗ್ಗೆಯೊಳು ಸಮ
ತಳಿಪ ಬಿಲುಟಂಕಾರರವದೊಳು
ತೊಳಗುವವ ಕಲಿಕರ್ಣ ನತುಳಪರಾಕ್ರಮಾನಲನು ॥ ೬೨

ಖುರದೊಳವನಿಯ ಹೊಯ್ಯ ಲಳವಿಯೊ
ಳುರಿ ಮಸಗಲುಬ್ಬೇಳ್ವ ತೇಜಿಯ
ಮಿಱುಪ ಮುಕ್ತಾವಳಿಯ ತೇರಿನ ನವವಿಲಾಸದೊಳು ।
ಸರಳ ತಿರುಹುತೆ ನಿಂದು ಧನುವಿನ
ನಿರುತವನು ನೋಡುತ್ತೆ ನೆಱೆ ಝೇಂ
ಕರಿಪ ನತಿಬಲ ನಾಕೃಪಾಚಾರಿಯನು ನೋಡೆಂದ ॥ ೬೩

ಅತ್ತಲಿರ್ಪನೆ ಬಹುಳಬಲದೊ
ತ್ತೊತ್ತೆಯೊಳು ನಮ್ಮುಭಯರಾಯರ
ಮುತ್ತಯನು ತಾನವನು ಹೂಡಿದ ಬಿಳಿಯ ತೇಜಿಗಳ ।
ತೆತ್ತಿಸಿದ ಹೊಂದೇರ ಸಿಂದದ
ಸತ್ತಿಗೆಯ ಸಾಲಿನೊಳು ರಿಪುಗಳ
ಮಿತ್ತು ವಾತನು ವೀರಗಂಗಾಸುತನು ನೋಡೆಂದ ॥ ೬೪

ಅಗಿವ ಹಾವಿನ ಹಱವಿಗೆಯ ಕೈ
ನೆಗಹಿ ಮುಸುಕಿದ ಝಲ್ಲರಿಯ ಮಿಗೆ
ಗಗನತಳದೊಳು ಮೆಱೆವ ಸೀಗುರಿಗಳ ಪತಾಕೆಗಳ ।
ನೆಗಹಿ ನಿಮಿರುವ ಠಕ್ಕೆಯದ ಮದ
ವುಗುವ ಕರಿಗಳ ಮಧ್ಯದವ ತಾ
ನಗಡುದುರ್ಯೋಧನನು ಜೂಜಿನ ಜಾಣ ಸಿವನೆಂದ ॥ ೬೫

ಅವನ ಬಲವಂಕದೊಳು ನಿಂದವ
ನವನು ಭೂರಿಶ್ರವನು ಭಾರಿಯು
ಭುವನಪತಿಯೆಡವಂಕದೊಳು ನಿಂದವ ಜಯದ್ರಥನು ।
ತವತವಗೆ ಬಲುಗೈಗಳೆನಿಸುವ
ಶಿವನ ನೊಸಲಂದದೊಳು ಮೆಱೆವವ
ರವನಿಪಾಲರು ಮಕುಟವರ್ಧನರವರ ನೋಡೆಂದ ॥ ೬೬

ಹೊಗಳಲನುಪಮ ಸೇನೆಯಿಂತಿದು
ದುಗುಣವಂಥಾಸುರನ ಸೇನೆಗೆ
ತಿಗುಣ ವಿದು ರಾವಣನ ಮೋಹರಕೆನುತೆ ಪಲುಗುಣನು ।
ಹಗೆಯ ಭುಜದಗ್ಗಳಿಕೆಯನು ನೆಱೆ
ಹೊಗಳೆ ತೋಱಿದ ನುತ್ತರಗೆ ಮೊಳೆ
ನಗೆಯ ಮನದೊಳಗಾಗ ಸೈವೆರಗಾದ ಸುಕುಮಾರ ೬೭

ತುರಗಹೇಷಿತ ರಥದ ಝೋಂಕೃತಿ
ವರಧನುಷ್ಟಂಕಾರ ಕಪಿಯು
ಬ್ಬರಣೆ ಪಾರ್ಥನ ಬೊಬ್ಬೆ ನಿಷ್ಠುರದೇವದತ್ತರವ ।
ಅರರೆ ಹೊದರೆದ್ದುದು ಗಿರಿವ್ರಜ
ಬಿರಿಯೆ ಜಲನಿಧಿ ಜರಿಯೆ ತಾರಕೆ
ಸುರಿಯೆ ಸುರಕುಲ ನೆರೆಯೆ ಭೀತಿಯೊಳಹಿತಬಲ ಹರಿಯೆ ॥೬೮

ಸಿರವ ಸಿಡಿಲೆಱಗಿದವೊಲುತ್ತರ
ತಿರುಗಿ ಬಿದ್ದನು ಮೂರ್ಛೆಯೊಳು ಹೊಡೆ
ಮರಳಿದುವು ಕಣ್ಣಾಲಿ ಕಾಱಿದುವರುಣವಾರಿಗಳ ।
ಹೊರಳುತಿರಲೆಲೆ ಪಾಪಿ ಸೈರಿಸ
ಲರಿಯೆ ನೀನೆನುತೆ ಫಲುಗುಣನಾ
ಸೆಱಗಿನೊಳು ಬೀಸಿದನು ಕುಳ್ಳಿರಿಸಿದನು ರಥದೊಳಗೆ ॥ ೬೯

ಏನು ಮತ್ಸ್ಯಕುಮಾರ ಬವಣಿಯು
ದೇನು ನಿನಗಿಂದೆನಲು ಜಗದವ
ಸಾನದಂದಿನ ಸಿಡಿಲು ಸುಳಿಯುಲು ಬೆಂದುದೆನ್ನೊಡಲು ।
ಆನಲಾಪೆನೆ ನಿನ್ನ ಬಹುಳ
ಧ್ವಾನವನು ಸಾಕೆನ್ನ ಕಳುಹು ಮ
ಹಾನಿನಾದವ ಮಾಣು ಮಾಣೆನೆ ಪಾರ್ಥನಿಂತೆಂದ ॥ ೭೦

ಖೇಡನಾಗದಿರದ್ಭುತಧ್ವನಿ
ಮಾಡೆನಂಜದಿರಂಜದಿರು ಧೃತಿ
ಮಾಡಿಕೊಂಡೀರಥವ ಜೋಡಿಸೆನುತ್ತೆ ಸಂತೈಸಿ ।
ಮೂಡಿಗೆಯೊಳಂಬುಗಿದು ತಿರುವಿಗೆ
ಹೂಡಿದನು ಫಲುಗುಣನ ಕದನವ
ನೋಡಲಮರಶ್ರೇಣಿ ಮೇಳೈಸಿತ್ತು ಗಗನದೊಳು ॥ ೭೧

ಏಳನೆಯ ಸಂಧಿ ಮುಗಿದುದು.

ಎಂಟನೆಯ ಸಂಧಿ.

ಸೂಚನೆ.

ಕದನಚೌಪಟಮಲ್ಲ ಪರಬಲ
ಮದನಮದಹರರುದ್ರಸಹಿತರ
ಸದೆದು ಮರಳಿಚಿದನು ವಿರಾಟನ ನಿಖಿಳಗೋಕುಲವ ॥

ಭಯವು ಬಾರೈಸಿತ್ತು ಜನಮೇ
ಜಯ ಮಹೀಪತಿ ಕೇಳು ಕುರುಸೇ
ನೆಯೊಳು ಭೀಷ್ಮದ್ರೋಣರಱಿದರು ಪಾರ್ಥನೆಂಬುದನು ।
ಜಯವು ಜೋಡಿಸಲಱಿಯದಿದು ಸಂ
ಶಯವೆ ಸುಳಿವುತ್ಪಾತಶತವಿದು
ಲಯದ ಬೀಜವು ಭೀಷ್ಮ ಚಿತ್ತೈಸೆಂದನಾದ್ರೋಣ ॥ ೧

ಸುರಿಯುತಿವೆ ಕಂಬನಿಗಳನು ಕರಿ
ತುರಗತತಿಯೊರೆಯುಗಿದಡಾಯುಧ
ಮುಱಿದು ಬಿದ್ದವು ಬೀಸುತಿದೆ ಬಿಱುಗಾಳಿ ಬಲ ಬೆದಱೆ ।
ನೆಱೆಯುತಿವೆ [1] ತಾರಕೆಗಳಭ್ರದೊ
ಳರುಣಮಯಜಲಧಾರೆ ಯಿದೆ ತರ
ತರದೊಳು ಪ್ರತಿಸೂರ್ಯಮಂಡಲ ವೆಂದನಾದ್ರೋಣ ॥ ೨

ಇದೆ ಬಹುಳಭೂಕಂಸದದ್ಭುತ
ವಿದೆ ದಿಶಾವಳಿ ಧೂಮಕೇತುಗ
ಳಿದೆ ಪತಾಕಾಭಂಗ ವಿದೆ ವಿಪರೀತಪರಿವೇಷ ।
ಇದು ಸಮಾಹಿತವಲ್ಲ ರಾಜಾ
ಭ್ಯುದಯಕರವೇ ಭೀಷ್ಮ ನಮ್ಮನು
ಸದೆಯದಿಹನೇ ಸುರಪನಂದನ ನೆಂದನಾದ್ರೋಣ ॥ ೩

ಬಿರಿಯಲಬುಜಭವಾಂಡವಿದೆ ಕಪಿ
ವರನ ಕಳಕಳ ದೇವದತ್ತದ
ಧರಧುರದ ದೆಖ್ಖಾಳವಿದೆ ಗಾಂಡಿವದ ಬೊಬ್ಬೆಯಿದೆ ।
ನರನ ನಿಷ್ಠುರ ಸಿಂಹರವ ವಿದೆ
ತುರಗದಳ್ಳಱಿ ಸಾರುತಿದೆ ಸಂ
ಗರಕೆ ಸಾಹಸಮಲ್ಲ ಮೊಳಗಿದ ನೆಂದ ನಾದ್ರೋಣ ॥ ೪

---

1 ಸುರಿಯುತಿವೆ, ಜ.

* ಎಂದು ಪಾರ್ಥನ ಸತ್ತ್ವಸಾಹಸ
ದಂದವನು ಕಲಶೋದ್ಭವನು ನಲ
ವಿಂದೆ ಕೊಂಡಾಡುತ್ತೆ ಗಂಗಾಸುತಗೆ ಹೇಳುತಿರೆ ।
ಸಂದಣಿಸಿ ಕೋಪಾಗ್ನಿ ವದನದೊ
ಳೆಂದು ಕಿಡಿಗೆದಱಲು ದಿವಾಕರ
ನಂದನನು ಪಲುವೊರೆದು ಖಾತಿಯೊಳವರನಿಂತೆಂದ ॥ ೫

ಒಲವೆ ಬೆದಱಿಸಿ ಹಗೆಯ ಭುಜದ
ಗ್ಗಳಿಕೆಯನು ಕೊಂಡಾಡಿ ಸಾವಿಯ
ನಿಱಿಕೆಗಾಂಬಿರಿ ನಿಮ್ಮ ಪೈಕಕೆ ಖುಲ್ಲತನ ಸಹಜ ।
ಫಲುಗುಣನೆ ಯಾಗಲಿ ಸುರೇಂದ್ರನೆ
ನಿಲಲಿ ಭಾರ್ಗವರಾಮನಾಗಲಿ
ಗೆಲಿದು ಕೊಡುವೆನು ಬರಲಿ ಯೆಂದನು ಖಾತಿಯೊಳು ಕರ್ಣ ॥ ೬

---

* ಓಡಿದವ ನುತ್ತರನು ಬೆಂಬಳಿ
ಗೋಡಿ ಹಿಡಿತಂದುಳಿಹಿದವ ಜಾ
ಜಾಡಿ ಮಹಿಷಿಯ ಸೋತ ಮಹಿಪರೊಳೊಬ್ಬನವನಹನು ।
ನಾಡ ಬಯಕೆಗೆ ಬಂದರವಧಿಯ
ಮಾಡಿದರು ಫಲುಗುಣನ ನಿಲವಿದು
ನೋಡೆನುತೆ ಕರ್ಣಂಗೆ ತೋಱಿಸಿದನು ಕೃಪಾಚಾರ್ಯ ॥

ನಿಲ್ಲಿ ಕಳಕಳ ಬೇಡ ಹೋ ಹೋ
ಬಿಲ್ಲ ಡಾವರವಿದೆ ಸಿತಾಶ್ವನ
ಘಿಲ್ಲಣಿಯ ಕೂಗಾಟವಿದೆಕೋ ಸಿಡಿಲಿನಂದದೊಳು ।
ತಲ್ಲಣವಿದಹಿತರೊಳು ರಿಪುಗಳ
ಚಲ್ಲಬಡಿವೆನು ನಮುಗುಪಾಯುವ
ನಿಲ್ಲಿ ನೆರೆಯಲುಬೇಕೆನುತೆ ಕಲಶೋದ್ಭವನು ನುಡಿದ ॥

ಈ 2 ಪದ್ಯಗಳು 4—5 ಪದ್ಯಗಳ ಮಧ್ಯದಲ್ಲಿ 'ಖ' ಗುರುತಿನ ಪುಸ್ತಕದಲ್ಲಿವೆ.

ನರನು ನರನೆಂ[1] ದನವರತ ತಲೆ
ಬಿರಿಯೆ ಹೊಗಳುವಿರಾನಿರಲು ಸಂ
ಗರಕೆ ತಲೆದೋಱಿದೊಡೆ ತಱಿವೆನು ಲೋಕಪಾಲಕರ |
ನರನ ತೆತ್ತಿಗರಹಿರಿ ತತ್ತಡೆ
ಪುರದೊಳಗೆ ಕೌರವನವರು ದು
ಶ್ಚರಿತರೆರಡಿಟ್ಟಹಿರಿ ಖೂಳರು ನಿಮ್ಮೊಳೇನೆಂದ || ೭

ಹೊಕ್ಕು ತಾಂ ಬಳಸಲಿಸಿದೊಡೆ ಹಿಂ
ದಿಕ್ಕಿ[2] ಕೊಳ್ವನದಾರು ಹಗೆವನ
ಸಿಕ್ಕಿದುರಗನ ಸೆಳೆವನಾವನು ಗರುಡತುಂಡದೊಳು |
ಎಕ್ಕತುಳದೊಳು ವೈರಿಪಾರ್ಥನ
ನೊಕ್ಕಲಿಕ್ಕುವೆ ನರಸ ನಿನ್ನೀ
ಚುಕ್ಕಿಗಳ ಚಾಪಳವ ಕೇಳದಿರೆನ್ದನಾಕರ್ಣ || ೮

ಎನಲು ಭುಗಿಲೆಂದನು ಕೃಪಾಚಾ
ರ್ಯನು ಸುಯೋಧನ ಕೇಳು ರಾಧಾ
ತನಯನಿವ ಬಗುಳಿದೊಡೆ ನಿಶ್ಚಯವೆಂದು ಬಗೆಯದಿರು |
ಅನುವರದೊಳರ್ಜುನನ ಗೆಲುವೊಡೆ
ಯೆನಗೆ ನಿನಗೀತಂಗೆ ಕೆಲಬರಿ
ಗನಿಮಿಷರಿಗಳವಹುದೆ ಬಲ್ಲೈ ಪಾರ್ಥನಥಟುಗಳ || ೯

ಮಾಡಿದನು ಹರನೊಡನೆ ಖಾಡಾ
ಖಾಡಿಯನು ಸುರಪತಿಯ ತೋಟವ
ಬೇಡಿದೊಡೆ ಬೇಳದನು ವಹ್ನಿಗೆ ರಾಜಸೂಯದೊಳು |
ರೂಢಿಯುತ್ತರ[3] ದೊರೆಗಳರ್ಥವ
ಹೂಡಿಸಿದ ನರಮನೆಗೆ ದೈತ್ಯರ
ಬೀಡ ಬರಿಕೈದನು ಹಿರಣ್ಯಕಪುರನಿವಾಸಿಗಳ || ೧೦

---

1 ದನುತವನನೆರ್ದೆ ಬಿರಿಯೆ, ಟ.
2 ಕೊಂಬವನಾರುಹಗೆಯನು, ಟ.
3 ಕುರುಗಳ, ಟ.

ಬಾಗಿಸಿದ ಬಿಲ್ಲಿನೊಳು ರಾಯರ
ಮೂಗ ಕೊಯ್ದನು ಮದುವೆಯೊಳು ನೀ
ನೀಗಳೂದಱುವೆ ಕೌರವೇಂದ್ರನ ನಂದು ಬಿಡಿಸಿದಲ ।
ಆಗರುವಸೈಂಧವನ ಮುಡಿಯು ವಿ
ಭಾಗಿಸಿದ ಭಟನಾರು ಪಾರ್ಥನ
ಲಾಗುವೇಗವ [1] ನಾರು ಬಲ್ಲರು ಕರ್ಣ ಕೇಳೆಂದ ॥ ೧೧

* * * * *

ಮರುಳ ಕಣ್ಣಿಗೆ ಕೊಡನ ತೋರದೊ
ಳರದೆ ಸಾಸವೆ ನಿಮ್ಮ ಕಣ್ಣಿಗೆ
ನರನು ದೊಡ್ಡದನುಳದ ವೀರರ ಕಣ್ಗೆ [2] ತುಷಮಾತ್ರ ।
ಮರುಳುಹಾರುವ ಗದ್ಯಪದ್ಯದ
ಸರಸವಿದ್ಯೆಗಳಲ್ಲದೀಸಂ
ಗರದ ಸಾಹಸವಿದ್ಯೆ ನಿಮಗೇಕೆಂದನಾಕರ್ಣ ॥ ೧೨

ಹಣೆಗೆ ಮಟ್ಟಿಯ ಬಡಿದು ದರ್ಭೆಯ
ಹಣಿದು ಬೆರಳೊಳು ಮುರುಹಿ ದೋತ್ರದ
ದಣಿಬವನು ನಿಱಿವಿಡಿದು ಮಹಳದ ಮನೆಯ ಚೌಕದೊಳು ।

---

* 11-12 ನೆಯ ಪದ್ಯಗಳ ನಡುವೆ ಈ ಪದ್ಯವು ಚ. ಎಂಬ ಪುಸ್ತಕದಲ್ಲಿ ದೊರೆಯುತ್ತದೆ.

ಎಲವೊ ಗಂಧರ್ವರು ವನಾಂತರ
ದೊಳಗೆ ನೀನೇ ಕಾಣುತಿರಲಾ
ಸಲಹಿದನ ಹಿಡಿದುಯ್ದೊಡಾರೈ ಬಿಡಿಸಿದತಿಬಲರು ।
ಬಲುಹನೆಮ್ಮೊಳು ಕೆದರದಿರು ಕೊಳು
ಗುಳಕೆ ಬಂದವ ಪಾರ್ಥ ನಿನ್ನ
ಗ್ಗಳಿಕೆಗಕಟಾ ಸರಿಯೆ ತೊಲತೊಲಗೆಂದನಾ ದ್ರೋಣ ॥

[1] ನಾವನಱಿವನು, ಟ. [2] ತುಸಮಾತ್ರ, ಟ.

ಮಣಿಗೆ ಮಂಡಿಸಿ ಕುಳ್ಳಿತುಂಬಾ
ತಣದ ವಿದ್ಯೆಯ ಬಲ್ಲಿರಲ್ಲದೆ
ರಣವಿಚಾರದ ಗೊಡವೆ ನಿಮಗೇಕೆಂದನಾ ಕರ್ಣ ॥ ೧೩

ಇಂದು ಪಿತೃದಿನ ವಿಂದು ಸಂಕ್ರಮ
ವಿಂದು ಸೂರ್ಯಗ್ರಹಣ ಹರಿದಿನ
ವಿಂದು ಯಜ್ಞಾರಂಭದಿನ ನಡ್ಡಂತಿ ಲೇಸೆಂದು ।
ಬಂದು ನಾನಾಮುಖದ ದಾನಗ
ಳಿಂದೆ ವಸ್ತುವ ಬಾಚಿ ಹೊಳ್ಳಿಸಿ
ತಿಂದು ಕೊಬ್ಬಿದ ನಿಮಗೆ ಸುಭಟರ ಮಾತದೇಕೆಂದ ॥ ೧೪

* * * * *

ಬಲ್ಲಿರೈ ಕೌರವನ [1] ಧನವನು
ಹೊಳ್ಳಿಸಲು ಮೃಷ್ಟಾನ್ನದಿಂದವೆ
ಡೊಳ್ಳ ಬಳೆಯಿಸಿ ರಾಜಗುರುತನದಿಂದೆ ಬೆಳೆತಿಹಿರಿ ।
ಬಿಲ್ಲ ವಿದ್ಯಾವಿಷಯ [2] ದರಿಭಟ
ಮಲ್ಲ [3] ರೊಡನೆಯುವಿದ್ಯವಿದು ಜಡ
ರೆಲ್ಲರಿಗೆ ಸುಲಭವೆ ಜಪಾನುಷ್ಠಾನವಲ್ಲೆಂದ ॥ ೧೫

---

1 ರಾಜ್ಯವ, ಟ. 2 ಚೌಪಟ, ಝ. 3 ಚಾಪಳ, ಝ.

* ಮಾರಣದ ಹೋಮದೊಳು ಯಂತ್ರದ
ಸಾರವೈದಿಕಕರ್ಮದೊಳು ಕೃತ
ಧೀರತನದೊಳು ಮನವ ಮುಱುವಿರಿ ನುಡಿಯ ಶಾಪದೊಳು ।
ವೈರಿಗಳ ಕಿಡಿಸುವಿರಿದಲ್ಲದೆ
ಹಾರುವರು ಪೊಕ್ಕಿಱಿದು ಕೊಂಡುದ
ನಾರು ಬಲ್ಲರು ಗಂಡುಗಳು ನೀವಲ್ಲ ಹೋಗೆಂದ ॥

ಈ ಪದ್ಯವು 14ನೆಯ ಪದ್ಯದ ಮುಂದೆ ಚ. ಪುಸ್ತಕದಲ್ಲಿ ಹೆಚ್ಚಾಗಿ ದೊರೆಯುತ್ತದೆ.

ಕೇಳಿದಶ್ವತ್ಥಾಮ ಕಿಡಿಗಳ
ನಾಲಿಗಳೊಳುಗುಳಿದನು ಕೇಳೆಲೆ
ಖೂಳ ಸೂತನ ಮಗನೆ ಸುಭಟಾಂಗದೊಳು ಖರೆಯನಲಾ ।
ಕೀಳುಜಾತಿಗೆ ತಕ್ಕ ನುಡಿಗಳು
ಮೇಳವಿಸಿದುವು ಕುಲವೆ ನಾಲಗೆ
ಹೇಳಿತೆಂಬುದು ತಪ್ಪದಾಯಿತು ಕರ್ಣ ಕೇಳೆಂದ ॥ ೧೬

ನಗುವೆ ವಿಪ್ರರ ನಾವರಾಯನ
ಮಗನೊ ನೀನೀದಾನಧರ್ಮಾ
ದಿಗಳೊಳರ್ಥವ ನಾರು ಕೊಂಬರು ವಿಪ್ರ ಹೊಱಗಾಗೆ ।
ಜಗವ ರಕ್ಷಿಸಲಾವು ಕೊಳ್ವವು
ಮಗುಳೆ ಕೊಡುವೆವು ಬಾಹುಜಾರ್ಯಾ
ದಿಗಳು ಕೊಡುವರು ತತ್ಪರಿಗ್ರಹಯೋಗ್ಯರಲ್ಲೆಂದ ॥ ೧೭

ಉಳಿದವರ್ಣತ್ರಯಕೆ ಬೆಸಗೈ
ವಳವಿಯೊಳು ಶೂದ್ರನು ಕೃತಾರ್ಥನು
ತಿಳಿಯೆ ನೀನಾರಿವರೊಳಗೆ ಕೊಳ್ವವನೊ ಕೊಡುವವನೋ ।
ಕುಲವಿಹೀನನ ತಂದು ಕೌರವ
ತಿಲಕ ಪತಿಕರಿಸಿದೊಡೆ ನಾಲಗೆ
ಯುಲಿಯಲಾಯ್ತೇ ಕರ್ಣ [1] ನಿನ್ನಯ ಭವವ ನೆನೆ ಯೆಂದ ॥

ಪರರು ಪತಿಕರಿಸಿದೊಡೆ ಲಜ್ಜೆಗೆ
ಸಿರವ ನಸುಬಾಗುವರು ಗರುವರು
ದುರುಳ ನೀಂ ದುಱುದುಂಬಿತನದೊಳು ನಿನ್ನ ಹೊಗಳಿದೊಡೆ ।
ಗರುವಮಾನ್ಯರು ಮೆಚ್ಚುವರೆ ಸಸಿ
ನಿರು ಮಹಾತ್ಮರು [2] ನಿನ್ನೊಳಿದಿರು
ತ್ತರವ ಕುಡುವರೆ ಗಳಹತನವೆಮ್ಮೊಡನೆ ಬೇಡೆಂದ ॥ ೧೮

[1] ಮುನ್ನಿನ, ಜ.　　[2] ನಿನ್ನೊಡನೆಯುತ್ತರವ, ಟ.

* ಗರುಡಿಯೊಳು ಸಾಮುಗಲಿಸುವ ಶಿ
ಷ್ಯರನು ಕುಳ್ಳಿರ್ದೋದಿಸುವ ಬಂ
ಧುರದ ತರುಣಾದಿಗಳ ಸಂತತಿಗಳೊಳು ಸುಖಯಿಸುವ ।
ಪರರ ಮನೆಯೊಳು [1] ಜಾತವೆಂದರೆ
ಹರುಷದೊಳು ಹಿಗ್ಗುವ ವಿಡಂಬದ
ಪರಿಯ ನಾಥರು ನೀವು ನಿಮಗೇಕೆಂದನಾ ಕರ್ಣ ॥ ೨೦

ತೆಗೆವೆ ತಾಳಿಗೆಗಡಿತನಕ ನಾ
ಲಗೆಯ ಕೊಯ್ವೆನು ಮುನಿದು ತನ್ನೋ
ಲಗವ ತೆಗಿಸಲಿ ಕೌರವನು ನಿನಗೊಲಿದು ಪತಿಕರಿಸಿ ।
ಅಗಣಿತೋಪಮ ಗುರುವ ನಿಂದಿಸಿ
ನಗುವೆ ನಿನ್ನನು ಕೊಲುವೆ ನೆನುತಾ
ಳುಗಳ ದೇವನು ಸೆಳೆದನಶ್ವತ್ಥಾಮ ಖಂಡೆಯವ ॥ ೨೧

ಆಳು ಮತ್ಸರದಧಿಕರೋಷದ
ಮೇಲುನುಡಿಯಂಕುರಿಸೆ ಕುರುಭೂ
ಪಾಲನಿಬ್ಬರ ತೆಗೆದನುಚಿತೋಕ್ತಿಯೊಳು ಸಂತೈಸಿ ।
ಕಾಳಗಕೆ ತೆತ್ತವನೊಡನೆ ನಿ
ಮ್ಮಾಳುತನವನು ತೋಱಿ ಯೊಳಗೊಳ
ಗಾಳುವಾಸಿಯ ತೋಟ ಬೇಡೆಂದರಸ ಮಾಣಿಸಿದ ॥ ೨೨

ಬಂದು ಭೀಷ್ಮಂಗೆಱಗಿ ಕೈಮುಗಿ
ದೆಂದನೀತನು ಪಾರ್ಥನಾದೊಡೆ
ಹಿಂದಣಂತಿರೆ ನವೆಯಬೇಹುದು ವರುಷಹದಿಮೂಱು ।
ಸಂದುದಿಲ್ಲಜ್ಞಾತವಾಸಕೆ
ಮುಂದೆ ದಿನವಿಹುದೆನ್ನ ಲೆಕ್ಕದೊ
ಳೆಂದು ಕುರುಪತಿ ನುಡಿಯೆ ನಗುತಿಂತೆಂದನಾಭೀಷ್ಮ ॥ ೨೩

---

* ಈ ಪದ್ಯವು, ಚ. ಜ, ಟ. ಪುಸ್ತಕಗಳಲ್ಲಿಲ್ಲ.

1 ಚೌಲ್ಯರು.

ಮಗನೆ ಕೇಳೀರೈದುವರುಷಕೆ
ಮಿಗುವುವೆರಡೇ ಮಾಸ ಮಾಸಾ
ದಿಗಳ ನವರನುಭವಿಸಿದರು ಹದಿಮೂಱು ವತ್ಸರವು ।
ಮಿಗುವವಧಿ ಬುಧರಱಿಯೆ ನಿನ್ನಿನ
ಹಗಲು ನಿನ್ನದು ಪಾಂಡುತನಯರು
ಪುಗುವೊಡಿಂದಿನ ದಿವಸವವರದು ಕಂದ ಕೇಳೆಂದ ॥ ೧೪

ಜಲಧಿ ಮೇರೆಯ ನೊಡೆದು ಹಾಯಲಿ
ನೆಲನ ನಿಳುಹಲಿ ದಿಗಿಭ ವಿನಮಂ
ಡಲಕೆ ಕಾಳಕೆಯಿಡಲಿ ನಡೆದಾಡಲಿ ಕುಲಾದ್ರಿಗಳು ।
ಅಳುಪಲಱಿವನೆ ಸತ್ಯಭಾಷೆಗೆ
ಕಲಿಯುಧಿಷ್ಠಿರನೃಪತಿ ಯನ್ವಯ
ತಿಲಕನಱಿಯಾ ತಂದೆ ಕೌರವರಾಯ ನೀನೆಂದ ॥ ೧೫

ಸಾಕದಂತಿರಲಿನ್ನು ಕಾಳಗ
ನೂಕಲಱಿಯದು ಪಾರ್ಥ ಕೊಲುವೊಡೆ
ಬೇಕು ಬೇಡೆಂಬವರ ಕಾಣೆನು ಹಲವುಮಾತೇನು ।
ಆಕುಮಾರರ ಕರಿಸಿ ಸಂಧಿಯ
ನಾಕವಾಳರ ಮುಂದೆ ಮಾಡಲು
ಲೋಕದೊಳು ಸರಿಯಿಲ್ಲ ನಿನಗೆ ಮಹೀಶ ಕೇಳೆಂದ ॥ ೧೬

ಕಂಡುದಳವಿ ವಿರೋಧಿಗೆಮಗೆಯು
ಕೊಂಡುದೇ ಬಲುಗೈದು ಮನಮುಂ
ಕೊಂಡು ಹೊಕ್ಕುದು ಕಳ ನದಲ್ಲದೆ ಪಾಂಡುಸುತರೊಡನೆ ।
ಉಂಡು ಮೇಣುಟ್ಟೊಲಿದು ಬದುಕುವ
ಬಂಡತನವೆಮಗುಂಟೆ ವೈರವ
ಕೊಂಡೆಸಗಬೇಕೆಂದು ನುಡಿದನು ಕೌರವರ ರಾಯ ॥ ೧೭

ಮೇಲೆ ನೆಗಳುವ ಹದನ ನಿಲ್ಲಿಂ
ಮೇಲೆ ನೀನೇ ಬಲ್ಲೆ ಯೆನುತೆ ವಿ
ಶಾಲಮತಿ ಬಿಸುಸುಯ್ದು ಕೌರವ ಕೆಟ್ಟನಕಟೆನುತೆ ।
ಕಾಳಗವ ನಾವಾನುವೆವು ಪಶು
ಜಾಲಸಹಿತಿಭಪುರಿಗೆ ನೀ ಕಿರಿ
ದಾಳೊಡನೆ ನಡೆ ಯೆಂದು ಸೇನೆಯ ನೆರಡುಮಾಡಿಸಿದ ॥ ೧೮

ಕೌರವೇಂದ್ರನ ಕೂಡೆ ಸೇನಾ
ಭಾರವನು ಪರುಠವಿಸಿ ಕಳುಹಿದ
ನಾರುಭಟೆಯೊಳು ಭೀಷ್ಮ ನಿಂದನು ಥಟ್ಟ ಮೇಳೈಸಿ ।
ವೀರಕರ್ಣ ದ್ರೋಣ ಗೌತಮ
ಭೂರಿಬಲ ಗುರುಸೂನು ಶಕುನಿ ಮ
ಹಾರಥಾದಿಯು ಕೂಡಿಕೊಂಡನು ನರನ ಕಾಳಗಕೆ ॥ ೧೯

ಇತ್ತಲಖಿಳಮಹಾರಥಾದಿಯು
ನೊತ್ತಲಿಕ್ಕಿ ಸುಯೋಧನನು ಪುರ
ದತ್ತ ಗೋಕುಲಸಹಿತ ಹಾಯ್ದನು ಪೂತು ಮಝು ಎನುತೆ ।
ಮುತ್ತಯನು ಮಾಡಿದ ಪಯೋಗದ
ತತ್ತವಣೆ ಲೇಸಾಯ್ತು ಬೇಗದೊ
ಳುತ್ತರನೆ ಕೊಳ್ಳೆಡದ ವಾಘೆಯು ನೆಂದನಾ ಪಾರ್ಥ ॥ ೨೦

ತುಱುಗಳನು ಮರಳಿಚುವುದೆಮಗಿಂ
ದುಱುವ ಕಾರ್ಯವು ತತ್ತ ಕೆಲಸದ
ಹೊಱಿಗೆಯನು ನಿರ್ಣೈಸಿ[1] ಬಟಿಕಿನೊಳವರ ಪಾರುಷವ ।
ನಱಿದು[2] ಕೊಳ್ವನು ಕೊಳ್ಳು ವಾಘೆಯ
ನಿಱಿತ್ರದೆಡೆಯೊಳು[3] ಭೀತಿಗೊಳ್ಳದೆ
ತಱಿದು ತಿರುಗುವ ಲಾಗುವೇಗವ ನೋಡು ನೀನೆಂದ ॥ ೨೧

---

1 ಬಟಿಕಾಪಿವರಧೀವಸನ, ಜ. 2 ಕೊಂಬೆವು, ಜ.
3 ಭೀತಿಗೊಳದಿರು, ಚ.

ಎನಲು ಚಪ್ಪರಿಸಿದನು ತೇಜಿಗ
ಳನಿಲಜನದೊಳು ನಿಗುರಿದುವು ಮುಂ
ವೊನೆಯುವರ ಮನ್ನಿಸದೆ ಬೆಂಬತ್ತಿದನು ಕೌರವನ ।
ಜನಪ ಬಿಡು ಬಿಡು ತುರುಗಳನು ಫಲು
ಗುಣ ಕಣಾ ಬಂದವನು ಕುರುಕುಲ
ವನದವಾನಳನರಿಯೆ ಯೆನುತುತ್ತರನು ಬೊಬ್ಬಿರಿದ ॥ ೨೧

ಎಲೆಲೆ ನರ ಜಾರಿದನು ರಾಯನ
ಬಳಿಯ ಹತ್ತಿದ ನಡ್ಡಹಾಯ್ದತಿ
ಬಳನ ತೆಗೆ ನಮ್ಮತ್ತಲೆನುತಾದ್ರೋಣಗೌತಮರು ।
ಹಿಳುಕ ಕೆನ್ನೆಗೆ ಸೇದಿ ಬೊಬ್ಬೆಯ
ಕಳಕಳದಿ ನಡಗಟ್ಟಿದರು ನಿ
ಲ್ಲೆಲವೊ ಫಲುಗುಣ ಕಾದಿ ನೀನೊಟ್ಟೈಸಿ ಹೋಗೆನುತೆ ॥ ೨೨

ನಗುತೆ ಫಲುಗುಣ ನೆರಡೆರಡು ಕೋ
ಲುಗಳ ನವರವರಂಘ್ರಿಗೆಚ್ಚನು
ತೆಗೆದು ಹಾಯ್ದನು ಮತ್ತೆ ಕೌರವರಾಯಮೋಹರಕೆ ।
ಹೊಗರುಗುವ ಹೊಸಕಣೆಯ ದಡ್ಡಿಯ
ಬಿಗಿದ ನೆಡದೊಳು ಬಲದೊಳಿದಿರೊಳು
ಸೆಗಳಿಕೆಯ ಸಸಿಯಾಯ್ತು ಕೌರವಸೇನೆ ನಿಮಿಷದೊಳು ॥ ೨೩

ಬಿರಿದುವಾನೆಗಳರ್ಜುನನ ಬಿಲು
ದಿರುವಿನಬ್ಬರಕತಿರಥರ ಬಾಯ್
ದೆರಳ ಹಾಯ್ದುವು ವಿಗಡಹನುಮನ ಗಾಢಗರ್ಜನೆಗೆ ।
ಸಿರ ವೊಡೆದು ಸಿಡಿದುದು ಪದಾತಿಯು
ನರನ ಶಂಖಧ್ವನಿಗೆ ಕುರುಬಲ
ಹೊರಳಿಯೊಡೆದುದು ಹಾರಿ ಬಿದ್ದುದು ಹೆದರಿ ಹಮ್ಮೈಸಿ ॥ ೨೪

---

[1] ತೂಳಿದುವು, ಟ.

ಎಲೆಲೆ ನರನೋ ಸುಭಟಜೀವರ
ದಳಿವುಳಿಗನೋ ದಿಟ್ಟರಾಯರ
[1] ದಳಿದ ವಹ್ನಿಯೊ ಪಾರ್ಥನೋ ಘಡ ಕಾಲಭೈರವನೋ ।
ಗೆಲುವರಾವೆಡೆ ಕರ್ಣ ಕೃಪ ಸಾ
ಬಲ ಜಯದ್ರಥರೆಂಬವರ ಹೆಡ
ತಲೆಗೆ ನಾಲಗೆ ಹೋಯಿತೆಂದುದು ಕೂಡೆ ಕುರುಸೇನೆ ॥ ೩೬

ಮರಳಿ ಹೊಡೆ ಹಿಂಡಾಕಳನು ಗೋ
ವರನು ಬಿಡು ಹೆಡಗೈಯ ಕೊಯ್ ನ
ಮ್ಮರಸ [2] ನನುದಪ್ಪಿದನು ತುಱುಸೆಱೆಗೊಳ್ವರೇ ನೃಪರು ।
ಕೊರಳ ಕಡಿತಕೆ ಹೊಕ್ಕ ಹಗೆಗಳ
ಸರಳಗುಸಿರನು ತೆರದಿರೆಂದ
ಬ್ಬರಿಸಿ ಕುರುಬಲ ಬಾಯ ಬಿಟ್ಟುದು ರಾಯ ನಿದಿರನೊಳು ॥ ೩೭

ಬೊಬ್ಬಿಱಿದು ನರನಿಸಲು ಕಣೆಗಳು
ಹಬ್ಬಿದುವು ಹುರಿಗೊಂಡು ಹೂಣಿಗ
ರೊಬ್ಬುಳಿಯ ಹರೆಗಡಿದು [3] ಕರಿಗಳ ಹೊದಱ ಮೆದೆಗೆಡಹಿ ।
[4] ತಿಬ್ಬನೊದೆದಣಿಗೆದ್ದು ಗಱಿವೊರೆ
ದಬ್ಬರಿಸಿ ಕಬ್ಬಕ್ಕಿ ಗಗನವ
ಮಬ್ಬಿಡುವವೊಲು [5] ಮುಸುಕಿದುವು ಫಲುಗುಣನ ಶರಜಾಲ ॥

ತುಡುಕಿ ಖಂಡವ ಕಚ್ಚಿ ಹಾಱುವ
ಗಿಡುಗನಂತಿರೆ ಭಟರ ಗಂಟಲ
ಕಡಿದು ಹಾಯ್ದಂಬುಗಳು ಬಿದ್ದುವು ಕೋದತಲೆಗಳೊಳು ।

---

1 ದಳಿದವಾಗ್ನಿಯೊ, ಚ. 2 ನಯದಪ್ಪಿದನು, ಚ. 3 ತೇರಿನ, ಚ.
4 ತೆಬ್ಬ, ಚ. 5 ತುಡುಕಿದುವು, ಚ, ಮುಸಗಿದುವು, ಜ,

ಅಡಸಿದುವು ಸಿಱಿನಿಟಿಲು ಗರಿ ದೆಲು
ಮೊಡೆದು ಥಟ್ಟುಗಿದಾನೆಗಳ ನಡೆ
ಗೆಡಹಿದುವು ಗಱಿಸಹಿತ ಹಾಯ್ದುವು ಹಯುದ ಹೊಟ್ಟೆಯೊಳು ॥

ಕರುಳ ಬಾಯೊಳು ಕಾಱಿ ಕಾಲಾ
ಳೊರಲಿ ಕೆಡೆದುದು ಜೋಳೆಯಂಬುಗ
ಳಱಿಯೆ ಸಮಸೀಳಾಗಿ ಬಿದ್ದುವು ಗಜದ ಹೋಳುಗಳು ।
ಕೊರಳು [1] ಹಱಿದೊಱೆತೆದ್ದ ರಕುತದ
ಹೊರಳಿಗಳ ಹೊನಲಿನೊಳು ಮುಳುಗಿತು
ತುರಗ ಕರಿ ರಥ ಪತ್ತಿ ಹೊಸಕುಮ್ಮರಿಯು ಹೋಲಿಸಿತು ॥ ೪೦

ಹರಿಗೆ ಖಂಡಿಸಿ ಜೋಡು ಸೀಸಕ
[2] ಜರಿದು ಬಲುದೋಳುಡಿದು ಗೋಣರೆ
ಹಱಿದು ನಿಟ್ಟೆಲು ಮುಱಿದು ತೊಡೆಯರೆಗಡಿದು ತಲೆಯೊಡೆದು ।
ನರ ಹಱಿದು ಕರುಳೊಕ್ಕು ನೆಣನು
ಬ್ಬುರಿಸಿ ಕಾಳಿಜ ಹಾಯ್ದು ನೆತ್ತರು
ಸುರಿದು ಹಱಿದೊಗ [3] ಲೇಳ್ ಹೊರಳಿತು ವೈರಿಪಾಯದಳ ॥ ೪೧

ಮುಂದೆ ಕವಿದಂಬುಗಳು ಸುಭಟರ
ಕೊಂದು ಬಿಸುಟುವು ಮತ್ತೆ ಬಳಿಯೊಳು
ಬಂದುವೆಕೆ ಗುಱಿಯಿಲ್ಲ ಹೊಗಳುವೆ ನೇನನದ್ಭುತವ ।
ಬಂದುಗುಱಿಗೆರಡಂಬ ತುಡಬೇ
ಡೆಂದು ಪಾರ್ಥನ ಬೇಡಿಕೊಂಡುವು
ಸಂದ ಮಂತ್ರಾಸ್ತ್ರಂಗಳಲೆ ಜನಮೇಜಯಕ್ಷಿತಿಪ ॥ ೪೨

* * * *

---

[1] ಹಱಿದೆಱೆತೆದ್ದ, ಖ. [2] ಜಱಿಯೆ, ಟ. [3] ಲೆಳೆಯೆ, ಜ.

* ಮೊರೆದು ಬಿಬ್ಬುಗೋಲುಗಳು ವಜ್ರದ
ಸರಪಳಿಯ ಥಟ್ಟುಗಿದು ಲೋಹದ
ಸಿರದ ಬಲುಸೀಸಕವ ನಿರ್ಮೈಗೊಂಡು ಪಟುಭಟರ ।

ಹಿಕ್ಕಿದುವು ಹಯಕುಲವ ಸುಭಟರ
[1] ನೊಕ್ಕಿ ತೂಱಿದುವಾನೆಗಳ ಸಾ
ಲಿಕ್ಕಿ ನಟ್ಟುವು ಬಹಳರಕುತದ ಕೆಸಱ ಕೈಗಳೊಳು ।
ಮುಕ್ಕಿದುವು ಮಲತರನು ಮಾಂಸವ
ನಿಕ್ಕಿ ಯಾದ್ವಿಜಕುಲಕೆ ಸತ್ರವ
ನಿಕ್ಕಿದುವು ದಿಗುವಲಯದೊಳು ರಣಧೀರನಂಬುಗಳು ॥ ೪೩

ಬಗ್ಗೊಡೆಯದೌಂಕಿದ ಮಹೀಶರು
ಮುಗ್ಗಿದರು ಮುಂನಾದ ಮೇಳದ
ಮೊಗ್ಗೆನೊಳು ಮುಂಕೊಂಡಬಿರುದರು ಬಿಸುಟರೊಡಲುಗಳ ।
ನುಗ್ಗು ನುಸಿಯಾಯ್ತು ತಿರಥರು ಮಿಗೆ
ಮೊಗ್ಗರದ ಮೊನೆ ಮುಱಿಯೆ ಕಾಲನ
ಸಗ್ಗಳಿಯು ಸೆಳೆದಂತೆ ಸುರಿದುವು ರಕುತದಾರೆಗಳು ॥ ೪೪

ಕಾಲದೊಳು ಪರಿಪಕ್ವವಾದ ವಿ
[2] ಶಾಲವಾದೀಜಗದ ಜಂಗವು

ಬಱಿಯ ಕವಚವನುಗಿದು [3] ತೇಜಿಯ
ಕರಿಯ ಹಕ್ಕರಿಕೆಗಳನಡಹಾ
ಯ್ದುರವಣಿಸಿದುವು ಪಾರ್ಥನೆಚ್ಚಂಬುಗಳು ರಥದೊಳಗೆ ॥
ಮುಂಡೆಯೊಳು ಕೈಯಿಟ್ಟು ಕೆಲಬರು
ಸೆಂಡಿರೋಲೆಯ ಕಾಯೆನುತೆಯು
ದ್ದಂಡರಾವುತರು ಕರವಮುಗಿದರು ಕೈದುಗಳ ಬಿಸುಟು ।
ಮಂಡಳಿಕರುಂ ಮರಳಿದರು ಕೈ
ಕೊಂಡು ಕೌರವರಾಯ ತುಱುಗಳ
ಹಿಂಡ ಹಿಂದಿಕ್ಕಿದನು ಸರಿದನು ಭೀಷ್ಮಮೋಹರಕೆ ॥

ಎಂಬೆರಡು ಪದ್ಯಗಳು ಟ. ಪುಸ್ತಕದಲ್ಲಿಯೂ ಮೊದಲನೆಯ ಪದ್ಯಮಾತ್ರ ಖ, ಪುಸ್ತಕದಲ್ಲಿಯೂ 42ನೆಯ ಪದ್ಯದ ಮುಂದೆ ಹೆಚ್ಚಾಗಿ ದೊರೆಯುತ್ತವೆ.

1 ನೊಕ್ಕಲಿಕ್ಕಿದು, ಚ. 2 ಶಾಲಿತರಸ್ಥವರದ, ಟ.

3 ಱಿಂಚೆಯ ಕರಿಯನೈದಾಱಿೀಳ ನೊಡಗೊಂಡು, ಟ.

ಜಾಲವನು ಕಾಲಾಗ್ನಿ ಕವಿಕವಿದಟ್ಟಿ ಸುಡುವಂತೆ ।
ಮೇಲೆ ಮೇಲೊಡಗವಿವ ಬಾಣ
ಜ್ವಾಲೆಯೊಳು ಕುರುಸೈನ್ಯಕಾನನ
ಮಾಲೆಯನು ಕಲಿಪಾರ್ಥಪಾವಕನುರಿಹಿದನು ಮುಳಿದು ॥ ೪೫

ಆವ ಬಿಲ್ಲಾಳಾವ ಲಾಗುವ
ದಾವ ಗಾಡಿಕೆ ಯಾವ ಚಳಕವ
ದಾವ ಶರಸಂಧಾನ ನಾವ ವಿಹಾರ ವಾವ ಪರಿ ।
ರಾವಣನೊಳಂದ್ರಾರಿ ರಾಘವ
ದೇವ ಲಕ್ಷ್ಮಣರಲ್ಲಿ ಕಾಣೆ ನ
ದಾವ ಗರುಡಿಯ ವಿದ್ಯೆ ಮಝು ಭಾಪೆಂದನಾಹನುಮ ॥ ೪೬

ಕಾಣಬಾರದು ಬಿಡುವ ಹೂಡುವ
ಕೇಣವನು ಪರಮಾಣುಪುಂಜವ
ಕಾಣವೇ ಕಣ್ಣುಗಳು ನಮ್ಮವು ಮರ್ತ್ಯದಾಲಿಗಳೇ ॥
ಜಾಣಪಣವಿದು ಶಿವ ಸುದರ್ಶನ
ಪಾಣಿಗಳಗರಿದಮರರಾಯನ
ರಾಣಿಯಾಣೆ ಯೆನುತ್ತೆ ಬೆರಗಾಯಿತ್ತು ಸುರನಿಕರ ॥ ೪೭

ಏಱುವಡೆದರು ಕೆಲರು ಕೆಲರಸು
ಸೂಱೆವೋದುದು ಕೆಲರು ಕೆಲರೆದೆ
ಡೋಱುಗಳ ಪೂರಾಯಗಾಯದೊಳುಸಿರ ತೆಗೆಬಗೆಯ ।
ಕಾಱಿದರು ರಕುತವನು ಸಗ್ಗಕೆ
ಗೂಱು ಮಾಱಾಡಿದರು ತಲೆಗಳ
ಹೇಱಿದರು ಹರಣವನು ಕೊಟ್ಟಿಗೆ ಕಾಲನರಮನೆಗೆ ॥ ೪೮

ಚಲ್ಲಿ ಹೋದರು ಕೆಲರು [1] ಕೆಲಬರು
ಬಿಲ್ಲ ಬಿಸುಟರು ಕೋಲು ಕಟ್ಟಿತು
[2] ಗೆಲ್ಲಗೆಟ್ಟರು ಕೆಲರು ಪಾರ್ಥನ ಕೋಲ [3] ಕೋಹಿನೊಳು ।

ಕೆಲರೊಳು ಬಿಲ್ಲಬಿರುದರು ಕೋಲುಕಟ್ಟಿತು, ಟ. [2] ಎಲ್ಲಿಗಱೆದರು, ಜ, [3] ತೋಹಿನೊಳು, ಝ.

ಮೆಲ್ಲಮೆಲ್ಲನೆ ಸರಿವ ಕೌರವ
ಮಲ್ಲನನು ಕಂಡಡ್ಡವಿಸಿ ತುಱು
ಗಳ್ಳ ಹೋಗದಿರೆನುತೆ ಮೊದಲಿಸಿದನು ಕಲಿಪಾರ್ಥ ॥ ೪೯

ಕಾಯಲಾಪೊಡೆ ಕರೆಯಿರೈ ಕ
ರ್ಣಾಯತಾಸ್ತ್ರರ[1] ನಕಟ ಕೌರವ
ರಾಯ ಸಿಲುಕಿದ ನೆಲ್ಲಿ ಭೀಷ್ಮದ್ರೋಣ ಕೃಪರೆನುತೆ ।
ಬಾಯ ಬಿಡೆ ಕುರುಸೇನೆ ಗುರು ಗಾಂ
ಗೇಯ ಶಕುನಿ ವಿಕರ್ಣ ಕೃಪ ರಾ
ಧೇಯ ಸೈಂಧವ ಚಿತ್ರಸೇನಾದಿಗಳು ಕೂಡಿದರು ॥ ೫೦

ಇತ್ತ ತುಱುಗಳ ಬಿಟ್ಟು ರಾಯನ
ತೆತ್ತಿಗರು ತಲ್ಲಣಿಸಿ ಹರಿದರು
[2] ಹೊತ್ತಿದರು ಹೊಗೆ ನೆಗಹಿದಾಹವಗಹನಗರ್ವಿತರ ।
ಸುತ್ತ ಗೋವರ ಸನ್ನೆಯೊಳು ಪುರ
ದತ್ತ ಮುಂತಾದುದು ಪಶುವ್ರಜ
ವುತ್ತರನು ಮುಳುಗಿದನು [3] ಪರಿತೋಷಪ್ರವಾಹದೊಳು ॥ ೫೧

ಬಿಗಿದ ಕೆಚ್ಚಲ ತೊರೆದುಗುವ ಹಾ
ಲುಗಳ ಮಿಗೆ ಸೂಳದ್ದ ಬಾಲದ
ಮೊಗ ನೆಗಹಿ ದೆಸೆದೆಸೆಯ ನೋಡುವ ಬೆಚ್ಚಬಿಱುವರಿವ ।
ಅಗಿದು ಸರಳಿಸಿ ನಿಲುವ ಹೊಸಬರ
ಸೊಗಡಿಗವ್ವಳಿಸುತ್ತೆ ಗೋವರು
ತೆಗೆದ ಪಥದೊಳು ತೆಕ್ಕೆವರಿದುವು ಹಿಂಡು ಸಂದಣಿಸಿ ॥ ೫೨

---

1 ನೃಪತಿ ಮಾರಿಯ ಬಾಯ ತುತ್ತಾದನು ಕರ್ಣ ಕೃಪ ದ್ರೋಣ ರೆಲ್ಲೆನುತೆ. ಚ.

2 ಹೊತ್ತಿದುದು ಹೊಗೆಯಗಣಿತಾಹವಗಹನಗರ್ವಿತರ, ಚ. ಹೊತ್ತಿದುವು ಹೃದಯಂಗಳಾಹವಗಹನಗರ್ವಿತರ, ಖ.

3 ಪರಿತೋಷಾಂಬು ಪೂರದೊಳು, ಜ.

ಕೆಲವು ಕಡೆಗಂದಿಗಳ ಬಾಲದ
ಬಳಿಗೆ ಮೊಗಿಟ್ಟಡಿಗಡಿಗೆ ಮನ
ನಲಿದು ಮೋಱೆಯನೆತ್ತಿ ಸುಕ್ಕಿಸಿ ಮತ್ತೆ ಹರಿಹರಿದು ।
ಮೆಳೆತು ಕಾಲೊಳು ನೆಲನ ಕೆರೆದ
ವ್ವೆಳಸಿ ಮತ್ತೊಂದಿದಿರು ಮರೆ ಬಲು
ಸಲಗಸೀಡಿಱಿದಾಡುತಿರ್ದುವು ಹಿಂತು ಹಿಂಡಿನೊಳು ॥ ೫೩

ತಿರುಗಿ ಕೆಂದೂಳಿಡುತೆ ತುಱುಗಳು
ಪುರಕೆ ಹಾಯ್ದುವು ನಲವು ಮಿಗಲು
ತ್ತುರಕಿರೀಟಿಗಳಾಂತು ನಿಂದರು ಮತ್ತೆ ಕಾಳಗಕೆ ।
ಅರಸು ಮೋಹರ ಮುಱಿದ ಹರಿಬಂ
ಮರಳಿಚುವ ಮಿಡುಕುಳ್ಳ[1] ವೀರರು
ಬರಲಿಯೆಂದಡಿಗಡಿಗೆ ಬಿಲ್ಲನುತೂಗಿದನು ಪಾರ್ಥ ॥ ೫೪

ಎಂಟನೆಯ ಸಂಧಿ ಮುಗಿದುದು.

ಒಂಭತ್ತನೆಯ ಸಂಧಿ.

ಸೂಚನೆ.

ರಾಯ[2] ರಿಪುಬಲಜಲಧಿವಡಬನ
ಜೇಯನರ್ಜುನನಖಿಳಕೌರವ
ರಾಯದಳವನು ಜಯಿಸಿದನು ಸಮ್ಮೋಹನಾಸ್ತ್ರದೊಳು ॥
*

[1] ವೀರರ ಧುರಕೆ ಬರಹೇಳೆನುತೆ, ಚ. [2] ಕುರುಬಲ, ಚ.

* ಕೇಳು ಜನಮೇಜಯ ಧರಿತ್ರೀ
ಪಾಲಕುತ್ತರನು ಸಮರದ
ಲೀಲೆಯೊಳು ತಾಂ ಮರಳಿ ನಿಂದನು ಧುರಕೆ ಸಮತಳಿಸಿ ।

ಮರಳಿದುವು ತುರು ಮಾರಿಗೌತಣ
ಮರಳಿ ಹೇಳಿತು ಹಸಿದ ಹೆಬ್ಬುಲಿ
ಮೊಱೆಯೆ [1] ಮೈದೋಱದುವು ಹುಲುಮೃಗವೇನನುಸಿರುವೆನು ।
ಧರಣಿಪನ ಹಿಂದಿಕ್ಕಿ ಸೌಬಲ
ದುರುಳ ದುಸ್ಸಹಸೈಂಧವಾದಿಗ
ಳುಱುಬಿದರು ತಱುಬಿದರು ಪರಬಲಕಾಲಭೈರವನ ॥ ೧

*

ಹತ್ತುಸಾವಿರರಥ ಸಹಿತ ಭಟ
ರೊತ್ತಿ ಕವಿದರು ಲಗ್ಗೆವಱೆಗಳ
ಬಿತ್ತರದೆ ಬೈಬೈದು ಸಾರುವ ಗೌಱುಗಹಳೆಗಳ ।
ಸತ್ತಿಗೆಯ ಸಾಲುಗಳೊಳಂಬರ
ತತ್ತುದೈ ಕುಲಶೈಲನಿಚಯದ
ನೆತ್ತಿ ಬಿರಿಯಲು ಮೊಳಗಿದುವು ನಿಸ್ಸಾಳಕೋಟಿಗಳು ॥ ೨

ಕಾಳಗಕ್ಕರಿಭಟರ ಕರೆಯೆ ನೃ
ಪಾಲ ಕರ್ಣದ್ರೋಣಭೀಷ್ಮರು
ಮೇಳವಿಸಿ ನಿಲೆ ಕಂಡು ಮೆಲ್ಲನೆ ರಥವ ನಿಲಿಸಿದನು ॥

ಈ ಪದ್ಯವು ಕ. ಪುಸ್ತಕದಲ್ಲಿ ಮಾತ್ರ ಸೂಚನೆಯ ನಂತರ ದೊರೆಯುತ್ತದೆ.

1 ದನಿದೋಱದುವು, ಟ. ಮೊನೆದೋಱದುವು, ಖ.

* ಎಲೆಲೆ ನರನಿವ ನೋಡೆನುತೆ ಕೈ
ಚಳಕದೊಳು ಕೈಕೊಳ್ಳಿ ಮೋಹರ
ದೊಳಗೆ ತಿರುಗಿದ ನೆತ್ತ ಸಾರಿದ ನಟ್ಟ ಹಿಡಿ ಯೆನುತೆ ।
ನೆಲದೆಗೆದು ಬಿಱುಗಾಳಿಯೊಳಗಣ
ಬಲುಮುಗಿಲವೊಲು ಸೇನೆ ತಳಿಪಟ
ದೊಳಗೆ ತಱುಬಿತು ಮಕುಟವರ್ಧನಕೋಟಿನಾಯಕರ ॥

ಈ ಪದ್ಯವು ಒಂದನೆಯ ಪದ್ಯದ ಮುಂದೆ ಕ. ಟ. ಎಂಬ ಪುಸ್ತಕಗಳಲ್ಲಿ ಮಾತ್ರ ದೊರೆಯುತ್ತದೆ.

ಚಂಬಕನ ಹಱೆ ಡಕ್ಕೆ ಡಮರುಗ
ಬೊಂಬುಳಿಯು ಗೋಮುಖದ ಡೌಡೆಯು
ಕೊಂಬುಕಹಳೆಯು ರಾಯು [1] ಗಿಡಿಗನ ಪಟಹ ಡಿಂಡಿಮದಾ ।
ತಂಬಟದ ನಿಸ್ಸಾಳದಬ್ಬರ
ತುಂಬಿತದು ನೆಲ [2] ಬಿರಿಯೆ ಬಲವಾ
ಡಂಬರದೊಳರ್ಜುನನ ಮುಸುಕಿತು ದೊರೆಯು ಸನ್ನೆಯೊಳು ॥ ೩

ಮುರಿದುವು ತುಱುವೆಂಬ ಗರ್ವದ
ಗಿರಿಗೆಕೊಳ್ ಕುಲಿಶವೆನು ಸೇನೆಯು
ನೊರಸಿದುತ್ಸವಜಲಧಿಗಿದೆ ಕೊಳ್ ಬಾಡಬಾನಲನ ।
ಅರಸನಳುಕಿದನೆಂಬ ಜಯದು
ಬ್ಬರದ [3] ಬೆಳಸಿಗೆ ಕಡುನಿದಾಘದ
[4] ಬಿಱುಬಿಸಿಲ ಕೊಳ್ಳೆಂದು ಕೈಕೊಂಡೆಚ್ಚರತಿರಥರು ॥ ೪

* ಮೊಗಕೆ ಹರಿಗೆಯು ಚಾಚಿ ಕಾಲಾ
ಳಗಿದು ಕವಿದುದು [5] ಸರಳ ಸರಿಯೊಳು
ಬಿಗಿದ ಬಿಲ್ಲಾಳೌಕಿತುರವಣಿಸಿದರು ಸಬಳಿಗರು ।
ಉಗಿದಡಾಯುಧವೇಱಿದರು [6] ಭಾ
ಷೆಗಳ ರಾವುತರು ಕೆಂಗಱಿಯು ಕೋ
ಲುಗಳ ಹೆಮ್ಮಳೆಗಱೆಯು ಕವಿದರು ಜೋದರತಿರಥರು ॥ ೫

ಅರರೆ ರಾವುತು ರಾವುತೆಂಬ
ಬ್ಬರಣೆ ಮಸಗಿದುದೊಂದುಕಡೆಯೊಳು
ಸರಿಸಸಬಳಿಗ ಪೂತು ಪಾಯಕು ವೆಂಬ ಕಳಕಳಕೆ ।

---

1 ಗಿಡಿಮಿಡಿ, ಕ.　2 ಕುಸಿಯೆ, ಜ. ಟ.　3 ಗಿರಿಗಿದೆ, ಕ.
4 ಖರಸಿಡಿಲು, ಕ.　5 ಬಿಟ್ಟಸರಿಯು, ಚ.　6 ವೆಗ್ಗಳೆಯು, ಜ.
* ಮೊಗಕೆಹರಿಗೆಯು ಎಂಬುದೇ ಮೊದಲಾದ ೫ನೆಯ ಪದ್ಯವೂ ಅರರೆರಾವುತು ಮೊದಲಾದ ೬ನೆಯ ಪದ್ಯವೂ ಝ ಎಂಬ ಪುಸ್ತಕದಲ್ಲಿಲ್ಲ.

ಧಿರುರೆ ಸಾರಥಿ ಹಳು ಹಳಂಬ
ಬ್ಬರಣೆ ಮಸಗಿದುದೊಂದುಕಡೆಯೊಳು
ಕರಿಘಟೆಯು ಕಡುಹೊಂದುಕಡೆಯೊಳು ಮುಸುಕಿತರ್ಜುನನ ॥ ೬

ಸುರಪನಡವಿಯು ಚರ್ಚಿದೊಡೆ ಸುರ
ರರಮನೆಯ [1] ಗಾಯಕರ ಗೆಲಿದೊಡೆ
ಜರಡುಜಂತ್ರದ ಮಾನನೆಚ್ಚೊಡೆ ರಾಯಕಟಕದೊಳು ।
ಗೊರವನೊಳು ಕಾದಿದೊಡೆ ಹೆಂಗುಸ
ನಿರುಳು ಕದ್ದೊಯ್ದೊಡೆ ದಿಟ ನೀಂ
ಧುರಕೆ ಧೀರನೆ ಪಾರ್ಥ ಫಡ ಎನುತೆಚ್ಚರತಿರಥರು ॥ ೭

ಭಂಡರುಲಿದೊಡೆ ಗರುವರದ ಮಾ
ರ್ಕೊಂಡು ನುಡಿವರೆ ಸಾಕದೇತಕೆ
ದಿಂಡುದಜೀವನು ನಿಮಿಷ ಸೈರಿಸಿ ನಿಂದು ಕಾದುವೊಡೆ ।
ಕೊಂಡಹಜ್ಜೆಯ ಹಂಗಿಗರು ಮಿಗೆ
[2] ಗಂಡುಗಿಡುವಿರಿ ನಿಮ್ಮ ನುಡಿಗಳ
ಕಂಡು ಬಲ್ಲೆನೆನುತ್ತೆ ಫಲುಗುಣ ನೆಚ್ಚನತಿರಥರ ॥ ೮

ಗುರುಸುತನ ಬಿಚಿ ರಥವೆ ನೈಸಾ
ಸಿರವ ಮುಱಿದನು ಕರ್ಣನೊಡನೆಯ
ವರಮಹಾರಥವೆಂಟುಸಾಸಿರವನು ರಣಾಗ್ರದೊಳು ।
ಗುರುನದೀಜರ ಬಿಚಿ ರಥವೆ ಸಾ

---

1 ನಾಯಕರ, ಝ.

2 ಮಿಂಡುಗಿಡದಿರಿ, ಚ. ಮಿಂಡುಗಿಡುವಿರಿ, ಜ. ಖ. ದಿಂಡುಗಿಡುವಿರಿ, ಟ. ಕೊಂಡುಗೆಡೆದರೆ, ಝ. (ತೊಂಡುಗೆಡೆದೊಡೆ ಎಂದಿರಬೇಕಾದುದಕ್ಕೆ ಕೊಂಡು ಎಂದು ಬಿದ್ದಿರಬಹುದೆಂದೂಹಿಸಲವಕಾಶವಿದೆ.)

ಸಿರವ [1] ಸೈಂಧವಕೃಪಸುಯೋಧನ
ರರಸುಥಟ್ಟಿನ ರಥವ [2] ಮುಱಿದನು ಹತ್ತುಸಾಸಿರವ ॥ ೯

* ಸವಗ ಸೀಳಿತು ಕೃಪನ ಭೀಷ್ಮನ
ಕವಚ ಹಱಿದುದು ದ್ರೋಣ ನೊಂದನು
ರವಿಯ ಮಗ ಮಸೆಗಂಡ ನಶ್ವತ್ಥಾಮ ನೈಮಱೆದ ।
ಅವನಿಪತಿಗೇಱಾಯ್ತು ಸಲೆ ಸೈ
ನ್ಧವಶಕುನಿದುಶ್ಶಾಸನಾದಿಗ
ಳವಯವದೊಳಂಬು [3] ಗಳನಾಯ್ದರು ತೋದರಕುತದೊಳು ॥ ೧೦

ಕಡಿವಡೆದುದ ಕ್ಷೋಣಿಬಲ [4] ಬೆಂ
ಗೊಡದೆ ನೊಂದರು ಹಲಬರಿನ್ನೇ
ನೊಡಲುಗಳ ಮೇಲಾಸೆ [5] ಯೆಂದಬ್ಬರಿಸಿ ಮಿಗೆ ಮಸಗಿ ।
[6] ಸೆಡೆದು ಸೊಪ್ಪಾದಖಿಳವೀರರ
ಗಡಣವನು [7] ಬೋಳೈಸಿ ಮಗುಳವ
ಗಡಿಸಿ ನೂಕಿತು ಸೇನೆ ಭೀಷ್ಮದ್ರೋಣರಾಜ್ಞೆಯೊಳು ॥ ೧೧

---

1 ಕೊಂದನು ವರ, ಚ. ಝ.		2 ಸೀಳಿದ ಹತ್ತು, ಚ. ಝ.

* ಈ ಪದ್ಯವು, ಕ. ಚ. ಪುಸ್ತಕಗಳಲ್ಲಿ ಮಾತ್ರ ಹೆಚ್ಚಾಗಿ ದೊರೆಯುತ್ತದೆ.

ತುರಗದಳವೆಂಭತ್ತುಸಾಸಿರ
ಕರಿಘಟೆಯನೈವತ್ತುಸಾಸಿರ
ವರರಥವ ಹುಡಿಮಾಡಿದನು ಹನ್ನೆರಡುಸಾಸಿರವ ।
ಧುರಕೆ ಮೆಗ್ಗಳರಾದ ರಥಿಕರ
ಸಿರವ ತಱಿದನು ಮೂಱುಕೋಟಿಯ
ನರಸ ಕಾಲಾಳುಗಳ ಗಣನೆಯ ನಱಿವರಾರೆಂಬ ॥

3 ಗಳುನಾದುವು, ಜ.

* ಈ ಪದ್ಯವೂ ಝ. ಪುಸ್ತಕದಲ್ಲಿಲ್ಲ.

4 ಬೆಂಗುಡುವಸುಭಟರ ನೋಡಿ ಯಿನ್ನೇ, ಚ,		5 ಯೆಂದಬ್ಬರಣೆ, ಟ.

6 ಜಡಿಯುತಮುಂಬುವ ಕಡುಪರಾಕ್ರಮದಗಡರುಮುಂಬಿತು ಮತ್ತೆ, ಜ.

7 ಮೋಳೈಸಿ, ಖ.

ಖತಿಯೊಳಶ್ವತ್ಥಾಮ ನೀರವಿ
ಸುತನ ಜಱಿದನು ಗಾಯುವಡೆದೈ
ಪ್ರತಿಭಟನ ಭಾರವಣೆ ಲೇಸೈ ಕರ್ಣ ನೀ ನಱಿದೈ ।
ಅತಿಬಲನು ನೀ ನಹಿತಭಟವನ
ಹುತವಹನು ನೀ ನಿರಲು ಕುರುಭೂ
ಪತಿಯು ಬಲ ನುಗ್ಗಾಯ್ತಲಾ ನಿಷ್ಕರುಣಿ ನೀ ನೆಂದ ॥ ೧೨

ಭಟನು ನಾನಿರಲುಭಯರಾಯರ
ಕಟಕದೊಳಗಿನ್ನಾವನೆಂದು
ಬ್ಬಟೆಯನುಡಿಗಳ ನುಡಿದು ಬಾಚಿದೆ ಕೌರವನ ಹಣವ ।
ಭಟನು ಫಲುಗುಣ ನಹನೆ ತೋಱಾ
ಪಟುತನವ ನೆಲೆ ಅಪಜಯಸ್ತ್ರೀ
ವಿಟನೆ ವಿಹ್ವಲನಾದೆ ಯೆಂದನು [1] ದ್ರೋಣ ನಸುನಗುತೆ ॥ ೧೩

ಆಗಳೇಱಿಸಿ ನುಡಿದ ನುಡಿ ತಾ
ನೀಗ [2] ಳಱಿದುದೆ ಬಂಜೆವಾತನು
ಮೋಗನಱಿಯದೆ [3] ತಱಿಚುಗೆಡೆವರೆ ವೀರರಾದವರು ।
ಈಗಳಾಂಹಾರುವರು ಬಾಹುಜ
ನಾಗಿ ನೀ ನರ್ಜುನನ ತುಱುಗಳ
ಬೇಗ ಮರಳಿಚಿ [4] ತಂದು ತೋಱದೆ ಮಾಣೆ ದಿಟವೆಂದ ॥ ೧೪

---

1 ದ್ರೋಣಸುತ, ಖ. ಚ. (ಇದಕ್ಕನುಸಾರವಾಗಿ ಮೇಲೆ ದ್ರೌಣಿ ಎಂದಿದ್ದರೆ ಚೆನ್ನಾಗಿ ತೋರುತ್ತದೆ.)

2 ಳೀನಾಯ್ತೆಂಬ ಮಾತಿನ । ತಾಗ, ಚ. ಝ. ಜ. ಳಾದುದೆ ಬಂಜೆಮಾತಿನ ತಾಗ, ಟ.

3 (?) ಜಱುಚಿಕೆಡೆವರೆ ಎಂದಿದ್ದರೆಸುಲಭವಾಗಿ ತೋರುತ್ತದೆ,

4 ಕೊಂಡುಬಾರದೆ, ಚ.

ಎಲವೊ ಗರುಡಿಯ ಕಟ್ಟಿ ಶ್ರಮವನು
ಕಲಿಸಿ ಬದುಕುವ [1] ಮೋಣು ಕಲೆಗಳ
ಕಲಿಸಿ ಬದುಕುವ ಕೃಪಣವೃತ್ತಿಯ ನಿಮ್ಮ ಕೂಡೆಮಗೆ ।
ಕಲಹವೇತಕೆ ಕಾಣಬಹುದೆಂ
ದಲಘುಭುಜಬಲಭಾನುಸುತ ಕಡು
ಮುಳಿದು ಘಡ ಘಡ ಪಾರ್ಥ ಮೈದೋಱೆನುತೆ ಮಾಱಾಂತ ॥

ಇತ್ತಲಿತ್ತಲು ಪಾರ್ಥ ನಿಲು ನಿಲು
[2] ಮುತ್ತಯನ ಹಾರುವರ ನಂಜಿಸಿ
ಹೊತ್ತುಗಳೆದರೆ [3] ಹೋಹುದೇ ಮೈದೋಱು ಕೈದೋಱು ।
ತೆತ್ತಿಗರ ಕರೆ ನಿನ್ನ ಬೇರನು
ಕಿತ್ತು ನೀರೊಳು ತೊಳೆ [4] ವ ರಿಪುಭಟ
ಮೃತ್ಯುವಲ್ಲಾ ಕರ್ಣನೆನುತಿದಿರಾಗಿ ನಡೆತಂದ ॥ ೧೬

ಉಂಟು ನೀನಾಹವದೊಳಗೆ ಗೆಲ
ಲೆಂಟೆರ್ದೆಯಲಾ ನಿನ್ನ ಹೋಲುವ
[5] ರುಂಟೆ ವೀರರು ಕೌರವೇಂದ್ರನ ಬಹುಳಕಟಕದೊಳು ।
ಟೆಂಟಣಿಸದಿದಿರಾಗು ನಿನ್ನಯ
ಸುಂಟಿಗೆಯ ನಿತ್ತಖಿಳಭೂತದ
ನಂಟ ನರ್ಜುನ ನೆನಿಸಿ ಕೊಳ್ವೆನು ಕರ್ಣ ಕೇಳೆಂದ ॥ ೧೭

---

1 ಮೋಣು ಕಾಳಗಗಲಿಸಿ ಜೀಣಾಗುವ, ಕ. ಮಾನ್ಯವೃತ್ತಿಯ ನೊಲಿದು ತೋಱುವ, ಚ, ಝ.

2 ಮುತ್ತವರ, ಟ.

3 ಬಿಡುವೆನೇ, ಟ.

4 ವೆನಱಿಯಾ ಮಿತ್ತು ಕರ್ಣನ ನೀನೆನುತ್ತ, ಟ.

5 ಬಂಟರುಂಟೇ, ಜ.

ಚಕಿತಚಾಪರು ಗಾಢಬದ್ಧ
[1] ಭ್ರುಕುಟಭೀಷಣಮುಖರು ರೋಷ
ಪ್ರಕಟಪಾವಕವಿಸ್ಫುಲಿಂಗರು ಕೂಡೆಸಮತಳಿಸಿ ।
ವಿಕಟಕರವೇಲ್ಲಿತಮಹಾಸಾ
ಯಕರು ನಿಷ್ಠುರಸಿಂಹಗರ್ಜನ
ವಿಕಲಿತಾ [2] ಚಲಸನ್ಧಿಬನ್ಧರು ಹೊಕ್ಕು ಹೆಣಗಿದರು ॥ ೧೮

ಪೂತು ರೇ ಬಿಲುಗಾಱ ಮಝು ರೇ
ಸೂತನಂದನ ಬಾಣರಚನಾ
ನೂತನದ ಬಿಲುವಿದ್ಯೆ ಭಾರ್ಗವಸಂಪ್ರದಾಯವಲೆ ।
ಆತುಕೊಳ್ಳೈ ನಮ್ಮ ಬಲುಮೆಗ
ಳೀತಱತಿಶಯುವೆನುತೆ ಸರಳಿನ
ಸೇತುವನು ಕಟ್ಟಿದನು ಗಗನಾಂಬುಧಿಗೆ ಕಲಿಪಾರ್ಥ ॥ ೧೯

ಮೇಲುಗೈಯಹೆ ಬಿರುದರೊಳು ಬಿ
ಲ್ಲಾಳು ನೀ ನಹೆ ಚಾಪ [3] ವಿದ್ಯಾ
ಫಾಳನೇತ್ರನ ಗರುಡಿಯಲ್ಲಾ ಕಲಿತಮನೆ ನಿನಗೆ ।
ಕೋಲು ನಮ್ಮವು ಕೆಲವು ಸಮೆಗ
ಯ್ಯಾಳ ನಿನಗಾನೆನುತೆ ನೋಟಕ
ರಾಲಿ ಝೋಂಮಿಡೆ ಕರ್ಣ ತುಳುಕಿದ [4] ನಸ್ತ್ರಸಾಗರವ ॥ ೨೦

ಅಹಹ ಫಲುಗುಣ ನೋಡಲಮ್ಮನು
ಬಹುಳಬಾಣಾದ್ವೈತ ವಾದುದು
ಮಹಿ ಮಹಾದೇವನು [5] ತೆ ಸಾರಥಿ ಮುಚ್ಚಿದನು ಮುಖವ ।

---

1 ಭ್ರುಕುಟಿಲರು ಭೀಷಣರು ರೋಷ ।
ಪ್ರಕುಟಿಲರು ಪಟುಭಟರುಹೊಕ್ಕದು ಕೂಡೆ ಸಮತಳಿಸಿ ॥ ಜ.
2 ಗರುಚೇಕಿತಾನವು ಹೊಕ್ಕರುರವಣಿಸಿ ॥ ಜ. 3 ವಿದ್ಯೆಗೆ, ಟ.
4 ನಂಬಿನಂಬುಧಿಯ, ಚ.ಜ.ಝ. 5 ತವುತ್ತರಮುಚ್ಚಿದನು ಮುಸುಡ। ಟ.

ರಹವ ಮಾಡದಿರೆಲವೊ ತನಗಿದು
ಗಹನವೇ ನೋಡೆನುತೆ ನರನತಿ
ಸಹಸದೊಳು ಕೆದಱಿದನು ಕರ್ಣನ ಬಾಣಪಂಜರವ ॥ ೨೧

ವೀರ ನಲ್ಲಾ [1] ಬನದ ರಾಜಕು
ಮಾರ ನಲ್ಲಾ ಕೌರವನ ಬಡಿ
ಹೋರಿ ಯಲ್ಲಾ ತಿರಿದೆಲಾ ದಿಟ ವೇಕಚಕ್ರದೊಳು ।
ನಾರಿಯರ ನಾಟಕದ [2] ಜೋಹವ
ನಾರು ತೆಗೆದರು ಪಾರ್ಥ ನಿನಗೀ
ಶೌರಿಯದ ಸಿರಿ [3] ಯೇಕೆನುತೆ ತೆಗೆದೆಚ್ಚನಾಕರ್ಣ ॥ ೨೨

[4] ಬಲುಗಡೆಯು ನಹೆ ಬೇಂಟೆಗಾಱರ
[5] ಬಲದ ಮೊದಲಿಗ ನಹೆ ವಿರೋಧಿಯ
ದೞಿಕೆ ನೀ ನೊಡ್ಡುಳ್ಳ ಭಟನಹೆ ಸ್ವಾಮಿಕಾರಿಯಕೆ ।
ತಲೆಯ ತೆಱುವವನಹೆ ಕುಭಾಷೆ [6] ಗೆ
ಮಲೆವವರು ನಾವಲ್ಲ ಸೈರಿಸು
ಬೞಿಕೆನುತೆ ಕಲಿಪಾರ್ಥ ಸುರಿದನು ಸರಳ ಸರಿವಳೆಯ ॥ ೨೩

ಅದ್ದನೋ ಬಾಣಾಂಬುನಿಧಿಯೊಳು
ಬಿದ್ದನೋ ವಿತಳದೊಳು ಮೇಣ್ವಿಧಿ
ಕದ್ದನೋ ಕೈವಾರವೇತಕೆ ಕಾಣೆ ನಿನಸುತನ ।
ತಿದ್ದಿ ತಾತನ ದೆಸೆ ನದೀಸುತ
ನಿದ್ದನಾದೊಡೆ ಕೌರವೇಂದ್ರನ
ಹೊದ್ದಹೇಪೆಂದೊದಱುತಿರ್ದುದು ಕೂಡೆ ಕುರುಸೇನೆ ॥ ೨೪

---

1 ಸುರರ, ಟ. 2 ಚೋಹವ, ಖ. ಚ. ಝ. ಟ. 3 ಯೆಂತೆನುತೆ, ಟ.
4 ಬಲುಗಡಿಯು, ಚ. ಜ. ಝ. ಟ. 5 ಬಳಗವುಳ್ಳವನಹೆ, ಖ. ಬಲಕೆ ಮೇಲುಳ್ಳವ, ಚ. ಬಲವನುಳ್ಳವನಹೆ, ಜ. ಬಲಕೆಬಲುಗೈಯಹೆ, ಝ.
6 ಗೆಮುಳಿವವರು, ಖ. ಚ. ಯುನುಡಿವವರು, ಟ.

ಇಡಿದ ಮೋಡದ ಮುತ್ತಿಗೆಯ ಮೋ
ಡೊಡೆದು ಮೂಡುವ ರವಿಯವೊಲು ನೆಱೆ
ಕಡಿದು ಶರಪಂಜರವ ಹೂಡಿದ ನರ್ಜುನನ ಮುಸುಕೆ ।
ನಡುಗಿದನು ವೈರಾಟ ಹಯ [1] ಮಡಿ
ಗಡಿಗೆ ನೊಂದುವು ಹನುಮ [2] ನಂಬರ
ವೊ ಯ ಬೊಬ್ಬಿಱಿದನು ಮಹಾದ್ಭುತವಾಯ್ತು [3] ನಿಮಿಷದೊಳು

ಸೋಲವಾಯಿತು ಕರ್ಣಗೆಂಬರ
ನಾಲಗೆಯ ಕೊ [4] ಯ್ಯಲವೊ ಮಝ ಬಿ
ಲ್ಲಾಳು ರಾಯನ ಪಟ್ಟದಾನೆ ವಿರೋಧಿಭೂಪತಿಯ ।
ಭಾಳದಕ್ಕರ ತೊಡೆದುದೋ ತೆಗೆ
ಕಾಳಗವ ನೆಂದಖಿಳಕುರುಬಲ
ಜಾಲ ಬೊಬ್ಬಿಡೆ ಕರ್ಣ ಮೆಱೆದನು ಬಿಲ್ಲ ಬಲುಮೆಗಳ ॥ ೭೬

ಅರಿಭಟನ ಶರಜಾಲವನು ಸಂ
ಹರಿಸಿದನು ನಿಮಿಷದೊಳು ಫಲುಗುಣ
ನೆರಡುಶರದೊಳು ಸಾರಥಿಯ ನೈದಂಬಿನೊಳು ರಥವ ।
ಶರಚತುಷ್ಟಯದಿಂದೆ ಕರ್ಣನ
ಕರದ ಬಿಲ್ಲನು ಕಡಿಯೆ ಭಗ್ನೋ
ತ್ಕರುಷಭಂಗಿತನಾಗಿ ಸರಿದನು ಮೌನದೊಳು ಕರ್ಣ ॥ ೭೭

ಓಟವೇ ಅಪಜಯದ ನಾಱಿಯ
ಬೇಟವೇ ಬೆಸಗೊಳ್ಳರೈ ಯೊಳ
ತೋಟಿಗೊತ್ತೋಳಹುದು ನಾಲಗೆ ಯಾಗಳೇನಾಯ್ತು ।

---

1 ವಿಮ್ರಡಿಸಿ, ಚ. 2 ನತಿಭಯವಡಸೆ, ಚ. 3 ಸಂಗ್ರಾಮ, ಚ. ಝ.

4 ಯ್ದಂಗೆ ಸುಭಟರ । ಸೋಲವದು ರಾಯಂಗೆ ಸೋಲವೆ ನೂಕುನೂಕೆನುತ॥ ಜ

ಆಟವಿಕಭೂಪತಿಯ ಕೀರ್ತಿಯ
ಕೂಟಣಿಗಳೂ[1] ಗ್ಗಾಯ್ತು ತೆಗೆ ಮರು
ಳಾಟ ವೆಮಗೇಕೆನುತೆ ಪಾರ್ಥನ ತಾಗಿದನು ದ್ರೋಣ ॥ ೨೮

ಇದಿರುಗೊಳ್ಳೆ ಪಾರ್ಥ ವಿಪ್ರ
ಗರ್ದಟತನ ಮೆಲ್ಲಿಯದು ಕರ್ಣನ
ಸದೆಬಡಿದ ಸಾಹಸಕೆ ಹಿಗ್ಗದಿರೆಮ್ಮ ಕೈಗುಣವೆ ।
ಕದನದೊಳು ನೀ ನೋಡು ಕೈಸಾ
ರಿದುವು ಗಡ ಕಾಮಾರಿ ಹಿಡಿವ
ಗ್ಗದ ಶರಾವಳಿ ಯುವಱ ಪರಿಯೆಂತೆಮಗೆ ತೋಱೆಂದ ॥ ೨೯

ಇದಿರುಗೊಂಡೆನು ವಂದಿಸಿದೆ ನೆ
ಮ್ಮುದಯ ನಿಮ್ಮದು ನಿಮ್ಮ ದೆಸೆಯಿಂ
ವಿದಿತ ವೆನಗೀವಿದ್ಯೆ ನೀಂ ಕಾಮಾರಿ ಮುರವೈರಿ ।
ಹೃದಯ ನಿಮ್ಮದು ಕಾಳಗಕೆ ನಿ
ಮ್ಮಿದಿರೊಳಾಳೇ ತಾನು ಕರುಣಾ
ಸ್ಪದರು ನೀವೆಂದೆಚ್ಚ ನರ್ಜುನ ನವರ ಸಿರಿಪದಕೆ ॥ ೩೦

ವಿನಯವುಚಿತವೆ ತತ್ತ ಸಮಯ[2] ದ
ಮೊನೆಯೊಳಾವಿದಿರಾದೊಡಾವುದು
ಜನಪರಿಗೆ ಕರ್ತವ್ಯವದು ಸಾಕುೞಿದ ಮಾತೇಕೆ ।
ತನುಜ ಸೈರಿಸು ಸೈರಿಸೆನುತೆ
ಚ್ಚನು ನಿರಂತರಬಾಣವರ್ಷದಿ
ನನಿಮಿಷಾವಳಿ ಪೂತುರೆನೆ ಕೈದೋಱಿದನು ದ್ರೋಣ ॥ ೩೧

---

1 ಳಗಾಯ್ತು ಸಲೆಮರುಳಾಟಕಿನ್ನೇನೆನುತೆ, ಟ.

2 ದೊ ಳನುವಱಿದು ಕಾದುವುದುಚಿತ ಮೇಣ್, ಜ.

ಭಾವಿಸಲು ಪ್ರತಿಬಿಂಬದೊಳು ಬೇ
ಱಾವುದತಿಶಯವುಂಟು ನೀವೆನ
ಗಾವ ಪರಿಯೊಳು ಕಲಿಸಿದಿರಿ ನಿಮಗೊಪ್ಪಿಸುವೆ ನದನು ।
ನೀವು ನೋಡುವುದೆನುತೆ ನರ ನಿಸ
ಲಾವುದಂಬರ ವಾವು ದವನಿಯ
ದಾವುದರಿಬಲ ವೆನಲು ಹಬ್ಬಿತು ಪಾರ್ಥ ಶರಜಾಲ ॥ ೨೦

ವಿಷಯಲಂಪಟತನದೊಳಾಂ ನಿ
ರ್ವಿಸಿದೆ ನಶ್ವತ್ಥಾಮನೆನನು ನೀ
ನೆಸೆವ ಮಗಸ್ಯೆ ಪಾರ್ಥ ಮೋಹದ ಕಂದ ನೀ ನೆಮಗೆ ।
ಇಸುಗೆಕಾಱರಿಗಾರಿಗೀಶರ
ವಿಸರ ಸಂಭವಿಸುವುದು ಮಝುರೇ
ವಿಷಮವೀರನ ಕೈಚಳಕ ಲೇಸೆಂದ ನಾ ದ್ರೋಣ ॥ ೨೨

ಎನುತೆ ಸುರಿದನು ಸರಳ ಸಾರವ
ನನಲಗರ್ಭದ ಬಾಯ ಧಾರೆಗ
ಳನಿಲಗರ್ಭದ ಗಱಿಗಳಶನಿ[1] ಯುದರದ ಮಿಂಟುಗಳ ।
ಮೊನೆಯ ಬಂಬಲ್ಗಿಡಿಯ ಹೊಗರಿನ
ತನಿಹೊಗೆಯ ಹೊದಱುಗಳ[2] ಪುಂಖ
ಧ್ವನಿಯ ದಟ್ಟಣೆ ಮಿಗಲು ಕವಿದುವು ದ್ರೋಣನಂಬುಗಳು ॥

ದೇವ ಭಾರದ್ವಾಜ ಶರವಿ
ದ್ಯಾವಿಷಯ ನವರುದ್ರ ಘನಶ
ಸ್ತ್ರಾವಳೀ ನಿರ್ಮಾಣ ನೂತನ ಕಮಲಜನೆ ಯೆನುತೆ ।

1 ಯ ಗರ್ಭಮಿಂಟೆಗಳ. ಖ. ಟ. ಯ ಮಿಂಟೆಯಂಬುಗಳ, ಝ.
2 ಶಂಖಧ್ವನಿಯ. ಜ. ಝ. ಟ.

ಕೋವಿದನ ಶರತಿಮಿರವನು ಗಾಂ
ಡೀವವಿಗಳಿತಬಾಣಭಾನುಕ
ರಾವಳಿಯೊಳಪಹರಿಸಿದನು ಸುರನಾಥಸುತ ನಗುತೆ ॥ ೨೫

ಹಿಳುಕ ನೀಂದುದೊ ಗಗನ ವೆಂಬಿನ
ಜಲಧಿ ಜರಿದುದೊ ಪಾರ್ಥನೆಂಬ
ಗ್ಗಳವಿರಿಂಚನ ಬಾಣಸೃಷ್ಟಿಯೊ ಬಲ್ಲರಾರಿದನು ।
ಇಳೆಯ ಮರ್ತ್ಯರು ಶಿವಶಿವಾ ತೆಗೆ
ಫಲುಗುಣಗೆ ಸರಿಯೆಂಬವರ ಬಾಯ್
ಹುಳುವುದೋ ಗುಣಕೇಕೆ ಮತ್ಸರ ವೆಂದುದಮರಗಣ ॥ ೨೬

ಬಳಿಕ ಪಾರ್ಥನ ಬಾಣದೊಳು ಬಸ
ವಳಿಯೆ ಸಾರಥಿ ಮೆಲ್ಲಮೆಲ್ಲನೆ
ತೊಲಗಬಗೆದನು ದ್ರೋಣ ನಿತ್ತಲು ಕರ್ಣ ನೀಕ್ಷಿಸುತೆ ।
ಎಲೆಲೆ ಶಸ್ತ್ರಾಚಾರ್ಯ ಗೆಲಿದನು
ಫಲುಗುಣನ ನಿನ್ನೇನು ಕೌರವ
ಬಲಕೆ ಹಗೆಹಱಿವಾಯ್ತು ರಾಜಾಭ್ಯುದಯ ವಾಯ್ತೆಂದ ॥ ೨೭

ಫಡಫಡೆಲವೋ ಕರ್ಣ ಸಾರಥಿ
ಮಡಿದೊಡೇನದು [1] ಭಂಗವೇ ಕಾ
ಪ್ಪಡೆಯುವಿರು ನೋಡಾದೊಡಯ್ಯನ ಹರಿಬದಾಹವವ ।
ನುಡಿಗೆ ತೆಱಹಾಯ್ತೆಂಬ ಖುಲ್ಲರ
ಬೆಡಗ ನೋಡೆನುತುಗ್ರಚಾಪವ
ಮಿಡಿದು ಮಂಡಿಸಿ ಹರನ ಹೋಲುವೆ ಯಥಟ ಮಾರಾಂತ ॥ ೨೮

ಆವುದೈ [2] ನಿನ್ನಱಿತವದು ವಿ
ದ್ಯಾವಿಷಯದೊಳು ಚಾಪವೇದಾ

1 ಸೋಲವೇ. ಚ. ಟ. ಕೊಱತೆಯೇ. ಜ.
2 ನೀವಱಿತಿಹುದು. ಚ.

ರ್ಥಾವಳಿಯು [1] ಶರತತಿ ಯುಪನ್ಯಾಸಂಗಳಂತೆಂದು |
[2] ಕೋವಿದಾಭಾಸಕರ ಜಯು ನಿನ
ಗಾವ ಪರಿ ತೆಗೆ ಶಸ್ತ್ರವಿದ್ಯಾ
ಭಾವಗೋಷ್ಠಿಯ ಬಲ್ಲೊಡರಿ ಯೆಂದೆಚ್ಚ ನರ್ಜುನನ ॥ ೩೯

ಅಕ್ರಮವೆ ತ್ರೈಲೋಕ್ಯವಿದ್ಯಾ
ಚಕ್ರವರ್ತಿಗಳೆಂದು ನೀವೀ
ವಿಕ್ರಮದ ಮಾತಿನೊಳು ಮೇಗಱಿ ಮೆಱೆವ ಭಟರುಗಳ |
ಶಕ್ರನಳುಕುವ ಬಾಹುಬಲ ರಿಪು
ಚಕ್ರದೊಳಗಿನ್ನಾರಿಗುಂಟಿದು
ವಕ್ರಭಣಿತೆಯು ಸಲುವು ದಶ್ವತ್ಥಾಮಗೆನುತೆಚ್ಚ ॥ ೪೦

ಅರ್ಜುನನ ಶರವಿದ್ಯೆ ವಿವರಿಸೆ
ದುರ್ಜಯವಲಾ ಗರುವತನದೊಳು
ಗರ್ಜಿಸಿದೊಡೇನಹುದೆನುತೆ ಗುರುಸೂನು ಹರುಷದೊಳು |
ನಿರ್ಜರರು ಮೆಚ್ಚು ಪೂತುರೆನಲಾ
ವರ್ಜಿಸಿದ ತಿರುವಿನೊಳು ಸಂಗರ
ನಿರ್ಜಿತಾರಿಯು ನಿಸಲು ಕವಿದುವು ಕಣೆಗಳಂಬರಕೆ ॥ ೪೧

ಗುರುತನುಜನಲ್ಲಾ ವಿಭಾಡಿಸಿ
ಹುರುಳುಗಿಡಿಸಲು ಬಹುದೆ ನೋಡು
ತ್ತರ ಸುಯೋಧನಸೈನ್ಯಶರಧಿಯು ಗುಂಪಿನತಿಬಲರ |
ಹರನ ಪೋಲುವ ಶಸ್ತ್ರವಿದ್ಯಾ
ಧರರು ಮರ್ತ್ಯರೊಳಹರೆ ಲೇಸೆಂ
ದುರುಳಗಡಿದನು ಪಾರ್ಥ ನಶ್ವತ್ಥಾಮ ನಂಬುಗಳ ॥ ೪೨

---

1 ಶಶಿಮೌಳಿಕೋಪನ್ಯಾಸವೆಂತೆಂತು. ಚ. ಝ. ನಿರ್ಮಲಿತಕೋಪನ್ಯಾಸವೆಂತೆಂತು. ಜ.

2 ಕೋವಿದರ ಭೂಸುರರ ಯುಕ್ತಿಗೆ. ನೀವು ಕೊಂಡಿರೆ. ಕ. ಕೋವಿದರು ಭೂಸುರರು ಜಯು ನಿನಗಾವಜಾತಿಗೆ. ಝ.

ಗುರುಸುತನ ಶರಜಾಲವನು ಸಂ
ಹರಿಸಿ ಮಗುಳಸ್ತ್ರೌಘವನು ವಿ
ಸ್ತರಿಸಿದನು ಕಲಿಪಾರ್ಥ ನಾತನ ಸರಳುಗಳ ಸವೆಱ ।
ತರಣಿಬಿಂಬವ ನಭವ ಹೊಱತು
ಗುರುಸುತನ ಸರ ವಮವು ಮತ್ತಿ
ಬ್ಬರಿಗೆ ಸಮಬಲವಾಗೆ ಸಮತಳಿಸಿತ್ತು ರಣಕೇಳಿ ॥ ೪೩

ತೀರವರ್ಜುನನಂಬು ರಣದೊಳು
ತೀರಿದುವು ಗುರುಸುತನ ಶರ ಕೈ
ವಾರವೇ ಕೈಗುಂದಿ ನಿಂದನು ದ್ರೋಣನಂದನನು ।
ವೇರು ಮೊಗದಿರುಹಿತ್ತಲಾ ರಣ
ಧೀರ ನಶ್ವತ್ಥಾಮ ಸೋತನು
ಸಾರೆನುತೆ ಕೃಪ ನುಱುಬಿದನು ತಱುಬಿದನು ಫಲುಗುಣನ ॥ ೪೪

ತಂದೆಮಕ್ಕಳು ಸೋತ ರಿನ್ನೇ
ನೆಂದು ಮುಯ್ಯಾನದಿರು ನಿಲು ನಿ
ಲ್ಲೆಂದು ಕೃಪನಡಹಾಯ್ದು ಪಾರ್ಥನ ರಥವ ನೊಡೆಯಿಸಲು ।
ಬಂದ ಪರಿ ಲೇಸೆನುತೆ ಫಲುಗುಣ
ನೊಂದು ಕವಲಂಬಿನೊಳು ಗುರುಗಳಿ
ಗಿಂದು ವಂದಿಸಬೇಕೆನುತೆ ಕೀಲಿಸಿದ ನಾರಥವ ॥ ೪೫

ತಂಹರಿಸಿ ಸರಳ್ಕೈದಱೊಳು ಸಂ
ಹರಿಸಿ ಕೊಳ್ಳೆಂದೆಚ್ಚೊಡೀತನ
ತುರಗವನು ತಾಗಿದುವು ನೊಂದುವು ರಥದ ವಾಜಿಗಳು ।
ಕೆರಳಿ ಫಲುಗುಣ ನರ್ಧಚಂದ್ರನ
ಸರಳಿನೊಳು ಸಾರಥಿಯು ತುರಗವ
ಕರದ ಬಿಲ್ಲನು ಕಡಿಯೆ ತೊಲಗಿದ ನಾಕೃಪಾಚಾರ್ಯ ॥ ೪೬

ಎಲೆಲೆ ಕರ್ಣ ದ್ರೋಣ ಗುರುಸುತ
ರಲಘುಭುಜಬಲಕೃಪನು ಹೊಕ್ಕಿಱಿ
ದಳುಕಿದರು ಮುಝು ಪೂತುರೆಂತುಟೊ ಪಾರ್ಥ ನಗ್ಗಳಿಕೆ ।
ಗೆಲುವ ನೊಬ್ಬನೆ ನಮ್ಮ ಬಲದೊಳು
ನಿಲುಕಿ ಹಿಂಗುವ ಸುಭಟರಿನಿಬರು
ಸುಲಭ ವೆಮಗೀಸೋಲ ವೆಂದುದು ನಿಖಿಳಕುರುಸೇನೆ ॥ ೪೭

ಬಾಯ ಬಿಟ್ಟುದು ನೆಱೆದಕೌರವ
ರಾಯದಱ ವಡ ಮುಖದೊಳಘಟರು
ಹಾಯಿದರು ತಮತಮಗೆ ತೆಱದರಸಾಯ್ತು ಕುರುಸೇನೆ ।
ಕಾಯಬೇಕೆಂದೆನುತೆ ವರಗಾಂ
ಗೇಯ ಚಾಪವ ತುಡುಕಿ ಬೆರಳೊಳು
ಸಾಯಕವ ತೂಗುತ್ತೆ ತಡೆದನು ಪಾರ್ಥನುರವಣೆಯ ॥ ೪೮

ಓಡಿದಾಳಲ್ಲಲ್ಲಿ ಧೈರ್ಯವ
ಮಾಡಿತಬ್ಬಾಳೊಗ್ಗಿನೊಳು ಹುರಿ
ಗೂಡಿ ತಬ್ಬರ ಮಗುಳೆ ನಿಬ್ಬರ ವಾಯ್ತು ನಿಮಿಷದೊಳು ।
ಕೂಡೆ ಗಱಿಗಟ್ಟಿತು ಚತುರ್ಬಲ
ಜೋಡುಮಾಡಿತು ಕವಿದುದೀತನ
ಕೂಡೆ ಘನಗಂಭೀರಭೇರಿಯ ಬಹುಳರಭಸದೊಳು ॥ ೪೯

ತೊಲಗು ರಾಜಪಿತಾಮಹನ ಖತಿ
ಬಲುಹು ತೆತ್ತಿಗರಹಡೆ ರುದ್ರನ
ನಳಿನನಾಭನ ಕರಿಸು ನೀಂ ಶಿಶು ಸಾರು ಸಾರೆನುತೆ ।
ಉಲಿಯೆ ಬಱಿಯ ಮಹಾರಥರು ಕಳ
ಕಳದ ಕಹಳೆಯ ಪಾಠಕರ ಗಾ
ವಳಿಯ ಬಿರುದಿನ ಬಹುಳತೆಯೊಳೈತಂದನಾಭೀಷ್ಮ ॥ ೫೦

ಪೂತು ರೇ ಕಲಿಪಾರ್ಥ ಭುವನ
ಖ್ಯಾತನಾದ್ಯೆ ಕಂದ ದ್ರೋಣನ
ಸೂತಸುತ ಕೃಪ ಗುರುತನೂಜರ ಗೆಲಿದೆ ಬಳಿಕೇನು |
ಬೀತುದೇ ನಿಮ್ಮವಧಿ ಕುರು [1] ಬಲ
ಜಾತವನು ಗೆಲಿದಿನ್ನು ನಿಮ್ಮಯ
ಭೂತಳವ ಬಯಸುವಿರೆ ನೀವೆನುತೆಚ್ಚನಾಭೀಷ್ಮ || ೫೧

ನಿಮ್ಮ ಕಾರುಣ್ಯಾವಲೋಕನ
ವೆಮ್ಮ ಸಿರಿ ಬೇಱಿಲ್ಲ ಕಾಳಗ
ದಮ್ಮುಗೆಯು ವಿಕ್ರಮದ ವಿವರಣವಿದ್ಯೆ [2] ಫಲಿಸುವುದೇ |
ಬಿಮ್ಮು ಬೇಸರ ವುಂಟೆ ನಿಮ್ಮಯ
ಸೊಮ್ಮಿನವರಿಗೆ ಬೇಱೆ ರಾಜ್ಯದ
ಹೆಮ್ಮೆ ತಮಗೇಕೆನುತೆ ಕೈಯೊಡನೆಚ್ಚನಾಪಾರ್ಥ || ೫೨

ಇಸಲು ಪಾರ್ಥನ ಬಾಣವನು ಖಂ
ಡಿಸುತೆ ಸೂತನ ನೆರಡಱೊಳು ಕೀ
ಲಿಸಿದ ನೈದಂಬಿನೊಳು ಹನುಮನ ಹಣೆಯ ನೊಡೆಯೆಚ್ಚ |
ನಿಶಿತಶರವೆಂಟಱೊಳು ಕವಚವ
ಕುಸುರಿದಱಿದನು ನರನ ವಕ್ಷದ
ಬಿಸುಗೆ ಬಿಡೆ ಮೂಱಂಬಿನೊಳು ಮುಱಿಯೆಚ್ಚು ಬೊಬ್ಬಿಱಿದ ||

ಅರಿಯು ಶರಹತಿಗುತ್ತರನು ತನು
ಬಿರಿಯೆ ಬಸವಳಿದನು ಕಪೀಶ್ವರ
ನೊಱಲಿದನು ರಾವಣನ ಗಾಯವ ನೆನೆದನಡಿಗಡಿಗೆ |
ಮಱೆದು ಮಲಗಿದ ಸೂತನನು ನಾ
ಲ್ಕೆರಡು ಗಳಿಗೆಯು ಬೀಸಿ ಮೂಗಿನೊ
ಳೆರಲ ಕಂಡನು ಪಾರ್ಥನೆತ್ತಿದನಳುಕಿದುತ್ತರನ || ೫೪

---

1 ಕುಲಜಾತನನು. ಕ. ಚ. 2 ಫಲಿಸುವರೆ. ಕ. ಝ.

[1] ಕವಚಕವಿದೆ ಕೊಳ್ ಬಾಣಧಾರಾ
ನಿವಹಶಸ್ತ್ರಸ್ತಂಭವಿನ್ನಾ
ಹವದೊಳಂಜದಿರೆನುತೆ ಕುಡಲುತ್ತರನು ದುಗುಡದೊಳು |
ಬವರದಾದಿಯೊ [2] ಳುಚಿಯದೇ ಕೊಂ
ದವನು ನೀನೋ ಭೀಷ್ಮನೋ ಎನ
ಲವನ ನುಡಿಗರ್ಜುನನು ನಗುತಪರಾಧವುಂಟೆಂದ ॥ ೫೫

ಹದುಳಿಸಿನ್ನಂಜದಿರು ಬಾಣೌ
ಘದ ನಿವಾರಣವಿದು ವಿಚಾರಿಸ
ಲೆದೆ [3] ಬಿರಿದು ನಾಂ ನೊಂದೆನಿದೆ ನೋಡೆನ್ನ ಗಾಯವನು |
ಒದೆದು ಕೊಳುತ್ತೈದಾನೆ ಸಿಂಧದ
ತುದಿಯ ಹನುಮನು ವಜ್ರಮಯದೇ
ಹದೊಳು ನಟ್ಟುವು ಕೋಲು ಮುನಿದೊಡೆ ರುದ್ರನೀಭೀಷ್ಮ ॥೫೬

ಎಂದು [4] ನೊಱಂಬಿನೊಳು ಗಂಗಾ
ನಂದನನ ಮುಸುಕಿದನು ಸಾರಥಿ
ನೊಂದನಾಧ್ವಜದಂಡ ಮುಱಿದುದು ರಥ ವಿಸಂಚಿಸಿತು |
ಮುಂದುಗೆಟ್ಟನು ಭೀಷ್ಮನಹುದೋ
ಕಂದ ಎನುತಾಱಂಬಿನೊಳು ಖತಿ
ಯಿಂದೆ ಪಾರ್ಥನನಿಸಲು ಥಟ್ಟುಗಿದಂಬು [5] ಹಾಱಿದುವು ॥ ೫೭

---

1 ಕವಳವಿದೆ ಕೋ ಬಾಣಶಸ್ತ್ರ | ನಿವಹಧಾರಾ, ಕ. ಜ. ಝ. ಕವಳ ವಿದೆ ಕೋ ಬಾಣಶಸ್ತ್ರದ | ನಿವಹಧಾರಾ, ಚ, ಕವಚವಿದೆ ಕೋ ಬಾಣಶಸ್ತ್ರದ ನಿವಹಧಾರಾ, ಖ.

2 ಳೆನ್ನ ಕಳುಹದೆ ಬವರದೊಳುಕೊಂದವನು ನೀನೆನ, | ಖ. ಳೆನ್ನನುಱಿ ಕೊಂ, ಚ. ಝ. ಳಳುಕದೇ ಕೊಂ, ಜ.

3 ಬಿರಿಯಲಾಂ ನೊಂದೆ ನೀನೋಡೆನ್ನ ದೇಹವನು, ಖ.

4 ಮಾಱಂಬಿನೊಳು, ಜ. 5 ಹಾಯಿದುವು, ಖ. ಝ.

ಬಿಱಿತುದರ್ಜುನ ನೊಡಲಿ ನೊಳು ದುಱು
ದುಱಿಪ [1] ರುಧಿರದ ಧಾರೆ ಸೂರ್ಯನ
ನೆಱೆವಣಿಗೆಯೊಳು ನಿಂದು ತೊಟ್ಟನು [2] ವರಮಹಾಶರವ ।
ತಱಿದನೆಡೆಯೊಳು ಭೀಷ್ಮನುಱೆ ಬೊ
ಬ್ಬಿಱಿದು ಬೞಿಕಾಗ್ನೇಯಬಾಣದ
ಗಱಿಯ ಮಂತ್ರಿಸಿ ಹೂಡಿದನು ಕುರುಸೇನೆ ಕಳವಳಿಸೆ ॥ ೫೮

ವರುಣಬಾಣದೊಳಸ್ತ್ರವನು ಪರಿ
ಹರಿಸಿದನು ಕಲಿಭೀಷ್ಮನೊಬ್ಬೊ
ಬ್ಬರು ಪರಾಜಯರೋಷಪಾವಕವಿಸ್ಫುಲಿಂಗಿತರು ।
ಹರಿಸಿದರು ಕೌಬೇರ ಮಾರುತ
ನಿರುತಿ ಯಮ ಪುರುಹೂತ ಶಂಕರ
ಪರಿಗತಾಸ್ತ್ರಾವಳಿಗಳನು ಗಾಂಗೇಯಫಲುಗುಣರು ॥ ೫೯

ಮಲೆತು ನಿಲುವೊಡೆ ಭೀಷ್ಮನಲ್ಲದೆ
ಕೆಲರು ಪಾರ್ಥನ ದಿವ್ಯಬಾಣಾ
ವಳಿಯ ಘೋರಾಘೋರಿ [3] ಗಿಂದಿನ ಭೀಷ್ಮನುರವಣೆಗೆ ।
ಕಲಿಧನಂಜಯನಲ್ಲದಿದಿರೊಳು
ನಿಲುವರುಂಟೇ ಸುರನರೋರಗ
ರೊಳಗೆ ಕೆಲರೆಂದಿಂದ್ರ ನುಡಿದನು ಬೆರಳನೊಲೆದೊಲೆದು ॥ ೬೦

ಪೂತು [4] ರೇ ಕಲಿಪಾರ್ಥ ಬಿಲುವಿ
ದ್ಯಾತಿಶಯನಿಧಿ [5] ಜಾಗು ಗಂಗಾ
ಜಾತ ಹರಮುರವೈರಿಗಳ ಮಿಕ್ಕಿರಿ ಮಹಾದೇವ ।

---

1 ರುಧಿರವ್ರಣ ಸುಧೈರ್ಯದ, ಖ. ಚ. ಟ. 2 ನರ, ಖ. ಚ. ಜ.
3 ಗಿದಿರೇ, ಚ. ಝ. 4 ಪಾಯುಕು ಭೀಷ್ಮ, ಚ. ಝ. ಟ,
5 ಪಾರ್ಥ ಜಾಗು ಪುರಾತನನ ಮುರವೈರಿಯನು, ಚ. ಝ. ಟ.

ಈತಗಳು ಜನಿಸಿದೊಡೆ ಹಿಂದೆ ಮ
ಹೀತಳವ ಖಳನುಯ್ವನೇ ಮೇಣ್
ಸೀತೆ ಬನದೊಳು ನವೆವಳೇ ಎನುತಿರ್ದುದಮರಗಣ ॥ ೬೧

ಹಿಂದೆ ಕರ್ಣನ ಕೈಮೆಯನು ಗುರು
ನಂದನನ ಬಿಲುಗಾಱತನವನು
ಮಂದರೋಪಮಧೈರ್ಯನಾಚಾರಿಯನ ಪರಿಣತಿಯ ।
[1] ಬಂದಕೃಪನಗ್ಗಳಿಕೆಯನು ನಲ
ವಿಂದೆ ಕಂಡೆ ನಿದಾವ ಪರಿಯ
ಲ್ಲೆಂದ ನುತ್ತರ ನರ್ಜುನಗೆ ಗಾಂಗೇಯನುರವಣೆಯ ॥ ೬೨

ಎನೆ ಕುಮಾರಕ ಕಾರ್ತವೀರ್ಯಾ
ರ್ಜುನನ [2] ಸಾಸಿರತೋರತೋಳ್ಗಳ
ವನವ ಕಡಿದನು ವೀರಭಾರ್ಗವರಾಮನತಿಬಲನು ।
ಮುನಿದು ಮಲೆತೊಡೆ ಬೆಱಗನಾತನ
ಮನಕೆ ಬಿತ್ತಿದ ನೀತ ನೀತನೊ
ಳೆನಗೆ ಸರಿ ನೂಕುವುದೆ ಕಾಳಗವೆಂದನಾಪಾರ್ಥ ॥ ೬೩

ಮತ್ತೆ ಗಂಗಾಸೂನು ಪಾರ್ಥನ
[3] ಕೆತ್ತಿಸಿದ ನೈದಂಬಿನೊಳು ರಥ
ಕಿತ್ತು ಮರಳಲು ಮೂಱುವಜ್ರಾಸ್ತ್ರದೊಳು ಕೀಲಿಸಿದ ।
[4] ಪುತ್ತವನು ಬಗಿದುರಗ ಪುಗುವವೊ
ಲುತ್ತರಿಸಿದುವು ಶರವಿಸರ ಧೃತಿ
ವೆತ್ತು ಫಲುಗುಣನವೆಱನೆಚ್ಚನು ಹತ್ತುಬಾಣದೊಳು ॥ ೬೪

---

1 ಇಂದು, ಕ. ಟ. ನಿಂದ, ಖ. 2 ನಿಪ್ಪತ್ತೊಂದುವಂಶದವನವ, ಖ. ತೋಳಿನ ಬನವ ಕಡಿದನು ಘನಪರಾಕ್ರಮಿ ವೀರ, ಜ. 3 ನೆತ್ತಿಸಿದನೈ, ಖ.

4 ಹುತ್ತಕುರಗನು ಬಗಿದು ಪುಗಸವವೊಲು, ಜ. ಹುತ್ತನುರಗನು ಬಗಿದು ಪುಗುವವೊಲು, ಟ.

ನರನ ಶರದೊಳು ಭೀಷ್ಮನೆದೆ ಜ
ರ್ಝರಿತವಾಗಲು ಝೋಮ್ಮಿನೊಳು ತರ
ಹರಿಸಲಱಿಯದೆ ಮಲಗಿ ನಿಂದನು ರಥದ ಕಮ್ಬುಗೆಯ ।
ಅರರೆ ಸೋತನು ಭೀಷ್ಮ ನಿನ್ನೇ
ನುರಿದುದೋ ಕುರುಸೇನೆ ಸಿಲುಕಿದ
ದೊರೆ ಯೆನುತೆ ಬಾಯ್ವಿಡಲು ಕೌರವರಾಯ ಪೊರಮೆಟ್ಟ ॥ ೬೫

ಸೀಳು ನಾಯ್ಗಳ ಬಾಯ ಕೆಲಬಲ
ದಾಳ ಹಂಗಿನ ದೊರೆಯ ಸುಭಟರ
ಸೋಲವದು ರಾಯರಿಗೆ ಸೋಲವೆ ನೂಕು ನೂಕೆನುತೆ ।
ಕೋಲ ಹೊದೆಗಳ ಕೆದಱಿ ಸಿಂಧದ
ಮೇಲೆ ಹಾವನು ಹಾಯ್ಕಿ ಸಾರಥಿ
ಮೇಳವಿಸಿದನು ನೃಪನ ರಥವನು ನೆರೆದರತಿರಥರು ॥ ೬೬

[1] ಕೆಲಕೆ ಕೆದಱಿದ ಬಲಜಲಧಿ ಯೊ
ಬ್ಬುಳಿಗೆ ಬಂದುದು ತಳಿತಸತ್ತಿಗೆ
ಗಳ ವಿಡಾಯಿಯೊಳಳ್ಳಿಱಿವ ನಿಸ್ಸಾಳಕೋಟಿಗಳ ।
ಉಲಿವಕಹಳೆಯ [2] ಪಾಠಕರ [3] ಗಾ
ವಳಿಯ ನಾನಾವಾದ್ಯರಭಸವು
ಮೊೞಗೆ ಸುಭಟರು ಹೊಗೞಿದರು ಕೌರವನ ಬಿರುದುಗಳ ॥ ೬೭

---

[1] ಕಲಕಿಕೆ, ಚ. ಝ. ಟ.　　[2] ಬೈಗುಳೆಡಗೈತಳದಬಾಯ್ಬುಲಗೈಯನೊಲೆವಡ ಬಲದ ಭಟರುಬ್ಬೇಱಿದರು ಕೌ. ಕ, ಬೈಗುಳೆಡಗೈತಳದ ಬಾಯ್ಬುಲಗೈಯ ನೆಗಹಿದ ಬಲದ ಭಟ್ಟರು ಚೀಱಿದರು ಕೌ. ಖ. ಬೈಗುಳೆಡಗೈದಳದ ಬಾಯ್ಬುಲಗೈಯನೊಲೆದೊಡೆ ಬೞಿಕ ಭಟ್ಟರು ಕೆದಱಿದರು ಕೌ. ಜ. ಬೈಗುಳೆಡಗೈ ದಳದ ಬಾಯ್ಬುಲಗೈಯನೊಲೆದಳಬೞಿಗಭಟ್ಟರು ಬೀಱಿದರು ಕೌ, ಟ.

[3] ಕಳಕಳದನಾನಾವಾದ್ಯರಭಸದ ಬೞಿಯಭಟ್ಟರ ಹೊಗೞಿಕೆಯೊಳ್ಳೈತಂದ ಕುರುರಾಯ, ಚ.

ಬಗ್ಗು ಮುಱಿಯದೆ ಸೇನೆ ಮೊಱಗುವ
ಲಗ್ಗೆವೆಱೆಯೊಳು ಹೆಣನ ತುಳಿದೊಡ
ಮುಗ್ಗಿ ಕವಿದುದು ಕೌರವೇಂದ್ರನ ಮೊಗದ ಸನ್ನೆಯೊಳು ।
ಹುಗ್ಗಿಗರ ಹುರಿ ಬಲುಹು ನಿಗುಚುವೆ
ನಿಗ್ಗವೆನು ನಿಲ್ಲೆನುತೆ ಸೇನೆಯ
ನಗ್ಗಡಲ ಬೀಱಿಸಿದ ನರ್ಜುನ ನಗಣಿತಾಸ್ತ್ರದೊಳು ॥ ೬೮

ವೀರರಿದಿರಹ ಹೊತ್ತು ರಣವೈ
ಲಾರರಾದರು [1] ಕೆಲರು ಕೆಲಬರು
ಭೈರವನ ಸಾರೂಪ್ಯರಾದರು ಪೂತು ಪಾಯ್ಕೆನುತೆ ।
ಕೌರವನು ಕರ್ಣಾದಿಗಳ ನುಡಿ
ಯೋರೆಪೋರೆಯೊಳವಗಡಿಸಿ ಹೊಂ
ದೇರ ದುವ್ವಾಳಿಸುತೆ ಮೂದಲಿಸಿದನು ಫಲುಗುಣನ ॥ ೬೯

ಬಾಲವೃದ್ಧರ ವಿಪ್ರರನು ನೀಂ
ಕಾಳಗದೊಳೋಡಿಸಿದೆನೆಂದೀ
ಮೇಲುಮೂಗಿನೊಳಿರಲಿದೇನೈ ಪಾರ್ಥ ಮರುಳಾದೈ !
ಆಳಿದಡವಿಯ ರಾಜ್ಯವಲ್ಲದೆ
ಮೇಲೆ ಧರಣಿಯ ಬಯಸಿದೊಡೆ ನಿಮ
ಗಾಳಲೀವೆನೆ ಹೋಗು ಹೋಗಾರಣ್ಯಕೆನುತೆಚ್ಚ ॥ ೭೦

ಗಾಱುಗೆಡೆಯದಿರೆಲವೊ ಸತ್ಯವ
ಮೀಱಲಮ್ಮದೆ ಲೋಕ ನಿನ್ನನು
ದೂಱಬೇಕೆಂದಡವಿಯೊಕ್ಕೆವು ಹೊಲ್ಲಹೇನಿದಕೆ ।
ಹಾಱ ಹೋಯಿತ್ತವಧಿ ಯಿನ್ನೀ

---

1 ಮರಳಿತೆಗೆಯುತೆ ಕ. ಖ. ಚ. ಮರಳಿತೆಗೆವೊಡೆ, ಜ. ಝ.

ಮೀಱಿ ಗೞಹುವೆ ನಿನ್ನ ಗಂಟಲ
ನೂಱಿ ರಾಜ್ಯವ [1] ಕೊಳುವೆ ಸೈರಿಸೆನುತ್ತೆ ನರನೆಚ್ಚ ॥ ೭೧
*
ಅಱಿಯೆ ನೀ ನೆಲೆ ಮರುಳೆ ಗರುಡನ
ತಱುವರಿಕೆಯೊಳು ಹಾವು ಕನ್ನವ
ಕೊಱೆದು ಬದುಕುವುದೇ ವೃಥಾ ಕಕ್ಕುಲಿತೆ ಯೇಕಿನ್ನು ।
ತಱಿದು ತಿಱಿಕಲ್ಲಾಡುವೆನು ನಿ
ಮ್ಮಿಱುವರೈವರ ಸಿರವನರ್ಜುನ
ಬಱಿದೆ ಗೞಹದಿರೆನುತೆ ಕೌರವರಾಯ ತೆಗೆದೆಚ್ಚ ॥ ೭೨
ಗರುಡ ನೀನಹೆ ನಿನ್ನ ಪಕ್ಕವ
ನೊರಸಿ ಹೆಡತಲೆಗಡರಿ ಬೆನ್ನೆಲು
ಮುಱಿಯೆ ದುವ್ವಾಳಿಸುವ ಮುರರಿಪುವೆನ್ನ ನೀನಱಿಯಾ ।
ತರಹರಿಸು ಕಲಿ [2] ಯಾದೊಡೆಂದ
ಬ್ಬರಿಸಿ ಕೌರವನೆದೆಯ [3] ನಗುೞಿದ
ನೆರಡುಬಾಣದೊಳರುಣಜಲ [4] ಧಾರೆಗಳ ಕಾಣಿಸಿದ ॥ ೭೩

---

1 ತೆಗೆವೆ ಸೈರಿಸೆನುತ್ತ ನರನೆಚ್ಚ, ಖ. ತೆಗೆದುಕೊಳ್ವೆವು ಸೈರಿಸೆನುತೆಚ್ಚ. ಚ. ಝ.

* ಎಲವೊ ಕೌರವ ಹಿಂದೆ ಜೂಜಿನ
ಕಲುಹೆಯೊಳು ಮೇದಿನಿಯ ಕೊಂಡುದು
ಗೆಲುವಹುದೆ ನೋಡಾದೊಡಿನ್ನೀನಿನ್ನ ಭೂತಳಕೆ ।
ಹಲಗೆ ಯಿದು ಕುರುಭೂಮಿ ನಿನ್ನಯ
ಕುಲದ ತಲೆ ಸಾರಿಗಳು ಶರದೊಳು
ಗೆಲಲು ಬಂದೆನು ಹಾಯ್ಕು ಹಾಸಂಗಿಗಳನೆನುತೆಚ್ಚ ॥

ಈಪದ್ಯವು ಕ. ಚ. ಪುಸ್ತಕಗಳಲ್ಲಿ 71ನೆಯ ಪದ್ಯದ ಮುಂದೆ ಹೆಚ್ಚಾಗಿ ದೊರೆಯುತ್ತದೆ.

2 ಯಾಗೆನುತ್ತ, ಚ. ಜ. ಟ. ಯಾಗೆನುತೆ ಬೊಬ್ಬಿಱಿದು, ಝ,

3 ನುಗುಳಿದ, ಕ. ಖ. ಚ. ಝ.

4 ದೊಱತೆಗಳ, ಖ. ಚ. ಜ. ಟ.

ಅವನ ಭಾರಿಯ ವಲ್ಲಿಸೀರೆಗ
ಳವಯವದ ರಕುತದೊಳು ತೋದುವು
ಜವಫೆಱದು ಸಾರಥಿಗೆ ಸೂಚಿಸೆ ರಥವ ಮರಳಿಚಿದ ।
ಕವಿದನರ್ಜುನ ನೋಡದಿರು ಕೌ
ರವ ಪಲಾಯನವೆಕಟಕಟ ಪಾ
ರ್ಥಿವರ ಪಂತವೆ ಮರಳಿ ನಿಂದಿರು ಕೊಲುವುದಿಲ್ಲೆಂದ ॥ ೭೪

ಮಾತು ಹಱಸದ ಮುನ್ನ ಕಾಲ್ಗಳು
ಸೋತು ತೆಗೆದುವು ಹೊಳ್ಳುವಾತಿದು
ನೀತಿಯೋ ನರಪತಿಗಳಿಗೆ ಬಹುಭಂಗವನ್ವಯಕೆ ।
ಭೀತನಾಗದೆ ಕಾದಿ ಮಡಿದನ
ಮಾತುಗಳಲಾ ಪುಣ್ಯಕಥನವು
ಭೂತಳಾಧಿಪ ಮರಳಿ [1] ನೋಡೆನ್ನಾಣೆ ನೋಡೆಂದ ॥ ೭೫

ಹುರುಳುಗೆಟ್ಟುದು ಗರುವತನ ವೆಂ
ದರಸ ನಾಚಿದ ನಧಿಕಧೈರ್ಯೋ
ತ್ಕರುಷದೊಳು ಕಲಿಯಾಗಿ ನಿಂದನು ಮತ್ತೆ ಕಾಳಗಕೆ ।
ದೊರೆಯ ದುಗುಡವ ಕಂಡು ತಮತಮ
ಗುರವಣಿಸಿದರು ಸಕಲಸುಭಟರು
ಹೊರಳಿಗಟ್ಟಿತು ಸೇನೆ ನಿಚ್ಚಟ [2] ದಳವ ನಿಚ್ಚಳಿಸಿ ॥ ೭೬

ನೊಂದ ನವನಿಪ ನಿಂದು ಪಾರ್ಥನ
ಕೊಂದು [3] ತೋಱುವೆ ನೆನುತೆ ರವಿಸುತ
ನೊಂದುಕಡೆಯೊಳು ಮೊಱಗಿದನು ಬಲುಬಿಲ್ಲ ಜೇವಡೆದು ।
ಒಂದುಕಡೆಯೊಳು ಮಸಗಿದನು ಗುರು
ನಂದನನು ವೃಷಸೇನ [4] ಸೈಂಧವ
ರೊಂದುಕಡೆಯೊಳು ಭೀಷ್ಮದುಶ್ಶಾಸನ [5] ಕೃಪಾದಿಗಳು ॥ ೭೭

---

1 ನಿಂದೊಡೆ ಕೊಲುವುದಿಲ್ಲೆಂದ. ಜ. ಟ 2 ತನವ, ಜ. 3 ಹೋಗುವೆನೆಂದು, ಕ.
4 ದುರ್ಜಯ, ಖ. 5 ಜಯದ್ರಥರು, ಖ.

ಗುರು ಚಡಾಳಿಸಿ ಹೊಕ್ಕ [1] ನೊಮ್ಮೈ
ಗುರವಣಿಸಿದನು ಬಾಹ್ಲಿಕನು ಭೂ
ಸುರಕಳಿಂಗ ಸುಕೇತು ಶಕುನಿ ವಿಕರ್ಣ ದುಸ್ಸಹರು ।
ನರನ ಮುಸುಕಿದರೊಂದುಕಡೆಯೊಳು
ತೆರಳಿಕೆಯ ತೇಱಿನೊಳು ಬಲ ಮೋ
ಹರಿಸಿ ಕವಿದುದು ಸುತ್ತ ಮುತ್ತಿತು ಕಲಿಧನಂಜಯನ ॥ ೭೮

ಅಂಗವಿಸಿತರಿಸೇನೆ ಲೋಕವ
ನುಂಗಿ ತಳೆಯಲು [2] ಕುಣಿವ ಭರ್ಗನ
ರಂಗಭೂಮಿಯ ತೊಳೆವ ಜಲಧಿಯ ಜೋಕೆಯಂದದೊಳು ।
ಭಂಗಿತರ ಮೆಱೆವಲಗೆಯೊಳು ಸ
ರ್ವಾಂಗಬಲ ಜೋಡಿಸಿತು ನಮ್ಮಟಿ
ವಿಂಗೆ ಹದನೇನೆನುತೆ ಮತ್ಸ್ಯನ ಸೂನು [3] ಬೆಸಗೊಂಡ ॥ ೭೯

* ಅಂಜದಿರು ಕಲಿಯಾಗು ಸೂರ್ಯನ
ಮಂಜು ಮುಸುಕಿದೊಡೇನು ರಿಪುಬಲ
ಪುಂಜವನು ತತ್ಕ್ಷಣದೆ ಜಯಿಸುವೆ ನೊಂದುಬಾಣದೊಳು ।
ರಂಜಕರ ನುಡಿಯಲ್ಲ ವೆನುತೆ ಧ
ನಂಜಯನು ನುಡಿಯುತ್ತುಮಿರೆ ರಿಪು
ಭಂಜಕನ ಮುತ್ತಿದುದು ಕೌರವರಾಜಸಕಲಬಲ ॥ ೮೦

ಸರಳ ಕಱೆಯುತೆ ಬಹ ಬಲವ ನಾ
ಪರಬಲಾಂತಕ ನೋಡಿ ತನ್ನಯ

---

[1] ನೊಂದೆಸೆ, ಖ, ಚ. [2] ಬಗೆದಭಾರ್ಗವ, ಕ. ಖ. ಝ.

[3] ಚಿಂತಿಸಿದ, ಕ. ಖ. ಜ. ಬೆಬಗಾದ, ಝ. ಕೈಸುಗಿದ, ಟ.

* ಅಂಜದಿರು ಮೊದಲಾದ ಪದ್ಯವೂ ಸರಳಕಱೆಯುತೆ ಮೊದಲಾದ ಪದ್ಯವೂ ಜ. ಝ. ಟ. ಪುಸ್ತಕಗಳಲ್ಲಿಲ್ಲ.

ಸಿರವ ತೂಗುತೆ ರಿಪುಬಲವ ಗೆಲಲರಿದು ಬಳಿಕೆನುತೆ ।
ಕರದ ಭಾರಿಯ ಗಾಂಡಿವವ ಬೊ
ಬ್ಬಿಱಿದು ಜೇವಡೆಗೈದು ನಸುನಗು
ತರಿಬಲವ ಸಮ್ಮೋಹನಾಸ್ತ್ರದೆ ಸಿಲುಕಿಸುವೆ ನೆಂದ ॥ ೮೧

ನೆರೆದ ತಿಮಿರದ ಘಟ್ಟ ಸೂರ್ಯನ
ತೆರಳಿಚುವವೊಲು ಮೇಘಘಟೆಗಳ
ಮುಱಿದ ಮೋಹರ ಮೆಮಕಿ ಪವನನ ಸೆರಗ ಹಿಡಿವಂತೆ ।
ತೆರಳದೊತ್ತಂಬರಿಸಿ ತನ್ನಯ
ಸರಳೊಳಟಿದಾಹೇಣನ ತುಱಿದ
ಬ್ಬರಿಸಿ ಬರೆ ಸಮ್ಮೋಹನಾಸ್ತ್ರವ ಹೂಡಿದನು ಪಾರ್ಥ ॥ ೮೨
*

ಇಸಲು ಸಮ್ಮೋಹನದ ಶರ ಪಸ
ರಿಸಿತು ಬಲದೊಳು ಬಹುಲನಿದ್ರಾ
ವ್ಯಸನವಿಹ್ವಲಿತಾಂತರಂಗರು ಮೆಯ್ಯ ನೊಲೆದೊಲೆದು ।
ಉಸಿರ ಸಂಚದ ನಾಡಿ ಯಮಗಾ
ಹಿಸಲು ತೊಱೆದರು ಮೈಮಱೆದು ತಲೆ
ಮುಸುಕಿನೊಳು ಬಲ ತೆಕ್ಕೆಗೆಡೆದುದು ಕೂಡೆ ಕಳವಳಿಸಿ ॥ ೮೩

* ನೆರೆದತಿಮಿರದ ಮೊದಲಾದ ಪದ್ಯದ ಮುಂದೆ ಕ. ಖ. ಚ. ಪುಸ್ತಕಗಳಲ್ಲಿ ಈ ಪದ್ಯವು ಹೆಚ್ಚಾಗಿ ದೊರೆಯುತ್ತದೆ.

ತುಡುಕಿದನು ಸಾಗರದ ನಡುವಣ
ವಡಬನನು ಹಿಡಿವಂತೆ ಮಿಗೆ ಘುಡು
ಘುಡಿಪ ಸರಳನು ಹೂಡಿದನು ಸುರರಾಲಿ ನಲಿದಾಡೆ ।
ತೊಡಚಿ ತೆಗೆದಾಕರ್ಣಪೂರಕೆ
ಬಿಡಲು ಜಡಿಯುತೆ ಬಾಣ ಬರೆ ತೂ
ಕಡಿಸಿ ಕೆಡೆದುದು ಭೀಷ್ಮ ಹೊರತಾಗಖಿಳಕುರುಜಾಲ ॥

* ತನುವ ನೊಳೆದುವು [1] ದಡದಡಿಸಿ ಕಿವಿ
ಗೊನೆಯ ಜೋಲಿಸಿ [2] ಮೆಂಡಿಗಾಲ್ಗಳೊ
ಳನುವರದೊಳಾಕೊರಳ ಮುರಳಿಚಿ ಕೈಯನೊಳಗಿಕ್ಕಿ |
[3] ತನತನಗೆ ಬಲುಜೋದರೊಂದೆಸೆ
ಕನಸ ಕಾಣಲು ಗುರು ನದೀಜರ
ಘನಬಲದ ಕೋಟಾನುಕೋಟಿಗಜಂಗಳೊಱಗಿದುವು ‖ ೧೪

ದೃಗುಯುಗವ [4] ನರೆದೆಱೆದು ರೋಮಾ
ಳಿಗಳ ತೆಕ್ಕೆಗೆ ಸಾರಿ ಕೊರಳರೆ
ಮುಗುಚೆ ಹಿಂಗಾಲೊಂದುಖುರವನು ತೂಗಿ ತೊನೆತೊನೆದು |
ಬಗೆಯು ನುಚಿದುವು ಹೊನ್ನ ಮುರಗೋ
ಡುಗಳ ಮೇಲಡಗೆಡೆದು ನಿದ್ರಾ
ವಿಗಡರಾಗಲು ರಾವುತರು ತಂತಮ್ಮ ಕುದುರೆಗಳು ‖ ೧೫

ಸೆಳೆ ಸಡಿಲೆ ಕೈದುಗಳು ಕೈಯಿಂ
ಕಳಚೆ ಯೊಬ್ಬರ ನೊಬ್ಬರೊತ್ತಲು
ಮಲಗೆ ಬೆಂಬತ್ತಳಿಕೆ ಬದಿಯೊಳಗಡಗೆ ತೋಳುಗಳ |
ತಲೆಯೊಳೊಱಗಿಸಿ ಗುರುಗುರಿಸಿ ರಥ
ದೊಳಗೆ ನಿದ್ರಾಕುಲರು ಸಾರಥಿ
ಗಳು ಬೆರಸಿ ನಿದ್ರೆಯೊಳು ಮೈಮಱೆದಿರ್ದ ರತಿರಥರು ‖ ೧೬

ಸರಳ ಸೊಕ್ಕವೆಗಡಿಸೆ ಕೃಪ ಮೈ
ಮಱೆದ ನತ್ತಲು ದ್ರೋಣ ನಿತ್ತಲು
ಪರಮನಿದ್ರಾಸಕ್ತನಾದನು ತನ್ನ ಮಗನೊಡನೆ |

---

* ತನುವನೊಳೆದುವು ಮೊದಲಾದ ಪದ್ಯವೂ ಅದರ ಮುಂದಣ ಮೂರು ಪದ್ಯಗಳೂ, ಜ. ಟ. ಎಂಬ ಪುಸ್ತಕಗಳಲ್ಲಿಲ್ಲ,

1 ತಡವರಿಸಿ, ಖ. 2 ಕೊಂಕಿ ಮುರಗೋ | ಡಿನೊಳು ಕುಸಿದುವು, ಖ,

3 ತೊನೆದುಕೆಡೆದರು ಜೋದರಲ್ಲಿಯೆ ಕನಸುಗಂಡರು ಮಾಣೆನಲು ಕುರು ಬಲದೊಳಗೆ ಓೋ, ಖ, 4 ನೆಱೆದೆಗೆದು, ಕ, ಖ,

ಕರದ ಬಿಲು ನಸು ಸಡಿಲೆ ಕರ್ಣನು
[1] ಮೆಱೆದ ನತ್ತಲು ರಥದೊಳಿತ್ತಲು
ದುರುಳದುರ್ಯೋಧನನೊಡನೆ ವೈಮೆಱೆದುದಾಸೇನೆ ॥ ೮೭

*

ಕನಸು ಮೇಣೆಚ್ಚಱು ಸುಷುಪ್ತಿಯು
ದೆನಿಪವಸ್ಥಾತ್ರಯದೊಳಗೆ ಜೀ
ವನು ವಿಸಂಚಿಸಿ ಬೀಳ್ವ ನಲ್ಲದೆ ತುರ್ಯ ಸಿಲುಕುವನೆ ।
ಇನಿತುಬಲ ತೂಕಡಿಸಿ ಝೋಂಪಿಸಿ
ತನಿಗೆಡೆಯೆ ಭಾಗೀರಥೀನಂ
ದನನು ನಿರ್ಮಲನಾಗಿ ತೊಳ ತೊಳಗಿದನು ರಥದೊಳಗೆ ॥ ೮೮

* ಎಣಿಸುವೊಡೆ ಯೇಕಾದಶಾಕ್ಷೌ
ಹಿಣಿಯು ಬಲವನು ಪಾರ್ಥನೊಬ್ಬನೆ
ರಣದೊಳಡಗೆಡಹಿದನು ಮೋಹನಮಂತ್ರಬಾಣದೊಳು ।

---

1 ದುರುಳದುರ್ಯೋಧನನು ದ್ರೋಣಸಹ ವರವಿವಿಂಶತಿ ಶಕುನಿ ದುಶ್ಯಾಸನರು ಮೊಱಗಿದರು, ಖ.

* ಈ ಪದ್ಯವು 87ನೆಯ ಪದ್ಯದನಂತರ ಕ. ಪುಸ್ತಕದಲ್ಲಿ ಹೆಚ್ಚಾಗಿ ದೊರೆಯುತ್ತದೆ.

ಸೇನೆ ವೈಮಱೆದೊಱಗ ಲಧಟನಿ
ದಾನ ಹೋಗದಱುಹಿತು ನಿದ್ರಾ
ಮಾನವಿಭ್ರಮವನು ಸಕಲಸಂಸಾರದಂದದೊಳು ।
ಏನ ಹೇಳುವೆ ನದನು ಕದನದ
ಕಾನನದೊಳತಿರಥರು ವಿಜಯನ
ನೂನಬಲಸಮ್ಮೋಹನಾಸ್ತ್ರದ ಬಾಧೆಗೊಳಗಾಯ್ತು ॥

* ಎಣಿಸುವೊಡೆ ಯೇಕಾದಶಾಕ್ಷೌಹಿಣಿಯು ಮೊದಲಾದ ಪದ್ಯವು, ಜ. ಝ ಟ. ಎಂಬ ಪುಸ್ತಕಗಳಲ್ಲಿಲ್ಲ. ಇಱಿದು ದ್ರೋಣನ ಎಂಬುದೇ ಮೊದಲಾದ ಪದ್ಯವೂ ಧರಣಿಪಾಲನ ಎಂಬುದೇ ಮೊದಲಾದ ಪದ್ಯವೂ. ಚ. ಜ. ಟ. ಪುಸ್ತಕಗಳಲ್ಲಿಲ್ಲ.

ಕುಣಿಯುತಂಬರದೊಳಗಲರ ಸಂ
ದಣಿಯ ನಮರರು ಸೂಸಿದರು ಫಲು
ಗುಣನು ರಥವನು ನೂಕಿದನು ನಿಜಮಹಿಮ ರಿದ್ದೆಡೆಗೆ ॥ ೮೯

ಇಳಿದು ದ್ರೋಣನ ಚರಣಕಮಲಂ
ಗಳಿಗೆ ತನ್ನಯ ನೊಸಲ ಚಾಚಿದ
ನಳವಿಯೊಳು ಭೀಷ್ಮಂಗೆ ಮೆಯ್ಯಿಕ್ಕಿದನು ರಥದೊಳಗೆ ।
ಸುಳಿದು ಕರ್ಣನ ಮಕುಟಪಟ್ಟೆಯ
ಸೆಳೆದು ದುರ್ಯೋಧನನ ವಸ್ತ್ರವ
ಸುಲಲಿತಾಭರಣವನು [1] ನೀಂ ತೆಗೆ ಯೆಂದ ನುತ್ತರಗೆ ॥ ೯೦

ಧರಣಿಪಾಲನ ಮಕುಟವನು ಕ
ತ್ತರಿಸಿ ದುಶ್ಶಾಸನನ ಘನಮಣಿ
ಸರದ ರತ್ನವ ನುಡಿದು ಭೂರಿಶ್ರವ ಜಯದ್ರಥರ ।
ಹೊರಳಿಚಿವ [2] ನು ವಿಶೋಕಕುವರರ
ಹುರುಳುಗೆಡಿಸಿದ ನಖಿಳರಾಜರ
ಸಿರಕೆ ಭಂಗವ ಪೊಯಿಸಿ ಫಲುಗುಣ ನಡರಿದನು ರಥವ ॥ ೯೧

*

---

1 ತೆಗೆದುತ್ತರಗೆ ನೀಡಬನು, ಖ. 2 ನಾನಾಕುಮಾರರ ನ ರುಳಿ ಕೆಡಹಿದ ನಖಿಳ ಕೌರವಧುರಕೆ ಭಂಗವ ಮಾಡಿ ಫ. ಖ,

* ಈ ಪದ್ಯವು, ಕ. ಪುಸ್ತಕದಲ್ಲಿ ಮಾತ್ರ ಹೆಚ್ಚಾಗಿ ದೊರೆಯುತ್ತದೆ.

ಇತ್ತಲರ್ಜುನ ಮತ್ಸ್ಯತನಯಂ
ಗಿತ್ತ ಕೆಲಸವ ನೀನು ರಥದಿಂ
ಹೊತ್ತುಗಳೆಯದೆ ಹೋಗಿ ರಣದೊಳು ಭಾನುನಂದನನ ।
ಉತ್ತಮದ ನವರತ್ನಪದಕವ
ಚಿತ್ತರದ ದೇವಾಂಗವಸ್ತ್ರವ
ನುತ್ತರೆಗೆ ಕೊಡಬೇಕು ತಾ ಪೋಗೆಂದು ನೇಮಿಸಿದ ॥

ಫಲುಗುಣನ ನೇಮದೊಳು ರಥದಿಂ
ದಿಳಿದ ನುತ್ತರ ನವನಿಪನ ಕೋ
ಮಲ ಸುವಸ್ತ್ರಾಭರಣವನು ಕರ್ಣ ಕೃಪ ಗುರುಸುತರ ।
ಸುಲಲಿತಾಂಬರ ರತ್ನಭೂಷಂ
ಗಳನು ಕೊಂಡಡರಿದನು ರಥವನು
ಬಿಲುದುಡುಕಿ ಗಾಂಗೇಯ ನಡಹಾಯ್ದನು ಧನಂಜಯನ ॥ ೯೧

ಎರಡುಶರದೊಳು ಚಾಪವನು ಕ
ತ್ತರಿಸಿ ಭೀಷ್ಮನ [1] ಕಡುಹ ನಿಲ್ಲಿಸಿ
ಭರದೆ ಮಕುಟವ ಬೀಳಲೆಚ್ಚನು ಮೂಱುಬಾಣದೊಳು ।
ತಿರುಗಿದನು ಕಲಿಪಾರ್ಥ ನಗುತು
ತ್ತರಸಹಿತ ಬನ್ನಿಯೊಳು ಕೈದುವ
ನಿರಿಸಿ ಮುನ್ನಿನ [2] ರಥವ ಜೋಡಿಸಿ ನಗರಿಗೈತಂದ ॥ ೯೨
*

* ಸೇಣಿಸಿದವ ನೇಕಾದಶಾಕ್ಷೌ
ಹಿಣಿಯ ಪತಿ ಕರ್ಣಾದಿಗಳು ಭಾ
ರಣಿಯ ಸುಭಟರತಿಬಲರು ಭೀಷ್ಮ ದ್ರೋಣ ಗೌತಮರು ।

---

1 ನಿಲಿಸಿ ಕೌರವ ಧರಣಿಪಾಲನ ಮಕುಟವನು ಮೂಱಂಬಿನೊಳು ಕಡಿದು ಖ. ಜ. ಟ. ಕಡುಹ ನಿಲ್ಲಿಸಿ ಧರಣಿಪಾಲನ ಮಕುಟವನು ಮೂಱಂಬಿನೊಳು ಕಡಿದು, ಝ. 2 ತೆಱದೆ ಸಾರಥಿತನವನೈಕೈಕೊಂಡ, ಜ.

* ಈ ಪದ್ಯವು, ಕ. ಎಂಬ ಪುಸ್ತಕದಲ್ಲಿ ಮಾತ್ರ ಹೆಚ್ಚಾಗಿ ದೊರೆಯುತ್ತದೆ.

ಇತ್ತ ಭಂಗದ ಪಡಪಿನೊಳು ರಿಪು
ವೊತ್ತ ತಿರುಗಿತು ಜವಗೆ ಬಾಣಸ
ವಿತ್ತು ಫಲುಗುಣ ಮತ್ಸ್ಯನಾತ್ಮಜಸಹಿತ ನಡೆತಂದ ।
ಅತ್ತ ದೇವಾನೀಕ ಸುರನರ
ರುತ್ತಮರು ಮಝು ಭಾಪುರೆನೆ ಹೊಗ
ಱುತ್ತೆ ಹೊಕ್ಕರು ತಮ್ಮ ನಿಳಯುವ ಭೂಪ ಕೇಳೆಂದ ॥

* ಈ ಪದ್ಯವು, ಜ. ಪುಸ್ತಕದಲ್ಲಿಲ್ಲ.

ರಣದೊಳಿನಿಬರ ನೊಬ್ಬನೇ ನೆಱೆ
ಹಣಿಗ ನೆಂದಮರಾಳಿ ಗಗನಾಂ
ಗಣದೆ ಹೊಗೞಿತು ವೀರನಾರಾಯಣನ ಮೈದುನನ ॥ ೯೪

ಒಂಭತ್ತನೆಯ ಸಂಧಿ ಮುಗಿದುದು.

ಹತ್ತನೆಯ ಸಂಧಿ.

ಸೂಚನೆ.

ಅರ್ಜುನನು ಉತ್ತರನೊಡನೆ ವಿರಾಟರಾಯನ ಪಟ್ಟಣಕ್ಕೆ ಬಂದುದು.

ರಾಯಕೌರವಸೈನ್ಯಕದಳೀ
ವಾಯು ವುತ್ತರಸಹಿತ ನಿರ್ಜರ
ರಾಯನಂದನ ಬಂದು ಹೊಕ್ಕನು ಮತ್ಸ್ಯಪುರವರವ ॥

ಕೇಳು ಜನಮೇಜಯಧರಿತ್ರೀ
ಪಾಲ ಭಂಗದ [1] ಮೇಲೆ ಕೌರವ
ಜಾಲ ತಿರುಗಿತು ವಹಿಲದೊಳು ಗಜಪುರಿಗೆ ನಡೆತಂದು ।
ಮೇಲುಮುಸುಕಿನ ಮೊಗದ ವಾದ್ಯದ
[2] ಸೋಲ ದೊಸಗೆಯೊ ಳಖಿಳನೃಪರು ನಿ
ಜಾಲಯಂಗಳ ಬಂದು ಹೊಕ್ಕರು ಹೊತ್ತು ದುಗುಡದೊಳು ॥ ೧

---

1 ಮೇಲೆ ರಿಪುಭಟಜಾಲ, ಖ. ಪಡಪಿನೊಳು ಕುರು | ಜಾಲ ತಿರುಗಿತು ಗಜಪುರಿಗೆ ದುಗುಡದೊಳು ನಡೆತಂದು, ಜ. ಪಡಪಿನೊಳು ಭಟ | ಜಾಲ, ಟ. ಪಡಪಿನೊಳು ರಿಪು | ಜಾಲ, ಝ. 2 ಮೇಳವೋನದೊಳಖಿಳ, ಖ. ಟ. ಮೇಲೆ ವೋನದೊಳಖಿಳ ಚ. ಮೇಲುವೊಗದೊಳಖಿಳ, ಜ. ಮೌಳಿಯೊಬಹಿನೊಳಖಿಳ, ಝ.

ಬಿಱಿಕ ಫಲುಗುಣ ನಿತ್ತಲಾಮರ
ದೊಳಗೆ ಕೈದುವ ನಿರಿಸಿ ಮುನ್ನಿನ
ಹುಲುರಥವ ಮೇಳೈಸಿ ಸಾರಥಿತನವ ನನುಗೊಳಿಸೆ ।
ಇಱಿದು ಪಾರ್ಥನ ವೈದಡವಿ ಕಪಿ
ಕುಲಲಲಾಮನು [1] ಬೀೞುಕೊಂಡನು
ಹೊೞಲ ಹೊರೆಯೊಳು ನಿಂದು ನರ ನುತ್ತರನೊಳಿಂತೆಂದ ॥

ಕರೆದು ದೂತರಿಗಱುಹು ನೀನೇ
ಧುರವ ಜಯಿಸಿದೆ ನೆಂದು ನಾವಿ
ರ್ದಿರವ ನಿಂದಱುಹದಿರು ಪಸರಿಸು ನಿನ್ನ ವಿಕ್ರಮವ ।
ಅರಸ ನಿನ್ನನೆ ಮನ್ನಿಸಲಿ ಪುರ
ಪರಿಜನಂಗಳು ನಿನ್ನ ವಿಜಯದ
ಹರುಷದೊಳು ಹೆಚ್ಚಿರಲಿ ನೇಮಿಸಿದಂತೆ ಮಾಡೆಂದ ॥ ೩

ಎನಲು ನೀನೇ ಬಲ್ಲೆ ಸರಿ ಲೇ
ಸೆನುತೆ ದೂತರ ಕರೆದು ಮತ್ಸ್ಯನ
ತನಯ ಕೌರವಬಲವ ಜೈಸಿದ ನೆಂದು ಹೇೞುವುದು ।
ಜನಪನಲ್ಲಿಗೆ ಹೋಗಿ ಯೆಂದಾ
ತನು ನಿಯಮಿಸುತ್ತಿರ್ದ ನತ್ತಲು
ಜನಪಕುಂತೀಸುತರು ಸಹಿತೈತಂದರೊಲವಿನೊಳು ॥ ೪

ಅರಮನೆಯ ಹೊಕ್ಕವನಿಪತಿಯು
ತ್ತರನ ಕಾಣದೆ ಕಂದ ನೆತ್ತಲು
ಸರಿದ ನೆನೆ ರಾಣಿಯರು ಬಿನ್ನೈಸಿದರು ಭೂಪತಿಗೆ ।
ಕುರುಬಲವ ನಂಗೈಸಿದನು ವು
ತ್ತರೆಯ ಗುರು ಸಾರಥಿತನವ ನನು
ಕರಿಸಿದನು ಕೆಲಬಲನ ಹಾರದೆ ಕದನಕ್ಕೈದಿದನು ॥ ೫

1 ನಭಕೆ ಹಾಯ್ದನು. ಖ. ಚ. ಟ. ಬನಕೆ ಹಾಯ್ದನು. ಜ.

ಎಂದೊಡೊಡಲೊಳು ಕೂರಲಗು ಮುಱಿ
ದಂದದೊಳು ಕಳವಳಿಸಿದನು ಮನ
ನೊಂದ ನಕಟ ಕುಮಾರ ನೆತ್ತಲು ರಾಯದಱ ವೆತ್ತ ।
ಬಂದವರು ಭೀಷ್ಮಾದಿಗಳು[1] ಮಿಗೆ
ನಿಂದು ತರಹರಿಸುವೊಡೆ ತಾನೇ
ನಿಂದುಧರನೇ ಮರುಳಲಾ ಮಗ ನೆನುತೆ ಚಿಂತಿಸಿದ ॥ ೬

ಮಗಗೆ ಪಡಿಬಲ ವಾಗಿ ಬಲುಮಂ
ತ್ರಿಗಳ ನವನಿಪ ಬೀಱುಕೊಟ್ಟನು
ದುಗುಡದಿಂದಿರೆ ಹೊಱಲ ಕೈಸೂಱೆಗಳ ಕಳಕಳದ ।
ಮೊಗದ ಹರುಷದೊಳಖಿಳದೂತಾ
ದಿಗಳು ಬಂದರು ಗುಡಿಯ ಕಟ್ಟಿಸು
ನಗರಿಯೊಳು ಕಳುಹಿದಿರುಗೊಳಿಸು ಕುಮಾರಕನ ನೆನುತೆ ॥ ೭

ರಾಯಕುವರಪಿತಾಮಹನು ರಿಪು
ರಾಯಕುನರಮುರಾರಿ ಕೌರವ
ರಾಯಘಟ್ಟವಿಭಾಡ ನರಿರಾಜಗಜಪಂಚಮುಖ ।
ಜೀಯ ಬಿನ್ನಹ ಕರ್ಣ ಗುರು ಗಾಂ
ಗೇಯ ಮೊದಲಾದಖಿಳಕೌರವ
ರಾಯದಱವನು ಗೆಲಿದ ನುತ್ತರ ತುಱುವ ಮರಳಿಚಿದ ॥ ೮

ಕೇಳಿ ಮಿಗೆ ಹಿಗ್ಗಿದನು ತನುರೋ
ಮಾಳಿ ತಳಿತುದು ಬಹುಳಹರುಷದ
ದಾಱಿಯೊಳು ಮನ ಮುಂದುಗೆಟ್ಟುದು ಕಂಗಳರಳಿದುವು ।

[1] ತನಗಿಂದು ತರಹರಿಸುವೊಡೆ, ಕ, ಟ. ತನಗಿಂದು ಪರಿಹರಿಸುವೊಡೆ, ಖ. ತಾನಿಂದು ತರಹರಿಸುವೊಡೆ, ಜ, ಝ.

ಲಾಲಿಸುತೆ ಸರ್ವಾಂಗ [1] ಚಿತ್ತದೊ
ಳಾಪೆ ಜನಪ ಪಸಾಯವನು ದೂ
ತಾಳಿಗಿತ್ತನು ಸುಲಿದ ರವದಿರು ರಾಯನೋಲಗವ ‖ ೯

ಇದಿರಗೊಳಹೇಷೆನಲು ಸರ್ವಾಂ
ಗದ [2] ರುಚಿರಕಾನ್ತಿಗಳ ಶೃಂಗಾ
ರದ ಸುರೇಖೆಯ ಲಲಿತಚಿತ್ರಾವಳಿಯ ಮುಸುಕುಗಳ ।
ಸುದತಿಯರು ಪೊರಮಟ್ಟ ರೊಗ್ಗಿನ
ಮೃದುಮೃದಂಗದ ಕಹಳೆಗಳ ಸಂ
ಪದದ ಸೊಂಪುಗ ಳಸೆಯೆ ರ ಜಕುಮಾರಿಯರು [3] ಮುಂದೆ ‖೧೦

ಕವಿದು ನೂಕುವ ಹರುಷವನು ಸಂ
ತವಿಸಲಱಿಯದೆ ಕಂಕ ನಿನ್ನೊಡ
ನೆವಗೆ ವಿಮಲದ್ಯೂತಕೇಳಿಗೆ ಚಿತ್ತ ವಾಯ್ತೆನಲು ।
ಅವನಿಪತಿ ಕೇಳ್ಜೂಜಿನೊಳು ಪಾಂ
ಡವರು ಸಿಲುಕಿದ ರವರ [4] ಪರಿಯೊಳು
ಭುವನದೊಳು ನವೆದವರದಾರೆಂದನು ವಿರಾಟಂಗೆ ‖ ೧೧

ಅವರು ರಾಜ್ಯವ ನೊಡ್ಡಿ ಸೋತವೊ
ಲೆವಗೆ ಪಣ ಬೇಱಿಲ್ಲ ಹರುಷೋ

---

1 ಹರುಷದೊ, ಕ. ಚಿತ್ತದ ವೀಳೆಯವ ನೊಲಿದರಸ ನಾದೂ, ಖ. ಚಿತ್ತವ ಧೂಳಿಝಳದ ಪಸಾಯವನು ದೂ, ಚ. ಪುಳಕಿಸಿ ವೀಳೆಯವನುಡುಗೊಱೆಯ ನಾದೂ, ಜ. ಚಿತ್ತದ ಧಾಟಿಯೊಳು ದೂತಾಳಿಗೆ ಪಸಾಯವನು ಕೊಟ್ಟನು ಸು, ಝ

2 ಮಣಿಯ ಮೌಕ್ತಿಕದ, ಕ. ಲಿಮಣಿಮೌಕ್ತಿಕದ, ಚ, ಝ. ಣಿಯಲು, ಜ.

3 ನಡೆಯೆ . ಖ. ಚ. ಝ. ನಡುವೆ, ಜ. ಟ.

ವಿಧಿಯನು ಭುವನದೊಳು ಬಂದವ, ಖ. ಚ. ಜ. ಝ. ಟ.

ತ್ಸವಕುಮಾರಾಭ್ಯುದಯವಿಜಯಶ್ರವಣಸುಖ [1] ವಿರಲು ।
ಏವಗೆ ಮನವಾಯ್ತೊಡ್ಡು ಸಾರಿಯ
ನಿವಹವನು ತೆಗೆ ಯೆನಲು ಹೂಡಿದ
ನವನಿಪತಿ ನಸುನಗುತೆ ಹಾಸಂಗಿಗಳ ಹಾಯ್ಕಿದನು ॥ ೧೨

ಕೇಳಿ ಸಮತಳಿಸಿತ್ತು [2] ಮತ್ಸ್ಯನೃ
ಪಾಲ ನೆಂದನು ಕಂಕ ನೋಡೈ
ಕಾಳಗವ ನುತ್ತರನು ಗೆಲಿದನು ರಾಯಘಟ್ಟನೊಳು ।
ಶೂಲಪಾಣಿಗೆ ಸೆಡೆಯದಹಿತಭ
ಟಾಳಿ ಸೋತುದು ದಿವಿಜನರರೊಳು
ಹೋಲುವವರುಂಟೇ ಕುಮಾರ [3] ರು ಹೇಳು ಹೇಳೆಂದು ॥ ೧೩

ಸೋತುದುಂಟರಿಸೇನೆ ಸುರಭಿ
ವ್ರಾತ ಮರಳಿದುದುಂಟು ಗೆಲವಿದು
ಕೌತುಕವಲೇ ಬಗೆಯಲದುಭುತ ವೆನ್ನ ಚಿತ್ತದೊಳು ।
ಮಾತು ಹೋಲುವೆ ಯಹುದು ಜನವಿ
ಖ್ಯಾತಸಾರಥಿ ಯಿರಲು ಕುವರಗೆ
ಭೀತಿ ತಾನೆಲ್ಲಿಯದು ತಪ್ಪೇನೆಂದ ನಾಕಂಕ ॥ ೧೪

ಎಲೆ ಮರುಳೆ ಸನ್ಯಾಸಿ ಮತ್ಸರ
ದೊಳಗೆ ಮುಳುಗಿದ ಚಿತ್ತ ನಿನ್ನದು
ಗೆಲುವಿನೊಳು ಸಂದೇಹವೇ ಹೇಡಾವು [4] ದದುಭುತವು ।
ಅಳುಕುವವನೆ ಕುಮಾರ ಸಾರಥಿ
ಬಲುಹ ನುಳ್ಳವನೇ [5] ಬೃಹನ್ನಳ
ಯೊಳು ನಿರಂತರಪಕ್ಷ [6] ವೆಂದು ವಿರಾಟ ಖತಿಗೊಂಡ ॥ ೧೫

---

1 ಮಿಗಲು, ಖ. ಚ. ಟ. 2 ನಗುತೆ ನೃ, ಖ. ಜ. ಝ. ಟ,
3 ನ ನೆಂದನವನೀಶ, ಖ. ನ ನೆಂದನಾವಮತ್ಸ್ಯ, ಕ. ಚ. ಜ. ಝ.
4 ದಂತರವು, ಕ, ಖ. ಚ. ದತಿಶಯವು, ಟ.
5 ನಪುಂಸಕನೊಳು, ಖ. ಚ. ಝ. ಟ. 6 ಪಾತವಿದೆಂದನಾವಮತ್ಸ್ಯ, ಜ.

ನಾರಿಯರ ಮೈಗುಱುಹು ಪುರುಷರ
ಚಾರುಚಿಹ್ನವ [1] ಕೂಡಿ ಕೊಂಡಿಹ
ಸಾರಥಿಯು ದೆಸೆಯಿಂದೆ [2] ಗೆಲಿದನು ಗೆಲಿದನೆಂಬಿದನು !
ಸ್ವೈರಿಸಿದೆ [3] ನಾ ನೆನ್ನಪರಿಯಿಂ
ದಾರೊಡನೆ ಮಾತಾಡದಿರು ನಿ
ಸ್ಸಾರಹೃದಯನು ಕಂಕ ನೀಂ ದುಷ್ಟಾತ್ಮ ಹೋಗೆಂದ ॥ ೧೬

ಖತಿಯ ಹಿಡಿಯದಿರರಸ ದಿಟ ನೀ
ನತಿಶಯವ ಬೆದಕುವೊಡೆ ಜನಸ
ಮ್ಮತವು ಸಾರಥಿ ಗೆಲಿದ ನೆಂದೇ ಹೊಯ್ಸು ಡಂಗುರವ ।
ಸುತನು ಸಾರಥಿ ಯೆಂದು ಸಾರಿಸು
ವಿತಥ ವಲ್ಲಿದು ಪಕ್ಷಪಾತ
ಸ್ಥಿತಿಯು ನಾಡೆನು ಕವಲುನಾಲಗೆ ಯಿಲ್ಲ ತನಗೆಂದ ॥ ೧೭

ನಿನ್ನ ಮೋಹದ ಕಂಗಳಿಗೆ ಸುತ
ನುನ್ನತೋನ್ನತಸತ್ವ ನೆಂದೇ
ಮುನ್ನ ತೋಱಿತು ಹೊಲ್ಲೆಹವೆ ಸಾಂಸಾರಿಕಭ್ರಮೆಗೆ ।
ಇನ್ನು ಬಗೆ ಗೆಲಿದವ ಬೃಹನ್ನಳೆ
ನಿನ್ನ ಮಗಗಳುಕುವರೆ ಭೀಷ್ಮರು
ಕರ್ಣ ಗುರು ಕೃಪ ಗುರುತನೂಭವ ರೆಂದನಾಕಂಕ । ೧೮

ಎನಲು ಖತಿ ಬಿಗುಹೇಱಿ ಹಲುಹಲು
ದಿನುತೆ ಕಂಗಳೊಳುರಿಯ ನುಗುಳುತೆ
[4] ಕನಲು ಮಿಗಲೌಡೊತ್ತಿ ಕನಕದ ಸಾರಿಯನು ನೆಗಹಿ ।

---

1 ಮಾಡಿಕೊಂಡಿಹ, ಖ. 2 ಕುವರನು ಗೆ, ಖ. 3 ನಿಂದೆನ್ನ, ಖ. ತಾನೆನ್ನ ಪರಿಯಂತಾರೊಡನೆ, ಚ. ನಾ ನಿಸುವಪರಿಯಿಂನಾರೊಡನೆ, ಜ. ನಾ ನೆನ್ನ ಪರಿಯೆಂದಾರೊಡನೆ, ಟ. 4 ಕನಲಿಬಿಗಿದೌಡೊತ್ತಿ. ಖ. ಚ. ಜ. ಝ. ಟ.

ಜನಪತಿಯು ಹಣೆ ಯೊಡೆಯಲಿಡೆ ಜಾ
ಜಿನ ಗಿರಿಯು ನಿರ್ಝರದವೊಲು ಭೋಂ
ಕೆನಲು ರುಧಿರದ ಧಾರೆ ಚಿಮ್ಮಿತು ಸಿರದ ಸೆರೆ ಯೊಡೆದು ॥ ೧೯

ಸೈರಿಸುತೆ ಯಮಸೂನು ರಕ್ತದ
ಧಾರೆಯನು ಕೈದುಂಬಿ ಹಿಡಿದತಿ
ಧೀರ ನೋರೆಯ ನೋಟದೊಳು ಸೈರಂಧ್ರಿಯನು ಕರೆಯೆ ।
ನಾರಿ ಹರಿತಂದಕಟ ನೊಂದನು
ಕಾರಣಿಕಸನ್ಯಾಸಿ ಯೆನುತೆ ನಿ
[1] ಕಾರಿಸುತೆ ಸೀರೆಯೊಳು ತೊಡೆದಳು ಬಹುಳಶೋಣಿತವ ॥ ೨೦

ಮಡದಿ ಕರಪಲ್ಲವದೊಳೂರಸಿದ
ಳಡಿಗಡಿಗೆ ಹಣೆಯನು ಕಪೋಲವ
ತೊಡೆದು ತೊಳೆದಳು ಮುಖವ ನಿದನವ ಕಂಡು ಬೆಱಗಾಗಿ ।
ಹಿಡಿದೆ ರಕ್ತವ ನೇಕೆ ಕಾಮಿನಿ
ನುಡಿ ನಿದಾನವ ನೀತ ನೊಂದೊಡೆ
ಮಿಡುಕಲೇತಕೆ ನೀ ನೆನುತೆ ದ್ರೌಪದಿಯ ಬೆಸಗೊಂಡ ॥ ೨೧

ಉರಿದು ಹೋಹುದು ನಿನ್ನ ರಾಜ್ಯದ
[2] ಸಿರಿಯು ಬದುಕಿತಿದೊಂದು [3] ಬೋಱದೆ
ಪರಮಯತಿ ಕಾಯಿದನು ಕೈಯೊಳು ತುಂಬಿ ರಕುತವನು ।
ಅರಸ ಕೇಳೀಮುನಿಯ ನೆತ್ತರು
ಧರೆಯೊಳೂಕ್ಕೊಡೆ ಯಾಪ್ರದೇಶವ
ನೊರಸಿ ಕಳೆವುದು [4] ಕಲಿಬೃಹನ್ನಳೆಗೇಱಿಸಿದ [5] ಬಿರುದು ॥ ೨೨

---

1 ಕಾರಿಸಿದ, ಕ. ಜ. 2 ಧರಣಿ, ಖ. ಜ. ಟ ಪೇಳುವೆ, ಚ. ಬೀರಿಗೆ, ಜ. ಝ. 4 ವರ, ಜ. ಝ. ದಿಟ, ಚ. ಟ. 5 ಭಾಷೆ. ಚ. ವಾತು. ಟ.

ಈಕೆ ಯಾರಿವರಾರೊ ನಾಟ್ಯ
ವ್ಯಾಕರಣಪಂಡಿತ ಬೃಹನ್ನಳೆ
ಯೇಕೆ ಯಿವರೇಕಖಿಯಬಾರದು ಕಾಲುಕೀಲುಗಳ ।
ಏಕೆ ನಮಗೀಚಿಂತೆ ಯೆನುತವಿ
ವೇಕಿ ಯಿ [1] ರೆ ಬೞಿಕಿತ್ತ ಪುರದೊಳು
ನೂಕುನೂಕಾಯಿತ್ತು ನೋಡುವ ನೆರವಿ ಯುತ್ತರನ ॥ ೨೩

* ಇದಿರುವಂದರು ಮಂತ್ರಿಗಳು ವರ
ಸುದತಿಯರು ಸೂಸಿದರು ಸೇಸೆಯ
ನುದಿತಮಂಗಳಘೋಷ ವಾದ್ಯನಿನಾದ ರಭಸದೊಳು ।
ವದನ ವಿದೆ ಕಳೆಗುಂದಿ [2] ಜಯದ
ಭ್ಯುದಯ ತಾ ನೆಂತಾಯ್ತೆನುತೆ ಕೋ
ವಿದರು ತಮ್ಮೊಳಗಾಡುತಿರ್ದರು ಕೂಡೆ ಗುಜುಗುಜಿಸಿ ॥ ೨೪

ಎಂದಿನವ ನುತ್ತರನು ಗಂಗಾ
ನಂದನನ ನೀಹೂಹೆ ಗೆಲಿದನು
ಸಂದಸುಭಟ ದ್ರೋಣಕರ್ಣಾದಿಗಳ ನೋಡಿಸಿದ ।
ಎಂದು ಕೆಲಬರು ಕೆಲಬರಿವ ಗೆಲಿ
ದಂದ ವಾಗಿರದೀಬೃಹನ್ನಳೆ
ಯಿಂದೆ ಸಂಭಾವಿಸುವುದೆಂದುದು ಮಂದಿ ತಮತಮಗೆ ॥ ೨೫

ಲೀಲೆ ಮಿಗಲುತ್ತರನ ಪುರಜನ
ಜಾಲ ಜೀಯೆನಲಿದಿರುವಂದ ನಿ
ವಾಳಿಗಳನೂಕಿದನು ಕೈವಾರಿಗಳ ಕೋಪಿಸಿದ ।
ಆಲಿ ಯುವನಿಯು ಬರೆಯೆ ಮುಸುಕಿನ
ಮೇಲುದುಗುಡದ ಭಾರದೊಳು ರಾ
ಜಾಲಯಕೆ ಬರಲಿದಿರುವಂದಪ್ಪಿದನು ನಂದನನ ॥ ೨೬

---

1 ರಾತಿರಲಿತ್ತು. ಖ. ಜ. ಝ.   * ಈ ಪದ್ಯವು, ಝ. ಪುಸ್ತಕದಲ್ಲಿಲ್ಲ,
2 ರಣದ, ಖ,

ಬಾ ಮಗನೆ ಮಸುಕುಲದ ನೃಪಚಿಂ
ತಾಮಣಿಯೆ ಕುರು [1] ರಾಯಮೋಹರ
ಧೂಮಕೇತುವೆ ಕಂದ ಬಾ ಯೆಂದಪ್ಪಿ [2] ಕುಳ್ಳಿರಿಸೆ ।
ಕಾಮಿನಿಯರುಪ್ಪಾರತಿಗಳಭಿ
ರಾಮ ವಸ್ತ್ರ ನಿವಾಳಿ ರತ್ನ
ಸ್ತೋಮ ಬಣ್ಣದ ಸೊಡರ [3] ಸುಟಿವುಗ ಳೆಸೆದುವೊಗ್ಗಿನೊಳು ॥

ಬೊಪ್ಪ ಸಾಕೀಬಯಲ ಡೊಂಬೆನ
ಗೊಪ್ಪುವುದೆ ವೀರೋಪಚಾರವಿ
ದೊಪ್ಪುವರಿಗೊಪ್ಪುವುದು ತೆಗಿಸೆನಲರಸ ನಸುನಗುತೆ ।
ದಪ್ಪ ವುಳ್ಳರಿಗೀಸು ಮಂಗಳ
ವೊಪ್ಪದೇ ಭುವನದೊಳಗಾವಂ
ಗೊಪ್ಪುವುದು ಬಲದಿಂ ನಿಗರ್ವಿತ ನೆಂದ ನವನೀಶ ॥ ೨೮

ಮಗನೆ ಕರ್ಣದ್ರೋಣ ಭೀಷ್ಮಾ
ದಿಗಳ ನೊಬ್ಬನೆ ಗೆಲಿದೆಯೈ ಕಾ
ಳಗದ ಕಡುಗಲಿತನ ವಿದುಂಟೇ ಪೂರ್ವರಾಜರೊಳು
ದುಗುಡ ಬೇಡೆನ್ನಾಣೆ ಹೆತ್ತರ
ಮೊಗಕೆ ಹರುಷವ ತಂದೆ ನೀಂ ಹಂ
ಗಿಗನೆ ಮಿಗೆ ತಲೆಗುತ್ತಲೇಕೆನುತೆತ್ತಿದನು ಮೊಗವ ॥ ೨೯

ಕಾದಿ ಗೆಲಿದವ ಬೇಱೆ ಸಾರಥಿ
ಯಾದವಂಗೀಸೇಕೆ ನಿಮ್ಮಡಿ
ಯಾದರಿಸಲೊಡೆಮುಱಿಚಬಲ್ಲೆನೆ [4] ನಾಚಿಸದಿರೆನಲು ।
ಕಾದಿ ಗೆಲಿದವ ನೀನು ಸಾರಥಿ
ಯಾದವನು ತಂಗಿಯು ಬೃಹನ್ನಳೆ
[5] ಭೇದ ವೇಕೆಲೆ ಮಗನೆ ಬಲ್ಲೆನು ನಿನ್ನ ಪೌರುಷವ ॥ ೩೦

---

1 ರಾಜವಂಶದ, ಜ.   2 ಮುಂಡಾಡಿ, ಖ. ಕುಳ್ಳಿರಿಸಿ, ಚ. ಟ. ದನು ಮಗನ, ಜ. ಝ.   3 ಸುಳಿಸಿದ ತನಯನಿದಿರಿನೊಳು, ಖ. ಚ.   4 ಬೊಪ್ಪ ಬೇಡೆನಲು, ಝ.   5 ವಾದ ಬೇಡೆಲೆ, ಖ. ಚ. ಜ. ಝ. ಟ.

ಅಧಟತನ ವೆನಗುಂಟೆ [1] ಬೆಂದುದ
ಬೆದಕಬೇಡೆಲೆ ತಂದೆ ಹಗಲಿನ
ಕದನವನು [2] ಹರಿ ಬಂದು ಗೆಲಿದನು ಬೊಪ್ಪ ನುಡಿಸದಿರು ।
ಉದಯದೊಳು ಗೆಲಿದಾತನನು ನಿ
ಮ್ಮಿದಿರಿನೊಳ್ ತೋಱುವೆನು ಬೀಳ್ಕೊಡು
ಸದನಕೆಂದು ಕುಮಾರ ಕಳುಹಿಸಿಕೊಂಡ ನರಮನೆಗೆ ॥ ೩೧

ಇತ್ತಲರ್ಜುನದೇವ ಸಾರಿದ
ನುತ್ತರೆಯ ಭವನವನು ತಾಂ ತಂ
ದುತ್ತಮಾಂಬರ ವಿವಿಧರತ್ನಾಭರಣ ವಸ್ತುಗಳ ।
ಇತ್ತು ನಾಕನ್ನಿಕೆಗೆ ಮುದ ಮಿಗ
ಲುತ್ತರೆಯ ಮನೆಯಿಂದೆ ಶಶಿಕುಲ
ಮತ್ತವಾರಣ ಬಂದ ನಾ [3] ಭೀಮಾಗ್ರಜನ [4] ಬಳಿಗೆ ॥ ೩೨

ಬಳಿಕ ಸಂಕೇತದೊಳು ಭೂಪನ
ನಿಳಯವನು ಕಲಿಭೀಮ ಹೊಕ್ಕನು
ನಳಿನಮುಖಿ ಸಹದೇವ ನಕುಲರು ಬಂದರಾಕ್ಷಣಕೆ ।
ಫಲುಗುಣನು ಪೊಡಮಟ್ಟ ನಿಬ್ಬರಿ
ಗುಱಿದವರು ಪಾರ್ಥಂಗೆ ವಂದಿಸ
ಲೊಲಿದು ಬಿಗಿಯಪ್ಪಿದ [5] ರು ಸೋದರ ರೆಲ್ಲ ಹರುಷದೊಳು ॥

ಉಱಿದ ನಾಲ್ವರು ಕಲಿತ್ರಿಗರ್ತರ
ಗೆಲಿದ ಪರಿಯನು ಪಾರ್ಥ ಕೌರವ
ಬಲವ ಭಂಗಕೆ ತಂದ ಪರಿಯನು ಹೇೞುತಿರುತಿರಲು ।

---

1 ಬೆಂದುದ ಬೆದಕಿ ಬೇಯಿಸಬೇಡ ಹಗಲಿನ, ಖ, ಬೆಂದುದ ಬೆದಕಿ ನೋಯಿಸಬೇಡ ಹಗಲಿನ, ಚ. ಟ. ಬೆಂದುಗ ಬೆದಕಬೇಡೆಲೆತಾತ ಹಗಲಿನ, ಜ. ಝ, 2 ಹರಿತನುಜಗೆಲಿದನು. ಟ. 3 ಧರ್ಮಜನಮಂದಿರಕೆ, ಖ. 4 ಮನೆಗ, ಚ. ಜ. ಪೊರೆಗೆ, ಝ.
5 ನು ಸಾಹಸಧೈರ್ಯಸಹಭವರ, ಖ,

ನಿಲುಕಿ ರಾಯನ ಹಣೆಯ ಗಾಯವ
ಬಟ್ಟಿಕ ಕಂಡ ನಿದೇನು ನೊಸಲಿಂ
ದಿಳಿಯುತಿವೆ ನಸು ರಕ್ತಬಿಂದುಗಳೆಂದನಾ ಪಾರ್ಥ ॥ ೩೪

[1] ಅನುನಿಮಿತ್ತದೊಳಾಯ್ತು ಸಾಕದ
ನೆನೆಯ ಲೇತಕೆ ಮಾಣೆನಲು ಮಿಗೆ
ಕನಲುತರ್ಜುನ ನಱಿದ ನಾದ್ರೌಪದಿಯ ಸೂರುಳಿಸಿ ।
ಮನದೊಳುರಿದೆದ್ದನು ವಿರಾಟನ
ತನುವ [2] ಹೊಳ್ಳಿಸಿ ರಕುತವನು ಶಾ
ಕಿನಿಯರಿಗೆ ಹೊಯ್ಸುವೆನು ಹೊಲ್ಲಹ ವೇನು ಹೇಟೆಂದ ॥ ೩೫

ಕಳುಹಬೇಕಾಕೀಚಕೇಂದ್ರನ
ಬಳಗ ವಿದ್ದಲ್ಲಿಗೆ ವಿರಾಟನ
[3] ನೆಲೆ ದುರಾತ್ಮಕ ಸಾರಿಯೊಳು ಹಣೆಯೊಡೆಯ ಲಿಟ್ಟನಲಾ ।
ನೆಲದೊಳೂಕ್ಕದೆ ರಕುತ ವಿವದಿರ
ಕುಲವ ನೊರಸುವೆ ನಿವನ ಸೀಳಿದು
ಬಲಿಯ ಕುಡುವೆನು ಭೂತಗಣಕೆನುತೆದ್ದ ನಾಭೀಮ ॥ ೩೬

ಕಾಕ ಬಳಸಲು ಬೇಡ ಹೋ ಹೋ
ಸಾಕು ಸಾಕೈ ತಮ್ಮ ಮಾಣು
ದ್ರೇಕವನು ನೆಲ ರಕುತಗಂಡೊಡೆ ನಿನ್ನ ಮೇಲಾಣೆ ।

---

1 ಅನುವರದೊಳೇನಾಯ್ತು, ಕ. ಅನುಚಿತವಿದಾರಿಂದವಾಯ್ತೆನೆ, ಝ.

2 ಸೀಳಿದು ಬಲಿಯ ಕೊಡುವೆನು ಮನುಜಪತಿಗೀವೆತೆಯ ತಂದನೆ ಶಿವಶಿವಾ ಯೆಂದ, ಝ.

3 ತಲೆಯು ರಣಶಾಲಿಗನಲೆ ಶಿವಶಿವಾ ಮಹಾದೇವ, ಕ. ತಲೆಯು ಹೊಯ್ದರೆ ಕಳುಹುವೆನು ಶಿವ ಶಿವ ಮಹಾದೇವ, ಖ. ತಲೆಯು ಹೊಯ್ಗಳಸಾಲಿಗನೊ ಶಿವ ಶಿವ ಮಹಾದೇವ, ಚ. ತಲೆಗೆ ಹೊಯಿಗುಳು ಸಾಲಿಗನೊ ಹೇಳೆನು ಮಹಾದೇವ, ಟ.

ಈಕಮಲಲೋಚನೆಯ [1] ಸೆಱಗಿಗೆ
ಸೇಕ ವಾದುದು ರಕುತದೊಳು ಸು
ವ್ಯಾಕುಲತೆ ಬೇಡೆಂದು [2] ಭೀಮನ ಹಿಡಿದ ನಾಭೂಪ ॥ ೩೭
ತಿಂಬೆ ನೀತನ ಜೀವವನು ಪತಿ
ಯೆಂಬ ಗರ್ವಿತ ನಿವನ ನೆತ್ತಿಯ
[3] ತುಂಬು ಬಿಡಲೆಱಗುವೆನು ತಱಿವೆನು ಮತ್ಸ್ಯಸಂತತಿಯ ।
ಅಂಬುಜಾಕ್ಷಿಗೆ ಕೀಚಕನ ಬೇ
ಳಂಬ ವೀತನ [4] ಕೂಟ ಭೂತಕ
ದಂಬತುಷ್ಟಿಯ ಮಾಡಬೇಹುದು ಸೆಱಗ ಬಿಡಿ ಯೆಂದ ॥ ೩೮
ಇವನ ನಾ ವ್ರೋಲೈಸಿ ಕೈಯೊಡ
ನಿವಗೆ ಮುನಿದೊಡದೇನ ನೆಂಬುದು
ಭುವನಜನ ನೀಂ ಭ್ರಮಿಸದಿರು ಸೈರಣೆಗೆ ಮನಮಾಡು ।
ಎವಗೆ ನೋವಿನ ಹೊತ್ತು ದುಷ್ಕೃತ
ವಿವರಣದ ಫಲ ವಿದಕೆ ಲೋಗರ
ನವಗಡಿ [5] ಸಿದೊಡೆ ಹಾನಿ ನಮಗೆನೆ ಭೀಮ ನಿಂತೆಂದ ॥ ೩೯
ಬಱಿಯ ಧರ್ಮದ ಜಾಡ್ಯದೊಳು ಮೈ
ಮಱೆದು ಬನದೊಳು ಬೇರುಬಿಕ್ಕೆಯ
ನಱಸಿ [6] ತೊಳಲ್ದುದು ಸಾಲದೇ [7] ಹದಿಮೂಱು ವತ್ಸರವು ।
[8] ಉಱುಕುಗೊಂಡೊಡೆ [9] ರಾಜತೇಜವ
ಮೆಱೆವ ದಿನ ವೆಂದಹುದು ನೀವಿ
ನ್ನುಱಿಯಿರೆಮ್ಮನು ಹರಿಯಬಿಡಿ ಸಾಕೆಂದ ನಾಭೀಮ ॥ ೪೦

---

1 ಸೆಱಗಭಿ ಷೇಕವಾದುದು ರಕುತವೆನೆ ಸು ವ್ಯಾಕುಲತೆ ಬೇಡೆಂದು ಗಲ್ಲವ ಹಿಡಿದನನಿಲಜನ, ಖ. 2 ಸಂತೈಸಿದನು ಸಹಭವನ, ಕ. ಝ. 3 ಕುಂಬಬಿಡ, ಚ. ತುಂಬಲೆಱಗು, ಝ. ಮಾತು, ಚ. 5 ಸಲೇಕೆಂದು ಸಂತೈಸಿದನು ಸಹಭವನ, ಕ. ಝ. 6 ತಿರುಗಿದೆ ವಿನ್ನಬರ, ಕ. ಹನ್ನೆರಡುವತ್ಸರವು, ಚ. 8 ಉಱುಪುಗೊಂಡೊಡೆ, ಝ. 9 ಕ್ಷಾತ್ರತೇಜವ, ಖ. ಜ. ಝ. ಟ.

ಉದಯದೊಳು [1] ನಾವಿನಿಬ ರಾತನ
ಸದನ [2] ದೊಳು ನೃಪಪೀಠವನು ಗ
ರ್ವದೊಳು ನೆಮ್ಮುವ ನಾತ ನೆಮ್ಮೊಳು ಖಾತಿಯನು ಹಿಡಿಯೆ ।
ಮದಮುಖನ ನೊರಸು [3] ವೆವು ಹರುಷದೊ
ಳದಿರುಗೊಂಡೊಡೆ ಮನ್ನಿಸು [4] ವೆ ವಿಂ
ತಿದುವೆ ಸಮ್ಮತ ವೆಂದು [5] ಸಂತೈಸಿದನು ಸಹಭವನ ॥ ೪೧
*

ಹತ್ತನೆಯ ಸಂಧಿ ಮುಗಿದುದು.

ಹನ್ನೊಂದನೆಯ ಸಂಧಿ.

ಅಭಿಮನ್ಯುವಿನ ವಿವಾಹಕ್ಕೆ ಕೃಷ್ಣಸ್ವಾಮಿ ಬಂದುದು.

ಸೂಚನೆ.

ರಾಯ ಪಾಂಡವ [6] ಜೀವ ಭಕ್ತನಿ
ಕಾಯಲಂಪಟ ನಮಲಯಾದವ
ರಾಯ ಬಿಜಯಂಗೈದ ನಭಿಮನ್ಯುವಿನ [7] ಪರಿಣಯಕೆ ॥

---

1 ನಮ್ಮನಿಬ, ಕ. ಚ. ಜ. ಟ. 2 ದಲ್ಲಿಯ ಕನಕಪೀಠವ ನಡರಿ ಕುಳ್ಳಿರಲವನು ಗರ್ವಿಸಿ ಖಾತಿ. ಟ. 3 ವುದು ಪದುಳದೊಳದಿರು, ಖ. 4 ವುದಿಂತಿದು, ಖ. 5 ನಿಶ್ಚೈಸಿದನು ಯಮಸೂನು, ಖ. 6 ಜೀಯ, ಟ. 7 ಪರಿಣಾತೆಗೆ, ಜ. ಟ,

* ಈ ಪದ್ಯವು ಖ. ಪುಸ್ತಕದಲ್ಲಿ ಸಂಧಿಯ ಕೊನೆಯಲ್ಲಿ ಹೆಚ್ಚಾಗಿ ದೊರೆಯುತ್ತದೆ.

ಕಳೆದೆವಜ್ಞಾತವನು ಮೇಲಾ
ಕೆಲಸದಾರೈಕೆಗಳ ನಮ್ಮೀ
ಲಲಿತವೈಭವಕೆಳೆಯ ಮೇಗಣ ಸಾರಸೌಖ್ಯತೆಗೆ ।
ಕಳವಳಿಸದಿರಿ ಚಿಂತೆ ಬೇಡೆನು
ಗೊಲವ ನೀವನನುಪಮಕರುಣಾ
ಜಲಧಿ ಯಹ ಜಲಜಾಕ್ಷ ನಗ್ಗದ ವೀರನಾರಯಣ ॥

ಕೇಳು ಜನಮೇಜಯ ಧರಿತ್ರೀ
ಪಾಲ [1] ಚರಿತಾಜ್ಞಾತವಾಸವ
ಬೀಳುಕೊಟ್ಟರು ಬಹುಳಹರುಷದೊಳಿರುಳ ನೂಕಿದರು ।
2 ಮೇಲಣವರಭ್ಯುದಯವನು ಕೈ
ಮೇಳವಿಸಿ ಕುಡುವಂತೆ ಮೂಡಣ
ಶೈಲ [3] ಮುಖದೊಳು ಕೆಂಪು ತೋಱಿತು ಭಾನುಮಂಡಲದ ॥ ೧

ಏಱುಕುದುರೆಯ ಖುರಪುಟದ ಕೆಂ
ದೂಳಿಯೋ ಕುಂತೀಕುಮಾರಕ
ರೇೞಿಗೆಯ ತನಿರಾಗರಸ ವುಬ್ಬರಿಸಿ ಪಸರಿಸಿತೋ ।
4 ಹೇೞಲೇನು ಮಹೇಂದ್ರನರದಿ
ಗ್ಬಾಲಕಿಯ ಬೈತಲೆಯ ಕುಂಕುಮ
ಜಾಲವೋ ನೋಡೆನಲು ದಿನಪನ ಚೂಣಿ ರಂಜಿಸಿತು ॥ ೨

ಸರಸಿಜವ [5] ಪರಿಮಳಕೆ ತುಂಬಿಯು
6 ವರವನಿತ್ತನು ಚಂದ್ರಕಾಂತಕೆ
ಬೆಱಗನಿತ್ತನು ಚಕ್ಕವಕ್ಕಿಯ ಸೆಱೆಯ ಬಿಡಿಸಿದನು ।
ಕೆರಳಿ ನೈದಿಲ ಸಿರಿಯ ಸೂಱೆಯ
7 ತರಿಸಿದನು ಪರರಾಜತೇಜವ
ನೊರಸಿದನು ರವಿ ಮೂಡಣದ್ರಿಯೊಳಿತ್ತನೋಲಗವ ॥ ೩

ಹರಹರ ಶ್ರೀಕಾಂತ ಎನುತೈ
ವರು ಕುಮಾರಕರುಪ್ಪವಡಿಸಿದ
ರರಿವಿನಾಶರು ಮಾಡಿದರು ಮಾಂಗಲ್ಯಮಜ್ಜನವ ।

---

1 ರವರಜ್ಞಾತ, ಖ. 2 ಮೇಲೆಯುವರ, ಚ.

3 ಶಿಖರದೊಳುಪ್ಪವಡಿಸಿದನಬ್ಜಿನೀರಮಣ, ಚ.

4 ಹೇೞಲರಿದೆನಲಮರವರ, ಚ. ಜ. ಝ. 5 ಮಧುಕರದಗುಂಪಿಗೆ ಹರುಷವಿತ್ತನು, ಖ. 6 ತೆಱವಕೊಟ್ಟನು, ಕ. ಥರವ ಕೊಟ್ಟನು, ಚ. ಜ. ಝ. ಥರವಬಿಟ್ಟನು, ಟ. ಬರಿಸಿದನು, ಟ.

ವರ ವಿಭೂಷಣ ಗಂಧ ಮಾಲ್ಯಾಂ
ಬರ ಪರಿಷ್ಕೃತರಾಗಿಯುವನೀ
ಸುರರಿಗಿತ್ತರು ಧೇನು ಮಣಿ ಕನಕಾದಿವಸ್ತುಗಳ ॥ ೪

ತಮದ ಗಂಟಲ [1] ನೊದೆದು ಹಾಯ್ದ
ದ್ಯುಮಣಿಮಂಡಲದಂತೆ [2] ಜೀವ
ಭ್ರಮೆ [3] ಯು ಕವಚವ ಕಳಿದು ಹೊಳಹೊಳವಾತ್ಮನಂದದೊಳು ।
ವಿಮಳ ಬಹುಳ [4] ಕ್ಷತ್ರರಶ್ಮಿಗ
ಳಮಮ ದೆಸೆಗಳ ಬೆಳಗೆ ರಾಜೋ
ತ್ತಮಯುಧಿಷ್ಠಿರದೇವ ನೆಸೆದ ನು [5] ದಾರತೇಜದೊಳು ॥ ೫

ಪರಮ [6] ಸತ್ಯವ್ರತಮಹಾಕ್ರತು
ವರದೊಳವಭೃಥಮಜ್ಜನವ ವಿ
ಸ್ತರಿಸಿ [7] ಭೀಮಾದಿಗಳುಸಹಿತ ವಿರಾಟನರಮನೆಗೆ ।
ಅರಸ ಬಂದನು ಮಣಿಖಚಿತಕೇ
ಸರಿಸುಪೀಠವ ನಡರಿದನು ನಿಜ
ಚರಣ [9] ಸೇವೆಯೊಳೆಸೆದ ರೊಡಹುಟ್ಟಿದರು [10] ಪರುಠವಿಸಿ ॥ ೬

ಅವನಿಪನ ಸಿಂಹಾಸನವ ನೇ
ಱುವ ಸುಗರ್ವಿತರಾರು ನೋಡಿದೊ
ಡೆವೆಗಳುರಿಯುವೆ [11] ನೂಕೆನುತೆ ಕಂಚುಕಿಗಳ್ಯತಂದು ।
ಇವರ [12] ವಿಮಲಕ್ಷತ್ರತೇಜವ
ನವಗಡಿಸಲಂಜಿದರು ಹರಿತಂ
ದವದಿರೆಬ್ಬಿಸಿ ಬಿನ್ನವಿಸಿದರು ಮತ್ಸ್ಯಭೂಪತಿಗೆ ॥ ೭

---

1 ನೊಡೆದು ಮಾಡುವ, ಕ. ಚ. ಜ, ಝ. ಟ. 2 ಚಿತ್ರ, ಚ. 3 ಗಳಡಗಿದ ಖಚಿಕ, ಕ. 4 ಬ್ರಹ್ಮರಶ್ಮಿಯು ವಿಮಲದೆಸೆಯೊಳು, ಝ. 5 ರಾಜತೇಜ, ಖ. ಚ. ಜ. ಟ. 6 ಮಂಗಳವರಮಹಾ, ಖ. 7 ದೊಲು ಮಜ್ಜನವ ಮಾಡಿ ವಿರಾಟ, ಚ. 8 ದರಸಿ ದ್ರೌಪದಿ ಯೆಸೆದಳೊಡ, ಟ. 9 ಸೀಮೆಯೊ, ಖ. ಚ. 10 ಭೂಪತಿಯು, ಜ. ಬಳಸಿನೊಳು, ಝ. 11 ನೋಡೆನುತೆ, ಖ. 12 ನೀಕ್ಷಿಸಿ.ಕ್ಷತ್ರ, ಕ. ಖ. ಚ.

ಜೇಯ ಸಿಂಹಾಸನಕೆ ದಿವಿಜರ
ರಾಯನೋ ಶಂಕರನೊ ಮೇಣ್ ನಾ
ರಾಯಣನೊ ನರನಲ್ಲ ದೇವರು ಬಂದು ನೋಡುವುದು ।
ಕಾಯಲಸದಳ ವೆಮಗೆನಲು ನಿ
ರ್ದಾಯದೊಳು ನೆಲೆಗೊಂಡ [1] ನಿರ್ಭಯ
ದಾಯುತವು ತಾನೆಂತೆನುತ್ತೆ ವಿರಾಟ ಚಿಂತಿಸಿದ ‖ ೮

ಕರಿಸಿದನು ಪುರೋಹಿತರನು
ತ್ತರನ ನಖಿಳಮಹಾಪ್ರಧಾನರ
ನರಮನೆಯ ಪ್ರೌಢಮಟ್ಟ ನೋಲಗಸಾಲೆಗೈತಂದು ।
[2] ತಳಿದು ಕೀಸಿದ ಚಂದ್ರಬಿಂಬದ
ಕಿರಣಲಹರಿಗಳೆನಲು ವಿಮಳಾ
ಭರಣರತ್ನಪ್ರಭೆಯ ಕಂಡನು ನೃಪತಿ ದೂರದೊಳು ‖ ೯

ಹರನ ನಾಲುಕುಮುಖದ ಮಧ್ಯ
ಸ್ಫುರಿತದೀಶಾನನವೊಲಾಸೋ
ದರಚತುಷ್ಟಯಮಧ್ಯದೊಳು ಕಂಡನು ಯುಧಿಷ್ಠಿರನ ।
ಅರಸಿಯನು ವಾಮದೊಳು ವಿವಿಧಾ
ಭರಣಮಣಿರಶ್ಮಿಗಳ ಹೊದಜಿನ
ಹೊರಳಿಯೊಳು ಕಣ್ಣಾಲಿ ಕೋರೈಸಿದುವು ಪರಿಜನಕೆ ‖ ೧೦

ಮೇಳವೇ [3] ಜಡಮನದ ಮರ್ತ್ಯರು
ಕಾಲಿಡಲು ತಾವಲ್ಲ ಮನುಜರ
ಹೋಲುವೆಯ ನಾಟಕದ ನಿರ್ಜರಮಂಡಲೇಶ್ವರರು ।

---

1 ನಿರ್ಜರರಾಯ ನಾರವ ನೆಂದೆನುತ್ತೆ ವಿರಾಟ, ಖ. ನಿರ್ಜರ ರಾಯ ನಾವ ನೊ ಎನುತೆ ಮತ್ಸ್ಯನೃಪಾಲ ಚಿಂತಿಸಿದ, ಚ. 2 ಕರಗಿ ಕಾಸಿದ, ಕ. ಖ. ಕರಗಿ ಕೀಸಿದ, ಚ, ಝ. ಹರಿಯ ಕೇಸರ ಚಂದ್ರ, ಜ. 3 ಘಡ ಮನದ ಮತ್ಸರ ಕಾಲಿಡುವೊಡಳವಿಲ್ಲ, ಕ. ಬಡಮನದ, ಚ. ಘಡ ಮನದ ಮತ್ಸರ ಕಾಲಿಡಲು ತಾವಲ್ಲ. ಜ. ಝ. ಘಡ ಮದದ ಮತ್ಸರ ಕಾಲಿಡಲು, ಟ.

ಆಲಿಗಳು ಮೇಲಿಕ್ಕಲಮ್ಮರವು
ಶೂಲಪಾಣಿಯು ಪರಮತೇಜದ
ಚೂಳಿಕೆಯೊ ಶಿವ ಶಿವ ಎನುತ್ತೆ ವಿರಾಟ ಬೆಱಗಾದ ‖ ೧೧

ವಲಲ ಕಂಕ ಬೃಹನ್ನಳೆಯು ವೈ
[1] ಸುಟಿವ ಹೋಲುವರೆಂದು ಕೆಲಬರು
ಕೆಲರಿದೆತ್ತಣ ನರರು ತೆಗೆ ಸುರಲೋಕಪಾಲಕರು ।
ತಿಳಿಯಲರಿದಿದನೆನುತೆ ಕೆಲಬರು
ತಳವೆಳಗುಗೊಳುತಿರಲು ಮಂದಿಯು
ತೊಲಗ ನೂಕಿಸಿ ತಂದೆಗುತ್ತರ ನಗುತೆ ಯಿಂತೆಂದ ‖ ೧೭

ತಾತ ಬಿನ್ನಹ ನಿನ್ನ ವೈರಿ
ವ್ರಾತವನು ಗೆಲಿದಾತ [2] ನಾತೋ
ಪಾರ್ಥ ನಾತನ ಮುಂದೆ ಮೆಱೆವವ ಕೀಚಕಾಂತಕನು ।
ಈತ ನಕುಲನು ಕೆಲದೊಳೀತೋ
ಪಾರ್ಥ ಸಹದೇವಾಂಕ ನಿನಿಬರಿ
ಗಾತ ಹಿರಿಯನು ಧರ್ಮನಂದನನೆಂದು ತೋಱಿಸಿದ ‖ ೧೩
*

---

[1] ಉಳಿಯು, ಜ ವಳಿಯು, ಝ. ಟ. [2] ನರ್ಜುನ ನೀತ ನೀತನ, ಖ. ನರ್ಜುನ ನಾತ ನಾತನು ಭೀಮಸೇನನು ಕೀ. ಚ, ನೀತೋಪಾರ್ಥ, ಜ. ಝ. ಪಾರ್ಥನು ಈತ ನಿನ್ನಯ ಹರಿಬವನು ಗೆಲಿದಾತ ಕಲಿಭೀಮ, ಟ.

* ಈಪದ್ಯವು ಕ. ಪುಸ್ತಕದಲ್ಲಿ ಮಾತ್ರ ಹೆಚ್ಚಾಗಿ ದೊರೆಯುತ್ತದೆ.

ಜ್ಯೋತಿರ್ಮಣಿಮಯದಂತೆ ಹೊಳೆಹೊಳೆ
ವಾತ ಧರ್ಮಜ ನತುಳಭುಜಬಲ
ಖ್ಯಾತಭೀಮಸುಪಾರ್ಥರೆಂಬ ಮಹಾಮಹೀಶ್ವರರು ।
ಈತ ನಕುಲನು ಕೆಲದೊಳಾತೋ
ಪಾರ್ಥ ಸಹದೇವಾಂಕನೈವರ
ಶ್ರೀತರುಣಿಯಿರವಿನ್ನು ಮೇಱುವೆ ಬೊಪ್ಪ ಕೇಳೆಂಬ ॥

ರಮಣಿ ಯೈವರಿಗೀಕೆ ಕೆಲದೊಳು
ಕಮಲಮುಖಿ [1] ಪಾಂಚಾಲಿ [2] ತಾವೀ
ವಿಮಲಗುಣರಾಮಾಭಿರಾಮರು ಪಾಂಡುನಂದನರು ।
ಎಮಗೆ ಭಾರಿಯ ಭಾಗ್ಯಲಕ್ಷ್ಮಿಯು
ಮಮತೆ [3] ಕೈಸಾರಿದುದು ನೃಪಪದ
ಕಮಲದೊಳು ಬೀಳುವೆವು ನಡೆ ನಡೆ ಧನ್ಯರಾವೆಂದ ॥ ೧೪

ಈತನೇ ಧರ್ಮಜನು ದಿಟ ತಾ
ನೀತನೇ ಪವನಜನು ನಿಶ್ಚಯ
ವೀತನೇ ಫಲುಗುಣನು ಮಾದ್ರೀಜಾತರೇ ಇವರು ।
ಈತಳೋದರಿ ದ್ರುಪದಸುತೆಯೇ
ಕೌತುಕವಲಾ ಭುವನಜನವಿ
ಖ್ಯಾತ ರೆಲ್ಲಿಂದೆಲ್ಲಿ ಮೂಡಿದರೆಂದು ಬೆಱಗಾದ ॥ ೧೫

ವರುಷವೊಂದಜ್ಞಾತವಾಸವ
[4] ನಿರದೆ ನೂಕಿದರಿಲ್ಲಿ ಬಳಕೆಯು
ಹೊರೆಯ ಹೆಸರವು ಬೇಱೆ ನಡವಳಿಯುಂಗವಣೆ ಬೇಱೆ !
ಮರುಳನಂತಿರೆ ಜಗಕೆ ತೋಱಿನೆ
ಪರಮತತ್ವಜ್ಞಾನಿ ಯೆಮ್ಮಾ
ಯರಸುತನ ಫಲಿಸಿತ್ತು ನಡೆ ನಡೆ ಧನ್ಯರಾವೆಂದ ॥ ೧೬

---

1 ಯುನು ನೋಡು, ಜ. ಝ. ಟ. 2 ತಾನೀವಿಮಲ ಮತಿ, ಖ. ಲಕ್ಷ್ಮೀರಮಣಗುಣತೇಜೋಭಿಮಾನರು, ಚ. ತಾವಿಂದಮಲಗುಣಗರ್ವಾಭಿರಾಮರು ತೊಳಗಿ ಬೆಳಗಿದರು, ಜ. ತಾನೀವಿಮಲಗುಣನಾಮಾಭಿಯುಕ್ತರು ಪಾಂಡುನಂದನರು, ಝ. ತಾನೀ ಋಮಲಗುಣನಿಧಿಪೂಜಿತಾಮರ ಪಾಂಡುನಂದನರ, ಟ.

3 ಯುನು ಚಿತ್ತೈಸು, ಖ. ಝ. ಟ.

4 ನುರುಳೆ, ಖ. ಜ. ಝ. ಟ.

ದರುಶನಕೆ ಮಣಿಕನಕವಸ್ತುವ
ತರಿಸಿ ಮುದದೊಳು [1] ಮುಳುಗಿ ನಿಜಪರಿ
ಕರಸಹಿತ ಮೈಯ್ಯಿಕ್ಕಿದನು ಕಾಣಿಕೆಯ ನೊಪ್ಪಿಸುತೆ ।
ವರನೃಪಾಲ ತ್ರಾಹಿ ಭುವನೇ
ಶ್ವರ ಪರಿತ್ರಾಯಸ್ವ ಕರುಣಿಸು
ಕರುಣಿಸೆಂದಂಘ್ರಿಗಳ ಹಿಡಿದನು ಮತ್ಸ್ಯಭೂಪಾಲ ॥ ೧೭

ಬಗೆದೆ ನಪರಾಧವನು ಕರುಣಾ
ಳುಗಳ ಬಲ್ಲಹ ನೀನು ನಿನ್ನಂ
ಘ್ರಿಗಳ [2] ಗೀತಲೆ ನಂಟ ನೀನಿದ ಕಾಯಬೇಕೆನುತೆ ।
ಮಿಗೆ [3] ಬಕುತಿಭಾವದೊಳು ನಿಜವಂ
ತ್ರಿಗಳು ಮಕ್ಕಳು ಸಹಿತ ಮನನಂ
ಬುಗೆಯ ಮೆಱೆದನು ಮತ್ಸ್ಯನೃಪತಿ ಮಹೀಶನಿದಿರಿನೊಳು ॥ ೧೮

ಆಸುಧೇಷ್ಣೆ ಕುಮಾರಿಯೊಡನೆ ವಿ
ಲಾ [4] ಸಿನೀಜನವೆರಸಿ ರಾಣೀ
ವಾಸದಲ್ಲಿಗೆ ಬಂದು ಕಾಣಿಕೆಗೊಟ್ಟು ಮೈಯ್ಯಿಕ್ಕೆ ।
ಆಸಕಲಪರಿವಾರ ಪುರಜನ
ದೇಶಜನ ದರುಶನವನಿತ್ತು ಮ
ಹೀಶನನು ಕೈಮುಗಿದು ಕಂಡುದು [5] ಬಹುಳಹರ್ಷದೊಳು ॥ ೧೯

ಮುಗುಳುನಗೆಯೊಳು ಭೀಮಪಾರ್ಥರ
ಮೊಗವ ನೋಡಿದ ನವನಿಪತಿ ಕೈ
ಮುಗಿದು ತಲೆವಾಗಿದರು ತಮ್ಮಂದಿರು ಮಹೀಪತಿಗೆ ।

---

1 ಮತ್ಸ್ಯನೃಪ ಸತಿ ಮೇಳಿಸಿ ಕಾಣಿಕೆಯಿಕ್ಕಿ ಮೈಯ್ಯಿಕ್ಕಿದನು ಭಕ್ತಿಯೊಳು, ಖ. ಮುಳುಗಿಹರುಷೋತ್ಕರುಷದೊಳು ಮಿಗೆಯಿತ್ತು ಮೈಯ್ಯಿಕ್ಕುತ್ತೆ ಕಾಣಿಕೆಯ, ಚ. ಮುಳುಗಿ ಜನಪರಿ, ಝ. 2 ಸಹಿತವ ಬಗೆದೆ ಗೀತಲೆಗಾಯು, ಚ. ಗೀತಲೆ ಬಂಟಸೀಸಿದ, ಜ. 3 ಭರಿತಭಕ್ತಿಯೊಳು, ಚ. ಭಕುತಿ ಭೀತಿಯೊಳು, ಟ.
4 ಸದೊಳು ನಡೆತಂದುರಾಣೀ, ಕ. 5 ಕಾಣಿಕೆಯನೀಡಿ, ಕ.

ತೆಗಿಸಿದನು ಕಾಣಿಕೆಯ ನಾಮಂ
ತ್ರಿಗಳ ನಾಪರಿವಾರವನು ದೃಗು
ಯುಗದ ಕರುಣಾರ ದೊಳನಿಬರ ಹೊರೆದುಮನ್ನಿಸಿದ ‖ ೭೦

ಸಿರವನೆತ್ತಿ ವಿರಾಟಭೂಪನ
ಕರೆದು ಹತ್ತಿರೆ ಪೀಠದೊಳು ಕು
ಳ್ಳಿರಿಸಲೊಡೆಮುಱಿಚಿದನು ಕೆಲದೊಳು ಗದ್ದುಗೆಗೆ ಸರಿದು ।
ಪರಮಸುಕೃತ ವಲಾ ಧರಾಧೀ
ಶ್ವರನ ದರುಶನ ವಾಯ್ತು ಧನ್ಯರು
ಧರೆಯೊಳ್ನಿಂದಾರು ಭಾವಿಪೊಡೆಂದನಾಮತ್ಸ್ಯ ‖ ೭೧

ದೇಶ ನಿಮ್ಮದು [1] ಸರ್ವರಾಜ್ಯದ
ಕೋಶ ನಿಮ್ಮದು ತನ್ನ ಜೀವವಿ
ಲಾಸ ನಿಮ್ಮದು ಸಲಿಸಬೇಹುದು ಬಿನ್ನಹದ ಹದನ ।
ಈಸಮಂಜಸದಿವಸದೊಳು ಸಿಂ
ಹಾಸನದೊಳಭಿಷೇಕವನು ಭೂ
ಮೀಶ ವಿಸ್ತರಿಸುವೆನು ಚಿತ್ತೈಸೆಂದನಾಮತ್ಸ್ಯ ‖ ೭೨

ಎನಲು ನಗುತೆಂದನು ಮಹೀಪತಿ
ವಿನಯ ಮಧುರರಸಾಭಿಷೇಕವ
ನೆನಗೆ ಮಾಡಿದೆ ಸಾಕು ಪುನರುಕ್ತಾಭಿಷೇಚನವೆ ।
ಜನವಿದೆಮ್ಮದು ನೀನದೆಮ್ಮಯ
ತನು ಧರಿತ್ರಿ ಯಿದೆಮ್ಮ [2] ದೆಂಬೀ
ನೆನಹು ತಾನುಪಚಾರ [3] ವಾಕವಿದೆಂದನಾಭೂಪ ‖ ೭೩

---

1 ನಗರಹೆಚ್ಚಿದ ಕೋಶ, ಕ. ಖ. ಚ. ಜ. ಝ. 2 ದಿನ್ನೇಕಿನಿತು ತಾನುಪಚಾರಯೋಗ ವಿದೆಂದ, ಚ. ದಿನ್ನೀನೆನಹು ಸಾಕುಪಚಾರ ಯೋಗ್ಯವೆ ಎಂದ, ಜ. ದೆಮ್ಮೀನೆನಹುತಾನುಪಚಾರವಾಕವಿದೆಂದ, ಟ.

3 ಭಾವವೆ ಎಂದ, ಕ. ಖ.

ನೊಂದವರು ಭೀಮಾರ್ಜುನರು ಹಗೆ
ಯಿಂದೆ ಹಚುವವ ಹೊಕ್ಕು ಮನದೊಳು
ಕಂದು ಕಸರಿಕೆ ಹೋಗದಾದುರ್ಯೋಧನಾದಿಗಳ ।
ಕೊಂದು ಕಳವಳಿಯಿತ್ತು ಗಜಪುರಿ
ಗೆಂದು ಗಮಿಸುವೆವೆಂಬ ತವಕಿಗ
ರಿಂದು ತಾವೇ ಬಲ್ಲರಿವರೆಂದನು ವಿರಾಟಂಗೆ ॥ ೨೪

ಎಂದೊಡುತ್ತರ ನರಸನಂಘ್ರಿಯೊ
ಳಂದು ಮಕುಟವ ಚಾಚಿ ಬಿನ್ನಹ
ವಿಂದು ನೇಮವ ಕುಡಿ ಕುಮಾರಿಯನೀವೆನರ್ಜುನಗೆ ।
ಎಂದೊಡೇಪೇಪೆಂದು ನಸುನಗೆ
ಯಿಂದೆ ಪಾರ್ಥನ ನೋಡೆ ಕೈಮುಗಿ
ದೆಂದ ನಾತನು ಮನದ ನಿಶ್ಚಯವನು ಯುಧಿಷ್ಠಿರಗೆ ॥ ೨೫

ಮರುಷವೀಕೆಗೆ ನಾಟ್ಯವಿದ್ಯೆಯ
ಪರುಠವಿಸಿದೆನು ತಂದೆ [1] ಯಂತಿರೆ
ತರುಣಿ ಭಜಿಸಿದಳಾಪ್ರಕಾ [2] ರದ ಶಿಷ್ಯನಿಷ್ಠೆಯೊಳು ।
ಗುರುತನದ [3] ಗರುವಾಯಿಗೆಟ್ಟೆ
ನ್ನರಸಿಯಾಗಲಿ ಯೆಂಬು [4] ದನುಚಿತ
ವರಕುಮಾರಿಯ ನೀವೊಡಭಿಮನ್ಯುವಿಗೆ [5] ಕುಡಲೆಂದ ॥ ೨೬

ಎಮಗೆ ನೀ [6] ವೇನಾತನೇನು
ತ್ಸವದೊಳಾಗಲಿ ಯೆನೆ ವಿರಾಟನ
ನವನಿಪತಿ ಮನ್ನಿಸಿದ ನಿತ್ತನು ನಗುತೆ ವೀಳೆಯವ ।

---

1 ಯೆಂದೇ ತರುಣಿ, ಚ. 2 ರವೊಳೆನ್ನ ಮನವೊಳಗೆ, ಚ. ರರಹಸ್ಯ ವಚನದೊಳು, ಚ. ರದ ಹಾಸ್ಯವಚನದೊಳು, ಝ. ರರಹಸ್ಯನಿಷ್ಠೆಯೊಳು, ಟ 3 ಸ್ವಾಮರ್ಥ್ಯಸಾಕಿನ್ನ, ಟ. 4 ದಿಲ್ಲೀವರ, ಟ. 5 ಕೂಡಿಯೆಂದ, ಜ. ಝ. ಟ. 6 ನೇ ತಾತನೆನುತುತ್ಸವ, ಖ. ನೇ ನಾಥನೆನುತುತ್ಸವ, ಚ.

ಎಮಗೆ ಪರಮಸ್ವಾಮಿ ಯೆ[1]ಮ್ಮದು
ಭವದ ನೆಲೆ ಯೆಮ್ಮೈವರಸು ಯಾ
ದವಶಿರೋಮಣಿ ಕೃಷ್ಣನಭಿಮತ ವೆಮ್ಮ ಮತವೆಂದ ॥ ೧೭

ಪೊಡವಿಯೊಡೆತನ ವೆಮಗೆ[2] ಮಿಗೆ ಕ
ಟ್ಟೊಡೆಯ ಕೃಷ್ಣನು ಕೃಷ್ಣನೊಡಬ
ಟ್ಟೊಡೆ ವಿವಾಹ ನಿರಂತರಾಯವು ಚಿಂತೆ[3] ಬೇಡೆನಲು ।
ಒಡಬಡಲಿ ಮೋಣಿರಲಿ ಗುರು ನಿ
ಮ್ಮಡಿ ಮುರಾರಿಯು ತೋಱಿಸುವಿರಾ
ದೊಡೆ ಕೃತಾರ್ಥನು ತಾನೆನುತೆ ಹಿಗ್ಗಿದನು ಮತ್ಸ್ಯನೃಪ । ೧೮

ಪರಿಪರಿಯ ಪಾವುಡವ ಕಟ್ಟಿಸಿ
ಹರುಷದೊಳು ಬಿನ್ನಹದ ವಾಲೆಯ
ಬರಿಸಿದನು[4] ವೇಗಾಯ್ಲದೂತರ ನಟ್ಟಿದನು ನೃಪತಿ ।
ಚರರು ಪಯಣದ ಮೇಲೆ ಪಯಣದೆ
ಭರದೆ ಬಂದರು ಕೃಷ್ಣರಾಯನ
ಪುರಕೆ ಪರಿತೋಷದೊಳು[5] ಕಂಡರು ರಾಜಮಂದಿರವ ॥ ೧೯

ಬರವ ಬಿನ್ನಹಮಾಡೆ ಪಡಿಹಾ
ರರು ಮುರಾರಿಯ ನೇಮದೊಳು ಚಾ
ರರನು ಹುಗಿಸಲು ಬಂದು[6] ಹೊಕ್ಕರು ಕೃಷ್ಣನೋಲಗವ ।
ದರುಶನವ[7] ಮಾಡಿದರು ಚರಣಾಂ
ಬುರುಹದೊಳು ಮೈಯಿಕ್ಕಿ ದೇವನ
ಹೊರೆಯೊ[8]ಳಿರಿಸಿದರಿವರು ಕಳುಹಿದ ಬಿನ್ನವತ್ತಳೆಯ ॥ ೨೦

---

1 ಮ್ಮತ್ಸವದನೆಲೆಮನೆಯ್ಯ, ಚ 2 ತಾ ಕಟ್ಟೊಡೆಯನಾಶ್ರೀಕೃಷ್ಣ, ಖ. ತಾಕಟ್ಟೊಡೆಯ ಶ್ರೀಪತಿಕೃಷ್ಣ, ಚ. ತಾ ಕಟ್ಟೊಡೆಯ ಶ್ರೀಹರಿಕೃಷ್ಣ, ಜ

3 ಬೇಡಿದಕೆ, ಖ. ಜ. 4 ಬೇಗದೊಳು ದೂತರ, ಖ. ಚ. ಜ. ಝ.

5 ಹೊಕ್ಕರು, ಚ. 6 ಕಂಡರು, ಖ. ಚ. 7 ನೀಡಿದರು, ಖ. ಝ. ಟ. ಸಿತ್ತವರು, ಜ. 8 ಳಿಟಿಹಿದರಿವರು, ಖ. ಚ. ಝ.

ನಸುನಗುತೆ ಮುರವೈರಿ ಮಿಗೆ ಮ
ನ್ನಿಸಿದನವರನು ಪಾಂಡುತನಯರ
ಕುಶಲವನು ದ್ರೌಪದಿಯ ಸುಕ್ಷೇಮವನು ಬೆಸಗೊಳಲು ।
ಕುಶಲರನಿಬರು ಜೀಯ ಭಕ್ತ
ವ್ಯಸನ ನಿಮ್ಮದು ಸುಖದೊಳುಜ್ಜೀ
ವಿಸಿದರನಿಬರು ನಿಮ್ಮಡಿಯ ಕರುಣಾಕಟಾಕ್ಷದೊಳು ॥ ೩೧

ಕಳುಹಿದುಡುಗೊಱೆ ಜೀಯ ನಿಮ್ಮಡಿ
ಗಳಿಗೆ ರಾಣೀವಾಸವರ್ಗಕೆ
ಬಲಗೆ ದೇವಕಿದೇವಿವಸುದೇವುಗ್ರಸೇನರಿಗೆ ।
ಕುಲಗುರುಗಳಕ್ರೂರ ನುದ್ಧವ
ಬಲುಭುಜರು ಕೃತವರ್ಮ ಸಾತ್ಯಕಿ
ಲಲಿತಸಾಂಬ ಕುಮಾರಕಂದರ್ಪಾನಿರುದ್ಧರಿಗೆ ॥ ೩೨

ಎನಲು ನಸುನಗೆಯಿಂದೆ ಕುಂತೀ
ತನಯ ರಟ್ಟಿದ ಪ್ರಾವುಡಂಗಳ
ನನಿತುವನು ತೆಗಿಸಿದನು ಕೆಲದೊಳು ಸಂಧಿವಿಗ್ರಹಿಯ ।
ದನುಜಹರ ನೀಕ್ಷಿಸಲು ಲಿಖಿತವ
ನನುನಯದೊಳವಡಿಸಿ ಬಿನ್ನಹ
ವೆನುತೆ ನೇಮವ ಕೊಂಡು ಕಳಕಳ ವೆಡಗೆ ವಾಚಿಸಿದ ॥ ೩೩

ಸ್ವಸ್ತಿ ದಾನವರಾಜಕುಂಜರ
ಮಸ್ತ [1] ಕಾಂಕುಶ ಬೇಲನಾಪ
ರ್ಯಸ್ತಯದುಕುಲಸಿಂಹ ಸಂಹೃತಜನ್ಮ ದುರಿತಹರ ।

---

1 ಕೇಸರಿ ಭುವನಜನಭಾರ್ಯಸ್ತಕರ ಯದುಸಿಂಹ, ಖ. ಚ. ಕಾಂಕುಶವು ಧರಹರಸಿಂಹ ಸ್ತುಯದುಕುಲವೃಜಿನ ಸಂಹೃತಿ ಜನದದುರಿತಹರ, ಜ ಕಾಂಕಣ ಬೇಲನಾಪರ್ಯಸ್ತಕಲಿಯದುಸಿಂಹ, ಟ.

ಹಸ್ತಕಲಿತಸುದರ್ಶನೋತ್ಥಗ
ಭಸ್ತ್ರಲವ ನವಿಮಿತಾರ್ಕಶತಪರಿ
ವಿಸ್ತರಣ ಚಿತ್ತೈಸು ಕುಂತೀಸುತನ ಬಿನ್ನಪವ ॥ ೨೪

*

ದೇವ ನಿಮ್ಮಡಿಗಳ ಕೃಪಾಸಂ
ಜೀವನಿಯೊಳೆಮ್ಮಸುಗಳೊಡಲಿನ
ಠಾವ [1] ನುಚ್ಚಿ ರಲೊಡೆದು ಹಾಯ್ದವು ವಿಪಿನ [2] ಮಂದಿರವ ।
ಈವರುಷದಜ್ಞಾತವಾಸ ಗ
ತಾವಶೇಷ ವದಾಯ್ತು ಕಂಗಳಿ
ಗೀವು [3] ದವಯುವದರ್ಶನಾಮೃತಪಾನಸಂಪದವ ॥ ೨೫

ದಾಟದೆವು ನುಡಿದವಧಿಯನು ವೈ
ರಾಟಪುರದೊಳು ತುಱು ವಿಡಿದು ವೈ
ನೋಟಕೋಸುಗ ಬಂದು ನುಗ್ಗಾಯಿತ್ತು ಕುರುಸೇನೆ ।
ತೋಟಿಜಯಿಸಿದೊಡೆಮ್ಮನೞಿದು ವಿ

---

* ಕ, ಪುಸ್ತಕದಲ್ಲಿ ವಾರ್ಧಿಕಷಟ್ಪದಿಯಾಗಿ ರಚಿತವಾದ ಅಸಂಬದ್ಧವಾಗಿರುವ ಈ ಪದ್ಯವು ಹೆಚ್ಚಾಗಿ ದೊರೆಯುತ್ತದೆ.

ಶ್ರೀಮದನುಪಮಚರಿತನಿಖಿಳಲೋಕಾರಾಧ್ಯ
ಕಾನುಪಿತಕಾರುಣ್ಯನಿಧಿಕಮಲಭವವಂದ್ಯ ।
ಮಾಮನೋಹರಮಹಾಪುರುಷದೇವರದೇವದನುಜಕುಲದಾವಾನಲಾ ॥
ಸಾಮಜಪ್ರಿಯಗೋಪವೇಷ ಗೋವಿಂದನೀ
ಲಾಂಬರ ಪ್ರೇಮನಿಸ್ಸೀಮಸದ್ಗುಣಧಾಮ ।
ರಾಮರಾಜೀವದಳನೇತ್ರಪಾವನಗಾತ್ರ ಲಾಲಿಪುದುಬಿನ್ನಹವನೊಲಿದೊಲಿದು ॥

1 ನೆಮ್ಮಿದುವೊಡೆದು ಖ. ಚ. ನುರ್ಚಿದೆವೊಡೆದು ಹಾಯ್ದವು ಗಹನಗಹ್ವರವ, ಝ. 2 ಮಂಡಲನ, ಟ. 3 ದಾದರುಶನವ ನಿಮ್ಮಯ ಪಾದಪಂಕಜದ, ಖ. ಚ. ಜ. ಝ.

ರಾಟ ಮನ್ನಿಸಿ ತನ್ನ ಮಗಳ ಕಿ
ರೀಟಿತನಯಂಗೀವೆ [1] ಭರವಿದು ದೇವರವಧರಿಸಿ ॥ ೨೬

ಮದುವೆ ಯೆಂಬುದು ನೆವ [2] ನಿಜಶ್ರೀ
ಪದವತೋಱಿಸಬೇಕು ವನವಾ
ಸದ ಮಹಾಯಾಸದ ಸುಸಂತಾಪವನು ಬೀಡ್ಕೊಳಿಸಿ ।
ಕದಡು ಹೋಗಲು ಕಾಣಬೇಹುದು
ಹದುಳವಿಟ್ಟೆವು [3] ಗುಚಿತವಚನದ
ಹದವಳಯೊಳುತ್ಸಾಹಸಸಿಯನು [4] ಸಲಹಬೇಕೆಂದ ॥ ೨೭

ಕರುಣಿ ಬಿಜಯಂಗೈದು ಭಕ್ತರ
ಹೊರೆಯಬೇಹುದು ಬೇಡಿ [5] ಕೊಳ್ವವು
ಕರಿಸಲೇಕೆಳಗಂದಿ ಕಱುಗಳ ನಱಸುವಂದದೊಳು ।
ಚರಣಭಜಕಕುಟುಂಬಿ ಯೆಂಬೀ
ಬಿರುದ ಪಾಲಿಸಿ ಬಿನ್ನಹವ ನವ
ಧರಿಸಿ ಕಾಣಿಸಿಕೊಳ್ವುದೆಮಗೆ ಮಹಾಪ್ರಸಾದವದು ॥ ೨೮

ಕೇಳಿದನು ಹರುಷದೊಳು ಕಡುಕರು
ಣಾಳು ಹೊಂಪುಳಿಯೋಗಿ ಬಹುತರ
ಮೇಲಣೊಲವರತನದ ಪರಮಸ್ನೇಹ [6] ರಸ ರಹಿಸೆ ।
ಕೇಳಿದೆವೆ ಹರಹರ ಯುಧಿಷ್ಠಿರ
ನೋಲೆಗೆಯ ನಾಕೌರವೇಶ್ವರ
ನೂಱಗವ ನೆನುತಸುರರಿಪು [7] ತೂಗಿದನು ನಿಜಶಿರವ ॥ ೨೯

---

[1] ಹದಸಿದು ದೇವ ಚಿತ್ತೈಸು, ಖ. ಚ. ಭರವಸ ದೇವ ಚಿತ್ತೈಸು, ಜ. ಭರವಿದ ನೋಡಲವಧರಿಸಿ, ಟ. [2] ದೊಳಗೆ ಸಿರಿ, ಖ. ಚ. ನುದೇವರ ಪದವ ಕಾಣಲುಬೇಕು, ಝ. [3] ಗಭಯುವಚನದ, ಖ. ಚ. [4] ದೇವಸಲಹುವುದು, ಖ. ಚ. ಟ. ಕಾಯಬೇಕೆಂದ, ಜ. [5] ಕೊಂಡೆವು ಆರರ ಕೇಳೆಳಗಂದಿ ಕಾಯದ ಬಾಧೆ ಕಱುಗಳಿಗೆ, ಝ [6] ಪಸರಿಸಿತು, ಖ. ಚ. ರಸಪ್ರಸರೆ, ಜ. [7] ನೋಡಿದನು ಕಲಬಲನ, ಖ. ಚ. ಜ. ಟ.

ಚಿಂತೆ ಬೀತುದು ಪಾಂಡುಮೂವನ
ಸಂತತಿಗಳಜ್ಞಾತವಾಸವ
[1] ನಿಂತು [2] ಪಂಥದ ಮೇಲೆ [3] ಕಳೆದರು ನಮ್ಮ ಪುಣ್ಯದೊಳು ।
ಕುಂತಿದೇವಿಯರುಮ್ಮಳಿಸಲಾ
ವೆಂತು ಬದುಕುವೆವಕಟೆನುತ್ತೆ ನಿ
ರಂತರವು ಮಱುಗುವೆನು ಬೊಪ್ಪನು ಶಿವಶಿವಾ ಯೆಂದ ॥ ೪೦

ಬವಣೆ ಗೆಯಬಂದಡವಿಯೊಳು ಪಾಂ
ಡವರು ನವೆದರು ರಾಜ್ಯವನು ಕೌ
ರವರು ತಾವನುಭವಿಸುತಿದ್ದರು [4] ನಡೆದುದಿನ್ನೆಬರ ।
ಅವರ ಸೊಗಸೇ ನಮ್ಮ ಸೊಗಸುಗ
ಳವರ ದುಗುಡವೆ ನಮ್ಮ ದುಗುಡಗ
ಳವರ ವಿಮಲಾಭ್ಯುದಯ ವೆಮ್ಮಭ್ಯುದಯ ವೆಹುದೆಂದ ॥ ೪೧

ಕಾಲ ಕೈಗೂಡಿದೊಡೆ ಲೇಸಿನ
ಮೇಲೆ ಲೇಸುಗಳೊದಗುವುವು ಭೂ
ಪಾಲಕುಂತೀ [5] ಸುತರ ಕಾಣಿಕೆ ಮೊದಲ ಮಂಗಳವು ।
ಮೇಲೆ ತಂಗಿಯ ಮಗನ ಮದುವೆ ವಿ
ಶಾಲಶುಭವಿದು ಸಕಲಯಾದವ
ಜಾಲ ಪಯಣವ ಮಾಡಲೆಂದಸುರಾರಿ ನೇಮಿಸಿದ ॥ ೪೨

ಚರರಿಗುಡುಗೊಱೆ ಗಂಧ ವಖಿಳಾ
ಭರಣ ಕಪ್ಪುರ ವೀಳಯವ ನಿ
ತ್ತರಿದಿಶಾಪಟ ಬೀಱುಕೊಟ್ಟನು ರಾಯಸವ ಬರಿಸಿ ।
ಮರಳಿ ದೂತರು ಬಂದು ಮತ್ಸ್ಯನ

1 ನೆಂತು, ಖ. ಚ. 2 ಗನ್ನದ, ಜ. 3 ಕಳೆದರೊ, ಖ. ಚ.
4 ನವೆದರಿನ್ನೆಬರ, ಖ. ಚ. ಝ. 5 ತನಯರೇಱಿಗೆಮೊದಲ, ಕ. ಝ.

ಪುರವ ಪೊಕ್ಕರು ಕೃಷ್ಣರಾಯನ
ಕರುಣದಳತೆಯ ಬಿನ್ನವಿಸಿದರು ಪಾಂಡುತನಯರಿಗೆ ॥ ೪೩

*
ಬಳಿಕ ಸುಮುಹೂರ್ತದೊಳು ಮತ್ಸ್ಯನ
ಹೊಳಲ ಪೊಱಮಟ್ಟುತ್ತರಾಶಾ
ವಳಯದೊಳು ರಚಿಸಿದ ರುಪಪ್ಲವ್ಯಾಖ್ಯಪುರವರವ ।
ನೆಲನಗಲದೊಳು [1] ಝಲ್ಲಿಪಟ್ಟೆಯ
ನಳವಡಿಸಿದರು ನಿಖಿಳನೃಪರಿಗೆ
ಬಳಿಯ [2] ನಟ್ಟದರುತ್ತರೋತ್ತರ [3] ವಾದುದವರುದಯ ॥ ೪೪

ಜೋಳ ಹಱಿದುದು ನಿಖಿಳರಾಯರಿ
ಗೋಲೆಯುಡುಗೊಱೆ [4] ಯಿಕ್ಕಿದುವು ಪಾಂ
ಚಾಲಪತಿ ಪೊಱಮಟ್ಟ [5] ಮೂಱಕ್ಷೋಹಿಣಿಬಲಸಹಿತ ।
ನೀಲನು [6] ಯುಧಾಮನ್ಯು ಸಪುರಕ
ರಾಳಧೃಷ್ಟದ್ಯುಮ್ನ ಕೀರ್ತಿವಿ
ಶಾಲವೀರಶಿಖಂಡಿ ಸಹಿತಾದ್ರುಪದ ನೈತಂದ ॥ ೪೫

---

* ವಾರ್ಧಿಕ ಷಟ್ಪದಿಯಿಂದ ರಚಿತವಾದ ತಪ್ಪುಬಿದ್ದಿರುವ ಈ ಪದ್ಯವು, ಕ. ಪುಸ್ತಕದಲ್ಲಿ ಹೆಚ್ಚಾಗಿ ಸೇರಿಸಲ್ಪಟ್ಟಿದೆ.

ಶ್ರೀಮನ್ಮಹಾರಾಜರಾಜರಾಜಾಧೀಶ
ಸೋಮವಂಶೋದ್ಧರಣಧರಣಿಪಾಗ್ರಣಿಕೀರ್ತಿ
ಕಾಮಕುರುಕುಲತಿಲಕಕುಂತೀಕುಮಾರದಯಸಾರಸದ್ಗುಣವಿಚಾರ ।
ಭೂಮಿಶರನ್ವಯಾಭರಣಭೂಭೃದ್ರತ್ನ
ಹೇಮಾದ್ರಿಗಿರಿಧೈರ್ಯಸತ್ಯಸಿಧಿಸಮರನಿ
ಸ್ಸೀಮಸದ್ಗುಣಧಾಮಧರ್ಮಜಭಾವನವರುಚಿತ್ತೈಸುವುದುಬಿನ್ನಪವನೊಲಿದು
ನಲಿದು ॥

[1] ಕಟ್ಟ ಪೀಟೆಯು, ಜ. ಝ. ಕಟ್ಟ ಪಟ್ಟೆಯು, ಟ. [2] ಲಟ್ಟಿದರು. ಖ. ಚ. ಜ. ಝ. ಟ. ಕಾರ್ಯಸಂಗತಿಯು, ಜ. ಕಾರ್ಯಗತಿಗಳಿಗೆ, ಝ. [4] ಯುಟ್ಟದುವು. ಖ. ಚ. ಸಹಿತವಾಪಾಂಚಾಲ, ಝ. [5] ನೇಱಕ್ಷೋಹಿಣಿಬಲ, ಜ. [6] ದಯುಸುಮನ್ಯು, ಖ. ಚ.

ಇದಿರುಗೊಂಡರು ಹರುಷದೊಳು ದ್ರೌ
ಪದಿಯು ಬಾಂಧವಪೈಕವನು ಪಂ
ಥದೊಳು ಕಾಣಿಸಿಕೊಂಡರಖಿಳಮಹಾಮಹೀಶ್ವರರ ।
ಒದವಿತಖಿಳಕ್ಷೋಣಿಬಲಸಂ
ಪದ ವನಂತಸುವಸ್ತುಗಳ ಸೊಂ
ಪೊದವೆ [1] ಕವಿಯಿತು ಮಂದಿ ಮದುವೆಯ ಮಂಗಳೋತ್ಸವದ ॥

ದೇವ [2] ನೀಬಹನೆಂ [3] ದು ಬಂದರು
ದಾವಣಿಯ ರಾಹದನ ನಱಿದು ಮ
ಹಾವಿಲಾಸದೊಳೊಪ್ಪವಿಟ್ಟರು ತಮ್ಮ ಪಾಳೆಯವ ।
ಹೂವಲಿಯ ಬೀದಿಗಳ ನವರ
ತ್ನಾವಳಿಯ ಸೂಸಕದ ಛದ್ರದ
ಲೋವೆಗಳ ಲಂಬಳದೊಳೆಸೆದುವು ಕೇರಿಕೇರಿಗಳು ॥ ೪೭

ಚಾರುತರಕತ್ತುರಿಯ ಸಾದಿನ
ಸಾರಣೆಯ ಕುಂಕುಮದ [4] ಪಚ್ಚೆಯ
ಕಾರಣೆಯ ನವಚಿತ್ರಪತ್ರದ ಬಹುಳಭಿತ್ತಿಗಳ ।
ಓರಣದ ಬೀದಿಗಳ ತಳಿಗೆಯ
ತೋರಣದ [5] ಹೊಂಜಗಲಿಗಳ ಪ
ನ್ನೀರ ಚಳೆಯದ ರಚನೆಯೊಳು ಮನೆಮನೆಗಳೊಪ್ಪಿದುವು ॥ ೪೮

ಕಟ್ಟಿದುವು ಗುಡಿ ಮನೆಗಳೊಳು ಮೇ
ಲ್ಕಟ್ಟು ಬಿಗಿದುವು ಪುರದ ನಾರಿಯ
ರಿಟ್ಟು ತೊಟ್ಟರು ಕಳಸ ಕನ್ನಡಿ ಸಹಿತ ದೇಶಿಯೊಳು ।

1 ಕೈಗೈಯಿತ್ತು ಮದುವೆಯ ಮಂಗಳಾಭ್ಯುದಯ, ಕ.
2 ನಿದೆ ಬಹನೆಂದು, ಖ. ಚ. 3 ದೊದಱಿದರು, ಟ.
4 ಪಂಕಿತ, ಝ. ತಳಪದ, ಟ. 5 ಹೊಂಗೆಜ್ಜೆಗಳ, ಝ.

ಇಟ್ಟಣಿಸಿ ಗಜ ವಾಜಿ ರಥ ಸಾ
ಲಿಟ್ಟು ಹೊಱವಡೆ ದನುಜರಾಯುಧ
ರಟ್ಟನನು ನಡೆದಿದಿರುಗೊಂಡರು ಪಾಂಡುನಂದನರು ॥ ೪೯

ಕಳಸ ಕನ್ನಡಿ ವಾದ್ಯರವಮಂ
ಗಳ ಮಹಾಂಬುಧಿ ಮಸ [1] ಗಿದುದುಚಾ
ಪಳ ಪತಾಕಾವಳಿಯು ವಿಮಳಚ್ಛತ್ರ [2] ಚಾಮರದ ।
ಹೊಳೆವಕಂಗಳ [3] ಮುಖದ ಕಾಂತಿಯು
ಮೊಲೆಗಳೊಡ್ಡಿನ ಮಂದಗಮನದ
ತಳಿತಮುಸುಕಿನ ಮೌಳಿಕಾತಿಯು ರೆಸೆದರೊಗ್ಗಿನೊಳು ॥ ೫೦

ಹೊಳಹು ಮಿಗೆ ದೂರದೊಳು ಗರುಡನ
ಹಱವಿಗೆಯು ಕಂಡಂದಳಂಗಳ
ನಿೞಿದು ಮೆಯ್ಯಿಕ್ಕಿದರು ದ್ರುಪದವಿರಾಟ [4] ಪಾಂಡವರು ।
ಬೞಿಕ ಭೂಪರು ಕಾಲುನಡೆಯೊಳು
ನಲಿದು ಬರುತಿರಲಾನೆಯಿಂದಿಳ
ಗಿೞಿದು ಬಿಜಯಂಗೈದ ನಸುರಾರಾತಿ [5] ನಸುನಗುತೆ ॥ ೫೧

ಇತ್ತ ನವರಿಗೆ ಸಮಯವೆನು ಸುರ
ರುತ್ತಮನು ನಿಗಮೌಘ ವರಸಿದೊ
ಡತ್ತಲಿತ್ತಲೆ ಸರಿವ ಮುನಿಗಳ [6] ಮನಕೆ ವ್ಯೆಗುಡದ ।
ಹೆತ್ತಮಕ್ಕಳು ನಿಲಲಿ ಭಕ್ತರ

---

1 ಗೆಮಿಗೆ ಚಾ, ಜ. ಝ. ಗಿದವೊಲು ಚ್ಚಳ, ಟ. 2 ಪಙ್ತಿಗಳ, ಜ.
3 ಕದಪು, ಝ. 4 ಸೃಂಜಯರು, ಖ. ಚ.
5 ಕರುಣದೊಳು, ಖ. ಚ. ಜ. ಟ. ಯೊಲವಿನೊಳು, ಝ.
6 ಮತಿಗೆವ್ಯೆ, ಖ. ಚ. ಜ.

ನಿತ್ತ ಕರೆ ನೆನೆವರಿಗೆ [1] ತನ್ನನು
ತೆತ್ತು ಬದುಕು [2] ವೆ ನೆಂಬ ಬೋಧೆಯರರಸ ನಡೆತಂದ ॥ ೫೦

ಬಳದ ಪದಗಟ್ಟಣೆಯ ಧೂಳಿಯು
ಸುಳಿ ಮುಸುಕಿದಂಬರದ ಮಾರ್ಗದ
ಝುಳದ ಕಿರುಬಿಂದುಗಳ ಲಲಿತ ಕಪೋಲಮಂಡಲದ ।
ಕೆಲದ ಪಾಯವಧಾರುಗಳ ಕಳ
ಕಳದ ಕರುಣಾರಸವ ಸೂಸುವ
ಮೆಲುನಗೆಯ ಸಿರಿಮೊಗದ ಕೃಷ್ಣನ ಕಂ [3] ಡು ದಖಿಲಜನ ॥

ಬಾಗಿ ನಿಡುಭರಿಕ್ಕೈಗಳನು ಹಣೆ
ಗಾಗಿ ಮುರುಹಿದುವಾನೆಗಳು ತಲೆ
ವಾಗಿ ಗುಡಿಗಟ್ಟಿದುವು ಹೇಷಾರವದ ತೇಜಿಗಳು ।
ತೂಗಿ ತನುವನು ಪುಳಕ [4] ದೊಳು ಮನ
ಲಾಗು ಮಿಗೆ ವೈಮಱೆದು ಹರುಷದ
ಸಾಗರದೊಳೋಲಾಡುತಿರ್ದುದು ಸಕಲತಳತಂತ್ರ ॥ ೫೪

ಅಂಗನೆಯ ರರವಿಂದನಾಭನ
ಮಂಗಳಶ್ರೀಮೂರ್ತಿ ಸುಧೆಯನು
ಕಂಗಳೊಳು ಕುಡಿಕುಡಿದು ಪಡೆಯರು ಮತ್ತೆ ತಣಿವುಗಳ ।
ಅಂಗಜನ ಪೆತ್ತಯ್ಯ ನೀರೂ
ಪಿಂಗೆ ಬಡವನೆ ಎನುತೆ ಮುರಹರ
ನಂಗಶೋಭೆಯ ಬಂದಿಯೊಳು ಸಿಲುಕಿತ್ತು ಸಕಲಜನ ॥ ೫೫

---

1 ತನುವನು, ಟ.

2 ವಮಱಳುತಾ ಸೆಂಬಂತೆನಡೆ, ಟ.

3 ಡುದಾಸೇನೆ, ಕ. ಡರೊಲವಿನೊಳು, ಖ. ಚ.

4 ದೊದವಿನ, ಖ. ಚ.

[1] ಎರಡುಕೈಯೊಳು ತುಂಬಿ ರತುನವ
ಸುರಿದು ಮೆಯ್ಯಿಕ್ಕಿದನು ಭೂಪತಿ
[2] ಚರಣದೊಳು ಚತುರಾಸ್ಯವಂದ್ಯನ ವಿಮಲಭಕ್ತಿಯೊಳು।
ನರ ವೃಕೋದರ ನಕುಲ ಸಹದೇ
ವರು ವಿರಾಟ ದ್ರುಪದ ಮೊದಲಾ
ಗಿರೆ ಸಮಸ್ತನೃಪಾಲ [3] ಜನ ಮೆಯ್ಯಿಕ್ಕಿತೊಲವಿನೊಳು॥ ೫೬

ಸಿರವ [4] ನೆಗಹಿ ಯುಧಿಷ್ಠಿರನ [5] ಮೈ
ಮುರಿಯಲೀಯದೆ ಕೃಷ್ಣನಪ್ಪಿದ
ನುರುತರಪ್ರೇಮದೊಳು ಭೀಮಾರ್ಜುನರ ಯಮಳರನು।
ಹರುಷದೊಳು [6] ತೆಗೆದಪ್ಪಿ ಭೂಮೀ
ಶ್ವರರ ಮನ್ನಿಸಿದನು ವಿಳಾಸಿನಿ
ಯರವಿಡಾಯಿಯೊಳರಸಿ ಬಂದಳು ಕಂಡಳ [7] ಚ್ಯುತನ॥ ೫೭

ಕಾಣಿಕೆಯ [8] ಕೈಕೊಂಡು ರಾಯನ
ರಾಣಿಯನು ಮನ್ನಿಸಿದ ತನ್ನಯ
ರಾಣಿವಾಸದ ಹೊರೆಗೆ ನೇಮವ [9] ನಿತ್ತು ಕಳುಹಿದನು।
ರಾಣಿರುಕುಮಿಣಿಯಾದಿ [10] ಯಾದವ
ಕ್ಷೋಣಿಧರನರಸಿಯರನನಿಬರ
ಕಾಣಿಕೆಯ ಕೊಟ್ಟೆಱಗಿ ದ್ರೌಪದಿ ಕಂಡಳೊಲವಿನೊಳು॥ ೫೮

---

1 ಕರವೆರಡಱೊಳು, ಖ. ಚ. ಎರಡುಸೇರೆಯು, ಟ.

2 ಹರುಷವಿಗೆತೆಗೆದಪ್ಪಿಮಾಡಿದನುಧರ್ಮಜನ, ಖ. ಚ.

3 ಕರು, ಖ. ಚ. ಝ. ಕರುಮೆಯ್ಯಿಕ್ಕಿದರುಹರಿಗೆ, ಜ. ಕರುಮೆಯ್ಯಿಕ್ಕಿ ತೊಗ್ಗಿನೊಳು, ಟ. 4 ತಡಹಿ, ಖ. ಚ. 5 ಅರಸಬಾರೆಂದೆನುತೆಯಪ್ಪಿದನು, ಖ. ಚ. 6 ಬಿಗಿಯಪ್ಪಿ, ಖ. ಚ. 7 ಗಧರನ, ಜ.

8 ನಿತ್ತುಬಿಗೆರಾ, ಖ. ಚ. 9 ಕೊಟ್ಟು, ಕ. ಜ. ಝ.

10 ಯಾಗಿರೆ, ಕ. ಖ, ಚ. ಜ.

ದರುಶನವ [1] ನಿತ್ತಿತ್ತು ವಸುದೇ
ವರನು ದೇವಕಿದೇವಿಯರ ಸಂ
ಕರುಷಣನನು ಮಹೋಗ್ರಸೇನನ ಕಂಡ [2] ರೊಲವಿನೊಳು ।
ವರಸುಭದ್ರಾದೇವಿ ಭಾವಂ
ದಿರಿಗೆ ವಂದಿಸಿದಳು ಕುಮಾರನು
ಹರುಷ [3] ದಿಂದಪ್ಪಿದನು ಬಂದಭಿಮನ್ಯು ಪಾಂಡವರ ॥ ೫೯

ಕೈದಣಿಯೆ ವಸುದೇವ ನಳಿಯನ
ಮೈದಡವಿದನು ಮಗನೆ ಬನದೊಳ
ಗುಯ್ದು ವಿಧಿ ಬಂಧಿಸಿತಲಾ ಸಾಕಿನ್ನು ದೈವವನು
ಬೈದು ಮಾಡುವುದೇನು ದ್ರೌಪದಿ
ಯೈದೆತನ ಮುಂಬಾಗೆ [4] ದುರಿತವ
ಕೊಯ್ದು ನರಲೋಕಕ್ಕೆ ಸುೞಿದಿರಿ ಯೆಮ್ಮ ಪುಣ್ಯದೊಳು ॥ ೬೦

ಅರಸಿಯೈದೆತನಕ್ಕೆ ಯೆಮ್ಮೈ
ವರ ನಿಜಾಯುಷ್ಯಕ್ಕೆ ರಾಜ್ಯದ
ಸಿರಿಯು ಸೊಂಪಿಗೆ ನಿಮ್ಮ ಮಗ [5] ನೀಕೃಷ್ಣ ಹೊಣೆ ಯೆಮಗೆ ।
ಸುರರು ಸರಿ ಯಿಲ್ಲೆಮಗೆ ಮಿಕ್ಕಿನ
ನರರು ಗಣ್ಯರೆ ಮಾವ ಕೇಳಂ
ದರಸ ವಸುದೇವರನು ಮಧುರೋಕ್ತಿಯೊಳು ಮನ್ನಿಸಿದ ॥ ೬೧

[6] ತಂದೆತಾಯ್ಗಳು ಬೇಡ ಕೈವಿಡಿ
ದಿಂದುಮುಖಿಯರನೊಲ್ಲೆನೈ ಮನ
ಸಂದು ಮೆಚ್ಚಿಹೆ ನೆನ್ನ ಭಕ್ತರೊಳೆಂಬ ನನವರತ ।

---

1 ನೊಲಿದಿತ್ತು, ಕ. ಖ. ಚ. 2 ನವನೀಶ, ಕ. ಖ. ಚ. ಜ.
3 ಮಿಗಲಪ್ಪಿ, ಜ. ಝ. 4 ಬನದಿಂದೆಯ್ದಿ ಸುಖದೊಳು ಬಂದಿರಿಲ್ಲಿಗೆ, ಖ. ಚ.
5 ಶ್ರೀಕೃಷ್ಣ, ಕ. ಖ. ಚ. ಜ. ಝ.
6 ತಂದೆ ಬೇಡೆಮಗವ್ವೆ ಬೇಡೆಮಗಿಂದುಮುಖಿಯರು ಬೇಡ ತಾಮನ, ಖ. ಚ. ಟ.

ನೊಂದೆ ನೆಂಬನು ತನ್ನವರು [1] ಮನ
ನೊಂದರಾದೊಡೆ [2] ತನ್ನವರ ತನು
ವಿಂದು ಕೃಷ್ಣಂಗಲ್ಲದಿಲ್ಲೆ ಮಗನೆ ಕೇಳೆಂದ॥ ೬೨

ಅರಸಿಯರ ಬಗೆಗೊಳ್ಳ ಮಕ್ಕಳ
ಸರಕುಮಾಡನು ದೇಶಕೋಶದ
ಸಿರಿಯ ಗಣಿಸನು [3] ಕಡ್ಡಿಗೊಳ್ಳನು ಗಾಢಗರ್ವಿತರ।
ಹರಿಪರಾಯಣರೆಂದೊಡತ್ತಲೆ
ಹರಹಿಕೊಳ್ವನು ಮಗನ [4] ಶೀಲವ
ನರರ ಪರಿಯಲ್ಲೆಂದನಾವಸುದೇವ ನಳಿಯಂಗೆ॥ ೬೩

ಲೋಗರೇ ನೀವೆಮಗೆ ನಿಮಗರ
ಗಾಗಿ ಕರಗುವ ನದು ನಿಲಲಿ ತನ
ಗಾಗದ [5] ವರಿಗೆ ತನ್ನ ಕೊಡುವನು ಕೊಲುವಹಗೆಗೊಲಿವ।
ಲೋಗರೆನ್ನವರೆನ್ನ ನೆನೆವರಿ
ಗಾಗಿ ಬದುಕುವೆ ನೆಂಬ [6] ಬಿಡುಗೈ
ಚಾಗಿ ಕೃಷ್ಣನ ನೇನ ಹೇಳುವೆ ನೆಂದ ನರಸಂಗೆ॥ ೬೪

ವಿಂಗೆ, ಖ. ಚ. ಟ.

2 ತನ್ನವರು ತನಗೆಂದು, ಖ. ಚ. ತನ್ನವರತನದಿಂದೆ ಕೃಷ್ಣಂಗಲ್ಲದಿಲ್ಲೆ, ಜ. ತನ್ನಯೊಡೆತನವಿಂದು, ಝ. ತನ್ನವರ ತನವಿಂದು, ಟ.

3 ಖಡ್ಡಿಗೊಳ್ಳನು, ಕ. ಚ. ಖಡ್ಡಿಗೊಳ್ಳನು ತುರಗಗಜರಥವ, ಜ. ಕಟ್ಟಿಕೊಳ್ಳನು ತುರಗಗಜರಥವ, ಝ.

4 ಹೆಚ್ಚೀಲುವ ಸರಿಸದವರಿಲ್ಲೆಂದ, ಖ. ಚ.

5 ವರನುಕೊಲುವಭಕ್ತರಿಗಾಗಿಹಗೆಗೊಳುವ, ಜ.

6 ಬಿರುದೈಜಾಗು ಕೃಷ್ಣನ, ಚ. ಬಿರುದಿನಚಾಗಿಕೃಷ್ಣ, ಟ.

ಬೊಪ್ಪ [1] ನವರೀಯೆಮ್ಮ ದೂಱದೆ
ಯಿಪ್ಪವರು [2] ತಾವಲ್ಲ ಸಾಕೀ
ಯೊಪ್ಪದೊಳು ಬಾಯೆಂದು ಮುರರಿಪು ಕರೆದನವನಿಪನ ।
ಚಪ್ಪರಿಸಿ ಕೌರವರು ತುಱುಗಳ
ತಪ್ಪಿಸಿ [3] ದೊಡೇನಾಯ್ತು ಪಾರ್ಥನ
[4] ದರ್ಪದನುವೆಂ [5] ತೆನುತೆ ಬೆಸಗೊಂಡನು ಮುರಧ್ವಂಸಿ ॥ ೬೫

ಹೂಹೆಗೆಲ್ಲಿಯು ದರ್ಪ ವನುಜನ
ಸಾಹಸವು ಬೇಱೇನು ಯಂತ್ರದ
ಹಾಹೆ ಯಂತ್ರಿಯನುೞಿದು ಚೇಷ್ಟಿಸಬಲ್ಲುದೇ ಬೇಱೆ ।
ದೇಹಿ ನೀ ನಾವೆಲ್ಲ ನಿನ್ನಯ
ದೇಹ ವಿದಱೊಳಗೆಮಗೆ ಗರ್ವ
ಗ್ರಾಹ ವೆಲ್ಲಿಯದೆನುತೆ ಬಿನ್ನೈಸಿದನು ಯಮಸೂನು ॥ ೬೬

ಎಸಳುಮೊನೆ [6] ಮೇಲಾಗಿ ತಾವರೆ
ಮುಸುಕುತಿದೆ ನೈದಿಲಿನ ನೆತ್ತಿಯು
ಬಿಸುಗೆ ಬಿಡುತಿದೆ ಜಕ್ಕವಕ್ಕಿಯ ತೆಕ್ಕೆ ಸಡಿಲುತಿದೆ ।
ದೆಸೆದೆಸೆಯ ಕಾಣಾಂತರದ ಹೊಂ
ಬಿಸಿಲು ಬೀತುದು ಜೇಯ ಬಿನ್ನಹ
ವೆಸು [7] ಧೆ ತಂಪೇಱಿತ್ತು [8] ಬಿಜಯಂಗೆಯ್ಯಬೇಕೆಂದ ॥ ೬೭

---

1 ನವರೇ ಎಮ್ಮ , ಟ. 2 ನೀವಲ್ಲ, ಟ.

3 ದುದೇನಾಯ್ತು, ಖ. ಚ. ಜ.

4 ಚಪ್ಪರಣೆತಾನೆಂತುಟೆಂದನುನಗುತೆ ಮುರವೈರಿ, ಝ.

5 ತೆಂದುಮುರರಿಪುನಗುತೆಬೆಸಗೊಂಡ, ಖ. ಚ. ದೆನುತೆಬೆಸಗೊಂಡನುಯುಧಿಷ್ಠಿರನ, ಜ. 6 ಮೊದಲಾಗಿತಾವರೆಮುಸುಳುತಿದೆ, ಕ. ಚ. ಮುಂತಾಗಿ, ಜ. ಮುಂತಾಗಿತಾವರೆನುಸುಳುತಿದೆ, ಝ. 7 ರರಿಪುಗೆಂದನುಯುಧಿಷ್ಠಿರದೇವಕ್ಕೈಮುಗಿದು, ಕ. ಜ. 8 ಸಂಧ್ಯಾಸನಾಯುವಾಯ್ತೆಂದ, ಖ. ಚ. ಝ.

ನಗುತೆ ಹರಿ ನಿಂದಿರಲು ಕೈ [1] ದೀ
ವಿಗೆಯವರು ಹೊದ್ದಿದರು [2] ದುವ್ವಾ
ಹಿಗೆಗೆ ಬಿಜಯಂಗೈದ ಜಯಜಯವೆನಲು ಸುರನಿಕರ।
ಬಿಗಿದದಡ್ಡಿಯ ಬದ್ದರದ ಬೀ
ಯಗದ ರಾಣೀವಾಸದಂದಣ
ತೆಗೆದು ನಡೆದುವು ಮುಂದೆ ಸಂದಣಿಸಿತ್ತು ಯದುಸೇನೆ॥ ೬೮

* ಹೊಕ್ಕನಸುರಾರಾತಿ ಪಾಂಡವ
ರಿಕ್ಕೆಲಕೆ ಬರೆ [3] ನಗರಿಯನು ಮೈ
ಯ್ಯಿಕ್ಕಿ [4] ಬೀದಿಯು [5] ಧೂಳಿ ಕವಿದುದು ಮಂದಿಸಂದೋಹ।
ಹೊಕ್ಕು ಹೊಗಳುವ ಶ್ರುತಿ [6] ತತಿಯು ಕೈ
ಮಿಕ್ಕು ಕಳೆದನು ಪಾಂಡುಸುತರಿಗೆ
ಸಿಕ್ಕಿದನು ಹರಿ ಯೆನುತುಮಿರ್ದುದು [7] ಸೂರಿಸಂದೋಹ॥ ೬೯

ಮೇಲೆ ಬೀಱುವ ಮಂದಿಯನು ಕೈ
ಗೋಲಿನವರಪ್ಪಳಿಸೆ ಲಕ್ಷ್ಮೀ
ಲೋಲ ನವದಿರ ಜಱಿದು ಕಾಣಿಸಿಕೊಳುತೆ ಪುರಜನವ।
ಮೇಲುನೆಲೆಯುಪ್ಪರಿಗೆಗಳ ವರ
ಬಾಲೆಯರ ಕಡೆಗಣ್ಣ ಥಾಳನಿ
ವಾಳಿಗಳ ಕೈಗೊಳುತೆ ಹೊಕ್ಕನು ರಾಜಮಂದಿರವ॥ ೭೦

---

1 ದಂಡಿಗೆಯವರು ಕೈಗುಡಲು ದುವ್ವಾರಿಗೆಗೆ ಬಿಜಯಂಗೈದ ನುಘೆ ಯೆನೆ ಸಕಲಮುನಿನಿಕರ, ಖ. ಚ. 2 ದುವ್ವಾರಿಗೆಗೆ, ಕ, ರುವ್ವಾರಿಗೆಗೆ ಬಿಜಯಂಗೈದನುಘೆಯೆನೆ ಸಕಲಮುನಿನಿಕರ, ಜ. ದಂಡಿಗೆಯೊಳಗೆ, ಝ.

* ಹೊಕ್ಕನಸುರಾರಾತಿ ಎಂಬುದೇ ಮೊದಲಾದಪದ್ಯವು ಝ ಪುಸ್ತಕದಲ್ಲಿಲ್ಲ.

3 ಭೂರಿಯೊಳು, ಕ. 4 ಮಂದಿಯ ಧೂಳಿ ಕವಿದುದು ಮುಂದೆ ಸಂದಣಿಸಿ, ಖ. ಚ. 5 ಮುಂದೆಸಂದಣಿಸಿದುದು ಪೌರಜನ, ಜ. 6 ಗಳಿಗೆ ಮೈಮಿಕ್ಕಿ ತೋಱಿದನು, ಖ. ಚ. 7 ಮೇಲೆ ಸುರನಿಕರ, ಖ. ಚ.

ಹಿಡಿದರಾರತಿಗಳನು ಬಣ್ಣದ
ಸೊಡರು ತಳಿತುವು ಮುಂದೆ ನೆಲನು
ಘಡಿಸೆ ಭೀಮಾರ್ಜುನರು ಕೈಗುಡೆ ಧರ್ಮನಂದನನು ।
ಹಿಡಿದ ಕೈದೀವಿಗೆಗಳನು ಕೈ
ದುಡುಕಿ ತಿವಿದಾಡುವ ಸುಕಾಂತಿಯ
ಕಡಲು ಮಣಿಮಯಪೀಠದೊಳು ಕುಳ್ಳಿರ್ದನಸುರಾರಿ ॥ ೭೧

ಬೀಳುಕೊಟ್ಟನು ಬೇಹ ಭೂಮಿ
ಪಾಲರನು ಕುಂತೀಕುಮಾರರ
ಮೇಳದೊಳು ಪರಿಮಿತದೊಳಸುರಾರಾತಿ ನಸುನಗುತೆ ।
ಸೋಲದೊಳು ಮೈದಣಿದು ಕುರುಭೂ
ಪಾಲನುಚಿತವ [1] ಮಾಡೆ ರಾಜ್ಯವ
ಪಾಲಿಸುವ ಹದನುಂಟೆ ನಿಮ್ಮೊಳಾಪ ವೇನೆಂದ ॥ ೭೨

ಮರಳಿದುವು ತುಱು ವಿತ್ತಲಹಿತರು
ಸರಿದರತ್ತಲು ಮತ್ಸ್ಯ ನೆಮ್ಮೆಲ
ವರನು ನಾವೆಂದಱಿದು ಕೊಂಡಾಡಿದನು ವಿನಯದೊಳು ।
ವರಸುಭದ್ರಾನಂದನಂಗು
ತ್ತರೆಯ ನೀವರ್ಧಿಯೊಳಿರಲವನು
ಕರೆಯಲಟ್ಟಿದೆವೆಂದು ಬಿನ್ನಹಮಾಡಿದನು ನೃಪತಿ ॥ ೭೩

ಕೊಳುಕೊಡೆಗೆ ಸೇರುವೊಡೆ ಮದುವೆಯ
ನೊಲಿದು ದೇವರು ಮಾಡುವುದು ಮೇ
ಲಿಳೆಯ ಕಾರ್ಯಕೆ ಬುದ್ಧಿಗಲಿಸುವುದೆಮ್ಮನುದ್ಧರಿಸಿ ।
ಬಳಿಕ ಬಿಜಯಂಗೆಯ್ವುದಿದು ಹದ
ನೆಲೆ ದಯಾಂಬುಧಿ ಕೇಳೆನಲು ನೃಪ
ತಿಲಕನುಚಿತದ ಬಿನ್ನಹಕೆ ಮನವೊಲಿದು ಹರಿ ನುಡಿದ ॥ ೭೪

---

[1] ಮಾಡಿರಾಜ್ಯವನಾಳಿಸುವ ಹದನುಂಟೆ, ಖ. ಚ. ಟ.

ಕೊಳುಕೊಡೆಗೆ [1] ತಪ್ಪೇನು ವಸುಕುಲ
ದೊಳು ವಿರಾಟನು ಚಂದ್ರವಂಶಾ
ವಳಿ [2] ಯೊಳಧಿಕರು ನೀವು ಕುಲದೊಳಗಿಲ್ಲ ಹಚಿವುಗಳು ।
ಬಳುನುಡಿಗಳೊಳು ದೈವಶಕುನಾ
ವಳಿಗಳಾದೊಡೆ ಹರುಷದೊಳು ಮಂ
ಗಳಮುಹೂರ್ತವ ಮಾಡಿ ಯೆಂದನು ಕೃಷ್ಣ ನಸುನಗುತೆ ॥ ೨೪

ಬಸಗೆಯೊಳು ನಿಸ್ಸಾಳತತಿ ಗ
ರ್ಜಿಸಿದು ದಖಿಳನರೌಘ ವುತ್ಸಾ
ಹಿಸಲು ಕನ್ಯಾವರಣ ವಾಗಲು ವೈದಿಕೋಕ್ತಿಯೊಳು ।
ಹಸೆಯೊಳಭಿಮನ್ಯುವನು ಸಿಂಗಾ
ರಿಸಿತು ಯದುಪಾಂಚಾಲಪುತ್ರೀ
ಪ್ರಸರ ಮಿಗೆ ಮೆಟ್ಟಕ್ಕಿ ಜೀರಿಗೆ ಬೆಲ್ಲ ವೆನುವಾಯ್ತು ॥ ೨೫

ವರಮುಹೂರ್ತದ ಗಳಿಗೆವಟ್ಟಲ
ಚರಿತದೊಳು ಪುಣ್ಯಾಹರವವಿ
ಸ್ತರದೊಳಕ್ಷತೆ [3] ತುಂಬಿ ತಂದರು ವಿಮಳಮಂಟಪಕೆ ।
ಪರಮಋಷಿಗಳು ಹೋಮದೊಳು ಶಿಖಿ
ವರನ ಬಲಗೊಳಿಸುತೆ ಕುಮಾರಿಯು
ಬರಿಸೆ ಸಪ್ತಪದಿಯೊಳು ಬಂದಳು ವರನ ವಾಮದೊಳು ॥ ೨೬

[4] ವಿಭವದೊಳು ಗುರುದೈವಸದ್ವಿಜ
ಸಭೆಯು ನಾರಾಧಿಸಿದ ರವನೀ
ವಿಭುಗಳಿತ್ತರು [5] ಮುಹಿಗಳನು ವುಡುಗೊಱೆಯ ಭೂಷಣವ ।

---

[1] ತಪ್ಪಿಲ್ಲ, ಕ. ಖ. ಚ, [2] ಯುವರು ನೀವಾಭಿಜಾತ್ಯದೊಳಿಲ್ಲ ಹಚಿವುಗಳು, ಟ.
[3] ವೆರಸಿತಂದರು, ಜ. ಝ. [4] ವಿಭವದ್ಯೆವಡಿಯರಾಗಿ ಸದ್ವಿಜವಿಭುಗಳನು ಮನ್ನಿಸಿದ, ಜ. ಟ. ವಿಭವವಿನ್ಮಡಿಯರಾಗಿಸದ್ವಿಜ, ಝ.
[5] ಮುಯ್ಯನುಡುಗೊಱೆ ರತ್ನಭೂಷಣವ, ಖ. ಚ. ತುಱುಗಳುಡುಗೊಱೆ ರತ್ನ ಭೂಷಣವ, ಝ.

ಅಭವಸನ್ನಿಭವೀರ ನಾಗೆಂ
ದಿಭಗಮನೆಯುರು ಕೃಷ್ಣನರಸಿಯು
ರಭಿಜನಾಮಲತಿಲಕನನು ಹರಸಿದರು ಹರುಷದೊಳು ‖ ೭೮

ಇದು ಸುಭೋಗದ ಗರುಡಿ ಬಹುಸಂ
ಪದದ ನೆಲೆವನೆ ಸೊಂಪಿನಾಗರ
ವಿದು ಪರಾನಂದಪ್ರವಾಹದ ಜನ್ಮಭೂಮಿ ಯಿದು ।
ಮುದದ ಕೇಳೀಸ್ಥಾನ ವಿಮಲಾ
ಭ್ಯುದಯದೋಲಗಶಾಲೆ ಲಕ್ಷ್ಮೀ
ಸದನ ವೆನೆ ರಂಜಿಸಿದುದಭಿಮನ್ಯುವಿನ ವೈವಾಹ ‖ ೭೯

ಯಾದವರು ಪಾಂಚಾಲಮತ್ಸ್ಯರು
ಚೇದಿಪತಿಗಳು ಪಾಂಡ್ಯಸೋಮಕ
ರಾದಿಯಾದನ್ವಯದೊಳಗಣಿತಬಂಧು [1] ವರ್ಗವನು ।
ಆದರಿಸಿದನು ವಿನಯ [2] ದೊಳು ಗಂ
ಧಾದಿವಸ್ತುಗಳಿಂದೆ ತಣಿದುದು
ಮೇದಿನೀಜನ ವವನಿಪನ ಸನ್ಮಾನದಾನದೊಳು ‖ ೮೦

ವರಚತುರ್ಥಿಯೊಳಿರುಳು ಮೆಱೆದರು
ಪುರದೊಳುತ್ಸಾಹದೊಳು ದಂಪತಿ
ವರರು [3] ಭೂಪಕದಂಬದದ್ಭುತಚಾತುರಂಗದೊಳು ।
ಮಱುದಿವಸ [4] ವೋಕುಳಿಯ ನತಿವಿ
ಸ್ತರಿಸಿದರು ಪನ್ನೀರ ಹೊಂಗೊ
ಪ್ಪರಿಗೆಗಳ ಕುಂಕುಮದ [5] ನವ ಪರಿಮಳದ ರಚನೆಯೊಳು ‖೮೧

1 ಬಳಗವನು, ಜ. ಟ. 2 ನುಡಿವಿವಿಧಾದಿ, ಖ. ಚ. 3 ಭೂಮೀಲಂಬದ, ಕ. ಜ. ಟ. ಭೂಮಿಕದಂಬದ, ಖ. ಚ. ಭೂಮಿವಿಡಂಬದ, ಝ.

4 ವವಭೃಥವನತಿ, ಜ. ಟ. 5 ಸಾದುಜವಾದಿರಚನೆ, ಕ. ಖ. ಚ. ಪಟವಾಸಕದ, ಜ. ಸಾದುಜವಾದಿಕತ್ತುರಿಯ, ಝ.

ಕನಕಮಯಶೃಂಗದೊಳು [1] ಜಾಜಿಯು
ನನೆಯು ಕಂಚುಳಿಕೆಯೊಳು ಮದನನ
ಮೊನೆಯು ಖಾಡಾಖಾಡಿಕಾತಿಯು [2] ರೈದೆ ಹೊಯ್ದೊಯ್ದು ।
ದನುಜಹರನರಸಿಯರು ಕುಂತೀ
ತನಯರರಸಿಯರೊಡನೆ ಮತ್ಸ್ಯನ
ವನಿತೆಯರು ಪಾಂಚಾಲಿಯರು ಮೋಕುಳಿಯನಾಡಿದರು॥ ೮೧

*

ಧರಣಿಹೊರೆದುದು ಗಂಧರಸಕ
ಸ್ತೂರಿಯು ಪನ್ನೀರುಗಳ ಪೊನಲೊಡ
ವೆರಸಿ ದೆಸೆ ಕಂಪಿಟ್ಟುದಂಬುಧಿಘನತುಷಾರದೊಳು।
ತರಣಿ ಪರಿಮಳಿಸಿದನು ಪವನನ
ಸುರಭಿತನ ಪೆಚ್ಚರಿಯೆ ಗಗನದ
ಪರಮಸೌರಭ ಕಲಸಿಕೊಂಡುದು ಸಕಲಸುರಕುಲವ॥ ೮೩

ಬಳಿವೆಣಿಯ ನಖಿಳಾವನೀಮಂ
ಡಲವ ನನುಪಮಕೋಶವನು ವರ
ಲಲನೆಯರ ಗಜವಾಜಿರಥವ ಪದಾತಿಗೋವ್ರಜವ।

---

1 ಜಾಜಿನನನೆಯು ಕಂಚುಕಿಗಳೊಳು, ಖ. ಚ.

2 ರವನಿಸನನೋಲೆ, ಖ. ಚ. ರೈದೆಹೊಯ್ದಾಡಿ, ಕ. ಜ

* ಖ ಪುಸ್ತಕದಲ್ಲಿ 82ನೆಯ ಪದ್ಯದ ಮುಂದೆ ಈ ಪದ್ಯವು ಹೆಚ್ಚಾಗಿ ದೊರೆಯುತ್ತದೆ.

ಅರಸ ಭೀಮಾರ್ಜುನರದೊಂದೆಸೆ
ಹರಿವಿರಾಟದ್ರುಪದರೊಂದೆಸೆ
ಸರಸಪರಿಮಳಜಲವಚೆಲ್ಲಿದರವರವರಮೇಲೆ ।
ವರಸುಭದ್ರಾಜಾತ ನಗುತು
ತ್ತರೆಗೆ ಸೂಸಿದೊಡಾಕೆಯಾಪ್ತರು
ಹುರಿಗೊಳಿಸೆ ಹೊಯ್ದಳು ಕಿರೀಟಕುಮಾರಕನ ಮೇಲೆ ॥

ಅಳಿಯನಾಗಿತ್ತು ವಿರಾಟನೃಪ ಯದು
ಕುಲವ ಪಾಂಚಾಲಿಕರ ಮತ್ಸ್ಯರ
ವಳಿಯ ನುತ್ತಮವಸ್ತುವಾಹನದಿಂದೆಮನ್ನಿಸಿದ ॥ ೮೪

ಆದುದಭಿಮನ್ಯುವಿನ ಮದುವೆ ಮ
ಹಾದಯಾಂಬುಧಿ ಕೃಷ್ಣರಾಯನ
ಪಾದದರುಶನ ವಾಗಲಿಮ್ಮಡಿಸಿತ್ತದೆಮ್ಮುದಯ !
ಮೇದಿನಿಯ ನಾವೊತ್ತೆಯಿಟ್ಟೆವು
ಕಾದು ಕೊಂಡೆವು ಸತ್ಯವನು ಮೇ
ಲಾದಹದನನು ಕರುಣಿಸೆಂದನು ಭೂಪ ನರಯಣಗೆ ॥ ೮೫

ಹನ್ನೊಂದನೆಯ ಸಂಧಿ ಮುಗಿದುದು.

ಶ್ರೀಮದಚಿನ್ತ್ಯಮಹಿಮಗದುಗುವೀರನಾರಾಯಣಚರಣಾರವಿಂದ ನಿರಂತರ
ಧ್ಯಾನಮಧುಪಾನಪುಷ್ಟವಚಕಷಟ್ಪದನಿಕಾಯಮಪ್ಪ ಶ್ರೀಮತ್ಕು
ಮಾರವ್ಯಾಸಯೋಗೀನ್ದ್ರವಿರಚಿತಮಪ್ಪ ಕರ್ಣಾಟಕ
ಭಾರತಕಥಾಮಞ್ಜರಿಯೊಳ್ ವಿರಾ
ಟಪರ್ವಂ ಸಮಾಪ್ತಂ.

ಶುದ್ಧಿಪತ್ರಿಕೆ.

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
4	12	ತಂಪರು	ತಂದನು
5	1	ಈವುದಾ	ಈವುದಾಂ
19	7	ಕೊಾರಳು	ಕೊರಲು
26	11	ದ.ವು	ದನು
30	5	ಕೊರಳ	ಕೊರಲ
41	9	ಯವ	ಯಮ
,,	24	ನಗ	ನಗೆ
,,	25	ಗುಂಟ	ಗುಂಟೆ
65	22	ನಿುದಿ	ನಿಂದಿ
67	23	ಜಾಗಟ	ಜಾಗಟೆ
77	1	ಗಳೆ	ಗಳ
85	7	ನೋಲ್ಲೆ	ನೊಲ್ಲೆ
89	21	ಹಸ್ತಿನಾ	ಹಸ್ತಿನ
90	8	ಝೂಡಿ	ಝೂಡಿಗ
97	19	ಮುಱಿದು	ಮುಱಿದು
113	9	ನಡೆತಂ	ನಡೆದೈತಂ
118	17	ದ್ದಂಡ	ದ್ದಂಡಬಲ
120	9	ಗೆಯೋ	ಗೆಯೊ
,,	,,	ಥಟ್ಟೊ	ಥಟ್ಟೋ
121	11—16	7ನೆಯ ಪದ್ಯವಾಗಿ ಬಂದಿರುವುದರಿಂದ ಈಪದ್ಯವು ಬಿಡತಕ್ಕುದು	
,,	25	ಬಿದುವು	ಬಿದ್ದುವು

ಪುಟ	ಪಙ್ತಿ	ಅಶುದ್ಧ	ಶುದ್ಧ
124	21	ನುಘ್ಘಡಿಸು	ನುಗ್ಗಡಿಸು
,,	24	ಲಹುದೆನಲು	ಲಹುದೆಮಗೆ
127	1	ಬಲಿಕ	ಬಲಿಕ
143	9	ಕೊಂಬರು	ಕೊಳ್ವರು
150	4	ಮಲತರನು	ಮಲೆತರಸು
158	10	ಹರಿಬಂ	ಹರಿಬವ
162	6	ಪೊಯು	ಪೊಡೆಯು
168	3	ಮುುಝು	ಮುಝು
169	3	ಬಲಿಕೇನು	ಬಲಿಕೇನು
,,	13	ಪರ್ಥನ	ಪಾರ್ಥನ
182	3	ಸುತರ !	ಸುತರ ।
186	4	ಇದಿರಗೊಳ	ಇದಿರುಗೊಳ
,,	9	ರಜ	ರಾಜ
191	12	ನವಿನೀಶ	ನವನೀಶ
,,	15	ರಾಜರೊಳು	ರಾಜರೊಳು ।
194	25	ಹನ್ನೆರಡು	7 ಹನ್ನೆರಡು
202	3	ರದೊಳನಿ	ರಸದೊಳನಿ
207	8	ಸಲಹಬೇಕೆಂದ	ದೇವಸಲಹುವುದು
,,	23	ದೇವಸಲಹುವುದು. ಖ. ಚ. ಟ.	ಸಲಹಬೇಕೆಂದ. ಕ, ಝ.
216	9	ಚೇಷಿಸ	ಚೇಷ್ಟಿಸ
218	3	ಘ್ಘಡಿಸೆ	ಗ್ಗಡಿಸೆ